# ಕರ್ನಾಟಕ ವಿಧಾನ ಪರಿಷತ್ತು

## ಶುಕ್ರವಾರ, 06 ನೇ ಡಿಸೆಂಬರ್ 2013

**ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 10 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸನ್ಮಾನ್ಯ ಸಭಾಪತಿ (ಶ್ರೀ ಡಿ.ಎಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

## 1.ಸಂತಾಪಸೂಚನೆ

**ವಿಷಯ:** ಭಾರತ ರತ್ನ ಪ್ರಶಸ್ತಿ ಹಾಗೂ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರಾದ ಡಾ॥ ನೆಲ್ಸನ್ ಮಂಡೇಲಾರವರ ನಿಧನದ ಕುರಿತು

**ಸಭಾಪತಿಯವರು:–** ಒಂದು ದುಃಖದಾಯಕ ಘಟನೆ ನಡೆದಿದೆ. ಭಾರತ ರತ್ನ ಪ್ರಶಸ್ತಿಯನ್ನು ಹಾಗೂ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದಿದ್ದಂತಹ ಡಾ॥ ನೆಲ್ಸನ್ ಮಂಡೇಲಾರವರು ದಿನಾಂಕ:5-12-2013 ರಂದು ನಿಧನರಾದರೆಂದು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

18ನೇ ಜುಲೈ 1918 ರಂದು ದಕ್ಷಿಣ ಆಫ್ರಿಕಾದ ಟ್ರಾನ್ಸ್ಕೈ ಪಟ್ಟಣದಲ್ಲಿ ಜನಿಸಿದ್ದ ಶ್ರೀಯುತರು ಕಾನೂನು ಪದವೀಧರರಾಗಿದ್ದು, 1944ರಲ್ಲಿ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ ಸೇರುವುದರ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. ಸರ್ಕಾರವನ್ನು ಟೀಕಿಸಿದ್ದ ಕಾರಣಕ್ಕಾಗಿ 1956 ರಿಂದ 1961ರವರೆಗೆ 5 ವರ್ಷಗಳ ಕಾಲ ಸೆರೆಮನೆ ವಾಸ ಹಾಗೂ ವರ್ಣಬೇಧ ನೀತಿ ವಿರುದ್ಧ ಹೋರಾಟ ನಡೆಸಿದ್ದಕ್ಕಾಗಿ 27 ವರ್ಷಗಳ ಕಾಲ ಜೀವಾವಧಿ ಶಿಕ್ಷೆಯನ್ನು ಅನುಭವಿಸಿದರು.

ವರ್ಣಬೇಧ ನೀತಿಯ ವಿರುದ್ಧ ಸತತ ಹೋರಾಟ ನಡೆಸಿದ ಶ್ರೀಯುತರು ಗಾಂಧೀಜಿಯವರ ತತ್ವಾದರ್ಶಗಳಿಗೆ ಮಾರು ಹೋಗಿದ್ದರು. ಗಾಂಧೀಜಿಯವರನ್ನು 'ಮಹಾ ಆತ್ಮ' (Great Soul) ಎಂದು ಕರೆದರು. ಪ್ರಪಂಚದಾದ್ಯಂತ ಜನಜಾಗೃತಿಯನ್ನುಂಟು ಮಾಡಿದ ಕೀರ್ತಿಗೆ ಭಾಜನರಾಗಿದ್ದ ಶ್ರೀಯುತರು 1994 ರಿಂದ 1999 ರವರೆಗೆ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದು, ಆಫ್ರಿಕಾದ ಗಾಂಧೀಜಿ ಎಂದೇ ಪ್ರಖ್ಯಾತಿಯನ್ನು ಹೊಂದಿದ್ದರು.

ವಿಶ್ವಪ್ರಸಿದ್ಧ ನಾಯಕರಾಗಿದ್ದ ಇವರಿಗೆ ಭಾರತ ಸರ್ಕಾರವು ದೇಶದ ಅತ್ಯುನ್ನತ ನಾಗರೀಕ ಗೌರವವಾದ 'ಭಾರತರತ್ನ' ಪುರಸ್ಕಾರವನ್ನು 1990 ರಲ್ಲಿ ನೀಡಿ ಗೌರವಿಸಿರುತ್ತದೆ. 1993ರಲ್ಲಿ ವಿಶ್ವದ ಶ್ರೇಷ್ಠ ಪ್ರಶಸ್ತಿಯಾದ 'ನೊಬೆಲ್

ಶಾಂತಿ ಪ್ರಶಸ್ತಿ'ಗೆ ಭಾಜನರಾದ ಶ್ರೀಯುತರು ವಿಶ್ವದಾದ್ಯಂತ ಅನೇಕ ರಾಷ್ಟಗಳ ನೂರಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದ ವಿಶ್ವವು ಒಬ್ಬ ಶ್ರೇಷ್ಠ ಹೋರಾಟಗಾರ, ಮುತ್ಸದ್ಧಿ, ಧೀಮಂತ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ತಾವು ತಂದಂಥ ಸಂತಾಪ ಸೂಚಕ ಗೊತ್ತುವಳಿಯನ್ನು ಬೆಂಬಲಿಸುತ್ತಾ ಪ್ರಪಂಚದ ಒಬ್ಬ ಮಹಾನ್ ನಾಯಕ ಮತ್ತು ಈ ದೇಶದ ಅತ್ಯುನ್ನತ ಪ್ರಶಸ್ತಿಯಾದಂಥ ಭಾರತ ರತ್ನ ಪ್ರಶಸ್ತಿ ಪುರಸ್ಕೃತರಾದವರು ಮತ್ತು ಶಾಂತಿಗಾಗಿ ವಿಶ್ವದಲ್ಲಿಯೇ ಖ್ಯಾತಿಯನ್ನು ಪಡೆದಂಥ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತರಾದಂಥ ಡಾ॥ ನೆಲ್ಸನ್ ಮಂಡೇಲಾರವರ ನಿಧನ ಕೇವಲ ಆಫ್ರಿಕಾ ದೇಶಕ್ಕಷ್ಟೇ ಸೀಮಿತವಲ್ಲ, ಅದು ಇಡೀ ಪ್ರಪಂಚವನ್ನೇ ತಲ್ಲಣಗೊಳಿಸಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾದ ಮಾತಾಗುವುದಿಲ್ಲ ಎನ್ನುವುದನ್ನು ವ್ಯಕ್ತ ಮಾಡಲಿಕ್ಕೆ ಬಯಸುತ್ತೇನೆ. ಮನುಕುಲದ ಒಬ್ಬ ಅನರ್ಘ್ಯ ರತ್ನ, ಮನುಕುಲದ ಒಬ್ಬ ಶ್ರೇಷ್ಠ ಸಂತನನ್ನು ಕಳೆದುಕೊಂಡಂಥ ಅನುಭವ ನಮಗಾಗುತ್ತಿದೆ. ಈ ದೇಶದ ಸ್ವಾತಂತ್ರ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜೊತೆಗೆ, ಅವರೇ ಅವರಿಗೆ ಸ್ಫೂರ್ತಿಯಾದಂಥ ಡಾ॥ ನೆಲ್ಸನ್ ಮಂಡೇಲಾರವರು ಸುಮಾರು 27 ವರ್ಷಗಳ ಕಾಲ ಅತ್ಯಂತ ಚಿಕ್ಕದಾದಂಥ ಜೈಲಿನಲ್ಲಿ ದಿನಗಳನ್ನು ಕಳೆದದ್ದು ನೋಡಿದರೆ ಅವರು ಎಂದೂ ಅವರ ತತ್ವಗಳಿಗೆ ರಾಜಿಯಾಗಲಾರದಂಥ ಮಹಾನ್ ವ್ಯಕ್ತಿಯಾಗಿದ್ದರು. ನೀವು ಇಷ್ಟು ಸುದೀರ್ಘ ವರ್ಷಗಳ ಕಾಲ ಜೈಲಿನಲ್ಲಿದ್ದಿರಿ, ನಿಮಗೆ ಬಿಡುಗಡೆ ಬಂತೋ ಇಲ್ಲವೋ ಎನ್ನುವ ವಿಚಾರವನ್ನು ಕೇಳಿದಾಗ, ಅವರು "ನನಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರೇ ಸ್ಫೂರ್ತಿ"ಎನ್ನುವ ಮಾತನ್ನು ಹೇಳಿದರು. ಡಾ॥ ನೆಲ್ಸನ್ ಮಂಡೇಲಾರವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು 'ಮಹಾ ಆತ್ಮ' (Great Soul) ಎಂದು ಕರೆದರು. ಗಾಂಧೀಜಿಯವರ ಹೋರಾಟದಿಂದ ಡಾ॥ ನೆಲ್ಸನ್ ಮಂಡೇಲಾರವರು ಸ್ಫೂರ್ತಿಯನ್ನು ಪಡೆದುಕೊಂಡು, ನಾನು ನನ್ನ ಜೀವನದ ಕೊನೆಯ ಉಸಿರು

ಇರುವವರೆಗೂ ನಾನು ಜೈಲಿನಲ್ಲಿರುವುದಕ್ಕೆ ತಯಾರಿದ್ದೇನೆ. ಗಾಂಧೀಜಿಯವರೇ ನನ್ನ ಆಶಾವಾದ ಎನ್ನುವ ಮಾತನ್ನು ಹೇಳಿದ್ದಾರೆ. ಡಾ॥ ನೆಲ್ಸನ್ ಮಂಡೇಲಾರವರು 5 ವರ್ಷಗಳ ಕಾಲ ಆ ದೇಶದ ಅಧಿಕಾರದ ಮುಂಚೂಣಿಯಲ್ಲಿದ್ದು ಇಡೀ ಮನುಕುಲದಲ್ಲಿರುವ ಅಸಮಾನತೆಯ ವಿರುದ್ಧ ಬಹು ದೊಡ್ಡ ಹೋರಾಟವನ್ನು ಮಾಡಿದಂಥವರು. ಅದಕ್ಕೆ ಅವರನ್ನು "World's most famous political prisoner" ಎಂದು ಕರೆಯುತ್ತಾರೆ. ಅಂದರೆ ಜಗತ್ತಿನ ಅತ್ಯಂತ ಶ್ರೇಷ್ಠ ರಾಜಕೀಯ ಖೈದಿ ಆಗಿದ್ದರು. ಇಷ್ಟು ಸುದೀರ್ಘ ವರ್ಷಗಳ ಕಾಲ ಜೈಲಿನಲ್ಲಿದ್ದು ಕೊನೆಗೂ ಅವರ ಹೋರಾಟದಲ್ಲಿ ಯಶಸ್ಸನ್ನು ಕಂಡಂಥ ಮಹಾನ್ ಮುತ್ಸದ್ಧಿ ನೆಲ್ಸನ್ ಮಂಡೇಲಾರವರಿಗೆ 1993 ರಲ್ಲಿ ಶಾಂತಿಗಾಗಿ ನೊಬೆಲ್ ಪಾರಿತೋಷಕವನ್ನು ಪಡೆದರು. ಅದಷ್ಟೇ ಅಲ್ಲ ವಿಶ್ವದ ಅನೇಕ ರಾಷ್ಟ್ರಗಳು ಅನೇಕ ಪ್ರಶಸ್ತಿಗಳನ್ನು ನೀಡಿ ಅವರನ್ನು ಗೌರವಿಸಿದ್ದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಇವತ್ತು ಭಾರತ ರತ್ನ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಮಹಾ ಪರಿನಿರ್ವಾಣದ ದಿನ. ಇದಕ್ಕೆ ಒಂದು ದಿವಸ ಪೂರ್ವದಲ್ಲಿ ಡಾ॥ ನೆಲ್ಸನ್ ಮಂಡೇಲಾರವರು ನಿಧನರಾಗಿದ್ದಾರೆ. ಸಂವಿಧಾನ ಶಿಲ್ಪಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕೂಡ ಜಾತಿ ವ್ಯವಸ್ಥೆ ವಿರುದ್ಧ ಬಹಳ ದೊಡ್ಡ ಹೋರಾಟವನ್ನು ಮಾಡಿದ್ದಾರೆ. ಇವರಿಬ್ಬರಲ್ಲಿ ಬಹಳ ದೊಡ್ಡ ಸಾಮ್ಯತೆ ಇದೆ ಎಂದು ನಾನು ಭಾವಿಸುತ್ತೇನೆ. ಅವರು ಜಾತಿ ವ್ಯವಸ್ಥೆ ವಿರುದ್ಧ, ಮನುಷ್ಯರನ್ನು ಮನುಷ್ಯರನ್ನಾಗಿ ಕಾಣಲಾರದಂಥ ವ್ಯವಸ್ಥೆಯ ವಿರುದ್ಧ ಬಹು ದೊಡ್ಡ ಹೋರಾಟವನ್ನು ಮಾಡಿ ಇವತ್ತು ಶತಮಾನಗಳಿಂದ ತುಳಿತಕ್ಕೆ ಒಳಗಾದಂಥ ಜನಾಂಗಕ್ಕೆ ಇವತ್ತು ನ್ಯಾಯ ದೊರಕಿಸಿದಂಥ ಒಬ್ಬ ಧೀಮಂತ ನಾಯಕನ ಮಹಾ ಪರಿನಿರ್ವಾಣ ಒಂದು ದಿವಸ ಮುಂಚಿತವಾಗಿ ನೆಲ್ಸನ್ ಮಂಡೇಲಾರವರು ನಿಧನರಾಗಿದ್ದಾರೆ. ಇವರು ಕೂಡ ವರ್ಣಬೇಧ ನೀತಿ ವಿರುದ್ಧ Blacks and Whites ಮಧ್ಯದಲ್ಲಿರುವಂಥ ಅಂತರವೇನಿದೆ, ಆಗ ಆಡಳಿತದಲ್ಲಿದ್ದ ಸರ್ಕಾರದ ವಿರುದ್ಧ ಬಹು ದೊಡ್ಡ ಹೋರಾಟವನ್ನು ಮಾಡಿದಂಥ, ಮನುಕುಲದ ಶ್ರೇಷ್ಠತೆಗಾಗಿ, ಮನುಷ್ಯರನ್ನು ಮನುಷ್ಯರನ್ನಾಗಿಯೇ

ಕಾಣಬೇಕು, ಯಾವುದೇ ಭೇದ–ಭಾವ ಇರಬಾರದು ಎನ್ನುವಂಥ ವಿಚಾರದಲ್ಲಿ ಬಹು ದೊಡ್ಡ ಹೋರಾಟವನ್ನು ಮಾಡಿದಂತ ಡಾ॥ ನೆಲ್ಸನ್ ಮಂಡೇಲಾರವರ ಸಾವು ಇಡೀ ಪ್ರಪಂಚಕ್ಕೆ ಹಾನಿ ಅಷ್ಟೇ ಅಲ್ಲ, ವಿಶೇಷವಾಗಿ ನಮ್ಮ ದೇಶ ಬಹಳಷ್ಟು ದುಃಖಿತವಾಗಿದೆ ಎನ್ನುವಂಥ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಅಂತಹ ಮಹಾನ್ ಮುತ್ಸದ್ಧಿ, ವಿಶ್ವದ ಶ್ರೇಷ್ಠ ನಾಯಕನನ್ನು ಕಳೆದುಕೊಂಡು, ಇವತ್ತು ಸಮಾನತೆಯ ಹೋರಾಟದ ಬಹು ದೊಡ್ಡ ಹೋರಾಟಗಾರರನ್ನು ಕಳೆದುಕೊಂಡು ನಾವೆಲ್ಲರೂ ಬಡವರಾಗಿದ್ದೇವೆ ಎನ್ನುವಂಥ ಮಾತನ್ನು ಹೇಳಿ ಇಂಥ ಮುತ್ಸದ್ಧಿ ನಾಯಕನ ಅಗಲುವಿಕೆಗೆ ಬಹುತರವಾಗಿ ಸಮಾನತೆಯಲ್ಲಿ ನಂಬಿಕೆ ಇರುವಂಥ ಪ್ರಪಂಚದಾದ್ಯಂತ ದುಃಖವನ್ನು ಸಹಿಸುವ ಶಕ್ತಿಯನ್ನು ಎಲ್ಲಾ ಜನರಿಗೂ ದೇವರು ನೀಡಲಿ, ಇವತ್ತು ಅಗಲಿದ ಮಹಾನ್ ಚೇತನಕ್ಕೆ ಸದ್ಗತಿಯನ್ನು ನೀಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಡಾ॥ ನೆಲ್ಸನ್ ಮಂಡೇಲಾರವರನ್ನು ಜಗತ್ತು ಮತ್ತು ನಾವೆಲ್ಲರೂ ಕಳೆದುಕೊಂಡಿದ್ದರೂ ಸಹ ಅವರ ಹೋರಾಟದ ವಿಚಾರಗಳು ಶಾಶ್ವತವಾಗಿ ಉಳಿಯುವಂಥ ಒಂದು ವಸ್ತು. ವರ್ಣಭೇದದ ವಿರುದ್ಧ ಒಬ್ಬ ಬುಡಕಟ್ಟು ಜನಾಂಗದಲ್ಲಿ ಹುಟ್ಟಿದಂಥ ವ್ಯಕ್ತಿ ಹೇಗೆ ತನ್ನ ಹೋರಾಟದಲ್ಲಿ ಅತ್ಯಂತ ಯಶಸ್ವಿಯಾಗಿ ಜಗತ್ತಿನಲ್ಲಿ ವರ್ಣಭೇದ ನಶಿಸಿ ಹೋಗಲಿಕ್ಕೆ ಪ್ರಯತ್ನಗಳನ್ನು ಮಾಡಿ ಯಾವ ರೀತಿ ಯಶಸ್ವಿಯಾಗಬಹುದು ಎನ್ನುವುದಕ್ಕೆ ನೆಲ್ಸನ್ ಮಂಡೇಲಾರವರೆ ಸಾಕ್ಷಿ. ದಕ್ಷಿಣ ಆಫ್ರಿಕಾ ಜನತೆಯ ಸ್ವಾತಂತ್ರಕ್ಕಾಗಿ ಹಗಲಿರುಳು ದುಡಿದಂತ ನೆಲ್ಸನ್ ಮಂಡೇಲರವರು 20ನೇ ಶತಮಾನದ ಅತ್ಯಂತ ಶ್ರೇಷ್ಠ ಹೋರಾಟಗಾರ ಎಂದು ಪ್ರಸಿದ್ಧರಾಗಿದ್ದರು. ಅವರು ಜೈಲಿಗೆ ಹೋಗುವಾಗ ಒಂದು ಮಾತನ್ನು ಹೇಳಿದ್ದರು. ಜೈಲಿಗೆ ಹೋಗುವಂಥ ಸಂದರ್ಭದಲ್ಲಿ ಅವರು ವಿದ್ಯಾರ್ಥಿಯಾಗಿದ್ದರು. ಅವರು ಕಾನೂನು ಪದವಿಯ ಉನ್ನತ ವಿದ್ಯಾಭ್ಯಾಸವನ್ನು ಜೈಲಿನಲ್ಲಿಯೇ ಕುಳಿತು ಕಲಿತು ಉತ್ತೀರ್ಣರಾದರು ಎಂದು ನಾವು ಕೇಳಿದ್ದೇವೆ. ಅವರು ಒಂದು ಮಾತನ್ನು ಹೇಳಿದರು. ಬಿಳಿಯರ

ದಬ್ಬಾಳಿಕೆ ಜೀವಂತವಾಗಿರುವವರೆಗೆ ನಾನು ನಿರಂತರವಾಗಿ ಹೋರಾಟ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದರು. ಇದೇ ಸಂದರ್ಭದಲ್ಲಿ ಕಪ್ಪು ಶ್ರೀಮಂತರ ದಬ್ಬಾಳಿಕೆಯನ್ನು ಕೂಡ ನಾನು ವಿರೋಧ ಮಾಡುತ್ತೇನೆಂದು ಹೇಳಿದರು. ಕೇವಲ ಬಿಳಿಯರ ವರ್ಣಭೇಧವನ್ನು ವಿರೋಧ ಮಾಡುವುದಲ್ಲ, ಅಲ್ಲಿ ಕಪ್ಪು ಶ್ರೀಮಂತರ ದಬ್ಬಾಳಿಕೆಯು ಸಹ ನಡೆಯುತ್ತಿತ್ತಂತೆ. ಅವರು ಸಮಾನತೆಗೆ ಹೇಗೆ ಕೆಲಸ ಮಾಡುತ್ತಾರೆ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಎಲ್ಲಾ ಜನರು ಸಮಾನತೆ ಮತ್ತು ಸೌಹಾರ್ದತೆಯಿಂದ ಬದುಕುವ ಆದರ್ಶವೇ ಅದು ಪ್ರಜಾಪ್ರಭುತ್ವದ ನಿಜವಾದ ಗುಣವನ್ನು ಸಮಾಜಕ್ಕೆ ಅರ್ಪಣೆ ಮಾಡುತ್ತದೆ ಎನ್ನುವ ಮಾತನ್ನು ಹೇಳಿದರು.

ಇಂತಹ ಸಾಧನೆ ಮಾಡುವುದಕ್ಕೆ ನಾನು ಸಾಯುತ್ತೇನೆ, ಇಂತಹ ಸಂಗತಿಗಳ ವಿರುದ್ಧ ನಾನು ಸಾಯುವುದಕ್ಕೆ ಸಿದ್ಧನಿರುತ್ತೇನೆ ಎಂಬ ಮಾತನ್ನು ಹೇಳಿದ್ದರು. ಪ್ರಾರಂಭದಲ್ಲಿ ಅಹಿಂಸಾತ್ಮಕವಾಗಿ ಹೋರಾಟ ಪ್ರಾರಂಭ ಮಾಡಿದರೂ, ಅಹಿಂಸೆಯಿಂದ ಬಹುಶಃ ಈ ಹೋರಾಟ ಯಶಸ್ವಿಯಾಗುವುದಿಲ್ಲ ಎಂಬ ವಿಚಾರ ಬಂದು ಹಿಂಸಾತ್ಮಕ ಹೋರಾಟದ ಕಡೆ ಒಲವನ್ನು ವ್ಯಕ್ತಪಡಿಸಿದ್ದರು. ಅನೇಕ ಕಷ್ಟಕಾರ್ಪಣ್ಯಗಳ ಮಧ್ಯೆ ನಿಂತು ಹೋಗಿದ್ದ ಅವರ ವಿದ್ಯಾಭ್ಯಾಸವನ್ನು ಜೈಲಿನಲ್ಲಿ ಪೂರ್ಣಗೊಳಿಸಿದಾಗ ಅವರು, ನನ್ನನ್ನು ಜೈಲಿನಲ್ಲಿ ಹಾಕಿರುವುದು ನನ್ನ ವಿದ್ಯಾಭ್ಯಾಸಕ್ಕೆ ಪ್ರೇರಣೆಯಾಯಿತು, ನನ್ನನ್ನು ಜೈಲಿನಲ್ಲಿ ಹಾಕಿದ್ದಕ್ಕೆ ಅಭಿನಂದನೆ ವ್ಯಕ್ತಪಡಿಸುತ್ತೇನೆ ಎಂಬ ಮಾತನ್ನು ಹೇಳಿದ್ದರು. ಜೈಲಿನಲ್ಲಿದ್ದರೂ ಅವರ ಹೋರಾಟದ ಹಿನ್ನಲೆಯಲ್ಲಿ Robben Island ಜೈಲಿನಿಂದ Pollsmoor ಜೈಲಿಗೆ ಸ್ಥಳಾಂತರಿಸಬೇಕಾದ ಅನಿವಾರ್ಯತೆ ಬಂತು. ಅಲ್ಲಿ ಅವರು ತಮಗೆ ಬೇಕಾದಂತಹ ಬೇರೆ ಬೇರೆ ಕೆಲಸಗಳನ್ನು ಕೈಗೆತ್ತಿಕೊಂಡರು. ಇದರಿಂದಲೇ Robben Island ಕಾರಾಗೃಹವನ್ನು Mandela University ಎಂದು ಕರೆದರು. ಏಕೆಂದರೆ ಅಲ್ಲಿದ್ದವರಿಗೆ ವಿದ್ಯಾಭ್ಯಾಸ ಮಾಡಿಸುವ ನಿಟ್ಟಿನಲ್ಲಿ ಎಲ್ಲಾ ರೀತಿಯ ಸಹಾಯ ಮಾಡಿದ್ದರು. ಹೋರಾಟಗಾರರದ್ದು ಹೊರಗೆ ಬಂದಾಗ ಮಾತ್ರ ಹೋರಾಟ ಆಗಿರುವುದಿಲ್ಲ. ಎಲ್ಲೇ ಇರಲಿ, ಹೇಗೆ ಇರಲಿ ಹೋರಾಟ ಮಾಡುವ ಪ್ರವೃತ್ತಿ

ನೆಲ್ಸನ್‌ಮಂಡೇಲಾ ಅವರದ್ದಾಗಿತ್ತು. 1990ನೇ ಇಸವಿಯಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳು ನೆಲ್ಸನ್‌ಮಂಡೇಲಾ ಅವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಅಧ್ಯಕ್ಷರಾಗಿದ್ದ ಕ್ಲರ್ಕ್‌ರವರನ್ನು ಒತ್ತಾಯ ಮಾಡಿದರು. ಇಷ್ಟು ದೊಡ್ಡ ಪ್ರಮಾಣದಲ್ಲಿ ಎಲ್ಲಾ ರಾಷ್ಟ್ರಗಳು ಒತ್ತಡ ಹೇರಿದ್ದು ಎಂದರೆ ಬಹುಶಃ ನೆಲ್ಸನ್‌ಮಂಡೇಲಾರವರ ವಿಷಯದಲ್ಲಿ ಎಂದು ಹೇಳಬೇಕಾಗುತ್ತದೆ. ಮಂಡೇಲಾರವರು ಬಿಡುಗಡೆ ಆದಮೇಲೆ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡುವ ಅವಕಾಶ ಸಿಕ್ಕಿತು. ಆಗ ಅವರು, ನಮ್ಮ ಸಶಸ್ತ್ರ ಹೋರಾಟ ಬಿಳಿಯರ ಸರ್ಕಾರ ಮಾಡುತ್ತಿರುವ ವರ್ಣಭೇದ ತಾರತಮ್ಯ ನೀತಿಯ ವಿರುದ್ಧವಾಗಿಯೇ ಹೊರತು ದೇಶದಲ್ಲಿ ಅಶಾಂತಿ ಮತ್ತು ಭಯವನ್ನು ಹುಟ್ಟಿಸುವುದಕ್ಕಾಗಿಯಲ್ಲ. ನಮಗೆ ಹಿಂಸಾತ್ಮಕ ಹೋರಾಟ ಬಿಟ್ಟು ಬೇರೆ ಯಾವುದೇ ಆಯ್ಕೆ ಈ ಸಂದರ್ಭದಲ್ಲಿ ಇರಲಿಲ್ಲ. ಆದರೆ ಪ್ರಜಾತಂತ್ರ ಆಡಳಿತ ವ್ಯವಸ್ಥೆಯನ್ನು ರಾಜ್ಯದಲ್ಲಿ ತರುವುದಾದರೆ ಹಿಂಸಾತ್ಮಕ ಹೋರಾಟಕ್ಕೆ ತಿಲಾಂಜಲಿ ಹಾಕುವುದಕ್ಕೆ ಸಾಧ್ಯ ಎಂಬ ಮಾತನ್ನು ಹೇಳಿದರು. ಈ ರೀತಿ ಒಬ್ಬ ವ್ಯಕ್ತಿ ತನ್ನ ಹೋರಾಟದ ಕಿಚ್ಚನ್ನು ಒಳಗೆ ಮತ್ತು ಹೊರಗೆ, ಮತ್ತೆ ಬಂಧನವಾಗಬಹುದು ಎಂಬುದನ್ನೂ ಲೆಕ್ಕಿಸದೇ ತೋರ್ಪಡಿಸಿದ್ದರು. ನಮ್ಮ ದೇಶದಲ್ಲೂ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ವೀರಸಾವರ್ಕರ್, ಆಜಾದ್ ಮುಂತಾದವರು ಜೀವಕ್ಕೆ ಹೆದರದೇ ಹೋರಾಟ ಮಾಡಿದ್ದನ್ನು ನಾವು ಕಂಡಿದ್ದೇವೆ. ಮಂಡೇಲಾರವರ 95 ವರ್ಷಗಳ ಅವಧಿಯಲ್ಲಿ 27 ವರ್ಷಗಳನ್ನು ಜೈಲಿನಲ್ಲಿ ಕಳೆದರು. ಇಂತಹ ಒಬ್ಬ ಅದ್ಭುತ ವ್ಯಕ್ತಿ ನಮ್ಮನ್ನು ಅಗಲಿದ್ದಾರೆ. ಅವರ ಹೋರಾಟದ ಕಿಚ್ಚು ಸಾಮಾಜಿಕ ವ್ಯವಸ್ಥೆ ಬದಲಾವಣೆಗೆ ಇಡೀ ಜಗತ್ತಿಗೆ ಮಾರ್ಗದರ್ಶಿ ಸೂತ್ರಗಳನ್ನು ಕೊಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಅವರು ನಮ್ಮನ್ನು ಅಗಲಿದ್ದರೂ ಕೂಡ ಅವರ ಆದರ್ಶಗಳು ಶಾಶ್ವತವಾಗಿ ಉಳಿಯುತ್ತದೆ. ಅವರ ಆತ್ಮಕ್ಕೆ ದೇವರು ಸದ್ಗತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ ತಾವು ತಂದಿರುವ ಸಂತಾಪ ಸೂಚನೆಯನ್ನು ಅನುಮೋದಿಸುತ್ತೇನೆ.

ಅದೇರೀತಿ, ಇವತ್ತು ಮಾನ್ಯ, ಅಂಬೇಡ್ಕರ್‌ರವರ ಪರಿನಿರ್ವಾಣದ ದಿವಸ. ನಮ್ಮ ಬಿಜೆಪಿ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಆಚರಣೆ ಮಾಡಿ ಇಲ್ಲಿಗೆ ಬಂದಿದ್ದೇವೆ. ಪ್ರಾಯಶಃ ಈ ಇಬ್ಬರೂ ವ್ಯಕ್ತಿಗಳು, ಸಮಾಜದಲ್ಲಿರುವಂತಹ ಅಸಮತೋಲನ ಮತ್ತು ಜಾತಿ ಸಂಘರ್ಷಗಳ ವಿರುದ್ಧ ಹೋರಾಟ ಮಾಡಿದ್ದವರು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಸಭಾಪತಿಯವರು:–** ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಸೇರಿಸುತ್ತೇನೆ. ಇತ್ತೀಚಿಗೆ ನಾನು Commonwealth Parliamentary Association ಸಭೆ ಸಮಾರಂಭದ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಕ್ಕೆ ಹೋದಾಗ, ಮಂಡೇಲಾರವರನ್ನು ಭೇಟಿ ಮಾಡುವ ಪ್ರಯತ್ನ ಮಾಡಿದೆ. ಅವರು ವಾಸ ಇದ್ದ ಮನೆ ತನಕ ಹೋಗುವುದಕ್ಕೆ ಮಾತ್ರ ಅವಕಾಶವಾಯಿತು, ಅವರನ್ನು ಭೇಟಿ ಮಾಡುವುದಕ್ಕೆ ವೈದ್ಯರು ಅನುಮತಿ ಕೊಡಲಿಲ್ಲ. ಆ ಸಂದರ್ಭದಲ್ಲಿ ನಾನು ಒಂದು handbill ಅನ್ನು ಓದಿದೆ. ಅದರೊಳಗೆ ಬಹಳ ಪ್ರಮುಖವಾದ ಅಂಶವಿತ್ತು. 27 ವರ್ಷಗಳ ಕಾಲ ಜೈಲಿನಲ್ಲಿದ್ದು ಹೊರಗೆ ಬಂದು, ಚುನಾವಣೆ ನಡೆದು, ಅವರು ಆ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷರಾಗಿ ಅಧಿಕಾರ ಗ್ರಹಣ ಮಾಡಿದ ಮೇಲೆ ಅವರು ಮಾಡಿದ ಭಾಷಣದ ಒಂದಂಶವನ್ನು ಆ handbill ನಲ್ಲಿ ಉಲ್ಲೇಖ ಮಾಡಿದ್ದರು. ಅದು, ನಮ್ಮಲ್ಲಿನ ಹೋರಾಟ ಮುಗಿದಿದೆ. ಈ ದೇಶದಲ್ಲಿರುವ ಎಲ್ಲರನ್ನೂ, ಅಂದರೆ ಬಿಳಿಯರು, ಕರಿಯರು ಮತ್ತು ಕಂದು ಬಣ್ಣದವರನ್ನು ನಾವು ಸಮಾನರಾಗಿ ನೋಡಬೇಕು ಎಂದಾಗಿತ್ತು. ಅಂದರೆ ಭಾರತೀಯ ಮೂಲದ ವ್ಯಕ್ತಿಗಳ ಬಗ್ಗೆ ಅವರು ಉಲ್ಲೇಖ ಮಾಡಿದ್ದರು. ನಾವೆಲ್ಲರೂ ಈ ದೇಶದ ಪ್ರಜೆಗಳು, ಎಲ್ಲರೂ ಸಮಾನರು. ನಮ್ಮಲ್ಲಿ ಯಾವುದೇ ರೀತಿ ಸಂಘರ್ಷ ಕೂಡದು ಎಂದು ಹೇಳಿದ ಮಾತು ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮ ಬೀರಿತ್ತು.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮ

ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸದನವು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿತು)

ಸಭಾಪತಿಯವರು:- ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು. ನಮ್ಮ ಸದನದ ಪದ್ಧತಿಯಂತೆ 10 ನಿಮಿಷಗಳ ಕಾಲ ಸದನವನ್ನು ಮುಂದೂಡಿದ್ದೇನೆ.

(10 ಗಂಟೆ 35 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ 10 ಗಂಟೆ 57 ನಿಮಿಷಗಳಿಗೆ ಸಮಾವೇಶಗೊಂಡಿತು. ಸನ್ಮಾನ್ಯ ಸಭಾಪತಿಯವರು ಸಭಾ ಪೀಠವನ್ನಲಂಕರಿಸಿದ್ದರು)

## 2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.

### ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳು

### 1034; ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ)

ಅ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿದ್ದು-ಕೊಂಡು ಎಂಪಿಲ್, ಪಿಎಚ್‌ಡಿ, ನೆಟ್ ಹಾಗೂ ಎಸ್‌ಎಲ್‌ಇಟಿ ಕೋರ್ಸ್‌ಗಳನ್ನು ಪೂರೈಸಿರುವ ಉಪನ್ಯಾಸಕರ ಸಂಖ್ಯೆ ಎಷ್ಟು;

ಆ) ಇವರು ಎಷ್ಟು ವರ್ಷಗಳಿಂದ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ; ಇವರಿಗೆ ಕಾಲಕಾಲಕ್ಕೆ ಬಡ್ತಿ ಸೌಲಭ್ಯ ಗಳು ದೊರೆಯುತ್ತಿವೆಯೇ; ಇಲ್ಲದೇ ಇದ್ದಲ್ಲಿ ಕಾರಣವೇನು;

ಇ) ಈ ಉಪನ್ಯಾಸಕರ ಪೈಕಿ ಪ್ರಾಧ್ಯಾಪಕರಾಗಿ ಬಡ್ತಿ ಹೊಂದಲು ಅರ್ಹತೆ ಇರುವ ಉಪನ್ಯಾಸಕರ ಸಂಖ್ಯೆ ಎಷ್ಟು;

**ಈ)** ಪಿಯು ಉಪನ್ಯಾಸಕರಿಗೆ ಸೇವಾಜೇಷ್ಠತೆ ಆಧಾರದಲ್ಲಿ ಪದವಿ ಕೋರ್ಸ್‌ಗಳಿಗೆ ಬಡ್ತಿ ನೀಡಲು ಇರುವ ಅಡ್ಡಿಗಳೇನು; ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತಂದು ಇವರಿಗೆ ಬಡ್ತಿ ದೊರಕಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)**

ಅ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಲ್ಲಿ ಎಂಪಿಲ್, ಪಿಎಚ್‌ಡಿ, ನೆಟ್ ಹಾಗೂ ಎಸ್‌ಎಲ್‌ಇಟಿ ಕೋರ್ಸ್‌ನ್ನು ಪೂರೈಸಿರುವ ಉಪನ್ಯಾಸಕರ ಸಂಖ್ಯೆ – 1391 (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಆ) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿದು–ಕೊಂಡು ಎಂಪಿಲ್, ಪಿಎಚ್‌ಡಿ, ನೆಟ್ ಹಾಗೂ ಎಸ್‌ಎಲ್‌ಇಟಿ ಕೋರ್ಸ್‌ಗಳನ್ನು ಪೂರೈಸಿರುವ ಉಪನ್ಯಾಸಕರುಗಳು ಸುಮಾರು 10-20 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

10 ವರ್ಷ ಸೇವೆಯನ್ನು ಪೂರೈಸಿರುವ ಉಪನ್ಯಾಸಕರಿಗೆ ಕಾಲಮಿತಿ ಬಡ್ತಿಯನ್ನು ನೀಡಲಾಗುತ್ತಿದೆ.

15 ವರ್ಷ ಸೇವೆಯನ್ನು ಪೂರೈಸಿರುವ ಉಪನ್ಯಾಸಕರಿಗೆ ಸ್ವಯಂಚಾಲಿತ ಬಡ್ತಿಯನ್ನು ನೀಡಲಾಗುತ್ತಿದೆ ಹಾಗೆಯೇ 20ವರ್ಷ ಸೇವೆಯನ್ನು ಪೂರೈಸಿರುವ ಉಪನ್ಯಾಸಕರಿಗೆ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ನೀಡಿ ಉತ್ತೇಜನ ನೀಡಲಾಗುತ್ತದೆ. ಅಲ್ಲದೆ, ಸೇವಾ ಹಿರಿಯತನವನ್ನು ಪರಿಗಣಿಸಿ ಪ್ರಿನ್ಸಿಪಲ್ ಹುದ್ದೆಗೆ ಬಡ್ತಿ ನೀಡಲು ಅವಕಾಶವಿರುತ್ತದೆ.

ಇ) ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಯಾವುದೇ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಧ್ಯಾಪಕ ಹುದ್ದೆಗಳನ್ನು ಸೃಜಿಸಲಾಗಿರುವುದಿಲ್ಲ. ಆದ್ದರಿಂದ ಅರ್ಹತೆಯ ಪ್ರಶ್ನೆ ಉದ್ಭವಿಸುವುದಿಲ್ಲ.

**ಈ)** ಬಡ್ತಿ ನೀಡಲು ನಿಯಮಗಳಲ್ಲಿ ಅವಕಾಶವಿಲ್ಲ.

ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

**ಅನುಬಂಧ**

| ಕ್ರ.ಸಂ | ಜಿಲ್ಲೆಯ ಹೆಸರು | ಸರ್ಕಾರಿ ಪದವಿ ಪೂರ್ವ ಕಾಲೇಜು |
|---|---|---|
| 1 | ಬೆಂಗಳೂರು ಉತ್ತರ | 18 |
| 2 | ಬೆಂಗಳೂರು ದಕ್ಷಿಣ | 27 |
| 3 | ಬೆಂಗಳೂರು ಗ್ರಾಮಾಂತರ | 42 |
| 4 | ರಾಮನಗರ | 58 |
| 5 | ಬಳ್ಳಾರಿ | 52 |
| 6 | ಬೆಳಗಾವಿ | 45 |
| 7 | ಬಾಗಲಕೋಟೆ | 31 |
| 8 | ಬಿಜಾಪುರ | 29 |
| 9 | ಬೀದರ್ | 28 |
| 10 | ದಾವಣಗೆರೆ | 41 |
| 11 | ಚಿತ್ರದುರ್ಗ | 50 |
| 12 | ಚಿಕ್ಕಮಗಳೂರು | 87 |
| 13 | ಗದಗ | 21 |
| 14 | ಹಾವೇರಿ | 58 |
| 15 | ಧಾರವಾಡ | 34 |
| 16 | ಗುಲ್ಬರ್ಗ | 52 |
| 17 | ಯಾದಗಿರಿ | 24 |
| 18 | ಹಾಸನ | 77 |
| 19 | ಚಿಕ್ಕಬಳ್ಳಾಪುರ | 58 |

| | | |
|---|---|---|
| 20 | ಕೋಲಾರ | 93 |
| 21 | ಚಾಮರಾಜನಗರ | 38 |
| 22 | ಮೈಸೂರು | 79 |
| 23 | ಮಂಡ್ಯ | 16 |
| 24 | ಉತ್ತರಕನ್ನಡ | 10 |
| 25 | ಕೊಪ್ಪಳ | 27 |
| 26 | ರಾಯಚೂರು | 07 |
| 27 | ದಕ್ಷಿಣ ಕನ್ನಡ | 51 |
| 28 | ಉಡುಪಿ | 63 |
| 29 | ಶಿವಮೊಗ್ಗ | 58 |
| 30 | ತುಮಕೂರು | 100 |
| 31 | ಕೊಡಗು | 17 |
| **ಒಟ್ಟು** | | **1391** |

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೆ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಿದ್ದುಕೊಂಡು ಎಂಫಿಲ್, ಪಿಎಚ್‌ಡಿ, ನೆಟ್ ಹಾಗೂ ಎಸ್‌ಎಲ್‌ಇಟಿ ಕೋರ್ಸ್‌ಗಳನ್ನು ಪೂರೈಸಿರುವ ಉಪನ್ಯಾಸಕರ ಸಂಖ್ಯೆ ಎಷ್ಟು ಎನ್ನುವ ಪ್ರಶ್ನೆಗೆ ಉತ್ತರವಾಗಿ ಈ ಕೋರ್ಸ್‌ನ್ನು ಪೂರೈಸಿರುವ ಉಪನ್ಯಾಸಕರ ಸಂಖ್ಯೆ 1391 ಎಂದು ತಿಳಿಸಿದ್ದಾರೆ. ಇನ್ನು ಇವರು ಎಷ್ಟು ವರ್ಷಗಳಿಂದ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎನ್ನುವ ಪ್ರಶ್ನೆಗೆ 10-20 ಮತ್ತು 30 ವರ್ಷಗಳಿಂದ ಸೀಮಿತವಾದಂತಹ ಇಲಾಖೆಯಲ್ಲಿಯೇ ಸೇವೆಯನ್ನು ಸಲ್ಲಿಸುತ್ತಿದ್ದಾರೆನ್ನುವ ಮಾತನ್ನು ಹೇಳಿದ್ದಾರೆ. ಮತ್ತೆ, ಪಿಯು ಉಪನ್ಯಾಸಕರಿಗೆ ಸೇವಾ ಜೇಷ್ಠತೆ ಆಧಾರದಲ್ಲಿ ಪದವಿ ಕೋರ್ಸ್‌ಗಳಿಗೆ ಬಡ್ತಿ ನೀಡಲು ಇರುವ ಅಡ್ಡಿಗಳೇನು; ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತಂದು ಇವರಿಗೆ ಬಡ್ತಿ ದೊರಕಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ಎನ್ನುವ ಪ್ರಶ್ನೆಗೆ ಉತ್ತರವಾಗಿ ಬಡ್ತಿ ನೀಡಲು

ನಿಯಮಗಳಲ್ಲಿ ಅವಕಾಶವಿಲ್ಲ, ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ ಎಂದು ಉತ್ತರದಲ್ಲಿ ತಿಳಿಸಿದ್ದಾರೆ.

ಮಾನ್ಯ ಸಚಿವರಲ್ಲಿ ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಸರ್ಕಾರದವರು ಒಪ್ಪಿಕೊಂಡಂತೆ ಪದವಿ ಪೂರ್ವ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ 1391 ಉಪನ್ಯಾಸಕರು ಎಂಫಿಲ್, ಪಿಎಚ್‌ಡಿ, ನೆಟ್ ಹಾಗೂ ಎಸ್‌ಎಲ್‌ಟಿ ಕೋರ್ಸ್‌ಗಳ ವಿದ್ಯಾರ್ಹತೆಯನ್ನು ಪಡೆದಿರುತ್ತಾರೆ. ಮತ್ತೆ, ಇವರುಗಳು 10 ರಿಂದ 30 ವರ್ಷಗಳವರೆಗೆ ಆ ಒಂದು ಇಲಾಖೆಯಲ್ಲಿಯೇ ಸೇವೆ ಸಲ್ಲಿಸುತ್ತಿದ್ದಾರೆ. ಇವರುಗಳು ಪದವಿ ಕಾಲೇಜುಗಳ ಉಪನ್ಯಾಸಕರುಗಳಾಗಿ ಸೇವೆ ಸಲ್ಲಿಸಲು ಬೇಕಾದಂತಹ ವಿದ್ಯಾರ್ಹತೆ ಏನು ಇರುತ್ತದೆ. ಅದನ್ನು ಪೂರ್ಣಗೊಳಿಸಿರುವುದರಿಂದ ಇವರುಗಳಿಗೆ ಈ ಒಂದು ಬಡ್ತಿಯನ್ನು ಏತಕ್ಕೆ ಕೊಡುತ್ತಿಲ್ಲ ಎನ್ನುವಂತಹ ಒಂದು ಪ್ರಶ್ನೆಯನ್ನು ಮಾನ್ಯ ಸಚಿವರಿಗೆ ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಯಲ್ಲಿ ಪ್ರಮುಖವಾದ ಅಂಶ ಇದೆ. ಆದರೆ, ಈಗಿನ ನಿಯಮಾವಳಿಗಳ ಪ್ರಕಾರ ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಿಂದ ಉನ್ನತ ಶಿಕ್ಷಣ ಇಲಾಖೆಗೆ ಕಳುಹಿಸಲಿಕ್ಕೆ ಅವಕಾಶವಿಲ್ಲ. ಅದು ಉನ್ನತ ಶಿಕ್ಷಣ ಇಲಾಖೆಗೆ ಬರುತ್ತದೆ. ಅದರ ಬಗ್ಗೆ ಚರ್ಚೆ ಮಾಡಿ, ಅಲ್ಲಿ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಆಗ ನಾವು ಈ ಒಂದು ಕೆಲಸವನ್ನು ಮಾಡಬಹುದು. ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

**ಶ್ರೀ ಅಮರನಾಥ್ ಪಾಟೀಲ್:–** ಮಾನ್ಯ ಸಭಾಪತಿಯವರೆ, ಈ ಒಂದು ವ್ಯವಸ್ಥೆಯ ಬಗ್ಗೆ, ನಾವು ಅವಲೋಕನ ಮಾಡಿ ನೋಡಿದಾಗ 1983ರವರೆಗೆ ಪದವಿ ಪೂರ್ವ ಮತ್ತು ಈ ಇಲಾಖೆಗಳು ಕಂಬೈಂಡ್ ಆಗಿದ್ದಾಗ ಒಂದು ವ್ಯವಸ್ಥೆ ಇತ್ತು. ಅವರಿಗೆ ರೆಗ್ಯುಲರ್‌ಆಗಿ ಪ್ರಮೋಷನ್

ಸಿಗುತ್ತಿತ್ತು. ಸೇವಾ ಅರ್ಹತೆ ಮತ್ತು ಅವರು ಪಡೆದಿರುವಂತಹ ವಿದ್ಯಾರ್ಹತೆಯ ಮೇಲೆ ಆ ಒಂದು ನಿಟ್ಟಿನಲ್ಲಿ ಬಡ್ತಿ ಸಿಗುತ್ತಿತ್ತು. ಈಗ ಕೆಲವು ಇಲಾಖೆಗಳಲ್ಲಿ ಮೊದಲನೇ ದರ್ಜೆ ಗುಮಾಸ್ತರು ಸೂಪರಿಂಟೆಂಡೆಂಟ್‌ಆಗಿ ಬಡ್ತಿಯನ್ನು ಪಡೆಯುತ್ತಾರೆ. ನಂತರ ಸೂಪರಿಂಟೆಂಡೆಂಟ್ ಆಗುತ್ತಾರೆ. ಸೂಪರಿಂಟೆಂಡೆಂಟ್‌ನಿಂದ ತಹಶೀಲ್ದಾರ್ ಆಗುತ್ತಾರೆ. ಅದೇ ರೀತಿ ಈ ಶಿಕ್ಷಣ ಇಲಾಖೆಯಲ್ಲಿ ಕೂಡ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢ ಶಿಕ್ಷಣ ಇಲಾಖೆಯ ಶಿಕ್ಷಕರಾಗಿ ಬಡ್ತಿಯನ್ನು ಹೊಂದುವಂತಹ ವ್ಯವಸ್ಥೆ ಈ ಇಲಾಖೆಯಲ್ಲಿ ಇದೆ. ಮತ್ತು ಪದವಿ ಪೂರ್ವ ಉಪನ್ಯಾಸಕರಾಗಿ ಬಡ್ತಿಯನ್ನು ಹೊಂದುತ್ತಿದ್ದರು. ಆ ಒಂದು ವ್ಯವಸ್ಥೆ ಈ ಇಲಾಖೆಯಲ್ಲಿ ಇದೆ. ಇದರ ಜೊತೆಯಲ್ಲಿ ನಮ್ಮ ನೆರೆಯ ರಾಜ್ಯಗಳಾದ ಆಂಧ್ರಾ, ತಮಿಳುನಾಡು, ಒರಿಸ್ಸಾಗಳಲ್ಲಿ ಕೂಡ ಉನ್ನತ ಶಿಕ್ಷಣವನ್ನು ಮುಗಿಸಿದಂತಹ ಶಿಕ್ಷಕರಿಗೆ ಪದವಿ ಪೂರ್ವ ಕೋರ್ಸುಗಳಿಗೆ ಬಡ್ತಿ ಹೊಂದುವಂತಹ ಅವಕಾಶಗಳು ಇವೆ. ಅದರೆ ನಮ್ಮ ರಾಜ್ಯದಲ್ಲಿ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದರೂ ಕೂಡ ಬಡ್ತಿಯ ಅವಕಾಶದಿಂದ ವಂಚಿತರಾಗಿದ್ದೇವೆ ಎನ್ನುವ ಕೊರಗು ಪದವಿ ಪೂರ್ವ ಉಪನ್ಯಾಸಕರಲ್ಲಿ ಇದೆ. ಎಷ್ಟೇ qualification ಅನ್ನು ಪಡೆದರೂ ಕೂಡ ನಮಗೆ ಸಿಗಬೇಕಾದ ಮಾನ್ಯತೆ ಸಿಗುತ್ತಿಲ್ಲ ಎಂದು ಎಲ್ಲಾ ಕಡೆ ಮಾತನಾಡುತ್ತಿದ್ದಾರೆ. ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರು ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಇಬ್ಬರೂ ಕೂಡಾ ಇಲ್ಲಿ ಇದ್ದಾರೆ. ಈ ನಿಟ್ಟಿನಲ್ಲಿ ಇದಕ್ಕೆ ನಿಯಮಗಳಲ್ಲಿ ಬದಲಾವಣೆ ಮಾಡಿ ನ್ಯಾಯಯುತವಾಗಿ ಹೆಚ್ಚಿನ ವಿದ್ಯಾರ್ಹತೆಯನ್ನು ಪಡೆದವರಿಗೆ ಈ ಬಡ್ತಿಯನ್ನು ಕೊಟ್ಟರೆ ಅವರಿಗೆ ಸಹಾಯವಾಗುತ್ತದೆ.

**ಶ್ರೀ ಕಿಮ್ಮನೆ ರತ್ನಾಕರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುತ್ತಿರುವುದರಲ್ಲಿ ಅರ್ಥ ಇದೆ. ನಿಜವಾಗಿ ಹೇಳುವುದಾದರೆ, ನಾವು ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ನಿಯಮಾವಳಿಗಳನ್ನು ಬದಲಾವಣೆ ಮಾಡುವ ಅಗತ್ಯ ಇದೆ. ಇದನ್ನು ಪರಿಶೀಲಿಸಿ ನಂತರ ಮಾನ್ಯ ಉನ್ನತ ಶಿಕ್ಷಣ ಸಚಿವರ ಜೊತೆಯಲ್ಲಿ ಕೂಡ ಮಾತನಾಡಿ ಆ ನಿಟ್ಟಿನಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದಕ್ಕೆ ಕೆಲವು ಮಾತುಗಳನ್ನು ನಾನು ಸೇರಿಸುತ್ತೇನೆ. ಈ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಪದವೀಧರರ ಕ್ಷೇತ್ರ ಮತ್ತು ಶಿಕ್ಷಕರ ಕ್ಷೇತ್ರದಲ್ಲಿನ ಕೆಲವರು ಮತ್ತು ತಾವೂ ಕೂಡ ನನ್ನನ್ನು ಬಂದು ಭೇಟಿ ಮಾಡಿದ್ದೀರಿ. ಆ ಸಮಯದಲ್ಲಿ ಈ ಪ್ರಶ್ನೆ ಬಂದಾಗ, ಇದರಲ್ಲಿ ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣಕ್ಕೆ ಬಡ್ತಿ ಹೊಂದುವ ಮತ್ತು ಇಲ್ಲಿಂದ ಮತ್ತು ಪದವಿ ಕಾಲೇಜುಗಳಿಗೆ ಬಡ್ತಿ ಹೊಂದುವುದಕ್ಕೆ ಅರ್ಹ ವಿದ್ಯಾರ್ಹತೆಯನ್ನು ಪಡೆದವರಿಗೆ ಬಡ್ತಿಯನ್ನು ಕೊಡಬೇಕೆಂಬ ಪ್ರಶ್ನೆಯನ್ನು ಪರಿಶೀಲನೆ ಮಾಡುತ್ತಿದ್ದೇವೆ. Seniority ಇದರಲ್ಲಿ ಬರುತ್ತದೆ. ಇದರ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ನಾವು ಪಡೆಯಬೇಕಾಗುತ್ತದೆ. ನಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ಹೇಳಿದ ಹಾಗೆ ನಮ್ಮ ಸಿ ಅಂಡ್ ಆರ್ ನಿಯಮಾವಳಿಗಳನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ಗಂಭೀರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಯಾರಿಗೆ ಅರ್ಹತೆ ಇದೆ ಅವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾಗುತ್ತದೆ. ನಾವೂ ಕೂಡ ಕಾನೂನಿನ ಚೌಕಟ್ಟಿನಲ್ಲಿ ಇದನ್ನು ಮಾಡಬೇಕಾಗುತ್ತದೆ. ತಾವು ಏನು ಸಲಹೆಯನ್ನು ಕೊಟ್ಟಿದ್ದೀರಿ ಆ ಸಲಹೆ ನಮ್ಮ ಗಮನದಲ್ಲಿ ಇದೆ. ನಮ್ಮ ಇಲಾಖೆಗೆ ಇದರ ಬಗ್ಗೆ ಪರಿಶೀಲಿಸಿ ಕಡತವನ್ನು ಮಂಡಿಸುವುದಕ್ಕೆ ಹೇಳಿದ್ದೇನೆ.

**ಸಭಾಪತಿಯವರು:–** ಮಾನ್ಯ ಮೋನಪ್ಪ ಭಂಡಾರಿಯವರೆ ತಮ್ಮ ಪ್ರಶ್ನೆ ಸಂಖ್ಯೆ 1100ಗೆ ಮಾನ್ಯ ಸಚಿವರು ಸಮಯಾವಕಾಶವನ್ನು ಕೇಳಿದ್ದಾರೆ.

**ಸಭಾಪತಿಯವರು:–** ಇವತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಒಂದೆರಡು ಪ್ರಶ್ನೆಗಳು ಇವೆ. ಉತ್ತರಗಳನ್ನು ಈಗಾಗಲೇ ಕಳುಹಿಸಿ ಕೊಟ್ಟಿದ್ದಾರೆ. ಅದನ್ನು ಎಲ್ಲರಿಗೂ circulate ಕೂಡ ಮಾಡಿದ್ದೇವೆ. ಆದರೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಆ ಉತ್ತರಗಳನ್ನು ನೋಡಿದಾಗ ಕೆಲವು ತಪ್ಪುಗಳು ಕಂಡು ಬಂದಿದೆ. ಆದುದರಿಂದ ಈಗಾಗಲೇ ತಮಗೆ ಕೊಟ್ಟಿರುವ ಹಾಲಿ ಉತ್ತರಗಳನ್ನು ಅವರು ವಾಪಸ್ ಪಡೆಯುತ್ತಿದ್ದಾರೆ. ಬೇರೆ ಉತ್ತರಗಳನ್ನು ತಮಗೆ ಕಳುಹಿಸಿ ಕೊಡುವ

ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಆದುದರಿಂದ ಆ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೊನೆಯಲ್ಲಿ ತೆಗೆದುಕೊಳ್ಳುತ್ತೇವೆ.

**ಡಾ:ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ, ಆದಷ್ಟು ಬೇಗನೆ ಉತ್ತರಗಳನ್ನು ನಮಗೆ ಕಳುಹಿಸಿ ಕೊಟ್ಟರೆ ನಾವು ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

**ಸಭಾಪತಿಯವರ:–** ಈಗಲೇ ಕಳುಹಿಸಿ ಕೊಡುತ್ತೇನೆ.

**ವಸತಿ ರಹಿತರಿಗೆ ವಸತಿ ಹಂಚಿಕೆ ಕುರಿತು**

**1111; ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ರಾಜ್ಯದ ಹಾಗೂ ನಗರ ಪ್ರದೇಶದ ವಸತಿ ರಹಿತರಿಗೆ ಎಷ್ಟು ಮನೆಗಳನ್ನು ನಿರ್ಮಿಸಲು ಪ್ರಸಕ್ತ ವರ್ಷದಲ್ಲಿ ಉದ್ದೇಶಿಸಲಾಗಿದೆ.

**ಆ)** ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಸತಿ ರಹಿತರಿಗೆ ಎಷ್ಟು ಮನೆಗಳನ್ನು ನಿರ್ಮಿಸಲು ಪ್ರಸಕ್ತ ವರ್ಷದಲ್ಲಿ ಉದ್ದೇಶಿಸಲಾಗಿದೆ;

**ಇ)** ಉಳಿದ ವಸತಿ ರಹಿತರಿಗೆ ವಸತಿ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು)

**ಡಾ ಎಂ.ಎಚ್.ಅಂಬರೀಷ ( ವಸತಿ ಸಚಿವರು)**

**ಅ)** ಗ್ರಾಮೀಣ ಹಾಗೂ ನಗರ ಪ್ರದೇಶದ ವಸತಿ ರಹಿತರಿಗೆ ವಿವಿಧ ವಸತಿ ಯೋಜನೆಯಡಿ ಪ್ರಗತಿಯಲ್ಲಿರುವ ಮನೆಗಳನ್ನು ಒಳಗೊಂಡಂತೆ ಒಟ್ಟು 3 ಲಕ್ಷ ಮನೆಗಳನ್ನು 2013-14 ನೇ ಆರ್ಥಿಕ ವರ್ಷದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ. ಯೋಜನಾವಾರು ವಿವರ ಈ ಕೆಳಗಿನಂತೆ ಇದೆ.

| **ಯೋಜನೆಗಳು** | **ನಿರ್ಮಿಸಲು ಉದ್ದೇಶಿಸಲಾಗಿರುವ ಮನೆಗಳ ಸಂಖ್ಯೆ** |
|---|---|
| ಬಸವ ವಸತಿ ಯೋಜನೆ. | 168000 |
| ಇಂದಿರಾ ಆವಾಸ್ ಯೋಜನೆ. | 100000 |
| ವಿಶೇಷ ಅಭಿವೃದ್ಧಿ ಯೋಜನೆ. | 7000 |
| ಗ್ರಾಮೀಣ ಆಶ್ರಯ | 5000 |
| ಅಂಬೇಡ್ಕರ್‌ಯೋಜನೆ. | 5000 |
| ವಾಜಪೇಯಿ ನಗರ ವಸತಿ ಯೋಜನೆ. | 15000 |
| **ಒಟ್ಟು** | **300000** |

**ಆ)** ಪ್ರಗತಿಯಲ್ಲಿರುವ ಮನೆಗಳನ್ನೂ ಒಳಗೊಂಡಂತೆ ಗುಲ್ಬರ್ಗಾ ಜಿಲ್ಲೆಯಲ್ಲಿ 8821 ಮನೆಗಳನ್ನು ಮತ್ತು ಯಾದಗಿರಿ ಜಿಲ್ಲೆಯಲ್ಲಿ 8883 ಮನೆಗಳನ್ನು 2013-14ನೇ ಆರ್ಥಿಕ ವರ್ಷದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಯೋಜನಾವಾರು ವಿವರ ಈ ಕೆಳಗಿನಂತಿದೆ.

**ಗುಲ್ಬರ್ಗಾ ಜಿಲ್ಲೆ:**

| **ಯೋಜನೆಗಳು** | **ನಿರ್ಮಿಸಲು ಉದ್ದೇಶಿಸಲಾಗಿರುವ ಮನೆಗಳ ಸಂಖ್ಯೆ** |
|---|---|
| ಬಸವ ವಸತಿ ಯೋಜನೆ. | 4652 |
| ಇಂದಿರಾ ಆವಾಸ್ ಯೋಜನೆ. | 1421 |
| ವಿಶೇಷ ಅಭಿವೃದ್ಧಿ ಯೋಜನೆ. | 1053 |
| ಗ್ರಾಮೀಣ ಆಶ್ರಯ | 173 |
| ಅಂಬೇಡ್ಕರ್‌ಯೋಜನೆ. | 130 |
| ವಾಜಪೇಯಿ ನಗರ ವಸತಿ ಯೋಜನೆ. | 1392 |
| **ಒಟ್ಟು** | **8821** |

**ಯಾದಗಿರಿ ಜಿಲ್ಲೆ:**

| ಯೋಜನೆಗಳು | ನಿರ್ಮಿಸಲು ಉದ್ದೇಶಿಸಲಾಗಿರುವ ಮನೆಗಳ ಸಂಖ್ಯೆ |
|---|---|
| ಬಸವ ವಸತಿ ಯೋಜನೆ. | 5876 |
| ಇಂದಿರಾ ಆವಾಸ್ ಯೋಜನೆ. | 1837 |
| ವಿಶೇಷ ಅಭಿವೃದ್ಧಿ ಯೋಜನೆ. | 304 |
| ಗ್ರಾಮೀಣ ಆಶ್ರಯ | 61 |
| ಅಂಬೇಡ್ಕರ್‌ಯೋಜನೆ. | 160 |
| ವಾಜಪೇಯಿ ನಗರ ವಸತಿ ಯೋಜನೆ. | 645 |
| **ಒಟ್ಟು** | **8883** |

ಇ) ಪ್ರತಿ ವರ್ಷ ಅನುದಾನ ಲಭ್ಯತೆಗೆ ಅನುಗುಣವಾಗಿ ಗುರಿಯನ್ನು ನಿಗದಿಪಡಿಸಿ ಉಳಿದ ವಸತಿ ರಹಿತರಿಗೆ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಗುಲ್ಬರ್ಗಾ ಮತ್ತು ಯಾದಗಿರಿ ಅಲ್ಲದೆ ಇಡೀ ರಾಜ್ಯದಾದ್ಯಂತ ವಸತಿ ಸಮಸ್ಯೆಗಳು ಬಹಳವಾಗಿವೆ. ಅನೇಕ ಸಲ ಈ ಸಮಸ್ಯೆಯ ಬಗ್ಗೆ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಮ್ಮ ಗುಲ್ಬರ್ಗಾಕ್ಕೆ 8821 ಮನೆಗಳನ್ನು ಕೊಟ್ಟಿದ್ದಾರೆ. ಯಾದಗಿರಿಗೆ 8883 ಮನೆಗಳನ್ನು ಕೊಟ್ಟಿದ್ದಾರೆ. ಯಾದಗಿರಿಗೆ ಸಂಬಂಧಪಟ್ಟಂತೆ ಮೂರು ತಾಲ್ಲೂಕುಗಳು ಇವೆ. ಗುಲ್ಬರ್ಗಾಕ್ಕೆ ಸಂಬಂಧಪಟ್ಟಂತೆ ಏಳು ತಾಲ್ಲೂಕುಗಳು ಇರುತ್ತವೆ. ಆದುದರಿಂದ ಗುಲ್ಬರ್ಗಾಕ್ಕೆ ಸಂಬಂಧಿಸಿದಂತೆ ಸ್ವಲ್ಪ ಹೆಚ್ಚು ಮನೆಗಳನ್ನು ಕೊಡಬೇಕೆಂದು ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಇಲ್ಲಿ ಜಾಗದ ಸಮಸ್ಯೆ ಬಹಳ ಇದೆ. ಎರಡೂವರೆ ಎಕರೆ ಜಾಗದ ಪ್ರಶ್ನೆ ಇಲ್ಲಿ ಇದೆ. ಇದು ತಮ್ಮ ಉತ್ತರದಲ್ಲಿ ಕೂಡ ಇದೆ. ಆದರೆ, ಇವತ್ತಿನವರೆಗೂ ಕೂಡ

ಯಾವುದೇ ಗ್ರಾಮಪಂಚಾಯತಿಯಲ್ಲಿ ಯಾರೂ ಕೂಡ ತಮ್ಮ ಜಾಗಗಳನ್ನು ಕೊಡುವುದಕ್ಕೆ ಸಿದ್ಧರಿಲ್ಲ. ಇವರು ಒಂದು ಎಕರೆ ಜಾಗಕ್ಕೆ ಎರಡು ಲಕ್ಷ ರೂಪಾಯಿ ಹಣವನ್ನು ಕೊಡುತ್ತಾರೆ. ಇದು ಬಹಳ ಕಡಿಮೆಯಾಗಿದೆ. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ಇವತ್ತು ಕೈಗಾರಿಕೆಗಳಿಗೆ ಮತ್ತಿತರೆ ಉದ್ದೇಶಗಳಿಗೆ ಒಂದು ಎಕರೆ ಜಾಗವನ್ನು ಮಾರಾಟ ಮಾಡಿದರೆ ಅವರಿಗೆ 9 ರಿಂದ 10-15 ಲಕ್ಷ ರೂಪಾಯಿ ಹಣವನ್ನು ನೀಡುತ್ತಾರೆ. ಈಗಾಗಲೇ ನಮ್ಮ ಗುಲ್ಬರ್ಗಾದ ಖೇಣಿ ಎಂಬ ಗ್ರಾಮದಲ್ಲಿ ಒಂದು ಎಕರೆಗೆ 9 ರಿಂದ 10 ಲಕ್ಷ ರೂಪಾಯಿಗಳನ್ನು ನೀಡಿ ಖರೀದಿ ಮಾಡಿದ್ದಾರೆ. ಇವರು ಒಂದು ಎಕರೆಗೆ ಒಂದು ಲಕ್ಷ ರೂಪಾಯಿ ಹಣವನ್ನು ನೀಡುತ್ತಿದ್ದಾರೆ. ಇದರಿಂದಾಗಿ ಆ ಭಾಗದಲ್ಲಿನ ಯಾವ ಹಳ್ಳಿಗಳವರೂ ಕೂಡ ತಮಗೆ ಜಮೀನನ್ನು ನೀಡುವುದಕ್ಕೆ ಮುಂದೆ ಬರುತ್ತಿಲ್ಲ. ಈ ಕಾರಣದಿಂದ ಯಾವ ಹಳ್ಳಿಗಳಲ್ಲಿಯೂ ಕೂಡ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾವುದೇ ರೀತಿಯಿಂದಲಾದರೂ ಜಾಗವನ್ನು ಖರೀದಿ ಮಾಡಿ ಅಲ್ಲಿ ಮನೆಗಳನ್ನು ಕಟ್ಟುವ ವ್ಯವಸ್ಥೆಯಾಗಬೇಕು. ಕಳೆದ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಒಂದೊಂದು ತಾಲ್ಲೂಕಿಗೆ 5-6 ಸಾವಿರ ಇನ್ನು ಕೆಲವು ಕಡೆಗಳಲ್ಲಿ 9 ಸಾವಿರದವರೆಗೂ ಮನೆಗಳನ್ನು ಕೊಟ್ಟಿರುವ ಉದಾಹರಣೆಗಳು ಇವೆ. ಅದರಲ್ಲಿ ಒಂದು ತಾಲ್ಲೂಕಿನಲ್ಲಿ 2 ಸಾವಿರ ಮನೆಗಳನ್ನು ಹಂಚಿಕೆ ಮಾಡಲಾಗಿದ್ದು ಈ ಪೈಕಿ ಒಂದು ಸಾವಿರ ಮನೆಗಳಿಗೆ payment ಆಗಿದೆ. ಆದರೆ ಇನ್ನು ಒಂದು ಸಾವಿರ ಮನೆಗಳಿಗೆ ಸಂಬಂಧಪಟ್ಟಂತೆ ಯಾವುದೇ payment ಆಗಿಲ್ಲ. ಇವುಗಳಿಗೆ payment ಆಗುವುದೂ ಇಲ್ಲ. ಏಕೆಂದರೆ ಕೆಲವು ನಿಯಮಗಳು ಇವೆ. ನಿಯಮಗಳ ಪ್ರಕಾರ ನಾಲ್ಕು ಗೋಡೆಗಳ ಫೋಟೋವನ್ನು ತೆಗೆದು ಆ ಫೋಟೋವನ್ನು ನೋಡಿದ ನಂತರ payment ಅವರ account ಗೆ ಜಮಾ ಆಗುವ ಪದ್ಧತಿ ಇದೆ. ಗುಲ್ಬರ್ಗಾ ಜಿಲ್ಲೆ ಒಂದರಲ್ಲಿಯೇ ಒಂದು ಸಾವಿರ ಮನೆಗಳ ಮುಂದೆ ಮೂರು ಗೋಡೆಗಳನ್ನು ಕಟ್ಟಿರತಕ್ಕಂಥಾದ್ದು ಇದೆ. ಇದೇ ರೀತಿಯಲ್ಲಿನ ಪರಿಸ್ಥಿತಿ ಇಡೀ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಇದ್ದು payment ಆಗದೆ ಹಾಗೆಯೇ ಉಳಿದಿವೆ. ದಯಮಾಡಿ ಇದಕ್ಕೆ ಏನಾದರೂ ಒಂದು

ಪರಿಹಾರವನ್ನು ಮಾನ್ಯ ಸಚಿವರು ಕಂಡು ಹಿಡಿಯಬೇಕು. ಆ ಮನೆಗಳಿಗೆ 1,20,000 ರೂಪಾಯಿ ಇದ್ದರೆ ಅದರಲ್ಲಿನ ಒಂದು ಗೋಡೆಯ amount ಅನ್ನು cut ಮಾಡಿ ಬಾಕಿ ಉಳಿದ ಹಣವನ್ನು payment ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಈ ಸಮಸ್ಯೆ ಇಡೀ ರಾಜ್ಯದಾದ್ಯಂತ ಇದೆ. ಇದಕ್ಕೆ ಒಂದು ಶಾಶ್ವತವಾದಂತಹ ಪರಿಹಾರ ನೀಡಬೇಕು. ಇಂದಿರಾ ಆವಾಸ ಮನೆಗಳನ್ನು ಜನಸಂಖ್ಯೆಯ ಆಧಾರದ ಮೇಲೆ ಕೊಡಲಾಗುತ್ತದೆ. ಬಸವ ವಸತಿ ಯೋಜನೆಯ ಮನೆಗಳನ್ನು ಜನಸಂಖ್ಯೆಯ ಆಧಾರದ ಮೇಲೆ ನೀಡಲಾಗುತ್ತಿಲ್ಲ. ಒಂದು ಉದಾಹರಣೆಯನ್ನು ನೀಡಬಯಸುತ್ತೇನೆ. ಒಂದು ಗ್ರಾಮ ಪಂಚಾಯತಿಯಲ್ಲಿ ಕೇವಲ 8 ಜನ ಸದಸ್ಯರು ಇರತಕ್ಕಂಥ ಗ್ರಾಮ ಪಂಚಾಯಿತಿಗೂ ಕೂಡ 20 ಮನೆಗಳು ಹೋಗುತ್ತವೆ. ಅದೇ ರೀತಿಯಲ್ಲಿ ಸುಮಾರು 20 ಜನ ಸದಸ್ಯರು ಇರತಕ್ಕಂತಹ ಗ್ರಾಮ ಪಂಚಾಯಿತಿಗೂ ಕೂಡ 20 ಮನೆಗಳು ಹೋಗುತ್ತವೆ. ಆದುದರಿಂದ ಈ ಮನೆಗಳ ಹಂಚಿಕೆಯನ್ನು ಜನಸಂಖ್ಯೆ ಆಧಾರದ ಮೇಲೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಕೊನೆಯದಾಗಿ ಈ ಜಾಗದ ಸಮಸ್ಯೆ ಜೊತೆಗೆ ತಾಲ್ಲೂಕುವಾರು ಮನೆಗಳನ್ನು ಹಂಚಿಕೆ ಮಾಡತಕ್ಕಂತಹ ಸಂದರ್ಭದಲ್ಲಿ ಆ ಭಾಗಕ್ಕೆ ಹೆಚ್ಚಿನ ಮನೆಗಳನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಮತ್ತು ಇದಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂದು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ: ಎಂ.ಹೆಚ್.ಅಂಬರೀಷ್–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳುತ್ತಿರುವುದರಲ್ಲಿ ಬಹಳ ಅರ್ಥ ಇದೆ. ಮೂರು ಸದಸ್ಯರಿರುವ ಕಡೆಯಲ್ಲಿ ಕೂಡ ಒಂದೇ ರೀತಿಯಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಅದೇ ರೀತಿಯಲ್ಲಿ ಹತ್ತು ಜನ ಗ್ರಾಮ ಪಂಚಾಯತಿ ಸದಸ್ಯರು ಇರುವ ಕಡೆಯಲ್ಲೂ ಕೂಡ ಒಂದೇ ಎಂಬಂತೆ ಮನೆಗಳ ಹಂಚಿಕೆ ಆಗುತ್ತಿದೆ. ಈ ಹಿಂದೆ ಇದ್ದಂತಹ ಸರ್ಕಾರ ಸುಮಾರು 12-13 ಲಕ್ಷ ಮನೆಗಳನ್ನು ಹಂಚಿಕೆ ಮಾಡಿದ್ದಾರೆ. ಕೆಲವು ಮನೆಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಆದುದರಿಂದಾಗಿ ಅವುಗಳನ್ನು ನಾವು block ಮಾಡಿದ್ದೇವೆ. ಇನ್ನು ಕೆಲವನ್ನು

Open ಮಾಡಿದ್ದೇವೆ. ಅವುಗಳಿಗೆ ಹಣವನ್ನು ಒದಗಿಸುವುದಕ್ಕೆ ನಾವು ತಯಾರಿದ್ದೇವೆ. ನಾನು ಅಧಿಕಾರಕ್ಕೆ ಬಂದ ನಂತರ 9 ತಿಂಗಳಿಗೆ ಇವುಗಳನ್ನು open ಮಾಡಿ ಕೊಟ್ಟಿದ್ದೇವೆ. ಆ block ಆಗಿರುವವರು ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡು ಬಡವರು ಸಾಲ ಸೋಲವನ್ನು ಮಾಡಿ ತಂದು ಹಾಕಿರುತ್ತಾರೆ. ಅದನ್ನು ಮುಗಿಸುವುದಕ್ಕೆ ಮಾತನಾಡುತ್ತಿದ್ದೇವೆ. ಇವರು ಕೇಳುತ್ತಿರುವುದರಲ್ಲಿ ಜಮೀನಿಗೆ ಹೆಚ್ಚಿನ ಹಣವನ್ನು ನೀಡಿದ್ದೇ ಆದರೆ ಜಾಗ ಸಿಗುತ್ತದೆ ಎಂದು ಹೇಳುತ್ತಿದ್ದಾರೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ನೀವು ಜಾಗವನ್ನು ಖರೀದಿ ಮಾಡುವಾಗ ಹೆಚ್ಚಿನ ಹಣವನ್ನು ನೀಡಿದ್ದೇ ಆದರೆ ಜಮೀನು ಸಿಗುತ್ತದೆ. ಇಲ್ಲವಾದಲ್ಲಿ ಸಿಗುವುದಿಲ್ಲ.

**ಡಾ:ಎಂ.ಹೆಚ್.ಅಂಬರೀಶ್:-** ನೀವು ನನಗಿಂತ ಹಿರಿಯ ಸದಸ್ಯರು, ತಮಗೆಲ್ಲರಿಗೂ ಈ poverty lineನ ಬಗ್ಗೆ ಚೆನ್ನಾಗಿ ತಿಳಿದಿದೆ. ಹಣವಂತರು ಎಷ್ಟು ಬೇಕಾದರೂ ಕೊಟ್ಟುಕೊಳ್ಳಲಿ. ಆದರೆ ಸರ್ಕಾರದವರು ಈ ಒಂದು poverty line ಅನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅವರಿಗೆ ಎಷ್ಟು ಸಹಾಯವನ್ನು ಮಾಡಬಹುದೋ ಅಷ್ಟು ಸಹಾಯವನ್ನು ಮಾಡಬೇಕೆಂಬುದು ನಮ್ಮ ಉದ್ದೇಶವಾಗಿದೆ.

**ಶ್ರೀ ರಾಮಚಂದ್ರಗೌಡ:-** ಭೂಮಿಯನ್ನು acquire ಮಾಡಬೇಕಾದರೆ ಒಂದು ಎಕರೆಗೆ 2 ಲಕ್ಷ ರೂಪಾಯಿ ಹಣವನ್ನು ನೀಡುತ್ತಿರಿ. ಈ ಹಣ ಬಹಳ ಕಡಿಮೆ ಆಗಿರುವುದರಿಂದ ಜಮೀನು ಸರ್ಕಾರಕ್ಕೆ ಸಿಗುತ್ತಿಲ್ಲ. ಇದನ್ನು ಸ್ವಲ್ಪ ಹೆಚ್ಚಿಗೆ ಮಾಡಿ ಆಗ ಜಾಗ ಸಿಗುತ್ತದೆ ಎಂದು ಅವರು ಹೇಳುತ್ತಿದ್ದಾರೆ.

**ಡಾ:ಎಂ.ಹೆಚ್.ಅಂಬರೀಶ್:-** ಹೌದು. ಈ Land Acquisition Act ಅನ್ನು ಕೇಂದ್ರ ಸರ್ಕಾರ ಮಾಡಿರುತ್ತದೆ. ಅದರ ಪ್ರಕಾರ ಸರಿಯಾಗಿ ಪರಿಶೀಲನೆ ಮಾಡಿ ಎಷ್ಟು maximum ಕೊಟ್ಟು ಈ ಜಾಗವನ್ನು ಖರೀದಿ ಮಾಡಿ ಮನೆಗಳನ್ನು ಮಾಡಬಹುದು ಎಂಬುದರ ಬಗ್ಗೆ ಯೋಚನೆ ಮಾಡಿ

ಮಾಡಿಕೊಡುತ್ತೇನೆ. ಆದಷ್ಟೂ ಜಾಸ್ತಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಗುಲ್ಬರ್ಗಾ ಜಿಲ್ಲೆಯಲ್ಲಿ ಬೇರೆ ಉದ್ದೇಶಕ್ಕೆಂದು 9 ಲಕ್ಷವನ್ನು ನೀಡಿ ಜಿಲ್ಲಾಧಿಕಾರಿಯವರು ತೆಗೆದುಕೊಂಡಿದ್ದಾರೆ. ಅಂತಹದರಲ್ಲಿ 2 ಲಕ್ಷ ರೂಪಾಯಿಯನ್ನು ನೀವು ನೀಡಿದರೆ ಯಾರೂ ಕೂಡ ಜಮೀನನ್ನು ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಯಾವ ರೀತಿ ನೀರಾವರಿ ಯೋಜನೆಗಳಿಗೆ ಕಾಲಬದ್ಧವಾಗಿ ಕೊಡುತ್ತದೆ ಅದೇ ರೀತಿ ಇಲ್ಲೂ ಕೂಡ ಕೊಡಬೇಕು.

**ಡಾ:ಎಂ.ಹೆಚ್.ಅಂಬರೀಷ್:-** ಜಿಲ್ಲಾಧಿಕಾರಿಗಳು, ತಹಸೀಲ್ದಾರರು, ಅಸಿಸ್ಟಂಟ್ ಕಮೀಷ್ನನರ್‌ರವರೆ ದರವನ್ನು ನಿಗದಿಗೊಳಿಸುತ್ತಾರೆ. ಅದರ ಮೇಲಾದರು ತೆಗೆದುಕೊಂಡು ಮಾಡಬೇಕೆನ್ನುವ ಉದ್ದೇಶ ಇದೆ, ಅದನ್ನು ಮಾಡಿ ಕೊಡುತ್ತೇವೆ.

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಅವರು ಎರಡು ಲಕ್ಷಕ್ಕಿಂತ ಮೇಲ್ಪಟ್ಟು ನನಗೆ ಕೊಡಲಿಕ್ಕೆ ಅಧಿಕಾರ ಇಲ್ಲ ಅದಕ್ಕಾಗಿ ನಾನು ಕೊಡುವುದಿಲ್ಲವೆಂದು ಹೇಳಿ ಮನೆಗಳು ಹಾಗೆಯೇ ಉಳಿದಿವೆ.

**ಡಾ:ಎಂ.ಹೆಚ್.ಅಂಬರೀಷ್:-** ಒಂದು ಕಡೆ ಒಂಬತ್ತು ಲಕ್ಷ ಕೊಟ್ಟು ಇನ್ನೊಂದು ಕಡೆ ಎರಡು ಲಕ್ಷ ಅಂದರೆ ಯಾರು ಒಪ್ಪುತ್ತಾರೆ? ಆದ್ದರಿಂದ ಅವರಿಗೂ ಕೊಡಬೇಕಾದರೆ ಒಂಬತ್ತು ಲಕ್ಷವನ್ನೇ fix ಮಾಡಬೇಕು.

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಮೂರು ಗೋಡೆ ಕಟ್ಟಿರುವಂಥ ಸಾವಿರಾರು ಮನೆಗಳು ಬಾಕಿ ಉಳಿದಿವೆ. ಅದಕ್ಕೊಂದು ಶಾಶ್ವತವಾದಂಥ ಪರಿಹಾರವನ್ನು ಕಂಡು ಹಿಡಿಯಿರಿ.

**ಡಾ:ಎಂ.ಹೆಚ್.ಅಂಬರೀಷ್:-** ಮಾನ್ಯ ಸಭಾಪತಿಯವರೆ, ಅಲ್ಲಿ ಏನಾಗಿರುತ್ತದೆಂದರೆ GPS (Global Positioning System) ನಲ್ಲಿ ಒಂದು ಗೋಡೆಯನ್ನು ಕಟ್ಟಿರುತ್ತಾರೆ, ಅದರ ಪಕ್ಕ ಎರಡು ಗೋಡೆಗಳನ್ನು ಕಟ್ಟಿ ಪುನಃ

ದುಡ್ಡು ಕೇಳುತ್ತಾರೆ. ಆ ತರಹ ಆಗಿರುತ್ತದೆ. ಇದು ಸಾರ್ವಜನಿಕರ ಹಣ, ಅವರಿಗೆ ಇಂತಹದ್ದಕ್ಕೆಲ್ಲಾ ಪ್ರೋತ್ಸಾಹ ಕೊಡುವುದಕ್ಕಾಗುವುದಿಲ್ಲ. ಇದು ತಮಗೂ ಚೆನ್ನಾಗಿ ಗೊತ್ತಿದೆ. ಏಕೆಂದರೆ ತಾವು ಕೂಡ ಜನರ ಪ್ರತಿನಿಧಿಗಳು. ಕಾನೂನುಬದ್ಧವಾಗಿ ಅದಕ್ಕೆಲ್ಲಾ ನಾವು ಕಡಿವಾಣ ಹಾಕಬೇಕಾಗುತ್ತದೆ. ಆದ್ದರಿಂದ ಅದರ payment ಅನ್ನು stop ಮಾಡಿರುತ್ತೇವೆ. ಕೆಲವನ್ನು open ಮಾಡಿ ಕೊಡುತ್ತೇವೆ. ನಾವು ತಪ್ಪಿತಸ್ಥರನ್ನು ಒಂದು ಹಂತದವರೆಗೆ ತಡೆದುಕೊಳ್ಳಬಹುದು. ತುಂಬಾ ಜಾಸ್ತಿ ಮಾಡಿದಾಗ ಕಷ್ಟ ಆಗುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ಮನೆಗಳಿಗೆ Grants release ಮಾಡಿದ್ದಾರೆಯೇ?

**ಡಾ:ಎಂ.ಹೆಚ್.ಅಂಬರೀಷ್:–** ಮಾನ್ಯ ಸಭಾಪತಿಯವರೆ, ಇಲ್ಲಿಯವರೆಗೆ ನಾವು ಒಂದು ಪೈಸೆ ಕೂಡ due ಇಟ್ಟಿಲ್ಲ. ಇಲ್ಲಿ ಯಾರು ಮಧ್ಯವರ್ತಿಗಳಿಲ್ಲ, ನೇರವಾಗಿ ಅವರ ಖಾತೆಗೆ ದುಡ್ಡು ಹೋಗುವುದರಿಂದ ನೀವು ಕೇಳುವ ಹಾಗಿಲ್ಲ, ನಾವು ಕೇಳುವ ಹಾಗಿಲ್ಲ. ಅವರಿಗೆ ಹೋಗುವ ದುಡ್ಡನ್ನು ಕೊಟ್ಟುಬಿಟ್ಟಿದ್ದೇವೆ. ಇನ್ನು ದುಡ್ಡು ಇದೆ, ಕೊಡುತ್ತೇವೆ.

## ಅನುದಾನಿತ ಪ್ರೌಢ ಶಾಲೆಗಳ ವೃತ್ತಿ ಶಿಕ್ಷಕರುಗಳಿಗೆ ಗ್ರೇಡ್–೧ ವೇತನ ಶ್ರೇಣಿ ಕುರಿತು

### 1125; ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ)

ಅ) ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವೃತ್ತಿ ಶಿಕ್ಷಕರಿಗೆ ಗ್ರೇಡ್–1 ಸಂಬಳ ಮಂಜೂರು ಮಾಡಿ ಆದೇಶವನ್ನು ಹೊರಡಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಈ ಆದೇಶವನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ವೃತ್ತಿ ಶಿಕ್ಷಕರಿಗೆ ವಿಸ್ತರಿಸದಿರಲು ಕಾರಣಗಳೇನು;

ಇ) ಈ ಸೌಲಭ್ಯಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಅದೇ ದಿನಾಂಕದಿಂದ ಪೂರ್ವಾನುಕ್ರಮವಾಗಿ ವಿಸ್ತರಿಸಲು ಯಾವ ದಿನಾಂಕದಂದು ಆದೇಶ ಹೊರಡಿಸಲಾಗುವುದು?

**ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)**

**ಅ)** ಹೌದು

**ಆ)** ಪರಿಶೀಲಿಸಲಾಗುತ್ತಿದೆ.

**ಇ)** ಉದ್ಭವಿಸುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಸರ್ಕಾರಿ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಗ್ರೇಡ್-1 ಸಂಬಳ ಮಂಜೂರು ಮಾಡಿ ಆದೇಶ ಹೊರಡಿಸಲಾಗಿದೆಯೇ ಎಂದು ಪ್ರಶ್ನೆಯನ್ನು ಕೇಳಿದರೆ ಹೌದು ಎಂದು ಉತ್ತರವನ್ನು ನೀಡಿದ್ದಾರೆ. ಖಾಸಗಿಯವರಿಗೆ ಇಲ್ಲ, ಪರಿಶೀಲಿಸಲಾಗುವುದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ತಾವು ನನಗೆ ಒಂದು ವಿಚಾರವನ್ನು ಹೇಳಬೇಕು. ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ಹೆರಿಗೆ ರಜೆ ಹಾಗೂ ಭತ್ಯೆಯನ್ನು ಕೊಡುತ್ತಾರೆ. ಆದರೆ ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಹೆಣ್ಣಮಕ್ಕಳಿಗೆ ಹೆರಿಗೆ ರಜೆ ಹಾಗೂ ಭತ್ಯೆಯನ್ನು ಕೊಡುವುದಿಲ್ಲ. ಎರಡಕ್ಕೂ ಕಾನೂನು ಬೇರೆ ಏಕೆ? ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಹೆಣ್ಣು ಮಕ್ಕಳ ಹೆರಿಗೆ, ಹೆರಿಗೆ ಅಲ್ಲವೇ? ಇದು ಯಾವ ಕಾನೂನು? ಸರ್ಕಾರ ಈ ರೀತಿ ಮಾಡುತ್ತಿರುವುದು ಸರಿಯೇ?

**ಸಭಾಪತಿಯವರು:-** ಮಾನ್ಯ ಸಚಿವರು ಇದರ ಬಗ್ಗೆ ಒಂದು ಸ್ಪಷ್ಟವಾದಂಥ ಉತ್ತರವನ್ನು ನೀಡಬೇಕು. ಈ ವಿಷಯದ ಬಗ್ಗೆ ನಮ್ಮ ಸದನದಲ್ಲಿ ಪ್ರತಿ ಬಾರಿ ಚರ್ಚೆಯಾಗುತ್ತದೆ. ಈ ತರಹದ ಆದೇಶಗಳು ಬರುವಾಗ ನಿಮ್ಮ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿದ್ದಾರೆ. ನಾನು ಕೂಡ ಇದರ ಬಗ್ಗೆ ಶಿಕ್ಷಣ ಸಚಿವರಿಗೆ, ಹಿಂದಿನ ಎಲ್ಲಾ ಶಿಕ್ಷಣ ಸಚಿವರಿಗೆ ಹೇಳಿದ್ದೇನೆ.

ಈ ತರಹದ ಯಾವುದೇ ಆದೇಶ ಮಾಡುವಾಗಿ ಇದು ಅನುದಾನಿತ ಶಾಲೆಗಳಿಗೂ ಅನ್ವಯಿಸುತ್ತದೆ ಎಂದು ಸೇರಿಸಬೇಕಾಗುತ್ತದೆ. ಇಲ್ಲದಿದ್ದರೆ ಸಮಾಜಕ್ಕೆ ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅಧಿಕಾರಿಗಳು ಇದರ ಕಡೆಗೆ ಗಮನಿಸಬೇಕಾಗುತ್ತದೆ. ಇಲ್ಲದಿದ್ದರೆ ಅಧಿಕಾರಿಗಳು ತಮಗೆ ಖುಷಿ ಬಂದ ಹಾಗೆ ಮಾಡುತ್ತಾರೆ. ಈ ತರಹದ ಉತ್ತರಗಳನ್ನು ಅಧಿಕಾರಿಗಳು ತಯಾರು ಮಾಡಿ ಕೊಟ್ಟಾಗ ಸಚಿವರಿಗೂ ಉತ್ತರ ಕೊಡುವುದು ಬಹಳ ಕಷ್ಟ ಆಗುತ್ತದೆ. ಮಾನ್ಯ ಹೊರಟ್ಟಿಯವರು ಹೇಳಿದ್ದು ಸರಿ ಇದೆ, ಇದು ಯಾವ ರೀತಿಯ ನ್ಯಾಯ? ನಾನು ಸದನದಲ್ಲಿ ಇಂತಹ ಪ್ರಶ್ನೆಗಳಿಗೆ ಎಷ್ಟು ಸಮಯ ಕೊಡಬೇಕು? ನಾನು ಬಿಟ್ಟರೆ ಸಾಕು ಎಲ್ಲರೂ ಪ್ರಶ್ನೆಯನ್ನು ಕೇಳುವುದಕ್ಕೆ ತಯಾರಾಗಿದ್ದಾರೆ. ಎಲ್ಲಾ ಕಡೆ ಕೈಗಳನ್ನು ಎತ್ತಿ ಮಾತನಾಡಲು ಅವಕಾಶವನ್ನು ಕೇಳುತ್ತಿದ್ದಾರೆ. ಹೀಗೆ ಬಿಟ್ಟರೆ ನನಗೆ ಸದನ ನಡೆಸುವುದಕ್ಕೆ ಆಗುವುದಿಲ್ಲ. ತಮ್ಮೆಲ್ಲರ ಪರವಾಗಿ ನಾನು ಮಾತನಾಡಿದ್ದೇನೆ. ಆದ್ದರಿಂದ ದಯಮಾಡಿ ಯಾರು ಮಾತನಾಡಬೇಡಿ. ನಾನು ನಿಮಗೆ ಬಿಟ್ಟರೆ ಇದೊಂದೆ ಪ್ರಶ್ನೆಯ ಮೇಲೆ ಸದನ ಇನ್ನು ಒಂದು ಗಂಟೆ ನಡೆಯುತ್ತದೆ. ದಯಮಾಡಿ ಇದರ ಕಡಗೆ ಸಚಿವರು ಗಮನಿಸಬೇಕು. ಅಷ್ಟೇ ಅಲ್ಲ. ತಾವು ಅಧಿಕಾರಿಗಳಿಗೆ ಕರೆಸಿ ಛೀಮಾರಿ ಹಾಕಬೇಕಾಗುತ್ತದೆ. ಅಧಿಕಾರಿಗಳು ಪ್ರತಿ ಬಾರಿ ಈ ತಪ್ಪನ್ನು ಮಾಡಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯವನ್ನು ಕ್ಷಮಿಸುವುದಕ್ಕಾಗುವುದಿಲ್ಲ. ಇಲ್ಲದಿದ್ದರೆ ಸದನದಲ್ಲಿ ಅಧಿಕಾರಿಗಳಿಗೆ ಛೀಮಾರಿ ಹಾಕತಕ್ಕಂಥ ಪ್ರಯತ್ನವನ್ನು ನಾನು ಮಾಡಬೇಕಾಗುತ್ತದೆ. ಇದು ಒಳ್ಳೆಯದಲ್ಲ. ಇದರಿಂದ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಸಮಾಜಕ್ಕೂ ಗೌರವ ತರುವುದಿಲ್ಲ. ದಯವಿಟ್ಟು ಇದರ ಕಡೆಗೆ ಗಮನಿಸಿ, ತಾವು ನೋಡಿ, ನಾನು ಈಗ ಬಿಟ್ಟರೆ ಹೇಗೆ ಎದ್ದು ನಿಲ್ಲುತ್ತಾರೆಂದು ತಾವು ನೋಡಿ. ಎಲ್ಲರೂ ಮಾತನಾಡುವ ತರಾತುರಿಯಲ್ಲಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸಾಕಷ್ಟು ವಿಚಾರಗಳಲ್ಲಿ ಅಧಿಕಾರಿಗಳು ಈ ರೀತಿಯಾಗಿ ಮಾಡುತ್ತಿದ್ದಾರೆ. ಉದಾಹರಣೆಗೆ pension ಕೊಡುವ ಬಗ್ಗೆ. ದಿನಾಂಕ 1-4-2006 ರಂದು ಒಂದು ಆದೇಶವನ್ನು

ಮಾಡಿದ್ದಾರೆ. ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಿಕ್ಷಕರು ನಿವೃತ್ತರಾದರೆ ಸರ್ಕಾರಿ ಶಾಲೆಗಳಲ್ಲಿ ನಿವೃತ್ತರಾದವರಿಗೆ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಇರಬೇಕೆಂದು extension ನೀಡಿದ್ದಾರೆ. ಆದರೆ ಖಾಸಗಿ ಅನುದಾನಿತ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರಿಗೆ extension ಮಾಡಿಲ್ಲ. ಅದು ಅಲ್ಲದೆ Stagnation Increment and RMS ಹೀಗೆ ಎಲ್ಲಾ ವಿಷಯಗಳನ್ನು ತಾರತಮ್ಯ ಮಾಡುತ್ತಾರೆ. ನಾನು ಅಧಿಕಾರದಲ್ಲಿದ್ದಾಗ ಕೆಳಗಡೆ "It is applicable to the Aided Institutions also" ಎಂದು ಹಾಕಿಸಿದ್ದೇವೆ. ಬೇಕಾದರೆ ಅವರು ಕಡತವನ್ನು ತೆಗೆಸಿ ನೋಡಲಿ, ಈ ತರಹ ಹೇಳುವ ಅಧಿಕಾರಿ ಯಾರು? ತಲೆ ಕೆಟ್ಟಿರುವ ಅಧಿಕಾರಿಯೇ ಈ ರೀತಿ ಹೇಳಬಹುದು. ಇದನ್ನು ಮಾಡುವವರಿಗೆ ಉದ್ಯೋಗ ಇಲ್ಲ.

**ಸಭಾಪತಿಯವರು:–** ಇದು ಅಧಿಕಾರಿಯವರದ್ದೇ ತಪ್ಪು. ಇದರಲ್ಲಿ ಬೇರೆ ಯಾರ ತಪ್ಪು ಇಲ್ಲ. ಈ ಆದೇಶವನ್ನು ಪಾಸ್ ಮಾಡಿ ಸಹಿ ಮಾಡಿರುವ ಹಿರಿಯ ಅಧಿಕಾರಿ ಯಾರು ಇದ್ದಾರೆ ಅವರದೇ ತಪ್ಪು. He is responsible for that. Whoever he may be. He should be held up. You have to talk to him. ಇದು ಸಮಾಜಕ್ಕೆ ಗೌರವ ತರುವುದಿಲ್ಲ

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅಧಿಕಾರಿಗಳು ಏನು ಬೇಕಾದರು ಮಾಡುತ್ತಾರೆ, ಅಧಿಕಾರಿಗಳ ತಲೆ ಕೆಟ್ಟಿದೆ. ಅದನ್ನು ಸಚಿವರು ನೋಡಬೇಕು.

**ಶ್ರೀ ಕಿಮ್ಮನೆ ರತ್ನಾಕರ:–** ಮಾನ್ಯ ಸಭಾಪತಿಯವರೆ, ತಾವು ಇದರೊಳಗೆ ನಿರ್ದೇಶನ ಕೊಟ್ಟಿದ್ದೀರಿ. ತಾವು ಏನು ನಿರ್ದೇಶನ ಕೊಟ್ಟಿದ್ದೀರಿ ಅದಕ್ಕೆ ಪೂರಕವಾಗಿ ತಿದ್ದುಪಡಿಯನ್ನು ಮಾಡುತ್ತೇನೆ. ಆದರೆ ಇದು ನನ್ನ ಅವಧಿಯಲ್ಲಿ ಆಗಿರತಕ್ಕಂಥ ತೀರ್ಮಾನ ಅಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮುಂದೆ ಆಗುವಂಥ ಬದಲಾವಣೆಗಳನ್ನು ನಾನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಪ್ರತಿ ಹಂತದಲ್ಲಿ ಹಣಕಾಸು ಇಲಾಖೆಯವರ ಹೆಸರು ಹೇಳುತ್ತಾರೆ.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ, ತಾವು ವಿಷಯ dilute ಮಾಡುತ್ತಿದ್ದೀರಿ. ಅವರು ಮಾತನಾಡುತ್ತಿದ್ದಾರೆ ಮಾತನಾಡಲಿ. ನಿಮ್ಮ ಪರವಾಗಿ ನಾನು ಮಾತನಾಡಿದ ಮೇಲೂ ತಾವುಗಳು ಎದ್ದು ನಿಲ್ಲಬೇಕಾ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಪ್ರತಿ ಹಂತದಲ್ಲಿ ಹಣಕಾಸು ಇಲಾಖೆಯವರ ಹೆಸರು ಹೇಳುತ್ತಾರೆ. ಅದು ಸರಿಯಲ್ಲ. ಶಿಕ್ಷಣ ಇಲಾಖೆಯವರು ಇಷ್ಟು ದುಡ್ಡು ಬೇಕು ಎಂದು ಹೇಳುತ್ತಾರೆ ಅದನ್ನು ಅವರು ಕೊಡಲಿ. ಅದು ಬಿಟ್ಟು ಬೇರೆ ಏನೂ ಅವರು ಮಾಡುವುದು ಬೇಡ. ಇಂತಹವರು ಬಿ.ಎಡ್ ಮಾಡಬೇಕು, ಇಂತಹ qualification ಇರಬೇಕು, ಇಂತಹವರು ಎಂ.ಎ.ಮಾಡಬೇಕೆಂದು ಹೇಳುವುದಕ್ಕೆ ಹಣಕಾಸು ಇಲಾಖೆಯವರ ತಲೆ ಕೆಟ್ಟಿದೆಯೇ? ಇದನ್ನೆಲ್ಲಾ ಹೇಳುವವರು ಹಣಕಾಸು ಇಲಾಖೆಯವರು ಯಾರು? ಇದನ್ನೆಲ್ಲಾ ಈ ಇಲಾಖೆಯವರೆ ಏನು ಮಾಡಬೇಕೆಂದು ಬರೆದು ಕಳುಹಿಸುತ್ತಾರೆ. ಹಾಗೆ ಕಳುಹಿಸುವುದಾದರೆ ನಿಮ್ಮ ಇಲಾಖೆ ಏಕೆ ಬೇಕು? Qualification fix ಮಾಡುವುದು, ಸಂಬಳ fix ಮಾಡುವುದು ಶಿಕ್ಷಣ ಇಲಾಖೆಯ ಕೆಲಸ. ಅದನ್ನು ಬಿಟ್ಟು ಇದು ನಮ್ಮ ಕೆಲಸ ಅಲ್ಲ, ಇದು ಹಣಕಾಸು ಇಲಾಖೆಯ ಕೆಲಸ ಎಂದು ಬರೆದು ಕಳುಹಿಸುವುದು ಎಷ್ಟು ಸರಿ? ಹಣಕಾಸು ಇಲಾಖೆಯವರು ಮೇಲಿಂದ ಬಂದಿದ್ದಾರೆಯೇ? ಅವರು ಇದಕ್ಕೆಲ್ಲಾ ಸಂಬಂಧ ಇಲ್ಲ. ಮಾನ್ಯ ಸಭಾಪತಿಯವರೇ, ತಾವು ಸಹಿತ ಹಣಕಾಸು ಇಲಾಖೆಯವರು ಹಸ್ತಕ್ಷೇಪ ಮಾಡಬಾರದೆಂದು ಹೇಳಿ.

Qualification fix ಮಾಡುವವರು ಅವರು ಯಾರು? ಬಿಎ, ಬಿಎಡ್., ಎಂ.ಎ. ಇರಬೇಕೆಂದು Qualification fix ಮಾಡುವ ಕೆಲಸ ಶಿಕ್ಷಣ ಇಲಾಖೆಯದು. ಎಲ್ಲದಕ್ಕೂ ಹಣಕಾಸು ಇಲಾಖೆ ಎಂದು ಹೇಳುತ್ತಾರೆ. ಹಣಕಾಸು ಇಲಾಖೆಯವರು ತಲೆ ಕೆಟ್ಟ ಹಾಗೆ ಏನು ಬೇಕಾದರು

ಬರೆಯುತ್ತಾರೆ. ಶಿಕ್ಷಣ ಇಲಾಖೆಯವರು ಇದನ್ನು ಒಪ್ಪಿಕೊಳ್ಳುತ್ತಾರೆ. ಹಾಗಾದರೆ ಇದಕ್ಕೆಲ್ಲಾ ಮಂತ್ರಿಗಳು ಏಕೆ ಇರಬೇಕು?

**ಶ್ರೀ ಕಿಮ್ಮನೆ ರತ್ನಾಕರ:–** ಮಾನ್ಯ ಗೌರವಾನ್ವಿತ ಸಭಾಪತಿಯವರೆ, ತಾವು ಈಗಾಗಲೇ ನಿರ್ದೇಶನವನ್ನು ಕೊಟ್ಟಿದ್ದೀರಿ. ಅದಕ್ಕೆ ಸೂಕ್ತ ಬದಲಾವಣೆಗಳನ್ನು ಸರ್ಕಾರ ಮಾಡುತ್ತದೆ.

**ಪರೀಕ್ಷಾ ಪದ್ದತಿ ಸುಧಾರಣೆ ಕುರಿತು**

**1003; ಪ್ರೊ. ಪಿ.ವಿ. ಕೃಷ್ಣಭಟ್ (ನಾಮ ನಿರ್ದೇಶಿತರು)**

**ಅ)** ವಿಶ್ವವಿದ್ಯಾಲಯಗಳ ಪರೀಕ್ಷೆಗಳ ಸುಧಾರಣೆಯ ದೃಷ್ಟಿಯಿಂದ ಈ ಹಿಂದೆ ಡಾ: ಚಿದಾನಂದ ಗೌಡ ಸಮಿತಿ ಸಲ್ಲಿಸಿದ ವರದಿ ಸರ್ಕಾರದ ಪರಿಶೀಲನೆಯಲ್ಲಿದೆಯೇ;

**ಆ)** ಪರೀಕ್ಷಾ ಪದ್ಧತಿಯಲ್ಲಿ ಸಂಭವಿಸುತ್ತಿರುವ ದೊಡ್ಡ ಪ್ರಮಾಣದ ಮೋಸ/ಅಕ್ರಮಗಳನ್ನು ತಡೆಗಟ್ಟುವ ದೃಷ್ಟಿಯಿಂದ ಪರೀಕ್ಷಾ ಪದ್ಧತಿಯಲ್ಲಿ ವ್ಯಾಪಕ ಸುಧಾರಣೆ ತರುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು)**

**ಅ)** ಹೌದು.

**ಆ)** ಹೌದು. ಪರೀಕ್ಷಾ ಪದ್ಧತಿಯಲ್ಲಿ ಸಮಗ್ರ ಸುಧಾರಣೆಗಳನ್ನು ತರುವ ಬಗೆಗಿನ ವಿಷಯವನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಚರ್ಚಿಸಿದ್ದು, ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವ ಪೂರ್ವದಲ್ಲಿ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳ ಅಭಿಪ್ರಾಯ /ಸಲಹೆಗಳನ್ನು ಕೋರಲಾಗಿದೆ. ಪರೀಕ್ಷೆಗಳಲ್ಲಿ ನಕಲು ಮತ್ತು ಇತರೆ ಅಕ್ರಮಗಳು ನಡೆಯದಂತೆ ಎಲ್ಲಾ ಕುಲಪತಿಗಳಿಗೆ ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಸಹಕಾರದೊಂದಿಗೆ

ಸೂಕ್ತ ಎಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆಗಳನ್ನು ನೀಡಲಾಗಿದೆ.

**ಪ್ರೊ.ಪಿ.ವಿ.ಕೃಷ್ಣಭಟ್:–** ಮಾನ್ಯ ಸಭಾಪತಿಯವರೆ, ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ನಡೆಯುತ್ತಿರುವ ಅಕ್ರಮಗಳು ಇಡೀ ಶಿಕ್ಷಣ ವ್ಯವಸ್ಥೆಯ ಮೇಲೆಯೇ ತನ್ನ ಕರಾಳ ಛಾಯೆಯನ್ನು ಹರಡಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಉನ್ನತ ಶಿಕ್ಷಣ ಸಮಿತಿಯ ಒಬ್ಬ ಸದಸ್ಯರು ಒಂದು ಮಾತನ್ನು ಹೇಳಿದ್ದರು. 'Examination is the weakest link in our Education System' ಎಂದು ಹೇಳಿದ್ದರು. ಪ್ರತಿ ಬಾರಿ ಪರೀಕ್ಷೆಗಳು ನಡೆದಾಗಲೂ ಕೂಡ ಪರೀಕ್ಷಾ ನಿರ್ವಹಣೆಯಲ್ಲಿ, ಮೌಲ್ಯಮಾಪನದಲ್ಲಿ, ಫಲಿತಾಂಶ ಪ್ರಕಟಣೆಯಲ್ಲಿ ತರ್ಕವಿಲ್ಲದಷ್ಟು ಲೋಪದೋಷಗಳು ನಡೆಯುತ್ತಿರುವಂಥದ್ದು ಸರ್ವ ಸಾಧಾರಣವಾಗಿದೆ. ಮೊನ್ನೆ ಇತ್ತೀಚೆಗೆ ನಡೆದ ಪ್ರತಿಭಟನೆಯ ವರದಿ ಪತ್ರಿಕೆಗಳಲ್ಲಿ ಬಂದಿದೆ. ಬೆಂಗಳೂರು ವಿಶ್ವವಿದ್ಯಾಲಯದ ಬಿ.ಕಾಂ., ಬಿಎ., ಬಿ.ಬಿ.ಎಂ., ಬಿ.ಎಸ್‌ಸಿಯ ಪರೀಕ್ಷೆಗಳ ಎರಡನೇ ಮತ್ತು ನಾಲ್ಕನೆ ಸೆಮಿಸ್ಟರ್ ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಉಂಟಾಗಿರುವ ದೋಷವನ್ನು ಸರಿಪಡಿಸಲು ಆಗ್ರಹಿಸಿ ABVP (Akhil Bharatiya Vidyarthi Parishad) ಸೋಮವಾರ ಸೆಂಟ್ರಲ್ ಕಾಲೇಜು ಆವರಣದಲ್ಲಿ ಪ್ರತಿಭಟನೆ ನಡೆಸಿತು. ಪದವಿ ಫಲಿತಾಂಶ ಗೊಂದಲದ ಗೂಡಾಗಿದೆ. ಪರೀಕ್ಷೆ ಬರೆಯದವರು ಪ್ರಥಮ ದರ್ಜೆಯಲ್ಲಿ ಪಾಸ್ ಆಗಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ ಸಾವಿರಾರು ವಿದ್ಯಾರ್ಥಿಗಳಿಗೆ ಗೈರುಹಾಜರು ಎಂದು ನಮೂದಿಸಿರುವುದು ಮೌಲ್ಯಮಾಪನ ವ್ಯವಸ್ಥೆಯ ಪಾರದರ್ಶಕತೆ ತೋರಿಸುತ್ತದೆ. ಇದರಲ್ಲಿ ನಾವು ಎರಡು ಸಂಗತಿಗಳನ್ನು ಗಮನಿಸಬೇಕು. ಒಂದು ಸಂಗತಿ ಅಂದರೆ ಹಾಜರಾಗಿರುವವರು absent ಎಂದು ಯಾವುದೋ technical errors ಆಗಿರಬಹುದು. ಇವಾಗೆಲ್ಲ ಗಣಕೀಕೃತ ಆಗಿರುವುದರಿಂದ ಅದರಲ್ಲೇನಾದರು ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸಬಹುದು. ಆದರೆ human errors ಇದೆಯಲ್ಲ, ಇದು ಬಹಳ ಭಯಾನಕವಾಗುತ್ತದೆ. ಅಲ್ಲಿ ಪ್ರತಿ ಹಂತದಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಹಿಂದೆ ಒಂದು ಹಂತದಲ್ಲಿ

ಪರೀಕ್ಷಾ ಅಕ್ರಮ ಅಂದರೆ ವಿದ್ಯಾರ್ಥಿಗಳು ಪರೀಕ್ಷಾ ಹಾಲ್‌ನಲ್ಲಿ ಕಾಪಿ ಮಾಡುತ್ತಾರೆ ಎಂದು ಹೇಳಿ ಇದನ್ನು ತಡೆಗಟ್ಟತಕ್ಕಂಥ ಅನೇಕ ಕ್ರಮಗಳನ್ನು ವಿಶ್ವವಿದ್ಯಾನಿಲಯಗಳು, ಸರ್ಕಾರಗಳು ಕೈಗೊಂಡಿವೆ. ಅನೇಕ ವಿಶ್ವವಿದ್ಯಾಲಯಗಳನ್ನು Malpractice Examination Committee ನೂ ಒಂದು ಇರುತ್ತದೆ.ಆ ಕಮಿಟಿ ಕೂಡ ಪರೀಕ್ಷೆಯಲ್ಲಿ ಯಾರು ನಕಲು ಮಾಡುತ್ತಾರೆ ಅಂತಹ ವಿದ್ಯಾರ್ಥಿಗಳಿಗೆ ಶಿಕ್ಷೆ ವಿಧಿಸತಕ್ಕಂಥದ್ದು ನಡೆಯುತ್ತದೆ. ಆದರೆ ಈಗ ನಡೆಯುತ್ತಿರುವಂಥದ್ದು ವಿದ್ಯಾರ್ಥಿಗಳು ಪರೀಕ್ಷೆ ಹಾಲ್‌ನಲ್ಲಿ ನಕಲು ಮಾಡುವಂಥದ್ದು ಬಹಳ ಲೆಕ್ಕವಿಲ್ಲದಷ್ಟು ಸಾಮಾನ್ಯವಾಗಿರುವಂತಹ ಸಂಗತಿ. ಅಕ್ರಮಗಳು ನೆಡೆಯುತ್ತಿರುವುದು ಮೇಲಿನ ಹಂತದಲ್ಲಿ. ಉತ್ತರ ಪತ್ರಿಕೆಗಳನ್ನೇ ಬದಲಾವಣೆ ಮಾಡಿಬಿಡುತ್ತಾರೆ. ಹೊಸದಾಗಿ ಉತ್ತರಗಳನ್ನು ಬರೆಸಿ ಉತ್ತರ ಪತ್ರಿಕೆಯಲ್ಲಿ ಸೇರಿಸುವಂತಹ ಪ್ರಯತ್ನಗಳು ನಡೆಯುತ್ತದೆ. ಇದನ್ನು ಮಾಡತಕ್ಕಂತಹ ಏಜೆಂಟರ್‌ಗಳಿದ್ದಾರೆ. ಐದಾರು ಸಾವಿರ ರೂಪಾಯಿಗಳನ್ನು ಆ ಏಜೆಂಟರಿಗೆ ಕೊಟ್ಟರೆ ಹೊಸದಾಗಿ ಉತ್ತರ ಪತ್ರಿಕೆಯನ್ನು ಕೊಟ್ಟು ಉತ್ತರಗಳನ್ನು ಬರೆಸಿ ಅಲ್ಲಿ ಜೋಡಿಸತಕ್ಕಂಥದ್ದು ನಡೆಯುತ್ತದೆ. Malpractices Committee ಗಳಿಂದ ಇದನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಮೊನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಉಲ್ಲೇಖ ಮಾಡಿದ್ದಾರೆ. Medical Examination ಗೆ ಸಂಬಂಧಪಟ್ಟಂತೆ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಯಲ್ಲಿ ಬಂದಿರತಕ್ಕಂತಹ ಅಂಕಗಳೇ ಬೇರೆ, ಅವರಿಗೆ ಕೊಟ್ಟಂತಹ ಅಂಕ ಪಟ್ಟಿಯಲ್ಲಿ ಕೊಟ್ಟಿರುವಂತಹ ಅಂಕಗಳೇ ಬೇರೆ. ಈ ರೀತಿಯಾಗಿ ಏನು ಅಕ್ರಮಗಳು ಭಯಾನಕವಾಗಿ ನಡೆಯುತ್ತಿದೆ ಇವುಗಳನ್ನು ತಡೆಗಟ್ಟದೇ ಹೋದರೆ, ನಮ್ಮ ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಏನೂ ಅರ್ಥವಿಲ್ಲದಂತಾಗುತ್ತದೆ. ಇವುಗಳನ್ನು ತಡೆಗಟ್ಟಲು ಬಹಳ ತೀವ್ರವಾದಂತಹ ಕ್ರಮಗಳು ಬೇಕಾಗಿದೆ. ಪರೀಕ್ಷಾ ಕ್ರಮಗಳು ಹಲವು ವಿಧವಾಗಿರುವಂತದ್ದು; Examination conduct ಮಾಡುವುದು, Question Paper set ಮಾಡುವುದು, valuation ಮಾಡುವುದು, result announce ಮಾಡತಕ್ಕಂಥದ್ದೇ ಆಗಿದ್ದರೆ, ಇದರಲ್ಲಿ ಬಹಳ ದೊಡ್ಡ ಹಣದ ವ್ಯವಹಾರವೂ

ಕೂಡ involve ಆಗಿರುವಂಥದ್ದು ಕೂಡ ಗೊತ್ತಾಗುತ್ತದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಇದುವರೆಗೆ ಪರೀಕ್ಷೆಯನ್ನು ಮಾಡಿ, ಅಂಕ ಪಟ್ಟಿಯನ್ನು ಕೊಡುತ್ತಿದ್ದರು. ಹಿಂದೆ Registrar (Evaluation) ಇದ್ದುದರಲ್ಲಿ ಚೆನ್ನಾಗಿ ಕೂಡ ನಡೆಯುತ್ತಿತ್ತು. ಅಲ್ಲಿ ಅಂಕ ಪಟ್ಟಿಯನ್ನು ಕೊಡತಕ್ಕಂಥದ್ದು, ಅಲ್ಲಿ ಒಂದೇ ಅಂಕ ಪಟ್ಟಿಯನ್ನೇ ಕೊಡುತ್ತಿದ್ದರು. ಅದಕ್ಕೆ ಒಂದುವರೆ ರೂಪಾಯಿಗಳ ಖರ್ಚು ಬರುತ್ತಿತ್ತು. ಈಗಿನ Vice-Chancellor ರವರು ಇದನ್ನು ಹೊರಗುತ್ತಿಗೆ ಕೊಟ್ಟಿದ್ದಾರೆ. ಯಾವುದೋ ಒಂದು ಕಂಪನಿಗೆ ಕೊಟ್ಟು ಒಂದು ಅಂಕ ಪಟ್ಟಿಗೆ 25 ರೂಪಾಯಿಗಳ ಚಾರ್ಜ್ ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವುದು ಮಾನ್ಯ ಸಚಿವರ ಗಮನಕ್ಕೂ ಕೂಡ ಬಂದಿದೆ ಎಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:–** ಈಗ ಪ್ರಶ್ನೆ ಏನು ಎಂದು ಕೇಳಿ.

**ಪ್ರೊ:ಪಿ.ವಿ.ಕೃಷ್ಣಭಟ್:–** ಮಾನ್ಯ ಸಭಾಪತಿಯವರೆ, ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಹಂತಗಳಲ್ಲಿಯೂ ಕೂಡ ಅವ್ಯವಹಾರಗಳು ನಡೆಯುತ್ತಿದೆ. ಇದನ್ನು ತಡೆಗಟ್ಟಿ, ಪರೀಕ್ಷೆಗಳು ಪಾರದರ್ಶಕವಾಗಿ ನಡೆಯುವ ಹಾಗೆ, ಅಲ್ಲಿ ನಡೆಯುವಂತಹ ಅಕ್ರಮಗಳನ್ನು ತಡೆಗಟ್ಟುವ ಹಾಗೆ, ವಿದ್ಯಾರ್ಥಿಗಳಿಗೆ ನ್ಯಾಯ ಸಿಗುವ ಹಾಗೆ ಈಗ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ ಮತ್ತು ಮುಂದೆ ಏನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ? ಇದಕ್ಕೆ ಸಂಬಂಧಪಟ್ಟಂತೆ ಈಗಿನ ಸರ್ಕಾರವೇ ಡಾ: ಚಿದಾನಂದಗೌಡರವರ ನೇತೃತ್ವದಲ್ಲಿ ಪರೀಕ್ಷಾ ಸುಧಾರಣಾ ಸಮಿತಿಯನ್ನು ನೇಮಕ ಮಾಡಲಾಗಿತ್ತು. ಅದು ವರದಿಯನ್ನು ಕೊಟ್ಟಿದೆ. ಆ ವರದಿಯನ್ನು ಮಾನ್ಯ ಸಚಿವರು ಪರಿಶೀಲಿಸಿದ್ದಾರೆಯೇ? ಅದನ್ನು ಆಧಾರಿಸಿ ಏನಾದರು ಕ್ರಮಗಳನ್ನು ಕೈಗೊಳ್ಳಲಾಗುವಂತಹ ಉದ್ದೇಶ ಏನಾದರು ಸರ್ಕಾರಕ್ಕೆ ಇದೆಯೇ ಎನ್ನುವುದರ ಬಗ್ಗೆ ದಯವಿಟ್ಟು ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಗೌರವಾನ್ವಿತ ಸದಸ್ಯರು ಪರೀಕ್ಷೆಯಲ್ಲಿ ನಡೆಯುವಂತಹ malpractices ಬಗ್ಗೆ ಪಾರದರ್ಶಕತೆ ಇರಬೇಕೆಂದು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ overall ಎಲ್ಲಾ ಕಡೆ ಇದೇ ರೀತಿಯಾಗಿ ನಡೆದರೆ ನಮ್ಮ ಶಿಕ್ಷಣ ಪದ್ಧತಿಯಲ್ಲಿಯೇ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುತ್ತದೆ. ಆದರೆ ಕೆಲವು ಕಡೆ ಈ ರೀತಿಯಾಗಿದೆ. ನಾನು ಹೇಳುವುದಾದರೆ computer error ಕೂಡ ಆಗಬಾರದು. Human error is impossible. ಈಗ ಒಬ್ಬ ವಿದ್ಯಾರ್ಥಿ ಪರೀಕ್ಷೆಗೆ ಹಾಜರಾಗಿರುವುದಿಲ್ಲ. ಅವನು ಪಾಸ್ ಆದರೆ ಹೇಗೆ? ಅದು computer error ಅಲ್ಲ. ಅದು ಏನೇ ಇರಲಿ, ಮಾನ್ಯ ಸದಸ್ಯರು ಹೇಳಿದ ಹಾಗೆ, ಈಗಾಗಲೇ ಇದರ ಬಗ್ಗೆ 2005ನೇ ಇಸವಿಯಲ್ಲಿ ಡಾ: ಚಿದಾನಂದಗೌಡ, former Vice-Chancellor ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಿ 2009ನೇ ಇಸವಿಯಲ್ಲಿ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ವರದಿಯ ಬಗ್ಗೆ Higher Education Council ನಲ್ಲಿ ಸಾಕಷ್ಟು ಚರ್ಚೆಗಳಾಗಿದೆ. ನಿಜವಾಗಿಯೂ ಕೂಡ ಅದನ್ನು ನೋಡಿದರೆ, ಅದು ಒಳ್ಳೆಯ ವರದಿ ಇದೆ. ಆದರೆ ಕೆಲವು ಸಲಹೆಗಳು Academicians ಕಡೆಯಿಂದ ಮತ್ತು ಈ ಮನೆಯ ಸದಸ್ಯರುಗಳು ಕೊಟ್ಟ ಸಲಹೆಗಳನ್ನು ಗಮನಕ್ಕೆ ತೆಗೆದುಕೊಂಡು ಅದನ್ನು implement ಮಾಡಬೇಕಾಗುತ್ತದೆ. For example, ಅವರು ಒಂದು Karnataka State Universities Examination Authorityಯನ್ನು create ಮಾಡಿ ಎಂದು ಹೇಳುತ್ತಾರೆ. ಈಗ ಕೆಲವು ಪರೀಕ್ಷೆಗಳನ್ನು ಯಾವಾಗ ಮಾಡಬೇಕೆಂದು ನಾವು ತೀರ್ಮಾನವನ್ನು ಮಾಡುತ್ತೇವೆ. ಕೆಲವು ಸಾರಿ ನಮ್ಮ ವಿಶ್ವದ ಬೇರೆ ಬೇರೆ ಭಾಗದಲ್ಲಿ ಆನ್‌ಲೈನ್ ಮೇಲೆ ಯಾವಾಗ ವಿದ್ಯಾರ್ಥಿಗಳು ರೆಡಿ ಇರುತ್ತಾರೆ ಆಗ ಪರೀಕ್ಷೆಗಳನ್ನು ಮಾಡುತ್ತಾರೆ. ಅವರು ಕೆಲವು reforms ಸೂಚನೆ ಮಾಡಿದ್ದಾರೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಅದರಲ್ಲಿ ನಮ್ಮ ಎಲ್ಲಾ Vice-Chancellors ಗೆ ಒಂದಷ್ಟು ಸೂಚನೆಗಳನ್ನು ಕೊಟ್ಟಿದ್ದೇವೆ. ಆದಷ್ಟು ಬೇಗನೇ ಇದರ ಬಗ್ಗೆ ಅವರು ಸಹಾ ಬೆಳಕು ಚೆಲ್ಲಬೇಕು,

ಸಲಹೆಗಳನ್ನು ಕೊಡಬೇಕೆಂದು ಹೇಳಿದ್ದೇವೆ. ಆದಷ್ಟು ಬೇಗನೇ ಈ ವರದಿಯ ಜೊತೆ ಇನ್ನಷ್ಟು ಸಲಹೆಗಳು ಬಂದಿದ್ದನ್ನು ತೆಗೆದುಕೊಂಡು ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ. ಮತ್ತೆ ಈ ರೀತಿ malpractices ಆಗಬಾರದು. ಮತ್ತು ಪರೀಕ್ಷೆಗಳು ಪಾರದರ್ಶಕವಾಗಿ ನಡೆಯಬೇಕು. ಇದರಲ್ಲಿ ಯಾವುದೇ ವಾದ ಇಲ್ಲವೆಂದು ನಾನು ಭಾವಿಸುತ್ತೇನೆ. ಅಷ್ಟೇ ಅಲ್ಲ ನಮ್ಮ Higher Education Department ಅಧೀನದಲ್ಲಿ 17 Universities ಇದೆ. ಈ 17 Affiliated Universities ನಲ್ಲಿಯೂ ಕೂಡ ಪ್ರವೇಶದ ದಿನಾಂಕಗಳು ಕೂಡ ಒಂದೊಂದು ದಿನಾಂಕ ಇದೆ. ಪರೀಕ್ಷೆಗೆ ಒಂದು ದಿನಾಂಕ ಇದೆ. ಫಲಿತಾಂಶಕ್ಕೆ ಒಂದು ದಿನಾಂಕ ಇದೆ. ಎಲ್ಲಾ ವ್ಯತ್ಯಾಸಗಳಿದೆ. Bangalore University ವಿದ್ಯಾರ್ಥಿ ಯಾವುದೋ ಕೋರ್ಸ್‌ಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಥವಾ Dharwar University ಗೆ ಹೋಗಲು ಸಾಧ್ಯವಿಲ್ಲ. ಹಾಗಾಗಿ ಅದರ ಬಗ್ಗೆ ಒಂದು ಸಮಿತಿಯನ್ನು ಯಾವ ರೀತಿಯಾಗಿ uniformity ತರುವುದಕ್ಕೆ ಸಾಧ್ಯ, admission should conclude by a particular date, examination should conclude by a particular date and result should conclude by a particular date ಎಂದು ಮಾಡಬೇಕು. ಆಗ ಏನಾಗುತ್ತದೆಂದರೆ, ಎಲ್ಲಾ ವಿದ್ಯಾರ್ಥಿಗಳಿಗೆ ಯಾವ ಕೋರ್ಸ್‌ಗೆ ಹೋಗಬೇಕೆಂದು ಎಲ್ಲಾ ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತದೆ. ಅದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಿದೆ. ಇದರ ಬಗ್ಗೆ ಸರ್ಕಾರ ಆದಷ್ಟು ಬೇಗನೇ ಆ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆ. ಆದರೆ ಅದು ಪ್ರಾಥಮಿಕ ಶಿಕ್ಷಣವಿರಲಿ, ಉನ್ನತ ಶಿಕ್ಷಣವಿರಲಿ, ಸಾಕಷ್ಟು ವಿಚಾರದಲ್ಲಿ reforms ಬರಬೇಕಾಗುತ್ತದೆ. ಅದನ್ನು ನಾನು ಒಪ್ಪಿಕೊಳುತ್ತೇನೆ ಮತ್ತು ಗೌರವಾನ್ವಿತ ಸದಸ್ಯರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಬೇಗ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

## ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಕುರಿತು

## 1131; ಶ್ರೀ ದೊಡ್ಡರಂಗೇಗೌಡ (ನಾಮನಿರ್ದೇಶನ ಹೊಂದಿರುವವರು)

ಅ) ಕನ್ನಡ ಭಾಷೆಗೆ ಕೇಂದ್ರದಿಂದ ಶಾಸ್ತ್ರೀಯ ಭಾಷೆ ಸ್ಥಾನಮಾನ ದೊರಕಿದ ಮೇಲೆ ಕನ್ನಡ ಭಾಷೆಯ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳು ಯಾವುವು? ಈ ಬಗ್ಗೆ ಮೈಸೂರಿನಲ್ಲಿ ಸ್ಥಾಪಿಸಿರುವ ಶಾಸ್ತ್ರೀಯ ಭಾಷಾ ಸಂಸ್ಥೆಗೆ ಕೇಂದ್ರದಿಂದ ಬಿಡುಗಡೆ ಆಗಿರುವ ಹಣ ಎಷ್ಟು? ಇದನ್ನು ಯಾವ ಯಾವ ಯೋಜನೆಗೆ ಬಳಸಿಕೊಳ್ಳಲಾಗಿದೆ? ಕನ್ನಡವನ್ನು ಶಾಸ್ತ್ರೀಯ ಭಾಷೆಯಾಗಿ ಘೋಷಣೆ ಮಾಡಿರುವ ಬಗ್ಗೆ ಕೇಂದ್ರದಿಂದ ಅಧಿಕೃತ ಗೆಜೆಟ್ ಪ್ರಕಟಣೆ ಹೊರಟಿದೆಯೇ? (ಅದರ ಪ್ರತಿ ಒದಗಿಸುವುದು)

ಆ) ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ವಿರೋಧಿಸಿ ತಮಿಳುನಾಡು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ತೆರವುಗೊಳಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮ ಏನು?

ಇ) ಶಾಸ್ತ್ರೀಯ ಭಾಷಾ ಯೋಜನೆಯಲ್ಲಿ ಹಳಗನ್ನಡ ಗ್ರಂಥಗಳ ಪುನರ್ ಮುದ್ರಣ, ಶಾಸನ ಸಂಪುಟಗಳು, ಗೆಜೆಟಿಯರ್‌ಗಳ ಪುನರ್ ಮುದ್ರಣ, ತಾಳೆಗರಿಗಳನ್ನು ಮೈಕ್ರೋಫಿಲ್ಮ್‌ಗೆ ಅಳವಡಿಸುವುದು, ತಾಳೆಗರಿಗಳಲ್ಲಿ ಉಳಿದಿರುವ ಅನೇಕ ಅಮೂಲ್ಯ ಗ್ರಂಥಗಳನ್ನು ಮುದ್ರಿಸುವ ಕೆಲಸ ಇವುಗಳನ್ನು ಕೈಗೊಂಡು ಕೇಂದ್ರದ ನೆರವನ್ನು ಬಳಸಿಕೊಳ್ಳುವ ಕ್ರಮ ತೆಗೆದುಕೊಳ್ಳುವುದೇ?

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

ಅ) ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಕನ್ನಡ ಭಾಷಾಭಿವೃದ್ದಿಗಾಗಿ ಉನ್ನತ ಶಿಕ್ಷಣ ಇಲಾಖೆಯ

ಮೂಲಕ ರಾಜ್ಯದ 10 ವಿಶ್ವವಿದ್ಯಾಲಯಗಳಿಗೆ ತಲಾ ರೂ. ಒಂದು ಕೋಟಿಯಂತೆ ಅನುದಾನ ಬಿಡುಗಡೆ ಮಾಡಿ ಭಾಷಾಭಿವೃದ್ಧಿ ಯೋಜನೆಯಡಿ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ತಿಳಿಸಲಾಗಿದೆ. ಈ ಯೋಜನೆಗಳ ಮೇಲ್ವಿಚಾರಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಮಾಡಲಾಗುತ್ತಿದೆ. ವಿವರಗಳನ್ನು ಅನುಬಂದ 1 ಮತ್ತು 2 ರಲ್ಲಿ ನೀಡಿದೆ.

ಇದಲ್ಲದೆ ಕನ್ನಡ ಶಾಸ್ತ್ರೀಯ ಭಾಷಾ ಅಭಿವೃದ್ಧಿ ಯೋಜನೆಯಡಿ ರಾಜ್ಯ ಅನುದಾನದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 1 ವಿಶ್ವವಿದ್ಯಾಲಯ ಮತ್ತು 6 ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.

**ಆ)** ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ನೀಡಿದ ನಂತರ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಯ ಅಧೀನದಲ್ಲಿ 2011 ರಲ್ಲಿ ರಚಿಸಲಾದ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರಕ್ಕೆ ಕಳೆದ 3 ವರ್ಷಗಳಲ್ಲಿ ನೀಡಲಾಗಿರುವ ಅನುದಾನ ಹಾಗೂ ಖರ್ಚಾದ ಅನುದಾನ ಮತ್ತು ಅದರಿಂದ ಕನ್ನಡ ಭಾಷೆಯ ಬೆಳವಣಿಗೆಗೆ ಆದ ಉಪಯುಕ್ತತೆಯ ವಿವರಗಳು ಈ ಕೆಳಕಂಡಂತಿವೆ.

| **ವರ್ಷ** | **ಬಿಡುಗಡೆಯಾದ ಅನುದಾನ** | **ಖರ್ಚಾದ ಅನುದಾನ** | **ಉಳಿಕೆ ಹಣ** |
|---|---|---|---|
| 2011-12 | 54,54,000 | 45,33,133 | 9,20,867 |
| 2012-12 | 2,18,00,000 | 22,43,208 | 1,95,56,792 |
| 2013-04 | 2,18,00,000 | 4,25,000 | 2,13,75,000 |
| **ಒಟ್ಟು** | **4,90,54,000** | **72,01,341** | **4,18,52,659** |

ಅಧ್ಯಯನ ಕೇಂದ್ರಕ್ಕೆ ಮಂಜೂರಾಗಿರುವ ಅನುದಾನವನ್ನು ಕನ್ನಡದ ಸಾಹಿತ್ಯಿಕ ಸಂಸ್ಥೆಗಳ ಹಾಗೂ ಶೈಕ್ಷಣಿಕ ಸಂಸ್ಥೆಗಳ ನೆರವಿನೊಂದಿಗೆ ಕನ್ನಡದಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಬಳಕೆ ಮಾಡಿಕೊಳ್ಳಲಾಗಿದೆ.

ಇ) ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ಕುರಿತು ದಿನಾಂಕ:31.10.2008ರಂದು ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟವಾಗಿರುವ ಅಧಿಸೂಚನೆಯ ಪ್ರತಿಯನ್ನು ಅನುಬಂಧ-4 ರಲ್ಲಿ ನೀಡಿದೆ.

ಆ) ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ನೀಡಿರುವದನ್ನು ಪ್ರಶ್ನಿಸಿ ಶ್ರೀ ಆರ್.ಗಾಂಧಿ ಇವರು ಚೆನ್ನೈ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಅರ್ಜಿ ಸಂಖ್ಯೆ 18810/2008 ಮತ್ತು 28334/2008 ಗಳನ್ನು ದಾಖಲಿಸಿದ್ದು, ಸದರಿ ಉಚ್ಚ ನ್ಯಾಯಾಲಯವು ಯಾವುದೇ ತಡೆಯಾಜ್ಞೆ ನೀಡಿರುವುದಿಲ್ಲ. ಈ ಕುರಿತು ಕರ್ನಾಟಕದ ಸರ್ಕಾರಿ ವಕೀಲರು ತಮಿಳುನಾಡಿನ ಅಡ್ವೋಕೇಟ್ ಜನರಲ್ ಇವರನ್ನು ಬೇಟಿಮಾಡಿ, ವಿವರಗಳನ್ನು ನೀಡಿ ಸದರಿ ರಿಟ್ ಅರ್ಜಿಯನ್ನು ತ್ವರಿತವಾಗಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬರುವಂತೆ ಕ್ರಮಕೈಗೊಳ್ಳುವಂತೆ ಕೋರಿದ್ದಾರೆ. ಅಲ್ಲದೇ ಈ ವಿಷಯ ಕುರಿತು ರಾಜ್ಯದ ಅಡ್ವೋಕೇಟ್ ಜನರಲ್ ರವರಿಗೂ ಸಹ ಪತ್ರಗಳನ್ನು ಬರೆದು ವಿವರಿಸಲಾಗಿದೆ.

ಇ) ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷಾ ಸ್ಥಾನ ನೀಡಿದ್ದು, ಇದಕ್ಕೆ ಸಂಬಂಧಿಸಿದಂತೆ ಭಾಷಾ ಅಭಿವೃದ್ಧಿ ಮತ್ತು ಅಧ್ಯಯನ ಕೆಲಸಗಳನ್ನು ಭಾರತೀಯ ಭಾಷೆಗಳ ಕೇಂದ್ರೀಯ ಸಂಸ್ಥೆ ಮೈಸೂರು ಇವರಿಗೆ ವಹಿಸಿರುತ್ತದೆ. ಶಾಸನ ಸಂಪುಟಗಳು, ಗೆಜೆಟಿಯರ್‌ಗಳ ಪುನರ್ ಮುದ್ರಣ, ತಾಳೆಗರಿಗಳನ್ನು ಮೈಕ್ರೋಫಿಲ್ಮ್‌ಗೆ ಅಳವಡಿಸುವುದು, ತಾಳೆಗರಿಗಳಲ್ಲಿ ಉಳಿದಿರುವ ಅನೇಕ ಅಮೂಲ್ಯ ಗ್ರಂಥಗಳನ್ನು ಮುದ್ರಿಸುವ ಕೆಲಸಗಳನ್ನು ಸದರಿ ಸಂಸ್ಥೆಯು ಕೈಗೊಂಡಿದೆ.

**ಪ್ರೊ.ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ನೈಜವಾಗಿ ಕೆಲವು ವಿಚಾರಗಳನ್ನು ಹೇಳಿದರೆ, ಮೇಲ್ಮನೆ ಸದಸ್ಯರುಗಳು ಯಾರು ತಪ್ಪು ತಿಳಿದುಕೊಳ್ಳಬಾರದು. ಮೂರು ವರ್ಷಗಳ ಹಿಂದೆ ಕೂಡ ಇಂಥದ್ದೇ ಒಂದು ಪ್ರಸಂಗ ಬಂದಿತ್ತು. ಕೇವಲ ಕೆಲವು ನಿಮಿಷಗಳಲ್ಲಿ ಮೂರು ಬಗೆಯ ಅಂಕಿ ಅಂಶಗಳನ್ನು ಕೊಡಲಾಗಿತ್ತು. ಪೇಚಿಗೆ ಸಿಕ್ಕಿ ಹಾಕಿಕೊಂಡೆವು ಎಂದು ಬಹಳ ಬೇಜಾರು ಆಯಿತು. ಇವತ್ತು ಕೇವಲ 40 ನಿಮಿಷಗಳ ಅಂತರದಲ್ಲಿ ಎರಡು ರೀತಿಯ ಉತ್ತರಗಳು ಬಂದಿದೆ.

**ಸಭಾಪತಿಯವರು:–** ಎರಡನೆಯದಾಗಿ ಉತ್ತರವನ್ನು ಕೊಟ್ಟಿರುವುದರಿಂದ ಮೊದಲನೆಯದ್ದಕ್ಕೆ ಸಂಬಂಧವಿಲ್ಲ. ಏಕೆಂದರೆ ಮೊದಲು ಕೊಟ್ಟಿದ್ದ ಉತ್ತರ ತಪ್ಪು ಎಂದು ಒಪ್ಪಿಕೊಂಡು ಎರಡನೆಯ ಸಾರಿ ಉತ್ತರವನ್ನು ಕೊಟ್ಟಿದ್ದಾರೆ.

**ಪ್ರೊ:ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ, ಒಪ್ಪಿಕೊಳ್ಳುತ್ತೇನೆ.

**ಸಭಾಪತಿಯವರು:–** ಮೊದಲನೆಯ ಸಾರಿ ಕೊಟ್ಟ ಉತ್ತರ ಬಗ್ಗೆ ಪ್ರಸ್ತಾಪ ಬೇಡ.

**ಪ್ರೊ:ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ, ಆ ಔದಾರ್ಯಕ್ಕೆ ಒಪ್ಪಿಕೊಳ್ಳುತ್ತೇನೆ. ಆದರೆ ಅಧಿಕಾರಿಗಳ ನಿಶ್ಕಾಳಜಿ ಇದೆಯಲ್ಲಾ ಅದರ ಬಗ್ಗೆ ನನಗೆ ಬೇಸರ ಇರತಕ್ಕಂಥದ್ದು.

**ಸಭಾಪತಿಯವರು:–** ಅದು ಬೇಡ. ಎರಡನೆಯ ಸಾರಿ ಕೊಟ್ಟಿರುವಂತಹ ಉತ್ತರದ ಬಗ್ಗೆ ಮಾತನಾಡಿ.

**ಪ್ರೊ:ದೊಡ್ಡರಂಗೇಗೌಡ:–** ಮಾನ್ಯ ಸಭಾಪತಿಯವರೆ, ಕನ್ನಡ ವಿಷಯ, ಕನ್ನಡ ಕೈಂಕರ್ಯ ಯಾವತ್ತೂ ಮುನ್ನಡೆಯಾಗಬೇಕು. ನಾನು ಹಿಂದೆ ಕೂಡ ಮೇಲ್ಮನೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಕ್ರಿಸ್ತಪೂರ್ವ ಎರಡನೆಯ ಶತಮಾನದಲ್ಲಿಯೇ Alexandria ದಲ್ಲಿ ಊರಿನಲ್ಲಿ ಎನ್ನುವ ಪ್ರಾಚೀನ ಪದ ಇದೆ. ಆ ಪ್ರಾಚೀನ ಕನ್ನಡ ಪದ ಇದ್ದುದರಿಂದಲೇ ಕನ್ನಡದ ಪಾಲನೆಯನ್ನು ನಾವು ಹಲ್ಮಿಡಿ ಶಾಸನಕ್ಕಿಂತಲೂ ಹಿಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ

ಸಾಧ್ಯತೆ ಇದೆ ಎನ್ನುವುದನ್ನು ನನ್ನ ಸಂಶೋಧನೆಯ ಮುಖಾಂತರವಾಗಿ ದೃಢಪಡಿಸಿದ್ದೆ. ಅದನ್ನು ಮತ್ತೆ ಸದನದ ಗಮನಕ್ಕೆ ತರುತ್ತಾ, ಶಾಸ್ತ್ರೀಯ ಭಾಷೆ ಕನ್ನಡ ಎಂದು ಹೇಳಿ ಘೋಷಣೆಯಾದ ಮೇಲೆ ನಿಜವಾಗಿಯೂ ಕೂಡ ಆಗಬೇಕಾದಂತಹ ಕಾರ್ಯಗಳು ಆಗುತ್ತಿಲ್ಲವೆಂದು ವ್ಯಸನ ಇದೆ. ಆದ್ದರಿಂದ ಇದಕ್ಕೆ ಕಾಯಕಲ್ಪವಾಗಬೇಕು. ವಾಸ್ತವವಾಗಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತಿಲ್ಲ. ಇದುವರೆಗೆ ಬಿಡುಗಡೆಯಾಗಿರತಕ್ಕಂತಹ ಎಲ್ಲಾ ಹಣವೂ ಕೂಡ ಕರ್ನಾಟಕ ರಾಜ್ಯ ಸರ್ಕಾರದ ಅಕ್ಕರೆಯಿಂದ, ಕನ್ನಡದ ಮೇಲಿನ ಪ್ರೀತಿಯಿಂದ ಆಗಿದೆ. ಅಷ್ಟಾದರೂ ಕೂಡ ಕನ್ನಡದ ಕೆಲಸ ಕಾರ್ಯಗಳಿಗೆ ತ್ವರಿತವಾಗಿ, ನಿಜವಾಗಿಯೂ ಇನ್ನಷ್ಟು ಮುನ್ನಡೆಯಬೇಕು. ಬಿಡುಗಡೆಯಾಗಿರತಕ್ಕಂತಹ ಅನುದಾನ ಮತ್ತು ಖರ್ಚಾಗಿರತಕ್ಕಂತಹ ಹಣವನ್ನು ನೋಡಿದರೆ ಇನ್ನು ಬೇಕಾದಷ್ಟು ಉಳಿಕೆ ಹಣ ಇರುವುದನ್ನು ಗಮನಿಸಿದಾಗ, ನಾನು ಇನ್ನಷ್ಟು ಕ್ರಿಯಾಶೀಲರಾಗಬೇಕೆಂದು ನಾನು ಹೇಳುತ್ತೇನೆ. ಬಹುಶಃ ಈ ಸಂದರ್ಭದಲ್ಲಿ ಈ ಪ್ರಶ್ನೆಗಳನ್ನು ಕೇಳಿದರೆ ತಪ್ಪಾಗಿ ತಾವುಗಳು ಭಾವಿಸಬಾರದು. ಶ್ರೀ ಗಾಂಧಿ ಎನ್ನುವವರು ಚೆನ್ನೈನ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರತಕ್ಕಂತಹ ರಿಟ್ ಅರ್ಜಿ ಯಾವಾಗ ತೆರವು ಆಗುವುದು? ಅದಕ್ಕೆ ನಮ್ಮ ಅಕ್ಕರೆಯ ರಾಜ್ಯ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ? ಕನ್ನಡ ಶಾಸ್ತ್ರೀಯ ಭಾಷಾ ಅಧ್ಯಯನ ಕೇಂದ್ರವೆಂದು ಹೇಳಿ ಏಕೆ ಅಭಿಜಾತ ಭಾಷೆಗೆ ಸಂಬಂಧಿಸಿದಂತೆ ಅಂದರೆ Classical Language ಗೆ ಸಂಬಂಧಿಸಿದಂತೆ ಏಕೆ ಆ ಸಂಸ್ಥೆಯನ್ನು ತೆರೆಯಬಾರದು? ಕೇಂದ್ರ ಸರ್ಕಾರದಿಂದ ತಮಿಳು ನಾಡಿನವರು ಆ ತಮಿಳು ಶಾಸ್ತ್ರೀಯ ಭಾಷೆಗೆ ಸಾಕಷ್ಟು ಅನುದಾನವನ್ನು ಪಡೆಯುತ್ತಿದ್ದು ನಮ್ಮಲ್ಲಿ ಅಂತಹ ಕೆಲಸವಾಗುತ್ತಿಲ್ಲ. ಕೇಂದ್ರ ಸರ್ಕಾರದ ಒಂದು ನೋಟಿಫಿಕೇಷನ್ ಇದೆ. ಅದನ್ನು ನಾನು ಇಲ್ಲಿ ಓದುತ್ತೇನೆ: **"This Notification is subject to the decision in Writ Petition 18810/2010, Madras High Court"** ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ Writ Petition dispose ಆಗುವುದು ಯಾವತ್ತು? ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಳ್ಳುತ್ತದೆಂದು ನಾನು ತಮ್ಮ ಮುಖಾಂತರ

ಪ್ರಶ್ನೆ ಮಾಡುವುದಕ್ಕೆ ಇಷ್ಟ ಪಡುತ್ತಿದ್ದೇನೆ. ರಾಜ್ಯ ಸರ್ಕಾರ ಇದುವರೆಗೆ ಕನ್ನಡದ ಹೆಸರಿನಲ್ಲಿ ಹಣವನ್ನು ಖರ್ಚು ಮಾಡಿರುವಂಥದ್ದು, ಅದರಲ್ಲಿಯೂ ಶಾಸ್ತ್ರೀಯ ಭಾಷೆಯ ಹೆಸರಿನಲ್ಲಿ ಖರ್ಚು ಮಾಡಿರುವಂಥದ್ದನ್ನು ಕೇಂದ್ರ ಸರ್ಕಾರ ನಿಜವಾಗಿಯೂ reimburse ಮಾಡುತ್ತದೆಯೇ? Reimburse ಮಾಡಿಕೊಳ್ಳಲು ರಾಜ್ಯ ಸರ್ಕಾರ ತೆಗೆದುಕೊಂಡಂತಹ ಕ್ರಮಗಳೇನು? ಶಾಸ್ತ್ರೀಯ ಸ್ಥಾನಮಾನದ ಅಡಿಯಲ್ಲಿ ಕನ್ನಡ–ಕನ್ನಡ ನಿಘಂಟು ಕಛೇರಿಯನ್ನು ಏಕೆ ಪುನರಾರಂಭ ಮಾಡಬಾರದು. ಹಸ್ತ ಪ್ರತಿಗಳು ನೂರಾರು ಇದೆ. ಅದು ರಾಜ್ಯದಲ್ಲಿರುವ ಹತ್ತು ವಿಶ್ವವಿದ್ಯಾನಿಲಯಗಳಲ್ಲಿ ನೋಡಿದರೆ, ಹಸ್ತ ಪ್ರತಿಗಳನ್ನು ಸೇರಿಸಿರುವುದನ್ನು ಕಾಣುತ್ತೇವೆ. ಅವುಗಳನ್ನು ಮುದ್ರಣ ಮಾಡಿಸುವುದಕ್ಕೆ ಈ ಸಂದರ್ಭದಲ್ಲಿ ಭಾಷೆಯ ಶಾಸ್ತ್ರೀಯ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಬರುವಂತಹ ಹಣದಲ್ಲಿ ವಿನಿಯೋಗ ಮಾಡಬಾರದು ಎಂದು ಕೇಳುವುದಕ್ಕೆ ತಮ್ಮ ಮುಖಾಂತರ ಇಷ್ಟ ಪಡುತ್ತಿದ್ದೇನೆ. ಬಹುಶಃ ನನಗನ್ನಿಸುವುದು ನಿಜವಾಗಿರತಕ್ಕಂತಹ ಅಕ್ಕರೆಯನ್ನು, ಕಾಳಜಿಯನ್ನು, ಕ್ರಿಯಾಶೀಲನೆಯನ್ನು ಈ ಸಂದರ್ಭದಲ್ಲಿ ಯಾವಾಗ ಕೊಡುತ್ತೇವೆಯೋ ಗೊತ್ತಿಲ್ಲ. ಕನ್ನಡ ಮತ್ತು ಸಂಸ್ಕೃತಿ ಸಚಿವರ ಬಗ್ಗೆ ಅಪಾರವಾದಂತಹ ಗೌರವ ಇದೆ, ಅಕ್ಕರೆ ಇದೆ, ಎಲ್ಲಾ ಇದೆ ನಿಜ, ನಾವು ಏಕೆ ಹೀಗೆ ಕೋಮಲವಾದಂತಹ ಮನಸ್ಸಿನವರು. ವಜ್ರ ಕಠೋರವಾದಂತಹ ರೀತಿಯಲ್ಲಿ ಉಗ್ರವಾಗಿ ಮಾತನಾಡಬೇಕಾಗುತ್ತದೆಂದರೆ, ಕನ್ನಡದ ಕೆಲಸಗಳು ಕ್ರಿಯಾಶೀಲವಾಗಿ ಆಗದೇ ಅದು ನೆನಗುದಿಗೆ ಬೀಳುತ್ತಿದೆಯಲ್ಲಾ, ಕನ್ನಡ ಎಂದರೆ ಮೂಗು ಮುರಿಯುವಂತಹ ಕೆಲಸ ಏಕೆ ಆಗಬೇಕು? ಕನ್ನಡ ಎಂದರೆ ಕಾಳಜಿ ಇಲ್ಲದೇ ಇರುವಂತಹ ಕೆಲಸ ಏಕೆ ಆಗಬೇಕು? ಆದ್ದರಿಂದ ಸಚಿವರು ಈ ದಿಸೆಯಲ್ಲಿ ಪ್ರಾಮಾಣಿಕವಾದಂತಹ ಉತ್ತರವನ್ನು ಕೊಡುವಂತಹ ಪ್ರಯತ್ನವನ್ನು ಮಾಡಬೇಕು ಮತ್ತು ಈ ದಿಸೆಯಲ್ಲಿ ಕ್ರಿಯಾಶೀಲರಾಗಬೇಕು ಎನ್ನುವುದು ನನ್ನ ನಿಜವಾಗಿರತಕ್ಕಂತಹ ಕಾಳಜಿ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹಿರಿಯ ಸಾಹಿತಿಗಳು ಆದಂತಹ ಶ್ರೀ ದೊಡ್ಡರಂಗೇಗೌಡರು ಈ ಒಂದು

ಶಾಸ್ತ್ರೀಯ ಭಾಷಾ ವಿಷಯದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ದೊರಕಿದ ನಂತರದಲ್ಲಿ ರಾಜ್ಯ ಸರ್ಕಾರದ ಹಣದಿಂದ ಬಹಳ ಸಂತೋಷವಾಗಿ ಈ ಒಂದು ಕನ್ನಡ ಕೆಲಸಗಳಿಗಾಗಿ, ಕೇಂದ್ರ ಸರ್ಕಾರದ ಹಣವಲ್ಲ, ರಾಜ್ಯ ಸರಕಾರದ ಹಣದಲ್ಲಿ 2009-10ನೇ ಸಾಲಿನಲ್ಲಿ ಯೂನಿವರ್ಸಿಟಿಗಳ ಮುಖಾಂತರವಾಗಿ ಒಂದಷ್ಟು ಕೆಲಸಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಪ್ರತಿ ಯೂನಿವರ್ಸಿಟಿಗೆ ಎರಡೆರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದ್ದರಲ್ಲಿ, ಒಂದು ಕೋಟಿ ರೂಪಾಯಿಗಳನ್ನು ಸುಮಾರು ಹತ್ತು ಯೂನಿವರ್ಸಿಟಿಗಳಿಗೆ ಬಿಡುಗಡೆ ಮಾಡಿ ಕೊಡಲಾಗಿತ್ತು. ಅದರಲ್ಲಿ ಏಳು ಯುನಿವರ್ಸಿಟಿಗಳು ಕೆಲಸಗಳನ್ನು ಮಾಡಿದೆ. ಇನ್ನು ಮೂರು ಯೂನಿವರ್ಸಿಟಿಗಳು ಸಾಧಾರಣ ಕೆಲಸ ಮಾಡಿದೆ ಎನ್ನುವುದನ್ನು ಒಂದು ರಿಪೋರ್ಟ್ ಮೂಲಕ ಅಂದರೆ ಹಿರಿಯ ಪ್ರೊಫೆಸರ್‌ಗಳ ಒಂದು ಕಮಿಟಿಯನ್ನು ಮಾಡಿ, ಆ ಹಣ ಸದ್ಬಳಕೆಯಾಗಿದೆಯೋ ಇಲ್ಲವೋ ಎನ್ನುವುದನ್ನು ಸಮೀಕ್ಷೆ ಮಾಡಿಸಿ ರಿಪೋರ್ಟ್ ತೆಗೆದುಕೊಂಡಿರುವ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಅದರಲ್ಲಿ ಸದ್ಬಳಕೆ ಮಾಡಿಕೊಂಡಿರುವಂಥವರೂ ಸಹಾ Utilization Certificate ಅನ್ನು ನಾಲ್ಕು ಯೂನಿವರ್ಸಿಟಿಯವರು ಕೊಟ್ಟಿದ್ದಾರೆ. ಇನ್ನು ಮೂರು ಯೂನಿವರ್ಸಿಟಿಯವರು ಕೊಡಬೇಕಾಗಿದೆ. ಇನ್ನು ನಮ್ಮ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನವನ್ನು ನೀಡಿದ್ದನ್ನು ಪ್ರಶ್ನಿಸಿ ಚೆನ್ನೈ ಹೈಕೋರ್ಟ್‌ನಲ್ಲಿ ಶ್ರೀ ಆರ್. ಗಾಂಧಿ ಎನ್ನುವವರು ಕೇಸ್ ಹಾಕಿ ಪ್ರಶ್ನೆ ಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸರ್ಕಾರವೂ ಕೂಡ ನಮ್ಮ ಪರವಾಗಿ ವಕೀಲರನ್ನು ಇಟ್ಟು, ತಮಿಳುನಾಡಿನ Advocate General ರವರನ್ನು ಸಹಾ ಭೇಟಿ ಮಾಡಿ, ಇಲ್ಲಿಯ ಸಮಸ್ಯೆಗಳನ್ನು ಮತ್ತು ಇಲ್ಲಿ ಆಗಬೇಕಾಗಿರುವಂತಹ ಕೆಲಸಗಳ ಬಗ್ಗೆ ವಿವರಗಳನ್ನು ಕೊಟ್ಟು ಬಂದಿದ್ದಾರೆ. ಆನಂತರ ನಮ್ಮ ರಾಜ್ಯದ Advocate General ರವರನ್ನೂ ಕೂಡ ಭೇಟಿ ಮಾಡಿ, ವೈಯಕ್ತಿಕವಾಗಿ ಎಲ್ಲಾ ವಿವರಣೆಗಳನ್ನು ಕೊಟ್ಟಿದ್ದಾರೆ. ನಾವು ಸಹಾ ಪತ್ರ ಮುಖೇನ ಸಂಪರ್ಕದಲ್ಲಿದ್ದೇವೆ. ಆದಷ್ಟು ಶೀಘ್ರದಲ್ಲಿ ನಮಗೆ ಇದನ್ನು

ಬಗೆಹರಿಸಿಕೊಡಬೇಕೆಂದು ಕೂಡ ಹೇಳಿದ್ದೇವೆ. ಮಾನ್ಯ ಸದಸ್ಯರು ತಡೆಯಾಜ್ಞೆ ಸಿಕ್ಕಿದೆ ಎಂದು ಭಾವಿಸಿದ್ದಾರೆ. ಆದರೆ ಇದುವರೆಗೂ ನಮಗೆ ತಡೆಯಾಜ್ಞೆ ಸಿಕ್ಕಿಲ್ಲ. ಇನ್ನು ಕೇಸ್ ವಿಚಾರಣೆಗೆ ಬಂದಿಲ್ಲಾ. ನಾವು ಒತ್ತಾಯವನ್ನು ಮಾಡುತ್ತಿದ್ದೇವೆ. ಇನ್ನು ಬಂದಿರತಕ್ಕಂತಹ ಹಣದ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ನಾವು ಅಲ್ಲಿಂದ ತರಿಸಿಕೊಂಡು ಕೊಟ್ಟಿರತಕ್ಕಂಥದ್ದು, ಕೇಂದ್ರ ಸರ್ಕಾರ CIIL ಗೆ ಭಾರತೀಯ ಶಾಸ್ತ್ರೀಯ ಅಧ್ಯಯನ ಕೇಂದ್ರ ಮೈಸೂರಿನಲ್ಲಿ ಏನಿದೆ ಅಲ್ಲಿಗೆ ಎಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಟ್ಟಿದೆ ಎನ್ನುವಂತಹ ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರಿಗೆ ಕೊಡಲಾಗಿದೆ. ಆ ಒಂದು CIIL ಗೆ ಹಣವನ್ನು ಕೊಟ್ಟಿರತಕ್ಕಂಥದ್ದರಲ್ಲಿ ಸಾಕಷ್ಟು ಸಾಹಿತಿಕ ಲೋಕದಲ್ಲಿ ಆ ಕೆಲಸವನ್ನು ಸರಿಯಾಗಿ ಅವರು ಕೆಲಸವನ್ನು ಮಾಡುತ್ತಿಲ್ಲ ಎನ್ನುವುದರ ಬಗ್ಗೆ ಸಾಕಷ್ಟು ಚರ್ಚೆಗಳಾಗಿ ಅಸಮಾಧಾನಗಳು ಕೂಡ ಇದೆ. ಈ ಕಾರಣದಿಂದ ಈ ಸಾರಿ ನಮ್ಮ ರಾಜ್ಯ ಸರ್ಕಾರ ತಮಿಳುನಾಡಿನ ಮಾದರಿಯಲ್ಲಿ, ತಮಿಳುನಾಡಿನವರು ಏನು ಮಾಡಿದರು ಎಂದರೆ ನೇರವಾಗಿ ತಮ್ಮ ಸರ್ಕಾರದ ವತಿಗೆ CIIL ಗೆ ವಹಿಸಿದಂತಹ ಕೆಲಸವನ್ನು ನೇರವಾಗಿ ತಮ್ಮ ಸರ್ಕಾರವೇ ಮಾಡುವುದಕ್ಕೆ ಅಂದಿನ ಮುಖ್ಯಮಂತ್ರಿಗಳು ನೇರವಾಗಿ ಕೇಂದ್ರ ಸರ್ಕಾರಕ್ಕೆ ಹೋಗಿ ಪಡೆದುಕೊಂಡು ಬಂದರು. ಆದುದರಿಂದ ಕೇಂದ್ರ ಸರ್ಕಾರ ನೇರವಾಗಿ ತಮಿಳುನಾಡಿಗೆ ಹಣವನ್ನು ಕೊಡುತ್ತಾ ಬಂದಿದೆ. ಆ ಮಾದರಿಯಲ್ಲಿಯೇ ನಮಗೂ ಸಹಾ ವಹಿಸಿಕೊಡಿ. ನಾವು ಅದನ್ನು ಮಾಡುತ್ತೇವೆ. ಈ ಒಂದು ದಿಸೆಯಲ್ಲಿ ಸರಿಯಾಗಿ ಕೆಲಸವಾಗುತ್ತಿಲ್ಲವೆಂದು ನಾವು ಕೇಂದ್ರ ಸರ್ಕಾರದಲ್ಲಿ ಒತ್ತಾಯವನ್ನು ಮಾಡಿದ್ದೇವೆ. ಆ ರೀತಿಯಾಗಿ ಒತ್ತಾಯ ಮಾಡಿದ ಫಲವಾಗಿ ಈಗ ನಮಗೆ ಪತ್ರ ಬಂದಿದೆ. ನೀವು ಯಾವ ರೀತಿಯಾಗಿ ಯೋಜನೆಗಳನ್ನು ಕೈಗೆ ತೆಗೆದುಕೊಳ್ಳುತ್ತೀರಿ? ಆ ಎಲ್ಲಾ ರೂಪುರೇಷೆಗಳನ್ನು ಮಾಡಿ ನಮಗೆ ಸಲ್ಲಿಸಿ ಎಂದು ಪತ್ರ ಬಂದಿದೆ. ನಾವು ಈಗ ಬಹಳ ತ್ವರಿತವಾಗಿ ಕೆಲಸವನ್ನು ಕೈಗೆ ತೆಗೆದುಕೊಂಡು ತಮ್ಮೆಲ್ಲರನ್ನೂ ಕೂಡ ಕರೆದು ಚರ್ಚೆ ಮಾಡಿ, ಇದನ್ನು ಸರಿಪಡಿಸಿ ಯೋಜನೆಯನ್ನು ಸಿದ್ದಪಡಿಸಿ ಕಳುಹಿಸುತ್ತೇವೆ ಎನ್ನುವಂತಹ

ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಬಯಸುತ್ತೇನೆ.

**ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಕುರಿತು**

**1025; ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ಇದುವರೆಗೂ ಹಂಚಿಕೆ ಮಾಡಲಾದ ಅನುದಾನ ಎಷ್ಟು;

**ಆ)** ಜಾಬ್ ಕಾರ್ಡ್ ಹೊಂದಿದ ಎಲ್ಲಾ ಕುಟುಂಬಗಳಿಗೆ ನಿಯಮಾನುಸಾರ ಎಷ್ಟು ದಿನಗಳನ್ನು ಯಾವ ಯಾವ ಕೆಲಸಗಳಿಗೆ ನೀಡಲಾಗಿದೆ;

**ಇ)** ಮಾನವ ದಿನಗಳನ್ನು ನಿರ್ವಹಿಸಿದ ಎಲ್ಲಾ ಕುಟುಂಬಗಳಿಗೆ ನಿಯಮಾನುಸಾರ ವೇತನ ಪಾವತಿ ಮಾಡಲಾಗಿದೆಯೇ;

**ಈ)** ಇಲ್ಲಿಯವರೆಗೂ ಕಳೆದ ಯಾವುದೇ ಸಾಲಿನ ವೇತನ ಪಾವತಿ ಬಾಕಿ ಇದೆಯೇ; ಇದ್ದಲ್ಲಿ, ಇದಕ್ಕೆ ಕಾರಣಗಳೇನು;

**ಉ)** ಈ ಯೋಜನೆಯಡಿ ಯಂತ್ರೋಪಕರಣಗಳನ್ನು ಬಳಸಿ ಕೆಲಸ ಮಾಡಲು ಅವಕಾಶವಿದೆಯೇ;

**ಊ)** ಅವಕಾಶವಿಲ್ಲದಿದ್ದಲ್ಲಿ, ಯಂತ್ರೋಪಕರಣಗಳನ್ನು ಬಳಸಿ ಕೆಲಸ ನಿರ್ವಹಿಸಿದ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆಯೇ;

**ಋ)** ಬಂದಿದ್ದಲ್ಲಿ, ಎಷ್ಟು ದೂರುಗಳು ಇದುವರೆಗೂ ಸ್ವೀಕೃತವಾಗಿವೆ; ಮತ್ತು ಸದರಿ ದೂರುಗಳಿಗೆ ಜರುಗಿಸಿದ ಕ್ರಮ ಏನು?

**ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ಇದುವರೆವಿಗೂ ಬಿಡುಗಡೆ ಮಾಡಲಾಗಿರುವ ಅನುದಾನದ ವಿವರಗಳು ಈ ಕೆಳಕಂಡಂತಿವೆ;

| ಕ್ರ. ಸಂ | ವರ್ಷ | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | 2008-09 | 789.84 |
| 2 | 2009-10 | 8947.20 |
| 3 | 2010-11 | 5598.00 |
| 4 | 2011-12 | 6332.00 |
| 5 | 2012-13 | 3023.00 |
| 6 | 2013-14 (26-11-2013 ರವರೆಗೆ) | 2822.80 |
| ಒಟ್ಟು | | **27512.84** |

ಆ) ಕೊಪ್ಪಳ ಜಿಲ್ಲೆಯಲ್ಲಿ ಯೋಜನೆಯ ಪ್ರಾರಂಭದಿಂದ ಇದುವರೆವಿಗೂ ಕೂಲಿ ಉದ್ಯೋಗ ನೀಡಿದ ಕುಟುಂಬಗಳ ಮತ್ತು ಉತ್ಪಾದಿಸಿದ ಮಾನವ ದಿನಗಳ ವಿವರಗಳು ಕೆಳಕಂಡಂತಿದೆ.

| ಕ್ರ. ಸಂ | ವರ್ಷ | ಉದ್ಯೋಗ ಒದಗಿಸಿದ ಕುಟುಂಬಗಳ ಸಂಖ್ಯೆ (ಲಕ್ಷಗಳಲ್ಲಿ) | ಉತ್ಪಾದಿಸಿದ ಮಾನವ ದಿನಗಳು (ರೂ.ಲಕ್ಷಗಳಲ್ಲಿ) |
|---|---|---|---|
| 1 | 2008-09 | 0.29 | 6.10 |
| 2 | 2009-10 | 1.47 | 102.25 |
| 3 | 2010-11 | 0.85 | 47.64 |
| 4 | 2011-12 | 0.46 | 20.55 |
| 5 | 2012-13 | 0.28 | 10.30 |
| 6 | 2013-14 (29-11-2013 ರವರೆಗೆ) | 0.12 | 5.52 |

ಈ ಕುಟುಂಬಗಳಿಗೆ ಯೋಜನೆಯ ಮಾರ್ಗಸೂಚಿಗಳಲ್ಲಿನ ಕೆಳಕಂಡ 16 ಪ್ರವರ್ಗದ ಕಾಮಗಾರಿಗಳಲ್ಲಿ ಕೆಲಸ ಮಾಡಲು ಕೂಲಿ ಉದ್ಯೋಗ ನೀಡಲಾಗಿರುತ್ತದೆ.

- ಜಲ ಸಂರಕ್ಷಣೆ ಹಾಗೂ ನೀರುಕೊಯ್ಲು ಕಾಮಗಾರಿಗಳು
- ಬರ ತಡೆಯುವಿಕೆ ಕಾಮಗಾರಿಗಳು
- ನೀರಾವರಿ ಕಾಮಗಾರಿಗಳು
- ವೈಯಕ್ತಿಕ ಭೂ–ಅಭಿವೃದ್ಧಿ ಕಾಮಗಾರಿಗಳು
- ಜಲಸಂಚಯಗಳ ಪುನಶ್ಚೇತನಗೊಳಿಸುವ ಕಾಮಗಾರಿಗಳು
- ಭೂ–ಅಭಿವೃದ್ಧಿ ಕಾಮಗಾರಿಗಳು
- ಪ್ರವಾಹ ನಿಯಂತ್ರಣ ಮತ್ತು ಸಂರಕ್ಷಣಾ ಕಾಮಗಾರಿಗಳು
- ಸರ್ವಋತು ಗ್ರಾಮೀಣ ಸಂಪರ್ಕ ರಸ್ತೆ ಕಾಮಗಾರಿಗಳು
- ಭಾರತ ನಿರ್ಮಾಣ ರಾಜೀವ್ ಗಾಂಧಿ ಸೇವಾ ಕೇಂದ್ರ
- ಕೃಷಿ ಆಧಾರಿತ ಚಟುವಟಿಕೆ ಕಾಮಗಾರಿಗಳು
- ಜಾನುವಾರುಗಳ ಸಾಕಾಣಿಕಾ ಶೆಡ್ಡು, ಮೇವು ತೊಟ್ಟಿ ನಿರ್ಮಾಣ ಕಾಮಗಾರಿಗಳು
- ಮೀನುಗಾರಿಕೆಗೆ ಜಲಾಗಾರಗಳ ನಿರ್ಮಾಣ ಕಾಮಗಾರಿಗಳು
- ಕರಾವಳಿ ಪ್ರದೇಶದಲ್ಲಿ ಮೀನು ಒಣಗು ಕಟ್ಟೆಗಳು, ಕಡಲ ತೀರ ಸಸ್ಯವಲಯಗಳ ನಿರ್ಮಾಣದಂತಹ ಕಾಮಗಾರಿಗಳು
- ಗ್ರಾಮೀಣ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳು
- ಗ್ರಾಮೀಣ ಸ್ವಚ್ಛತೆಗೆ ಸಂಬಂಧಿಸಿದ ಕಾಮಗಾರಿಗಳು

ಇ) ಕೆಲಸ ನಿರ್ವಹಿಸಿದ ನೈಜ ಕೂಲಿ ಕಾರ್ಮಿಕರಿಗೆ ಕೂಲಿ ವೇತನವನ್ನು ನಿಯಮಾನುಸಾರ ಪಾವತಿ ಮಾಡಲಾಗುತ್ತಿದೆ.

**ಈ)** ಕೊಪ್ಪಳ ಜಿಲ್ಲೆಯಲ್ಲಿ 2010-11 ಮತ್ತು 2011-12ನೇ ಸಾಲುಗಳಲ್ಲಿ ಕ್ರಮವಾಗಿ ರೂ.337.91 ಲಕ್ಷಗಳು ಮತ್ತು 212.84 ಲಕ್ಷಗಳಷ್ಟು ಕೂಲಿ ವೇತನದ ಪಾವತಿಗೆ ಬಾಕಿ ಇರುತ್ತದೆ.

**ಕೂಲಿ ವೇತನ ಪಾವತಿ ಆಗದಿರುವುದಕ್ಕೆ ಕಾರಣಗಳು ಈ ಕೆಳಕಂಡಂತಿವೆ.**

- ಸಾರ್ವಜನಿಕರ ದೂರುಗಳು
- ಅನುದಾನದ ನಿಲುಗಡೆ (Parking of funds)
- ಮೂರನೇ ಪಕ್ಷದವರ ತನಿಖಾ ವರದಿ ನಿರೀಕ್ಷೆಯಲ್ಲಿ ತಡವಾಗಿರುವುದು.
- ಸನ್ನದು ಲೆಕ್ಕಿಗರ ಲೆಕ್ಕ ಪರಿಶೋಧನಾ ವರದಿ ನಿರೀಕ್ಷೆಯಲ್ಲಿ ತಡವಾಗಿರುವುದು.
- ಎಂ.ಐ.ಎಸ್ ಆಗದೇ ಕಾಮಗಾರಿ ಕೆಲಸಗಳನ್ನು ನಿರ್ವಹಿಸಿರುವುದು
- ಕ್ರಿಯಾ ಯೋಜನೆಗಳಲ್ಲಿ ಸೇರ್ಪಡೆಯಾಗದ ಕಾಮಗಾರಿಗಳನ್ನು ನಿರ್ವಹಿಸಿರುವುದು.

**ಉ)** ಅಕುಶಲ ಕಾರ್ಮಿಕರಿಂದ ನಿರ್ವಹಿಸಲಾಗದಂತಹ ಕೆಲಸಗಳನ್ನು ಮಾತ್ರ ಮಾಡಲು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರಿಂದ ನಿಯಮಾನುಸಾರವಾಗಿ ಅನುಮತಿ ಪಡೆದ ನಂತರ ಯಂತ್ರೋಪಕರಣಗಳನ್ನು ಬಳಸುವ ಅವಕಾಶ ಇರುತ್ತದೆ.

**ಊ)** ಕೊಪ್ಪಳ ಜಿಲ್ಲೆಯಲ್ಲಿ ಯಂತ್ರೋಪಕರಣಗಳನ್ನು ಬಳಸಿ ಕೆಲಸ ನಿರ್ವಹಿಸಿದ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿರುವುದಿಲ್ಲ.

**ಋ)** ಅನ್ವಯಿಸುವುದಿಲ್ಲ.

**ಶ್ರೀ ಹಾಲಪ್ಪ ಆಚಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. 2008-09ನೇ ಸಾಲಿನಲ್ಲಿ ಕೊಪ್ಪಳದಲ್ಲಿ ಮೂರನೆ ಹಂತದಲ್ಲಿ ಪ್ರಾರಂಭವಾದಂತಹ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಖಾತರಿ ಯೋಜನೆ ಅಡಿಯಲ್ಲಿ ನಡೆದಂತಹ ಕಾಮಗಾರಿಗಳು ಬಹುಶಃ ಇದರಲ್ಲಿ ವರದಿ ಪ್ರಕಾರ ಪ್ರಾರಂಭವಾದ 2009-10 ನೇ ಸಾಲಿನಲ್ಲಿ 1,47,000 ಕುಟುಂಬಗಳಿಂದ ಪ್ರತಿವರ್ಷವೂ ಇದು ಅನುಕೂಲವಾಗಬೇಕಾಗಿತ್ತು. ಆದರೆ ಇವತ್ತು 2013-14 ನೇ ಸಾಲಿಗೆ ಕೇವಲ ಆರು ತಿಂಗಳ ಒಳಗೆ ಪ್ರತಿವರ್ಷ ಕಡಿಮೆಯಾಗುತ್ತಿದೆ. 1,47,000 ಕುಟುಂಬಗಳಿಗೆ ಸಲ್ಲಬೇಕಾದುದ್ದು, 85,000, 46,000, 28,000 ಇವತ್ತು ಕೇವಲ 12,000, ಈ Academic Year ವರೆಗೆ ಆಗಿರುವುದನ್ನು ನೋಡಿದರೆ ಬಹಳ ಕಡಿಮೆಯೇ ಆಗಿದೆ. ಇದರ ಜೊತೆಗೆ ಏನೆಂದರೆ, ಪ್ರವರ್ಗ 16ರಲ್ಲಿ ಕಾಮಗಾರಿಯನ್ನು ತೆಗೆದುಕೊಂಡು ಬರಲಾಯಿತು. ಈ ವರ್ಷವೂ ಸಹಾ 2013-14ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯನ್ನೂ ಕೂಡ ಮಾಡಲಾಯಿತು. ಮತ್ತೊಂದು ಪ್ರವರ್ಗ 7ನ್ನು ತಯಾರು ಮಾಡಿ ಕೊಟ್ಟಿದ್ದೀರಿ. ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಅದರ ಜೊತೆಗೆ ಈ ಕಾಮಗಾರಿಗಳಾದ ಬಗ್ಗೆ ನಾನು ಒಂದನ್ನು ಹೇಳುವುದೇನೆಂದರೆ, ಈ ಪ್ರಶ್ನೆಯನ್ನು ಹಾಕುವುದಕ್ಕೆ ಕಾರಣ ಏನೆಂದರೆ, ಇವತ್ತು ಇಡೀ ಜಿಲ್ಲೆಯಲ್ಲಿ ಮಾಡಿದಂತಹ ಕಾಮಗಾರಿಗಳಿಗೆ ಹಣ ಪಾವತಿಯಾಗುತ್ತಿಲ್ಲವೆಂದು. ಇದಕ್ಕೆ ಕಾರಣ ಏನೆಂದರೆ, ಇವುಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಲ್ಲಿ, ಅನುದಾನದ ನಿಲುಗಡೆಯಾದಲ್ಲಿ, Third Party Inspectionಆಗದೇ ಇರುವುದರಿಂದ, ಲೆಕ್ಕಪತ್ರ ಆಗದೇ ಇರುವ ಕಾರಣ, MIS ಆಗದೆ ಇರುವುದರಿಂದ, ಕ್ರಿಯಾ ಯೋಜನೆ ಆಗದೇ ಇರುವುದರಲ್ಲಿ. ಆದರೆ ನಾನು ಈಗ ಹೇಳುತ್ತಿರುವುದು ಒಂದು ಉದಾಹರಣೆಯನ್ನು ಕೊಡುವುದಾದರೆ, ಕ್ರಿಯಾ ಯೋಜನೆ ಕೂಡ ಆಗಿದೆ. Third Party Inspectionಕೂಡ ಆಗಿದೆ. ಅಲ್ಲಿಂದ CEO ಗೆ ಬರೆದರೆ, CEO ಅವರು ಇವತ್ತು EO ಮತ್ತು Engineers ಕೂಡಿ inspection ಮಾಡಿ ವರದಿ ಕೊಡಿ ಎಂದರು. ಇದೆಲ್ಲವನ್ನೂ ಕೂಡ ಕೊಟ್ಟರೂ ಕೂಡ

ಇದುವರೆಗೂ 2011–12 ನೇ ಸಾಲಿನಲ್ಲಿ ಕಾಮಗಾರಿಯನ್ನು ಮಾಡಿದ್ದಕ್ಕೆ ಹಣ ಪಾವತಿಯಾಗುತ್ತಿಲ್ಲ. ಇದು ಜಿಲ್ಲೆಯಲ್ಲಿ ಕೇಳಿ ಬರುತ್ತಿರುವುದು. ಆದರೆ ನಿಮ್ಮಲ್ಲಿ ಕೊಟ್ಟಿರತಕ್ಕಂತಹ ವರದಿಯ ಪ್ರಕಾರ, ಇವತ್ತು ಸಾರ್ವಜನಿಕ ವರದಿಯನ್ನು ಕೇಳಿದ್ದಾರೆ. ಅದರಲ್ಲಿಯೂ ಕೂಡ 794 ರಲ್ಲಿ 793 ವಿಲೇವಾರಿ ಮಾಡಿದ್ದಾರೆಂದು ಹೇಳಿದ್ದಾರೆ. ಇದು ಬಹಳ ಸಂತೋಷ. ಆದರೆ ಅಲ್ಲಿ ಹಣ ಪಾವತಿ ಏಕೆ ಆಗುತ್ತಿಲ್ಲ. ಇವತ್ತು ಅಲ್ಲಿ ಆಗತಕ್ಕಂತಹ CEO ಗಳು ಇರಬಹುದು, ಇವರು ಏಕೆ ಈ ರೀತಿಯಾಗಿ ಜನರನ್ನು ಆಟವಾಡಿಸುತ್ತಿದ್ದಾರೆಂದು ನನಗೆ ಗೊತ್ತಾಗುತ್ತಿಲ್ಲ. ಇವತ್ತಿನ ದಿವಸ ಸಹಿತ ಸ್ಪೆಸಿಫಿಕ್ ಉದಾಹರಣೆಯನ್ನು ಕೂಡ ಕೊಡುತ್ತಿದ್ದೇನೆ. ಇವತ್ತು ಒಂದು ಪಂಚಾಯಿತಿಯನ್ನು ಉದಾಹರಣೆ ಕೊಡುತ್ತಿದ್ದೇನೆ. ಇವತ್ತು inspection ಆಗಿದ್ದನ್ನು ಕೊಟ್ಟಿದ್ದೇನೆ. CEO ಬರೆದಿದ್ದನ್ನು ಕೊಟ್ಟಿದ್ದೇನೆ. Third Party Inspection ಆಗಿರುವುದನ್ನು ಕೊಟ್ಟಿದ್ದೇನೆ. ಇಷ್ಟೆಲ್ಲಾ ಇದ್ದರೂ ಕೂಡ ಸುಮಾರು 2008–09ನೇ ಸಾಲಿನಿಂದ ಯೋಜನೆ ಪ್ರಾರಂಭವಾಗಿದ್ದರೂ ಇಲ್ಲಿಯವರೆಗೆ ಕಡಿಮೆಯಾಗಿದ್ದಕ್ಕೆ ಇದೆಲ್ಲಾ ಕಾರಣವಾಗುತ್ತದೆ ಎನ್ನುವುದು ನನ್ನ ಭಾವನೆ. ಅದಕ್ಕೆ ಅಂಕಿ ಸಂಖ್ಯೆಗಳನ್ನು ಕೊಟ್ಟಿರತಕ್ಕಂಥದ್ದು ಕಾರಣ. ಇಷ್ಟೆಲ್ಲಾ ಕಾರಣಗಳಿದ್ದರೂ ಕೂಡ ಎಷ್ಟರ ಮಟ್ಟಿಗೆ ಅಧಿಕಾರಿಗಳು ಈ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾರೆ ಎನ್ನುವುದು ನನ್ನ ಆತಂಕ. ಅದರ ಜೊತೆಗೆ ಒಂದೊಂದು ಕಾಲದಲ್ಲಿ ಇಂತಹ ಸಮಸ್ಯೆಗಳನ್ನು ಬಗೆಹರಿಸದೇ ಹೋದರೆ ಸಹಜವಾಗಿ ಅಲ್ಲಿ ಆಗಿರತಕ್ಕಂತಹ ಕೆಡಿಪಿ ಮೀಟಿಂಗ್‌ಗಳು ಇರಬಹುದು, ಕಾಲ ಕಾಲಕ್ಕೆ ಆಗದೇ ಇರುವಂಥದ್ದೇ ಕಾರಣ. 2011ನೇ ಇಸವಿಯಿಂದ ಇಲ್ಲಿಯವರೆಗೂ ಆಗದೇ ಇರುವಂತಹ ಉದಾಹರಣೆಗಳು ಕೂಡ ಇದೆ. ಅದಕ್ಕೆ CEO ಗಳು ಮತ್ತು EO ಗಳು ಏನು ಮಾಡುತ್ತಾರೆ ಎನ್ನುವುದನ್ನು ಇಲ್ಲಿ ನಾನು ತಮ್ಮ ಮುಖಾಂತರ ಸಚಿವರನ್ನು ಕೇಳುತ್ತಿದ್ದೇನೆ. ದಯವಿಟ್ಟು ಇದನ್ನು ಅಧಿಕಾರಿಗಳಿಂದ ಯಾವ ರೀತಿಯಾಗಿ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ ಎನ್ನುವುದು ಸಚಿವರಿಗೆ ಬಿಟ್ಟಿದ್ದು.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಹಾಲಪ್ಪ ಆಚಾರ್ ಅವರು ಎತ್ತಿದ ಪ್ರಶ್ನೆಗಳು ಮೇಲ್ನೋಟಕ್ಕೆ ಅವರು ಹೇಳಿದ ಹಾಗೆ ಕಾಣುತ್ತವೆ. ಆದರೆ ಇದರಲ್ಲಿ ಮೂರು ಭಾಗ ಇದೆ, ಒಂದು ಈಗ ಏನು 2013-14ರವರೆಗೆ ಬಿಡುಗಡೆಯಾಗಿರತಕ್ಕಂಥ ಅನುದಾನದ ಬಗ್ಗೆ ವಿವರ ಕೊಟ್ಟಿದ್ದೇವೆ. ಅದರೊಳಗೆ ಪ್ರತಿವರ್ಷ ಕಡಿಮೆಯಾಗುತ್ತಾ ಬರುತ್ತಿದೆ ಅದು ಏಕೆ ಎಂದು ಪ್ರಶ್ನೆಯನ್ನು ಕೇಳಿದ್ದೀರಿ, 2009 -10ನೇ ಇಸ್ವಿಯಲ್ಲಿ ನಿಮ್ಮ ಜಿಲ್ಲೆಯೊಳಗೆ ಏನಾಯಿತು ಎಂದು ತಮಗೆ ಗೊತ್ತಿದೆ. ಆಗಿನಿಂದ ಸಹಜವಾಗಿ ಅವ್ಯವಹಾರ ಪದ್ಧತಿಗಳನ್ನು ಸ್ವಲ್ಪ discourage ಮಾಡುವುದಕ್ಕೆ ಪ್ರಾರಂಭ ಮಾಡಿದ್ದು ನಿಜ. ಆದರೆ ಸಂಪೂರ್ಣವಾಗಿ ನಿಲ್ಲಲಿಲ್ಲ. ಆದರೆ ಕಡಿಮೆಯಾಗುತ್ತಾ ಬಂತು. ಅನುದಾನ 2013-14 ರೊಳಗೆ ಇಲ್ಲಿಯವರೆಗೆ ನಾವು 28,22,00,000 ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹೋದ ವರ್ಷ 30,00,00,000 ಆಗಿತ್ತು. ಇದು ಅಕ್ಟೋಬರ್ ಕೊನೆಯವರೆಗೆ ಇರತಕ್ಕಂಥ ಅಂಕಿಸಂಖ್ಯೆ. ತಾವು ದಯಮಾಡಿ ಮಾನವ ದಿನಗಳ ಸೃಜನೆಯನ್ನು ಗಮನಿಸಬೇಕು. ಈ ಬಾರಿ ಸಾಕಷ್ಟು ಹೆಚ್ಚು ಆಗುತ್ತಿದೆ. ತಾವು ಹೇಳಿದ ಹಾಗೆ ಬಹಳಷ್ಟು ದಿವಸದಿಂದ, ವರ್ಷದಿಂದ ಬಿಲ್‌ಗಳು ಬಾಕಿ ಇವೆ. 2010-11ರ ಸಾಲಿನ ಬಿಲ್‌ಗಳು ಸಹ ಬಾಕಿ ಇವೆ. ನಿಮ್ಮ ಜಿಲ್ಲೆಯ ಬಿಲ್‌ಗಳ ಬಗ್ಗೆ ಬಹಳಷ್ಟು ದೂರುಗಳು ಇವೆ. ಸಾರ್ವಜನಿಕರ ದೂರುಗಳು ಇವೆ. ಶಾಸಕರ ದೂರುಗಳು ಇವೆ. ಅಧಿಕಾರಿಗಳ ದೂರುಗಳು ಇವೆ. ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಏನು ಪದ್ಧತಿ ಇದೆ ಅಂದರೆ ಅದು whether it is a genuine bill or ingenuine bill, ಆ ಬಿಲ್ ಅನ್ನು ಪೆಂಡೆನ್ಸಿಯೊಳಗೆ ತೋರಿಸಿಕೊಂಡು ಬಿಡುತ್ತಾರೆ. Bills are not rejected, more particularly in NREG Bills are not rejected. ರಿಜೆಕ್ಟ್ ಆದರೆ ಈ ಕಾರಣಕ್ಕೆ ರಿಜೆಕ್ಟ್ ಆಯಿತು ಎಂದು ಹೇಳಿ ಅದು ಪೆಂಡೆನ್ಸಿಯೊಳಗೆ ಇರುವುದಿಲ್ಲ. ನಿಮ್ಮ ಜಿಲ್ಲೆಯೊಳಗೆ ಸುಮಾರು ಈ ತರಹದ ಬಿಲ್‌ಗಳು ರಿಜೆಕ್ಟ್ ಆಗುವಂಥದ್ದು ಇದೆ ಎನ್ನುವುದು ಈಗಾಗಲೇ ನಮ್ಮ NREG ಆಯುಕ್ತರಾಗಿರುವಂಥ ಶ್ರೀ ಮುದಗಲ್‌ರವರು ವಿಶೇಷ ಅಧ್ಯಯನ ಮಾಡಿ

ನಮ್ಮ ಜೊತೆಗೆ ಚರ್ಚೆಯನ್ನು ಮಾಡಿದ್ದಾರೆ. ಅವರ ವರದಿ ಹಿನ್ನಲೆಯೊಳಗೆ ನಾವು ಬಹಳಷ್ಟು ದೊಡ್ಡ ಪ್ರಮಾಣದ ಬಿಲ್‌ಗಳನ್ನು ನಾವು ರಿಜೆಕ್ಟ್ ಮಾಡಬೇಕಾಗುತ್ತದೆ. ಅವರ ವರದಿ ಅಂತಿಮ ಹಂತದಲ್ಲಿದೆ. ಅದು ಬಂದ ತಕ್ಷಣ ಏನು ingenuine ಬಿಲ್‌ಗಳಿವೆ ಅವುಗಳನ್ನು ರಿಜೆಕ್ಟ್ ಮಾಡಿ genuine ಬಿಲ್‌ಗಳನ್ನು ತಕ್ಷಣ payment ಮಾಡುವುದಕ್ಕೆ ಏನೇನು ಮಾಡಬೇಕು ಆ ಕೆಲಸವನ್ನು ಮಾಡುತ್ತೇವೆ. ಕೆಲವೊಂದಕ್ಕೆ ಕೇಂದ್ರ ಸರ್ಕಾರದವರು ತಮ್ಮ ತಕರಾರುಗಳನ್ನು ಎತ್ತಿದ್ದಾರೆ. ಆ ಕಾರಣ ಕೂಡ ಒಂದು ಇದೆ. ಕೆಲವು ಕಡೆ ಗ್ರಾಮಸಭೆಯ ಅಪ್ರೂವಲ್ ಇಲ್ಲವೆಂದು ಹೇಳಿ ಹಿಡಿದು ನಿಲ್ಲಿಸಿದ್ದಾರೆ. CEOs ಹಾಗೂ EOs 'third party inspection' ಮಾಡುತ್ತಾರೆ ಎಲ್ಲಾ ಕೆಲಸವನ್ನು ಮುಗಿಸುತ್ತಾರೆ ಎಂದು ತಾವು ಹೇಳಿದ್ದೀರಿ. ಆದರೆ CEOs send their report stating that absolutely no work has been done. There it stops. ಇಂತಹದ್ದು ಕೂಡ ಇವೆ. ಆದ್ದರಿಂದ ingenuine ಬಿಲ್‌ಗಳು ಏನು ಇವೆ ಅವುಗಳನ್ನು ರಿಜೆಕ್ಟ್ ಮಾಡಿ genuine ಬಿಲ್‌ಗಳನ್ನು ತಕ್ಷಣ payment ಮಾಡುವುದಕ್ಕೆ ಏನೇನು ಮಾಡಬೇಕು ಆ ಕೆಲಸವನ್ನು ಮಾಡುತ್ತೇವೆ.

**ಸ್ವಚ್ಛ ಕುಡಿಯುವ ನೀರಿನ ಹೊಸ ಯೋಜನೆ ಕುರಿತು**

**1138; ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ಅಣ್ಣಯ್ಯ)(ನಾಮ ನಿರ್ದೇಶನ ಹೊಂದಿದವರು)**

ಅ) ರಾಜ್ಯದಲ್ಲಿ ಇತ್ತೀಚಿಗೆ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಸ್ವಚ್ಛ ನೀರು ಘಟಕಗಳನ್ನು ತೆರೆಯಲು ಸರ್ಕಾರ ತೀರ್ಮಾನ ಮಾಡಲಾಗಿದೆಯೆ:

ಆ) ಹಾಗಿದ್ದಲ್ಲಿ, ಇದರ ಪೂರ್ಣ ಮಾಹಿತಿ ನೀಡುವುದು:

ಇ) ರಾಜ್ಯದ ಯಾವ ಯಾವ ಜಿಲ್ಲೆ, ತಾಲ್ಲೂಕು, ಗ್ರಾಮೀಣ ಪ್ರದೇಶಗಳನ್ನು ಈ ವರ್ಷಕ್ಕೆ ಆಯ್ಕೆ ಮಾಡಲಾಗಿದೆ:

ಈ) ಆಯ್ಕೆ ಮಾಡಿರುವ ಮಾನದಂಡವೇನು:

**ಉ)** ಇದು ಎಷ್ಟು ವರ್ಷದ ಯೋಜನೆಯಾಗಿದೆ. ಯಾವಾಗ ಪೂರ್ಣಗೊಳಿಸಲಾಗುವುದು?

**ಶ್ರೀ ಎಚ್.ಕೆ.ಪಾಟೀಲ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು)**

**ಅ) ಆ) ಮತ್ತು ಇ)** ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿರುವ (ಅಧಿಕ ಪ್ಲೋರೈಡ್, ಆರ್ಸೆನಿಕ್ ರಾಸಾಯನಿಕ ಕಲುಷಿತೆ) 1000 ಗ್ರಾಮೀಣ ಜನವಸತಿಗಳಲ್ಲಿ ಶುದ್ಧ ನೀರಿನ ಘಟಕಗಳನ್ನು ಅಳವಡಿಸಲು ಉದ್ದೇಶಿಸಿದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ. ತಾಲ್ಲೂಕುವಾರು ಮತ್ತು ಗ್ರಾಮವಾರು ಮಾಹಿತಿಯನ್ನು ದಿ: 08-11-2013 ರಂದೇ ಸಾರ್ವಜನಿಕ ಮಾಹಿತಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ವೆಬ್‌ಸೈಟ್ kar.nic.in/rdpr ನಲ್ಲಿ ಪ್ರಕಟಿಸಲಾಗಿದೆ.

**ಈ)**

- ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ 1.5 PPM ಗಿಂತ ಹೆಚ್ಚಾಗಿರಬೇಕು ಮತ್ತು ಇತರೆ ಕಲುಷಿತೆಗಳನ್ನು ಸಹ BIS (Bureau of Indian standards) ಮಾನದಂಡಗಳನ್ವಯ ಪರಿಗಣಿಸಲಾಗಿದೆ.
- ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಮಾತ್ರ ಇದ್ದಲ್ಲಿ ಆ ಜನವಸತಿಯ ಜನಸಂಖ್ಯೆ: 500ಕ್ಕಿಂತ ಹೆಚ್ಚಾಗಿರಬೇಕು.
- ಕುಡಿಯುವ ನೀರಿನಲ್ಲಿ ಫ್ಲೋರೈಡ್ ಜೊತೆ ಇತರೆ ರಾಸಾಯನಿಕ ಅಂಶವಿದ್ದಲ್ಲಿ ಆ ಜನವಸತಿಯ ಜನಸಂಖ್ಯೆ 250 ಕ್ಕಿಂತ ಹೆಚ್ಚಾಗಿರಬೇಕು.

ಉ) ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಈ ಯೋಜನೆಯ ಅನುಷ್ಠಾನವನ್ನು ಜನವರಿ 2014 ಅಂತ್ಯದೊಳಗೆ ಪೂರ್ಣಗೊಳಿಸಿ ಕಾರ್ಯಗತಗೊಳಿಸಲು ಉದ್ದೇಶಿಸಿದೆ.

**ಅನುಬಂಧ**

| ಕ್ರ. ಸಂ | ಜಿಲ್ಲಾ ಪಂಚಾಯತ್ | ಜನವಸತಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 35 |
| 2 | ಬೆಂಗಳೂರು (ನಗರ) | 12 |
| 3 | ಬೆಳಗಾಂ | 21 |
| 4 | ಬಳ್ಳಾರಿ | 144 |
| 5 | ಬೀದರ್ | 5 |
| 6 | ಬಿಜಾಪುರ | 7 |
| 7 | ಚಿಕ್ಕಬಳ್ಳಾಪುರ | 25 |
| 8 | ಚಿಕ್ಕಮಗಳೂರು | 9 |
| 9 | ಚಿತ್ರದುರ್ಗ | 41 |
| 10 | ದಾವಣಗೆರೆ | 89 |
| 11 | ಧಾರವಾಡ | 3 |
| 12 | ಗದಗ | 6 |
| 13 | ಗುಲ್ಬರ್ಗಾ | 41 |
| 14 | ಹಾಸನ | 14 |
| 15 | ಕೋಲಾರ | 81 |
| 16 | ಕೊಪ್ಪಳ | 13 |
| 17 | ಮಂಡ್ಯ | 160 |
| 18 | ಮೈಸೂರು | 30 |
| 19 | ರಾಯಚೂರು | 115 |
| 20 | ತುಮಕೂರ | 149 |
| | **ಒಟ್ಟು** | **1000** |

**ಶ್ರೀಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೆ, ಕುಡಿಯುವ ನೀರಿನ ಸಮಸ್ಯೆ ಇವೊತ್ತಿನ ಸಮಸ್ಯೆಯಲ್ಲ. ಹಲವಾರು ವರ್ಷಗಳಿಂದ ಮೂಲಭೂತ ಸಮಸ್ಯೆಯಾಗಿ ಕಾಡುತ್ತಿರತಕ್ಕಂಥ ಒಂದು ಪ್ರಶ್ನೆ. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ fluoride ಅಂಶದ ಜೊತೆಗೆ ರಾಸಾಯನಿಕ ಅಂಶಗಳುಳ್ಳ ನೀರನ್ನು ಕುಡಿದು ಹಳ್ಳಿಗಳ ಜನತೆಗೆ ಬಹಳಷ್ಟು ಕಿರಿಕಿರಿಯಾಗತಕ್ಕಂಥದ್ದು ಮತ್ತು ಆ ಗ್ರಾಮಗಳನ್ನು ಬಿಟ್ಟು ವಲಸೆ ಹೋಗತಕ್ಕಂಥ ಪರಿಸ್ಥಿತಿ ಅನೇಕ ಹಳ್ಳಿಗಳಿಗೆ ಬಂದಿದೆ ಎನ್ನತಕ್ಕಂಥದ್ದನ್ನು ನಾವು ಅನೇಕ ಬಾರಿ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಹೊಸ ಸರ್ಕಾರ ಬಂದಂಥ ಸಂದರ್ಭದಲ್ಲಿ ಆ ರೀತಿಯ ಎಷ್ಟು ಹಳ್ಳಿಗಳನ್ನು ಗುರುತು ಮಾಡಿದ್ದೀರಿ ಎಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸಂಬಂಧಪಟ್ಟ ಹಾಗೆ ಮಾನ್ಯ ಹಿರಿಯ ಸಚಿವರು ನನಗೆ ಉತ್ತರವನ್ನು ಒದಗಿಸಿದ್ದಾರೆ. ಆದರೆ ನನ್ನ ಪ್ರಶ್ನೆ ಏನೆಂದರೆ ಈ ರಾಜ್ಯದಲ್ಲಿ ಈ ರೀತಿ ಇರುವ ಸುಮಾರು 50,000-60,000 ಇರತಕ್ಕಂಥ ಹಳ್ಳಿಗಳಲ್ಲಿ ಕೇವಲ 3700 ಹಳ್ಳಿಗಳನ್ನು ಮಾತ್ರ ಗುರುತು ಮಾಡಿ ಅದರಲ್ಲಿ ಕೇವಲ 1000 ಹಳ್ಳಿಗಳನ್ನು ಮಾತ್ರ ನಾವು ಗುರುತಿಸಿದ್ದೇವೆ, ಅದರಲ್ಲಿ ವಿಶೇಷವಾಗಿ ಕೆಲವು ಜಿಲ್ಲೆಗಳಲ್ಲಿ 3-6-5-7 ಎಂದು ಇಟ್ಟಿರುವ ಮಾನದಂಡ ಕೂಡ ಸರಿಯಲ್ಲ. ಕೆಲವು ಜಿಲ್ಲೆಗಳಲ್ಲಿ ಗಮನಿಸಿದರೆ ಒಂದು ಜಿಲ್ಲೆಗೆ 150 ಕೊಡಲಾಗಿದೆ, ಒಂದು ಜಿಲ್ಲೆಗೆ ಕೇವಲ ಮೂರು ಕೊಡಲಾಗಿದೆ. ಆದ್ದರಿಂದ ಸಮಗ್ರವಾಗಿರತಕ್ಕಂಥ ಕುಡಿಯುವ ನೀರಿನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮಾಡಬೇಕೆನ್ನುವಂಥ ಒಂದು ಚಿಂತನೆ ನಮ್ಮೆಲ್ಲರದು ಆಗಿದೆ. ಆ ದೃಷ್ಟಿಯಿಂದ ಒಂದು ಸರಿಯಾದಂಥ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಲಿಕ್ಕೆ ಸಾಧ್ಯವಿದೆಯೇ ಎನ್ನತಕ್ಕಂಥ ಮಾತನ್ನು ಕೇಳಲಿಚ್ಛಿಸುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಒಂದು ಸಂದರ್ಭದಲ್ಲಿ ನಾನು ವಿವರಗಳನ್ನು ಹಂಚಿಕೆ ಮಾಡಿಕೊಂಡಿದ್ದೇನೆ. ನಾವು ಈಗ ಏನು 3750 ಹಳ್ಳಿಗಳ ಪಟ್ಟಿಯನ್ನು ಕೊಟ್ಟಿದ್ದೇವೆ. ಇವೆಲ್ಲಾ ಇತ್ತೀಚೆಗೆ ಕೇಂದ್ರ ಸರ್ಕಾರ ಅಧ್ಯಯನ ಮಾಡಿ

fluoride ಹಾಗೂ arsenic ದಿಂದ affect ಆಗಿರತಕ್ಕಂಥ ಹಳ್ಳಿಗಳು. ಈ arsenic ಅತೀ ಹೆಚ್ಚು ಇರತಕ್ಕಂಥ ಪ್ರದೇಶದಲ್ಲಿ ತಕ್ಷಣ, ತುರ್ತಾಗಿ, emergent basis ಮೇಲೆ ನಾವು ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು ಎಂದು ಹೇಳಿ ನಮ್ಮ ಸರ್ಕಾರ ನಿರ್ಣಯ ಮಾಡಿ ಒಂದು ಸಾವಿರ ಘಟಕಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ನಮ್ಮ ಮೊದಲ ಆದ್ಯತೆ ಈ ಸುಮಾರು ಮೂರು ಸಾವಿರ ಹಳ್ಳಿಗಳಿವೆ ಅವುಗಳಿಗೆ ಶುದ್ಧ ನೀರನ್ನು ಕೊಡಬೇಕು. ನನಗೆ ತಮ್ಮ ಕಳಕಳಿ ಅರ್ಥ ಆಗಿದೆ. ಈ ಹಳ್ಳಿಗಳನ್ನು ಬಿಟ್ಟು ಇನ್ನು ಇಪ್ಪತ್ತು ಸಾವಿರ ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಅವಶ್ಯಕತೆ ಇದೆ. ಅವುಗಳಿಗೂ ಕೂಡ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಈಗ ಏನು ನಾವು ಒಂದು ಸಾವಿರ ಹಳ್ಳಿಗಳ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಆ ಕಾರ್ಯಕ್ರಮವನ್ನು ಪೂರ್ಣಗೊಳಿಸುತ್ತೇವೆ. ಅದರ ಜೊತೆ ಜೊತೆಯಲ್ಲಿ ಇದೇ ವರ್ಷ ನಾವು ಇನ್ನು ಹೆಚ್ಚು ಮಾಡುತ್ತೇವೆ, ಅದಕ್ಕೂ ಸರ್ಕಾರ ಚಿಂತನೆ ಮಾಡುತ್ತಿದೆ. ಎಲ್ಲೆಲ್ಲಿ ಶುದ್ಧ ನೀರಿನ ಅವಶ್ಯಕತೆ ಇದೆಯೋ ಆ ಎಲ್ಲಾ ಕಡೆ ಶುದ್ಧ ನೀರಿನ ಘಟಕವನ್ನು ಸ್ಥಾಪನೆ ಮಾಡುತ್ತೇವೆ. ಈಗಾಗಲೇ ನಾವು ಬೇರೆ ಬೇರೆ technology ಗಳನ್ನು ಪಡೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮೊದಲು ಈ Multi-village Drinking Water Supply Scheme ನಲ್ಲಿ raw water ಹೇಗಿದೆ ಹಾಗೆಯೇ ನಾವು supply ಮಾಡುತ್ತಿದ್ದೇವು. ಬಹಳ ಆದರೆ ಎಲ್ಲೋ ಒಂದು ಕಡೆ alum ಹಾಕಿ purify ಮಾಡಿದ ಹಾಗೆ ಮಾಡಿ ಕೊಡುತ್ತಿದ್ದವು. That was not enough. ಆ ಕಾರಣಕ್ಕೆ ಈಗ ಹೊಸ technology ಬಳಸಿ ಆ ಗ್ರಾಮಗಳಿಗೆ ಒಟ್ಟು ನೀರನ್ನು bulk water supply ಅನ್ನು purify ಮಾಡಿ ಕೊಡುವುದಕ್ಕಾಗುತ್ತಾ ಹೇಗೋ ಎಂದು ಸಹಿತ ಸರ್ಕಾರ ಇವೊತ್ತು ಚಿಂತನೆ ಮಾಡುತ್ತಿದೆ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗ ಏನು BIS (Bureau of Indian standards) ಮಾನದಂಡಗಳನ್ವಯ ಆ ಹಳ್ಳಿಗಳನ್ನು ಗುರುತಿಸತಕ್ಕಂಥ ಕೆಲಸ ಆಗಿದೆಯಲ್ಲ.

ಅದು ನನ್ನ ಅಭಿಪ್ರಾಯದಲ್ಲಿ ಗ್ರಾಮ ಪಂಚಾಯ್ತಿಗಳ ಮೂಲಕ. ಏಕೆಂದರೆ ಗ್ರಾಮ ಪಂಚಾಯ್ತಿಯವರಿಗೆ ಯಾವ ಹಳ್ಳಿಯಲ್ಲಿ ಸಮಸ್ಯೆ ಇದೆ ಎಂದು ಗೊತ್ತಿರುತ್ತದೆ. ಆದ್ದರಿಂದ ಆ ಹಳ್ಳಿಯನ್ನು ಗುರುತಿಸತಕ್ಕಂಥ ಕೆಲಸ ಆಗಬೇಕು. ಆದ್ದರಿಂದ ದಯಮಾಡಿ ಆ ಹಳ್ಳಿಗಳನ್ನು ಗ್ರಾಮಪಂಚಾಯ್ತಿಗಳ ಮೂಲಕ ಗುರುತಿಸತಕ್ಕಂಥ ಕೆಲಸ ಮಾಡಿದರೆ ಖಂಡಿತ ಆ ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆಂದು ನನ್ನ ಭಾವನೆ.

**ಸಭಾಪತಿಯವರು:–** ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ನೀರು contamination ಯಾವ ಕಾರಣಕ್ಕಾಗಿ ಆಗಿದೆ ಎಂದು scientific ಆಗಿ ಟೆಸ್ಟ್ ಮಾಡಿ ಗುರುತಿಸಬೇಕಾಗುತ್ತದೆ. ಗ್ರಾಮ ಪಂಚಾಯ್ತಿಯವರು ಬಹಳ ಆದರೆ ಇಲ್ಲಿ ನೋಡಿ ಇದು ಸರಿ ಇಲ್ಲ ಎಂದು ಹೇಳಬಹುದು. ಆದರೆ ಗುರುತಿಸುವಂಥ ಪೂರ್ತಿ ಜವಾಬ್ದಾರಿ ಅವರಿಗೆ ಕೊಟ್ಟರೆ ಆಗುವುದಿಲ್ಲ. ಅದು ವೈಜ್ಞಾನಿಕವಾದ ವಿಷಯವಾಗಿರುವುದರಿಂದ ಅದಕ್ಕಾಗಿ ಇರತಕ್ಕಂಥ ಏಜನ್ಸಿಗಳೆ ಅದನ್ನು ಗೊತ್ತುಪಡಿಸಬೇಕಾಗುತ್ತದೆ.

**ಹೊಸ ಸಿದ್ಧಾಪುರ ಗ್ರಾಮದಲ್ಲಿ ನೈರ್ಮಲ್ಯತೆ ಕುರಿತು**

**19; ಶ್ರೀಮತಿ ತಾರಾ ಅನುರಾಧ (ನಾಮ ನಿರ್ದೇಶನ ಹೊಂದಿದವರು)**

**ಅ)** ಸುರುಪೂರ ತಾಲೂಕು ಹೊಸಸಿದ್ದಾಪುರ ಗ್ರಾಮದ ಮನೆಗಳಲ್ಲಿ ಶೌಚಾಲಯಗಳು ಇಲ್ಲದೇ ಇರುವುದರಿಂದ ಮಹಿಳೆಯರಿಗೆ ಮತ್ತು ವೃದ್ಧರಿಗೆ ತೊಂದರೆಯಾಗರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

**ಆ)** ಊರಿನಲ್ಲಿ ಚರಂಡಿ ವ್ಯವಸ್ಥೆ ಸರಿಯಿಲ್ಲದಿರುವುದು ತಗ್ಗು ಪ್ರದೇಶಗಳಲ್ಲಿ ನೀರು ನಿಂತು ರೋಗರುಜಿನಗಳಿಗೆ ಮತ್ತು ಸಾಂಕ್ರಾಮಿಕ ಕಾಯಿಲೆಗಳಿಗೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

**ಇ)** ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರ ಮನವೊಲಿಸಲು ಪ್ರತಿ ಮನೆತನಗಳಲ್ಲಿ ಶೌಚಾಲಯಗಳನ್ನು ಕಡ್ಡಾಯವಾಗಿ ನಿರ್ಮಿಸಲು ಮತ್ತು

ಪ್ರತಿ ರಸ್ತೆಗೆ ಚರಂಡಿ ನಿರ್ಮಿಸಲು ಏನಾದರು ಕ್ರಮ ತೆಗೆದುಕೊಳ್ಳಲಾಗಿದೆಯೇ ?

**ಶ್ರೀ ಎಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಸಚಿವರು)**

ಅ) ಒಟ್ಟಾರೆ ಗ್ರಾಮದಲ್ಲಿ 150 ಕುಟುಂಬಗಳಿದ್ದು, ಇದುವರೆವಿಗೂ ಈ ಯೋಜನೆಯಡಿ 21 ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮಾಡಲಾಗಿದೆ. ಗ್ರಾಮದಲ್ಲಿ ಶೌಚಾಲಯ ಇಲ್ಲದೆ ಶೌಚಕ್ಕೆ ಬಯಲಿಗೆ ಹೋಗುತ್ತಿದ್ದ ವೃದ್ಧರು. ಮಹಿಳೆಯರು ಹಾಗೂ ಗ್ರಾಮಸ್ಥರಿಗೆ ಶೌಚಾಲಯ ನಿರ್ಮಾಣಕ್ಕೆ ಅರಿವು ಮೂಡಿಸಲಾಗುತ್ತಿದ್ದು, ಶೌಚಾಲಯ ನಿರ್ಮಾಣಕ್ಕೆ ಇದುವರೆವಿಗೂ ಒಟ್ಟು 112 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಹಾಗೂ 15 ಶೌಚಾಲಯಗಳು ಪ್ರಗತಿ ಹಂತದಲ್ಲಿವೆ.

ಆ) ಸದರಿ ಗ್ರಾಮದಲ್ಲಿ ಸುವರ್ಣ ಗ್ರಾಮೋದಯ ಯೋಜನೆ ಅಡಿ 2 ಕಿ.ಮೀ. ರಸ್ತೆ ನಿರ್ಮಾಣವಾಗಿರುತ್ತದೆ. ಇದು ಗ್ರಾಮದ 50% ಭಾಗ ಇರುತ್ತದೆ. ಹಾಗೂ ಚರಂಡಿ ವ್ಯವಸ್ಥೆ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ರೋಗರುಜಿನಗಳಿಗೆ ಹಾಗೂ ಸಾಂಕ್ರಾಮಿಕ ರೋಗಗಳು ಹರಡದಂತೆ ಸೂಕ್ತ ಕ್ರಮವಹಿಸಲು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.

ಇ) ಸದರಿ ಗ್ರಾಮಕ್ಕೆ ಯೋಜನಾ ನಿರ್ದೇಶಕರು, (ಡಿಆರ್‌ಡಿಎ) ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ತಂಡ ಭೇಟಿ ಮಾಡಿ, ಸದರಿ ಗ್ರಾಮದಲ್ಲಿ ಮನೆ ಮನೆಗಳಿಗೆ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವಂತೆ, ಗ್ರಾಮಸ್ಥರಿಗೆ ತಿಳುವಳಿಕೆ ಕೊಡಲಾಗಿದೆ. ಹಾಗೂ ಶೌಚಾಲಯ ನಿರ್ಮಿಸಿಕೊಳ್ಳುವ ಕಾರ್ಯಕ್ರಮ ಪ್ರಗತಿಯಲ್ಲಿರುತ್ತದೆ. ಅಲ್ಲದೆ ಇತರೆ ಕಾಮಗಾರಿಗಳನ್ನು 13 ನೇ ಹಣಕಾಸು, ಬಿಆರ್‌ಜಿಎಫ್ ಅಥವಾ ಇತರೆ ಯೋಜನೆಯಡಿ ನಿಯಮಾನುಸಾರ ತೆಗೆದುಕೊಳ್ಳಲಾಗುವುದು.

**ಶ್ರೀಮತಿ ತಾರಾ ಅನುರಾಧಾ:–** ಮಾನ್ಯ ಸಭಾಪತಿಯವರೆ, ಉತ್ತರವನ್ನು ಒದಗಿಸಿದ್ದಾರೆ. ಇತ್ತೀಚೆಗೆ ಪ್ರಜಾವಾಣಿ ಪತ್ರಿಕೆಯಲ್ಲಿ ನಾನು ಕೇಳಿದ ಗ್ರಾಮದ ಹೆಸರು "ಹೊಸ ಸಿದ್ದಾಪುರಕ್ಕೆ ಶೌಚಾಲಯವೇ ಶಾಪ" ಎನ್ನುವ ಶೀರ್ಷಿಕೆಯಲ್ಲಿ ಬಂದಿದೆ. ಅದರಲ್ಲಿ ಸುರಪುರ ತಾಲ್ಲೂಕಿನ ಹೊಸ ಸಿದ್ಧಾಪುರ ಗ್ರಾಮಕ್ಕೆ ಯಾವ ಯೋಜನೆಯೂ ಬಂದಿಲ್ಲ ಎಂದು ಹೇಳಿದ್ದಾರೆ. ಉತ್ತರದಲ್ಲಿ ಆ ಗ್ರಾಮದಲ್ಲಿ 150 ಕುಟುಂಬಗಳಿದ್ದು ಆ ಯೋಜನೆಯಡಿಯಲ್ಲಿ 21 ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಕೊಟ್ಟಿದ್ದಾರೆ.

ಹಾಗೂ ಒಟ್ಟು ೧೧೨ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅದರಲ್ಲಿ ೧೫ ಶೌಚಾಲಯಗಳು ಮಾತ್ರ ಪ್ರಗತಿಯ ಹಂತದಲ್ಲಿದೆ ಎಂದು ಹೇಳಿದ್ದಾರೆ. ಅಂದರೆ ಒಟ್ಟು ೧೫೦ ಕುಟುಂಬಗಳಿಗೆ ೩೬ ಶೌಚಾಲಯಗಳು ಪ್ರಗತಿಯ ಹಂತದಲ್ಲಿದೆ. ಅಂದರೆ ಇದರ ವೇಗವನ್ನು ದಯವಿಟ್ಟು ಮಾನ್ಯ ಸಚಿವರು ಗಮನಿಸಬೇಕು. ಹಾಗೆ ಶೌಚಾಲಯದ ಬಗ್ಗೆ ಅರಿವು ಮೂಡಿಸುವುದರ ಬಗ್ಗೆ ಕೇಳಿದ್ದೆ. ಅಧಿಕಾರಿಗಳು ಅರಿವು ಮೂಡಿಸುತ್ತಿದ್ದಾರೆಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಇನ್ನು ಹೆಚ್ಚು ಅರಿವು ಮೂಡಿಸುವುದರ ಬಗ್ಗೆ ಯೋಚನೆ ಮಾಡಬೇಕು. ಏಕೆಂದರೆ, ನಾವು ನಾಗರೀಕತೆಯಲ್ಲಿ ಇಷ್ಟು ಮುಂದುವರೆದಿದ್ದರೂ ಕೂಡ ಶೌಚಾಲಯದ ಬಗ್ಗೆ ಇನ್ನು ಕೆಟ್ಟ ಅಭಿಪ್ರಾಯ ಇರುವ ಗ್ರಾಮಗಳು ನಮ್ಮ ರಾಜ್ಯದಲ್ಲಿದೆ. ಆದುದರಿಂದ ಅರಿವು ಮೂಡಿಸುವ ದಿಕ್ಕಿನಲ್ಲಿ ಏನಾದರು ಹೊಸ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಶ್ರೀಮತಿ ತಾರಾ ಅನೂರಾಧರವರು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಅವರನ್ನು ನಾನು ಅಭಿನಂದಿಸುತ್ತೇನೆ. ಶೌಚಾಲಯದ ಬಗ್ಗೆ ಜನಜಾಗೃತಿ ಮಾಡುವುದು ಎಂದರೆ, ಇಂತಹ ವೇದಿಕೆಗಳನ್ನು ಸಹಿತ ನಾವು ಜನರನ್ನು ಜಾಗೃತಿ ಮಾಡುವುದಕ್ಕೆ ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಅಂತಹ ಕೆಲಸವನ್ನು ಮಾನ್ಯ

ಸದಸ್ಯರು ಮಾಡಿದ್ದಾರೆ. ನಾನು ಮೊದಲು ಇದನ್ನು ಶ್ರೀಮತಿ ತಾರಾ ಅನೂರಾಧರವರ ಊರು ಎಂದು ತಿಳಿದುಕೊಂಡೆ.

**ಶ್ರೀಮತಿ ತಾರಾ ಅನೂರಾಧ:–** ಮಾನ್ಯ ಸಭಾಪತಿಯವರೆ, ಕರ್ನಾಟಕವೇ ನನ್ನ ಊರು.

**ಶ್ರೀ ಹೆಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಬಹಳ ಒಳ್ಳೆಯದು. ಬಹಳ ಸಂತೋಷ. ಒಂದು ಪತ್ರಿಕೆಯ ವರದಿಯ ಮೇಲೆ ಸರ್ಕಾರವನ್ನು ಎಚ್ಚರಿಸಿದ್ದಾರೆ. ಆ ಗ್ರಾಮದಲ್ಲಿರುವ ೧೫೦ ಕುಟುಂಬಗಳಲ್ಲಿ ೨೧ ಶೌಚಾಲಯಗಳಾಗಿದೆ. ಇನ್ನು ೧೫ ಶೌಚಾಲಯಗಳು ಪ್ರಗತಿಯ ಹಂತದಲ್ಲಿವೆ. ಮಾನ್ಯ ಸಭಾಪತಿಯವರೆ, ತಮಗೆ ಬಹಳ ಸಂತೋಷ, ಸಮಾಧಾನವಾಗಬಹುದು. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಕೂಡ ಅಷ್ಟೇ ಸಮಾಧಾನವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಸಾರ್ವಜನಿಕ ಶೌಚಾಲಯಗಳಾಗಲಿ, ಶೌಚಾಲಯಗಳಾಗಲಿ ಇವುಗಳ ಬಗ್ಗೆ ಹಳ್ಳಿಗಳಲ್ಲಿ ತಪ್ಪು ಕಲ್ಪನೆ, ತಪ್ಪು ತಿಳುವಳಿಕೆ ಇಲ್ಲ. ಅದೆಲ್ಲಾ ಕೆಲವೇ ಜನ ಎಲ್ಲಿಯೋ ಕುಳಿತುಕೊಂಡು ಮಾತನಾಡುತ್ತಾರೆ. ಅವರಿಗೆ ಸೌಲಭ್ಯ ಇಲ್ಲ ಎನ್ನುವುದಕ್ಕೆ ಅನಿವಾರ್ಯವಾಗಿ ಬಯಲು ಬಹಿರ್ದೆಸೆ ಅವರಿಗೆ ಅನಿವಾರ್ಯವಾಗಿತ್ತು. ಜನ ಜಾಗೃತರಾಗುತ್ತಿದ್ದಾರೆ. ಸೌಲಭ್ಯ, ಸೌಕರ್ಯ, ಅನುಕೂಲ ಕಲ್ಪಿಸಿಕೊಟ್ಟರೆ ಶೌಚಾಲಯಗಳನ್ನು ಕಟ್ಟಿಕೊಳ್ಳುತ್ತಾರೆ. ನಾವು ಈ ವರ್ಷದ ಆಯವ್ಯಯದಲ್ಲಿ ಆರು ಲಕ್ಷ ಶೌಚಾಲಯಗಳನ್ನು ಕಟ್ಟುತ್ತೇವೆ ಎನ್ನುವಂತಹ ಘೋಷಣೆಯನ್ನು ಮಾಡಿದ್ದೇವೆ. ಆ ಸಂದರ್ಭದಲ್ಲಿ ನನ್ನ ಹಲವಾರು ಮಿತ್ರರು ಸಹಿತ ನಮ್ಮ ಇಲಾಖೆಯ ಬಗ್ಗೆ ಗೌರವ ಇದ್ದವರು, ವಿಶ್ವಾಸ ಇದ್ದವರು, ನಮ್ಮ ಸರ್ಕಾರದ ಬಗ್ಗೆ ವಿಶೇಷವಾದಂತಹ ಆತ್ಮ ವಿಶ್ವಾಸವುಳ್ಳಂಥವರು ಟಾರ್ಗೆಟ್ ಬಹಳ ಆಯಿತು ಎಂದು ಹೇಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಮಾಡಿರತಕ್ಕಂತಹ ಪ್ರಯತ್ನಗಳು ಇವತ್ತು ಏನಾಗಿದೆ ಎಂದರೆ ೬,೦೦,೦೦೦ ಏನು ಟಾರ್ಗೆಟ್ ಇತ್ತಲ್ಲಾ, ಆದರೆ ೬,೨೦,೦೦೦ ಅರ್ಜಿಗಳು ಈಗ ನಮ್ಮ ಕೈ ಸೇರಿದೆ. ಶ್ರೀ ವೈ. ನಾರಾಯಣಸ್ವಾಮಿಯವರು ಅರ್ಜಿಗಳೇನೋ ಬಂದಿರಬಹುದೆಂದು ಹೇಳಬಹುದು. ೬,೨೦,೦೦೦ ಅರ್ಜಿಗಳ ಪೈಕಿ

೨,೪೮,೦೦೦ ಶೌಚಾಲಯಗಳನ್ನು ಕಟ್ಟಿ ಪೂರ್ಣಗೊಳಿಸಲಾಗಿದೆ. I have appointed a third party inspection agency for a concurrent audit to know whether they are physically existing or not. ನಮ್ಮ Social Auditors ಏನಿದ್ದಾರೆ, ಅವರಿಂದ ವಿಶೇಷವಾಗಿ ಡಿಸೆಂಬರ್ ತಿಂಗಳಿನಲ್ಲಿ ನಮ್ಮ physical presence ಎಷ್ಟು ಆಗಿದೆ ಎಂದು ತಿಳಿದುಕೊಂಡಿದ್ದೇವೆ. ಉದ್ದೇಶ ಎಂದರೆ, ಶೌಚಾಲಯಗಳು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಬರಬೇಕು. ಅದರ ಮೂಲಕ ಆರೋಗ್ಯವಂತ ಸಮಾಜವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಮಹಾತ್ಮ ಗಾಂಧಿಜೀಯವರು ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳಾಗಬೇಕೆಂದು ದೊಡ್ಡ ಕಲ್ಪನೆಯನ್ನು ಮಾಡಿದ್ದರು. ಮಾನ್ಯ ಸಭಾಪತಿಯವರೆ ಸಾಕಷ್ಟು ಸಂದರ್ಭದಲ್ಲಿ ಬಹಳಷ್ಟು ವ್ಯಕ್ತ ಮಾಡಿದ್ದೀರಿ. ಗಾಂಧಿಜೀಯವರು ಹೇಳಿದ್ದು ಶೌಚಾಲಯಗಳನ್ನು ಕಟ್ಟಿಕೊಳ್ಳಬೇಕು ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು. ಸ್ವಚ್ಛವಾಗಿಟ್ಟುಕೊಳ್ಳಬೇಕು. ಆಗ ಮಾತ್ರ ಗ್ರಾಮ ಸ್ವರಾಜ್ಯದಲ್ಲಿ ಅರ್ಹ ವ್ಯಕ್ತಿಯಾಗುತ್ತಾರೆ ಎನ್ನುವಂತಹ ಮಾತನ್ನು ಹೇಳಿದ್ದರು. ಆ ಒಂದು ದಿಸೆಯೊಳಗೆ, ಕನಸಿನೊಳಗೆ ನಾವು ಹೆಜ್ಜೆಯನ್ನು ಇಡುತ್ತಿದ್ದೇವೆ. ಶೌಚಾಲಯದ ಕಾರ್ಯಕ್ರಮದಲ್ಲಿ ತಮ್ಮೆಲ್ಲರ ಸಹಕಾರ ಬೇಕು. ಆಗ ಮಾತ್ರ ನಮ್ಮ ಕನಸಿನಂತೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಮ್ಮೆಲ್ಲರ ಸಹಕಾರವನ್ನು ಕೇಳುತ್ತಿದ್ದೇನೆ. ಸಹೋದರಿ ಶ್ರೀಮತಿ ತಾರಾ ಅನೂರಾಧರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀಮತಿ ತಾರಾ ಅನೂರಾಧ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನನಗೆ ಅಭಿನಂದನೆಯನ್ನು ಸಲ್ಲಿಸಿದ್ದಕ್ಕೆ ಕೃತಜ್ಞತೆಗಳು. ಆದರೆ ಗಾಂಧಿಜೀಯವರ ಕನಸು ಇನ್ನು ನನಸಾಗಲಿಲ್ಲ ಎನ್ನುವುದೇ ನಮಗೆ ವಿಪರ್ಯಾಸ.

**ಸಭಾಪತಿಯವರು:-** ಆಯಿತು ಬಿಡಿ. ಈಗಲಾದರು ಮಾಡುತ್ತಿದ್ದಾರೆ.

## ಕರ್ನಾಟಕ ಗೃಹ ಮಂಡಳಿಯ ನಿವೇಶನ ಮತ್ತು ಮನೆ ಹಂಚಿಕೆಯಲ್ಲಿ ವಿಳಂಬ ಕುರಿತು

### 1013; ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಅ) ಬಳ್ಳಾರಿಯಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ನಿವೇಶನ ಮತ್ತು ಮನೆ ಹಂಚಿಕೆಗಾಗಿ ಅರ್ಜಿ ಸ್ವೀಕರಿಸಿ ಈವರೆಗೂ ಹಂಚಿಕೆಯಾಗದೇ ವಿಳಂಬವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅರ್ಜಿ ಶುಲ್ಕ ಮತ್ತು ಹೆಚ್ಚುವರಿ ಶುಲ್ಕವೆಂದು ಅರ್ಜಿದಾರರಿಂದ ಸ್ವೀಕರಿಸಿರುವ ಮೊತ್ತದ ವಿವರ ನೀಡುವುದು; ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು;

ಇ) ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆಗನುಗುಣವಾಗಿ ಎಷ್ಟು ಭೂಮಿ ಬೇಕಾಗುತ್ತದೆ;

ಈ) ಈಗಾಗಲೇ ಎಷ್ಟು ಭೂಮಿ ವಶಪಡಿಸಿಕೊಳ್ಳಲಾಗಿದೆ; ಯಾವ ದರದಲ್ಲಿ, ಎಲ್ಲೆಲ್ಲಿ ವಿವರ ನೀಡುವುದು;

ಉ) ಪ್ರಸ್ತುತ ಈಗಾಗಲೇ ಹಂಚಿಕೆ ವಿಳಂಬ ಆಗಿರುವುದರಿಂದ ಎಷ್ಟು ಶೀಘ್ರದಲ್ಲಿ ಯಾವ ಕಾಲಮಿತಿಯೊಳಗೆ ವಿತರಿಸಲಾಗುತ್ತದೆ?

**ಡಾ|| ಎಂ.ಹೆಚ್.ಅಂಬರೀಷ್ ( ವಸತಿ ಸಚಿವರು)**

ಅ) ಹೌದು

ಆ) ಸ್ವೀಕರಿಸಲಾದ ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿ ಹಣದ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ | ವರ್ಷ | ಅರ್ಜಿ ಶುಲ್ಕ (ರೂ.ಗಳಲ್ಲಿ) | ಆರಂಭಿಕ ಠೇವಣಿ (ರೂ.ಗಳಲ್ಲಿ) |
|---|---|---|---|
| 1. | 2006 | 2971030.00 | 0.00 |
| 2. | 2009 | 76003.00 | 98399365.00 |
| | ಒಟ್ಟು | **3047033.00** | **98399365.00** |

ಇ) ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆಗನುಗುಣವಾಗಿ ಸುಮಾರು 725 ಎಕರೆ ಜಮೀನು ಅಗತ್ಯವಿರುತ್ತದೆ

ಈ)

1. ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ಪಟ್ಟಣದಲ್ಲಿಯ 65.55 ಎಕರೆ ಜಮೀನನ್ನು ಭೂ ಮಾಲೀಕರಿಗೆ ಭೂ ಪರಿಹಾರ ಧನ ನೀಡುವ ಬದಲಾಗಿ ಭೂ ಮಾಲೀಕರೊಂದಿಗೆ 60:40 ಅನುಪಾತದಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ.
2. ಬಳ್ಳಾರಿ ತಾಲ್ಲೂಕು, ಹಲಕುಂದಿ ಮತ್ತು ಮುಂಡರಗಿ ಗ್ರಾಮಗಳಲ್ಲಿನ 235.94 ಎಕರೆ ಜಮೀನನ್ನು ಭೂ ಮಾಲೀಕರಿಗೆ ಭೂ ಪರಿಹಾರ ಧನ ನೀಡುವ ಬದಲಾಗಿ ಭೂ ಮಾಲೀಕರೊಂದಿಗೆ 60:40 ಅನುಪಾತದಲ್ಲಿ ಯೋಜನೆ ಕೈಗೆತ್ತಿಕೊಳ್ಳಲು ಕರ್ನಾಟಕ ಗೃಹ ಮಂಡಳಿಯ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿರುತ್ತದೆ.
3. ಬಳ್ಳಾರಿ ತಾಲ್ಲೂಕು ಮಿಂಚೇರಿ ಗ್ರಾಮದಲ್ಲಿನ ಒಟ್ಟು 408 ಎಕರೆ 30 ಗುಂಟೆ ಜಮೀನಿನ ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಭೂ ಸ್ವಾಧೀನ ಕಾಯ್ದೆ, 1894ರ ಕಲಂ 6(1) ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ.

ಉ) ವಸತಿ ಯೋಜನೆಗೆ ಜಮೀನುಗಳನ್ನು ಸಂಗ್ರಹಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಆದ್ಯತೆ ಮೇರೆಗೆ ಜಮೀನುಗಳನ್ನು ಮಂಡಳಿ ವಶಕ್ಕೆ ಪಡೆದು, ಯೋಜನೆ ತಯಾರಿಸಿ, ಕಾರ್ಯಗತಗೊಳಿಸಿ, ಮನೆ/ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**ಶ್ರೀ ಮೃತ್ಯುಂಜಯ ಜಿನಗಾ:–** ಮಾನ್ಯ ಸಭಾಪತಿಯವರೆ, ಸರ್ಕಾರ ನಿಜವಾಗಿಯೂ ಪ್ರಾಮಾಣಿಕವಾಗಿ ನಾನು ಕೇಳಿದ ಪ್ರಶ್ನೆಗೆ ಹೌದು ಎನ್ನುವುದರ ಮೂಲಕ ಇಲ್ಲಿ ಉತ್ತರವನ್ನು ಕೊಟ್ಟಿದೆ. ಪ್ರಶ್ನೆ ಏನೆಂದರೆ, ಬಳ್ಳಾರಿಯಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ವಸತಿ ನಿವೇಶನ ಮತ್ತು ಮನೆ ಹಂಚಿಕೆಗಾಗಿ ಅರ್ಜಿ ಸ್ವೀಕರಿಸಿ ಇದುವರೆಗೂ ಹಂಚಿಕೆಯಾಗದೇ ವಿಳಂಭವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವಂತಹ ಪ್ರಶ್ನೆಗೆ ಹೌದು ಎನ್ನುವಂತಹ ಪ್ರಾಮಾಣಿಕವಾದಂತಹ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ೨೦೦೬ನೇ ಇಸವಿಯಿಂದ ೧೦ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಸಂಗ್ರಹ ಮಾಡಲಾಗಿದೆ ಎನ್ನುವಂತಹ ಉತ್ತರವನ್ನು ಮಾನ್ಯ ವಸತಿ ಸಚಿವರು ನೀಡಿದ್ದಾರೆ. ಇವತ್ತು ನಿವೇಶನ ಮತ್ತು ಮನೆ ಕಟ್ಟಿಕೊಳ್ಳುವುದಕ್ಕೋಸ್ಕರವಾಗಿ ಅರ್ಜಿಯನ್ನು ಸಲ್ಲಿಸಿದಂಥವರು ಮಧ್ಯಮ ವರ್ಗದ ಜನರು. ಇವರುಗಳಿಗೆ ೮ ವರ್ಷಗಳಾದರೂ ಸಹಾ ಇದುವರೆಗೂ ನಿವೇಶನ ಹಂಚಿಕೆಯಾಗಿಲಿಲ್ಲ, ಮನೆ ಹಂಚಿಕೆಯಾಗಲಿಲ್ಲ ಎಂದರೆ, ಇದು ಬಹಳ ದುರ್ದೈವದ ಸಂಗತಿ ಎಂದು ನಾನು ಭಾವಿಸುತ್ತೇನೆ. ಇಲ್ಲಿ ಈಗಾಗಲೇ ಎಷ್ಟು ಭೂಮಿಯನ್ನು ಮನೆಗಳನ್ನು, ನಿವೇಶನಗಳನ್ನು ಹಂಚಿಕೆ ಮಾಡುವುದಕ್ಕೆ ಬೇಕಾಗುತ್ತದೆ ಎನ್ನುವಂತಹ ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ರೈತರ ಜೊತೆಗೆ, ಭೂಮಿಯ ಮಾಲೀಕರ ಜೊತೆಗೆ ಒಪ್ಪಿಗೆ ನೀಡಲಾಗಿದೆ ಎನ್ನುವಂತಹ ಉತ್ತರವನ್ನು ನೀಡಿದ್ದಾರೆ. ೬೦:೪೦ ಅನುಪಾತದಲ್ಲಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಸರ್ಕಾರ ಮುಂದಾಗಿದೆ ಎನ್ನುವಂತಹ ಮಾತನ್ನು ಇಲ್ಲಿ ಹೇಳಿದ್ದಾರೆ. ಕೊನೆಯದಾಗಿ ಪ್ರಸ್ತುತ ಈಗಾಗಲೇ ಹಂಚಿಕೆಗೆ ವಿಳಂಭವಾಗಿರುವುದರಿಂದ ಯಾವ ಕಾಲಮಿತಿಯಲ್ಲಿ ವಿತರಿಸಲಾಗುತ್ತದೆ ಎನ್ನುವಂತಹ ಪ್ರಶ್ನೆಗೆ ವಸತಿ ಯೋಜನೆಗೆ ಜಮೀನು ಸಂಗ್ರಹಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು ಆದ್ಯತೆ ಮೇರೆಗೆ ಜಮೀನನ್ನು ಮಂಡಳಿಯ ವಶಕ್ಕೆ ಪಡೆದು ಯೋಜನೆ ತಯಾರಿಸಿ, ಕಾರ್ಯಗತಗೊಳಿಸಿ, ಮನೆ, ನಿವೇಶನಗಳನ್ನು ಸಾರ್ವಜನಿಕರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಆದರೆ ಖಡಖಂಡಿತವಾಗಿ ಈ ವರ್ಷದಲ್ಲಿಯೇ

ಮುಗಿಸುತ್ತೇವೆ, ಮುಂದಿನ ವರ್ಷದಲ್ಲಿ ಮುಗಿಸುತ್ತೇವೆ ಎನ್ನುವಂತಹ ವಿಶ್ವಾಸದ ಉತ್ತರ ಸರ್ಕಾರದಿಂದ ಬಂದಿಲ್ಲ. ದಯವಿಟ್ಟು ಈ ಮಧ್ಯಮ ವರ್ಗದ ಜನರು, ನಿವೇಶನ ಸಿಗುತ್ತದೆ, ಮನೆ ಸಿಗುತ್ತದೆ ಎನ್ನುವಂತಹ ಕನಸುಗಳನ್ನು ಕಟ್ಟಿಕೊಂಡಿದ್ದಾರೆ, ನಿಜವಾಗಿಯೂ ಅವರಿಗೆ ಸಿಗುವಂತಾಗಬೇಕು. ವಿಳಂಬವಾಗಬಾರದು ಎನ್ನುವಂತಹ ಒತ್ತಾಯವನ್ನು ಮಾನ್ಯ ಸಚಿವರಿಗೆ ತಮ್ಮ ಮುಖಾಂತರ ಮಾಡುತ್ತಿದ್ದೇನೆ. ಇದಕ್ಕೆ ಉತ್ತರವನ್ನು ಸಚಿವರಿಂದ ಬಯಸುತ್ತೇನೆ.

**ಶ್ರೀ ಎಂ.ಎಚ್. ಅಂಬರೀಷ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳಿರುವಂಥದ್ದರಲ್ಲಿ ಬಹಳಷ್ಟು ಅರ್ಥವಿದೆ. ೨೦೦೬ನೇ ಇಸವಿಯಿಂದ ೨೦೦೯ನೇ ಇಸವಿಯವರೆಗೆ demand survey ಮಾಡಿಸಿದೆವು. ೧೧,೦೦೦ ಅರ್ಜಿಗಳು ಬಂದಿದೆ. ಸರ್ಕಾರಕ್ಕೆ ೧೦ ಕೋಟಿ ರೂಪಾಯಿಗಳ ಹಣವನ್ನು ಕೂಡ ಸಂಗ್ರಹಿಸಿದ್ದೇವೆ. ನಾವು ಅರ್ಜಿದಾರರಿಗೆಲ್ಲಾ ನಿವೇಶನಗಳನ್ನು ಪೂರೈಸಬೇಕಾದರೆ, ಎಷ್ಟು ಜಮೀನು ಬೇಕೆಂದು ಸಮೀಕ್ಷೆ ಮಾಡಿದಾಗ ೭೨೫ ಎಕರೆಯಿಂದ ೭೫೦ ಎಕರೆ ಜಮೀನು ಬೇಕೆಂದು ಆಯಿತು. ವಿಳಂಬವಾಗಿದೆ. ಮಾನ್ಯ ಸದಸ್ಯರು ವಿಳಂಬದ ಬಗ್ಗೆ ಬಹಳ ಕಾಳಜಿಯನ್ನು ಇಟ್ಟುಕೊಂಡು ಪ್ರಶ್ನೆಯನ್ನು ಕೇಳಿದ್ದಾರೆ. ಮೊದಲು ಏನಾಗಿದೆ ಎಂದರೆ ನಮ್ಮ ಇಲಾಖೆಯವರು ಜಮೀನನ್ನು ಗುರುತಿಸಿದ್ದನ್ನು ಕೆಐಎಡಿಬಿ ಯವರು ನಾವು ಇದನ್ನು ಗುರುತಿಸುತ್ತಿದ್ದೇವೆ ನೀವು ಮಾಡಬೇಡಿ ಎಂದು ಹೇಳಿದ್ದರಿಂದ ಸರಿ ಎಂದು ಅವರಿಗೆ ಆ ಜಮೀನನ್ನು ಬಿಟ್ಟು ಕೊಟ್ಟಿದ್ದರಿಂದ ಇದರಲ್ಲಿ ಸ್ವಲ್ಪ ವಿಳಂಬವಾಯಿತು. ಇದಾದ ನಂತರ ಇನ್ನೊಂದು ಪ್ರಾಜೆಕ್ಟ್‌ನ್ನು ಮಾಡಿದಾಗ ಜಿಲ್ಲಾಧಿಕಾರಿಗಳು ಅದನ್ನೂ ಕೂಡ ನಾವೇ ಮಾಡಿಕೊಳ್ಳುತ್ತೇವೆಂದು ತಡೆ ಹಾಕಿದರು. ಈ ರೀತಿಯಾಗಿದ್ದರಿಂದ ತಡವಾಗಿದೆ. ಈಗ ಏನಾಗಿದೆ ಎಂದರೆ, ೩೦೦ ಎಕರೆ, ೭೦೦ ಎಕರೆಯನ್ನು ೬೦:೪೦ರ ಪ್ರಕಾರ ನಾವು ರೈತರ ಹತ್ತಿರ ಅಗ್ರಿಮೆಂಟ್ ಮಾಡಿಕೊಂಡು ಅವರಿಗೂ ಅನುಕೂಲವಾಗಲಿ ಎಂದು ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಬಳ್ಳಾರಿಯ ನಮ್ಮ ಶಾಸಕರು ಬಹಳ ಕಾಳಜಿಯನ್ನು ಇಟ್ಟುಕೊಂಡು

ಪ್ರಶ್ನೆಯನ್ನು ಕೇಳಿದ್ದಾರೆ. ನಾವು ಅದೇ ರೀತಿಯಲ್ಲಿ ಆದಷ್ಟು ಬೇಗ, ಏಕೆಂದರೆ ನಾವು Commit ಮಾಡಿದರೆ ಮೂರು ತಿಂಗಳು, ನಾಲ್ಕು ತಿಂಗಳು ಎಂದು ಹೇಳಿದರೆ ಅವರು ನಮ್ಮ ಮೇಲೆ ಸಂಶಯವನ್ನು ವ್ಯಕ್ತಪಡಿಸುವುದು ಬೇಡ. ನಾವು ಇಲಾಖೆಯಲ್ಲಿರುವುದರಿಂದ ಮಾನ್ಯ ಸದಸ್ಯರಿಗೆ ಎಷ್ಟು ಕಾಳಜಿ ಇದೆ ಅಷ್ಟೇ ಕಾಳಜಿಯನ್ನು ವಹಿಸಿ, ಇವತ್ತು ಏನೇನು ನಾವು ಸಂಗ್ರಹಿಸಿದ್ದೇವೆ. ಅದೇ ರೀತಿ ಆದಷ್ಟು ಬೇಗ ಮಾಡಿ, ನಿಮ್ಮ ಜನಗಳಿಗೆ ಸೌಕರ್ಯಗಳನ್ನು ಮಾಡಿಕೊಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಸುಮಾರು 55 ಸಾವಿರ ಶಾಲೆಗಳ 64 ಲಕ್ಷ ವಿದ್ಯಾರ್ಥಿಗಳಿಗೆ ಪ್ರತಿನಿತ್ಯ ಕ್ಷೀರಭಾಗ್ಯ ಯೋಜನೆಯಡಿ ಹಾಲು ಕೊಡುವುದು ಸುಲಭದ ಕೆಲಸವಲ್ಲ. ಖಂಡಿತವಾಗಿ ಅದರಲ್ಲಿರುವ ಗೊಂದಲ ಮತ್ತು ಸಮಸ್ಯೆಗಳು ಅರ್ಥವಾಗುತ್ತವೆ. ಆದರೆ ನಿರ್ದಿಷ್ಟವಾಗಿ ರಾಜ್ಯದ ಗಡಿ ಭಾಗಗಳಲ್ಲಿ ಸ್ವಲ್ಪ ಗೊಂದಲ ಇರುವ ಬಗ್ಗೆ ಪ್ರಶ್ನೆ ಕೇಳಿದ್ದಕ್ಕೆ ಮೊದಲನೆಯ ತಿಂಗಳು ಗೊಂದಲ ಆಗಿದ್ದು, ಅದು ನಿವಾರಣೆಯಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಲಭ್ಯವಿರುವ ಮಾಹಿತಿ ಪ್ರಕಾರ ಪ್ರಮುಖವಾಗಿ ಗಡಿ ತಾಲ್ಲೂಕುಗಳ ಕೊನೆಯ ಭಾಗಗಳಲ್ಲಿ ಹಾಲು ವಿತರಣೆ ಮಾಡಬೇಕೆಂದರೆ ಸಮಸ್ಯೆಯಾಗಿರುವುದನ್ನು ದಯವಿಟ್ಟು ಗಮನಿಸಬೇಕು ಮತ್ತು ಪರಿಹಾರ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಕ್ಷೀರಭಾಗ್ಯ ಎಂದ ಕೂಡಲೇ ಎಲ್ಲರಿಗೂ ಹಾಲು ಕೊಡುತ್ತಾರೆ ಎಂದು ಅಂದುಕೊಂಡಿದ್ದೆವು. ಆದರೆ ಹಾಲಿನ ಬದಲು ಹಾಲಿನ ಪುಡಿಯ ಭಾಗ್ಯ ಆಗಿದೆ. ಏಕೆಂದರೆ ಶಾಲೆಗಳಿಗೆ ಹಾಲಿನ ಪುಡಿಯನ್ನು ಕೊಡುತ್ತಾರೆ. ತಮಗೆ ತಿಳಿಸಿದಿರುವಂತೆ ಅನೇಕ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಕುಡಿಯುವ ನೀರಿನ ಪೂರೈಕೆ ಕಷ್ಟವಾಗುತ್ತಿದೆ. ಮಕ್ಕಳಿಗೆ ಹಾಲನ್ನು ಕೊಡುವಾಗ ಒಳ್ಳೆಯ ಗುಣಮಟ್ಟದ ನೀರನ್ನು ಕೊಡದಿದ್ದರೆ ಬಹಳ ಸಮಸ್ಯೆಯಾಗುತ್ತದೆ. ಕ್ಷೀರಭಾಗ್ಯ ಯೋಜನೆ ಅತ್ಯಂತ ಯಶಸ್ವಿಯಾಗಬೇಕೆಂದರೆ ಎಲ್ಲಾ ಶಾಲೆಗಳಲ್ಲಿ ಒಳ್ಳೆಯ ಗುಣಮಟ್ಟದ ನೀರು ಪೂರೈಕೆ ಮಾಡಬೇಕು. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು raw water ಅನ್ನೇ ಕೊಡುತ್ತಿದ್ದು,

ಅದನ್ನು ಪರಿಷ್ಕರಣೆ ಮಾಡುತ್ತಿರಲಿಲ್ಲ ಎಂದು ಹೇಳುತ್ತಿದ್ದರು. ಹೆಚ್ಚಿನ ಶಾಲೆಗಳಲ್ಲಿ ಈ ಸಮಸ್ಯೆ ಇದ್ದು, ಹಾಲಿನ ಪುಡಿಗೆ ಸೇರಿಸಲು ನೀರು ಪ್ರಮುಖವಾದ ಒಂದು ಅಂಗ ಆಗಿರುವುದರಿಂದ ಶುದ್ಧ ನೀರನ್ನು ಪೂರೈಕೆ ಮಾಡುತ್ತಾರೆಯೇ? ಎರಡನೆಯದಾಗಿ ಹಾಲಿನ ಪುಡಿ ಬದಲು ಒಳ್ಳೆಯ ಶುದ್ಧ ಹಾಲನ್ನು ಕೊಡಲು ಸಾಧ್ಯತೆ ಇದೆಯೇ? ಮೂರನೆಯದಾಗಿ ಶಾಲೆಗಳಲ್ಲಿ ಶಿಕ್ಷಕರು ಪಾಠ ಮಾಡುವ ಕೆಲಸವನ್ನು ಬಿಟ್ಟು ಸಾಕಷ್ಟು ಬೇರೆ ಬೇರೆ ಕೆಲಸಗಳು ಇರುತ್ತವೆ. ಮಧ್ಯಾಹ್ನ ಬಿಸಿಯೂಟದ ಯೋಜನೆ ಇದ್ದು, ಈಗ ಹಾಲಿನ ಯೋಜನೆ ಬಂದಿದೆ. ನಾನು ಮೂರ್‍ನಾಲ್ಕು ಶಾಲೆಗಳಿಗೆ ಹೋಗಿದ್ದಾಗ ಅಲ್ಲಿನ ಮಕ್ಕಳನ್ನು line ನಲ್ಲಿ ನಿಲ್ಲಿಸಿ, ಹಾಲನ್ನು ಕೊಡಬೇಕೆಂದರೆ ಒಂದು period waste ಆಗುತ್ತಿದೆ ಎಂಬ ಬಗ್ಗೆ ಹೇಳಿದರು. ಹಾಗಾಗಿ ಶಿಕ್ಷಕರಿಗೆ ಈ ಜವಾಬ್ದಾರಿ ಹಂಚದೇ ಮತ್ತು ಬೋಧನಾ ಅವಧಿಗೆ ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತಾರೆಯೇ? ಈ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು. ಕೊನೆಯ ಭಾಗ ಮೊರಾರ್ಜಿ ಶಾಲೆಗಳ ಬಗ್ಗೆ ಅವರ ಇಲಾಖೆಗೆ ಬರುವುದಿಲ್ಲ ಎಂಬುದು ಸ್ಪಷ್ಟವಾಗಿದೆ. ಆದರೆ ಮೊನ್ನೆ ಕೆಮ್ಮಾಜಿ ಎಂಬಲ್ಲಿ ಮೊರಾರ್ಜಿ ಶಾಲೆಗೆ ಹೋಗಿದ್ದಾಗ ಅಲ್ಲಿನ ವಿದ್ಯಾರ್ಥಿಗಳು 'ಎಲ್ಲಾ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆ ಕೊಡುತ್ತಾರೆ, ನಮಗೂ ಹಾಲು ಸಿಗುತ್ತದೆಯೇ?' ಎಂದು ಕೇಳಿದರು. ನಮ್ಮ ರಾಜ್ಯದಲ್ಲಿ ಸುಮಾರು 1.5 ಲಕ್ಷ ಮೊರಾರ್ಜಿ ಶಾಲೆಯ ಮಕ್ಕಳಿದ್ದು, ಅವರಿಗೂ ಮಧ್ಯಾಹ್ನ ಕ್ಷೀರಭಾಗ್ಯ ಯೋಜನೆಯನ್ನು ವಿಸ್ತರಿಸಲು ಸರ್ಕಾರವು ಆಲೋಚನೆ ಮಾಡುತ್ತಿದೆಯೇ? ಈ ವಿವರಗಳನ್ನು ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಾಲು ವಿರತಣೆ ಬಗ್ಗೆ ಪ್ರಶ್ನೆ ಕೇಳಿದ್ದು, ಪ್ರಾರಂಭದಲ್ಲಿ ಬಿಸಿಯೂಟ ಮತ್ತು ಕ್ಷೀರಭಾಗ್ಯವನ್ನು ಪ್ರತ್ಯೇಕವಾಗಿ ಮಾಡುವಾಗ ಸ್ವಲ್ಪ ಸಮಸ್ಯೆ ಆಯಿತು. ಆ ಸಂದರ್ಭದಲ್ಲಿ ಅಕ್ಷರ ದಾಸೋಹಕ್ಕೆ ಇದನ್ನು link ಮಾಡಿದರೆ ಅನುಕೂಲವಾಗುತ್ತದೆ ಎನ್ನುವ ಕಾರಣ ಇಟ್ಟುಕೊಂಡು K.M.F ನಿಂದ ಎಲ್ಲಾ peripheral schools ಗೆ ಪೂರೈಕೆ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ

K.M.F. ನವರಿಗೆ ನಾವು ಮಾಡುತ್ತಿರುವ ಅಕ್ಷರ ದಾಸೋಹಕ್ಕೆ ಪೂರೈಕೆ ಮಾಡಿದರೆ ಅದರ ಮೂಲಕವೇ ಪೂರೈಕೆ ಮಾಡುತ್ತೇವೆ ಎಂದು ಹೇಳಿದ್ದೇವೆ. ಆರಂಭದಲ್ಲಿ ಮೂರ್ನಾಲ್ಕು ತಿಂಗಳು ಸಮಸ್ಯೆಯಿದ್ದು, packets ಇರಲಿಲ್ಲ. ನಾವು 25 ಕೆ.ಜಿ ಹಾಲಿನ ಪುಡಿ ಕಳುಹಿಸಿದಾಗ ಕಡಿಮೆ ಸಂಖ್ಯೆಯ ಮಕ್ಕಳು ಮತ್ತು ಜಾಸ್ತಿ ಸಂಖ್ಯೆಯ ಮಕ್ಕಳ ಹೊಂದಾಣಿಕೆಯಾಗದೇ ಸಮಸ್ಯೆಯಾಯಿತು. ಆನಂತರ 1 ಕೆ.ಜಿ ಮತ್ತು 5 ಕೆ.ಜಿ packet ಮೂಲಕ ಮಾಡಿದಾಗ ಸುಧಾರಣೆಯಾಯಿತು. ಇದಲ್ಲದೇ ಕೆಲವು ಸಂಘ ಸಂಸ್ಥೆಗಳು ಕ್ಷೀರಭಾಗ್ಯವನ್ನು ಅನುಷ್ಠಾನಗೊಳಿಸಲು preparations ಇಲ್ಲದೇ ಕಾಲಾವಕಾಶ ಬೇಕು ಎಂದು ಮನವಿಯನ್ನು ಮಾಡಿಕೊಂಡರು. ಏಕೆಂದರೆ ಕ್ಷೀರಭಾಗ್ಯಕ್ಕೆ ಪತ್ಯೇಕ ವ್ಯವಸ್ಥೆ ಮಾಡಬೇಕು. ಅವರು ಒಂದು ಕಡೆ ತಯಾರು ಮಾಡಿ ಇತರೆ ಕಡೆ ಪೂರೈಕೆ ಮಾಡುವುದು. ಇದೇ ರೀತಿ ಹಾಲನ್ನು ಪೂರೈಕೆ ಮಾಡುವುದು ಕಷ್ಟ ಇದೆ. ಹಾಗಾಗಿ ಕೆಲವು ಕಡೆ ತೊಂದರೆಯಾಗಿದೆ. ಆದರೆ ಇಡೀ ರಾಜ್ಯದಲ್ಲಿ ನಿರ್ದಿಷ್ಟವಾಗಿ ಇಂತಹ ಕಡೆ ತಲುಪಲಿಲ್ಲ, ಮಾಡಲಿಲ್ಲ ಎಂಬ ಪಿರ್ಯಾದುಗಳು ಇಲ್ಲಿಯವರೆವಿಗೂ ನೇರವಾಗಿ ಬಂದಿಲ್ಲ. ಪ್ರಾರಂಭದಲ್ಲಿ ಒಂದಷ್ಟು ಸಮಸ್ಯೆಗಳನ್ನು ಎದುರಿಸಿದ್ದು, ಅನುಷ್ಠಾನದಲ್ಲಿ ಇಂತಹ ಸಮಸ್ಯೆಗಳು ಬರುತ್ತವೆ. ಆದರೆ ಇರುವ ಲೋಪದೋಷಗಳನ್ನು ಸರಿಪಡಿಸುತ್ತೇವೆ. ಮಾನ್ಯ ಸದಸ್ಯರು ಗಡಿ ಭಾಗಗಳ ವಿಚಾರವನ್ನು ಪ್ರಸ್ತಾಪ ಮಾಡಿದರು. ಯಾವುದೇ ದೂರುಗಳು ಬಂದರೂ ತಕ್ಷಣವೇ ಸರಿಪಡಿಸುವ ಕೆಲಸವನ್ನು ಮಾಡುತ್ತೇನೆ. ಇನ್ನು ಕೊನೆಯ ಪ್ರಶ್ನೆಗೆ ಉತ್ತರವಾಗಿ ಅದು ನಮ್ಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಇದರ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ಜೊತೆ ಮಾತನಾಡಿ ನಂತರ ಅದರ ಬಗ್ಗೆ ಯೋಚನೆ ಮಾಡುತ್ತೇವೆ. ಇನ್ನು ಕೆಲವು ವಿಷಯಗಳ ಬಗ್ಗೆ ನಮ್ಮ ಗಮನಕ್ಕೆ ಬಂದಿದ್ದು, ಕಳೆದ 20-25 ವರ್ಷಗಳಿಂದ ಡಿ–ಗುಂಪಿನ ನೌಕರರನ್ನು ನೇಮಕಾತಿ ಮಾಡಿಕೊಂಡಿಲ್ಲ. ಅದೇ ರೀತಿ non-teaching staff ಅನ್ನು ಶಿಕ್ಷಣ ಇಲಾಖೆಗೆ ತೆಗೆದುಕೊಂಡಿಲ್ಲ. ಈ ಎಲ್ಲಾ ಕಾರ್ಯಗಳನ್ನು ಉಪನ್ಯಾಸಕ, ಬೋಧಕ ವರ್ಗದವರು ನಿರ್ವಹಿಸುತ್ತಿದ್ದು, ಇಲ್ಲೂ ಸ್ವಲ್ಪ ಅಡೆ–ತಡೆ ಆಗಿದೆ ಎಂಬುದು ಇಲಾಖೆಯ ಗಮನದಲ್ಲಿದೆ. ಆರ್ಥಿಕ ಹೊರೆಯನ್ನು

ಅವಲೋಕನ ಮಾಡಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಜೊತೆ ಒಮ್ಮೆ ಭೇಟಿ ಮಾಡಿದಾಗ ಈ ಸಮಸ್ಯೆ ಇಟ್ಟಿದ್ದೆನು. ಆದರೆ ಇದನ್ನು ಯಾವರೀತಿ ಪರಿಹರಿಸಬೇಕು ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ಪ್ರಯತ್ನ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಶಾಲೆಯ ಮಕ್ಕಳಿಗೆ ಬೆಳಗಿನ ಒಂದು period ಹೋಗುತ್ತದೆ. ಬಿಸಿ ಹಾಲನ್ನು ಕೊಟ್ಟು ಆ ಮಕ್ಕಳು ಹಾಲನ್ನು ಕುಡಿದು ಶಾಲೆಗೆ ಹೋಗಬೇಕಾದರೆ ಸುಮಾರು ಒಂದು period ಹೋಗುತ್ತದೆ. ಮಾನ್ಯ ಸಚಿವರು ಉಲ್ಲೇಖಿಸಿದಂತೆ ಯಾವ staff ಇಲ್ಲದೇ ಇರುವುದರಿಂದ ಮಕ್ಕಳು ಕ್ಲಾಸ್‌ಗೆ ಹೋಗುವುದಕ್ಕೆ ಆಗುವುದಿಲ್ಲ. ಶಾಲೆಗಳಲ್ಲಿ ಶಿಕ್ಷಕರೇ ಇದನ್ನು ನಿಭಾಯಿಸುವ ಅನಿವಾರ್ಯತೆ ಇದೆ. ಮಕ್ಕಳಿಗೆ ಒಂದು period ಹೋಗುತ್ತದೆ ಮತ್ತು ಶಿಕ್ಷಕರು ಏನೆಲ್ಲಾ ಕೆಲಸ ಮಾಡಬಹುದು, ಇದಲ್ಲದೇ ಅಡುಗೆ ಮನೆಯಲ್ಲಿ ಕೆಲಸಕ್ಕೆ ಇರುವ ಆ ಹೆಣ್ಣುಮಗಳಿಗೆ ಇದನ್ನು ಕೊಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಆಕೆ ಮಧ್ಯಾಹ್ನ ಊಟಕ್ಕೆ ತಯಾರು ಮಾಡಬೇಕು. ಶಾಲೆಗಳಲ್ಲಿ ಬೇರೆ ಯಾರೂ ಇರುವುದಿಲ್ಲ. ಒಂದು period waste ಆಗುತ್ತಿದೆ ಮತ್ತು ಇದಕ್ಕೆ ಶಿಕ್ಷಕರನ್ನು ಉಪಯೋಗ ಮಾಡುತ್ತಿದ್ದಾರೆ. ಇದಕ್ಕೆ ಬೇರೆ ವ್ಯವಸ್ಥೆ ಮಾಡದಿದ್ದರೆ ಶಿಕ್ಷಣಕ್ಕೆ ಬರುವ ಮಕ್ಕಳಿಗೆ ಸ್ವಲ್ಪ ಸಮಸ್ಯೆ ಆಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ವಿಚಾರ ಏನೆಂದರೆ ಕ್ಷೀರಭಾಗ್ಯ ಯೋಜನೆಯಲ್ಲಿ ಹಾಲಿನ powder ಅನ್ನು ಕೊಡುವುದರಿಂದ ಬಹಳಷ್ಟು ಮಕ್ಕಳು ಇದನ್ನು ಕುಡಿಯುವುದಿಲ್ಲ. ಏಕೆಂದರೆ ವಾಸನೆ ಇರುತ್ತದೆ ಎಂದು ಕುಡಿಯುತ್ತಿಲ್ಲ. ಇದರ ಪರಿಣಾಮವಾಗಿ ಶಾಲೆಗಳ ಸುತ್ತಮುತ್ತಲಿನ ಅಂಗಡಿಗಳಲ್ಲಿ ಒಂದು ರೂಪಾಯಿ ಕೊಟ್ಟರೆ lnstant Coffee ಬರುತ್ತದೆ. ಆ ಮಗು ಪ್ರತಿದಿನ ಆ powder ತೆಗೆದುಕೊಂಡು ಈ ಹಾಲಿಗೆ mix ಮಾಡಿಕೊಂಡು ಕುಡಿಯುವುದು ನಡೆಯುತ್ತಿದೆ. ಆದ್ದರಿಂದ ವಾಸನೆಯಿಂದ ಮಕ್ಕಳು ಕುಡಿಯುವುದಿಲ್ಲ ಎಂಬ ದೂರು ಬರಬಾರದು. ಆ ಹಿನ್ನೆಲೆಯಲ್ಲಿ flavored milk ಮಾಡುವ ಸಲುವಾಗಿ ಸರ್ಕಾರದಿಂದ

ಏನಾದರೂ ಸಹಾಯ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತಾರೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕಿಮ್ಮನೆ ರತ್ನಾಕರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವುದನ್ನು ಪರಿಶೀಲನೆ ಮಾಡುತ್ತೇನೆ. ಆದರೆ ಇಲ್ಲಿಯವರೆಗೂ ನಿರ್ದಿಷ್ಟವಾಗಿ ಯಾವುದೇ ಲಿಖಿತ ದೂರುಗಳು ಬಂದಿಲ್ಲ. ಖಂಡಿತವಾಗಿ ಮಾನ್ಯ ಸದಸ್ಯರ ಸಲಹೆಗಳನ್ನು ಪರಿಶೀಲನೆ ಮಾಡಿ ಉತ್ತಮಪಡಿಸಲು ಪ್ರಯತ್ನ ಮಾಡುತ್ತೇನೆ.

**ಕುಡಿಯುವ ನೀರಿನ ಸಮಸ್ಯೆ ಕುರಿತು**

**997; ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಅ)** ಬೆಳಗಾವಿ ಜಿಲ್ಲೆಯ ಗ್ರಾಮೀಣ ಭಾಗದ ಹಳ್ಳಿಗಳಲ್ಲಿ ಎಷ್ಟು ಕಡೆ ಕುಡಿಯುವ ನೀರಿನ ಗಂಭೀರ ಸಮಸ್ಯೆ ಉಂಟಾಗಿದೆ;

**ಆ)** ಇದರಲ್ಲಿ ಕೇಂದ್ರ ಸರ್ಕಾರದಿಂದ ನೆರೆವಿನ ವಿವಿಧ ಯೋಜನೆಗಳಡಿಯಲ್ಲಿ ಪ್ರತಿ ವರ್ಷ ಬಂದಿರುವ ಅನುದಾನವೆಷ್ಟು;

**ಇ)** ಸಮಸ್ಯೆ ಉಂಟಾಗಿದ್ದಲ್ಲಿ, ಶಾಶ್ವತ ಪರಿಹಾರದ ಬಗ್ಗೆ ಸರ್ಕಾರ ಯಾವುದಾದರು ಕ್ರಿಯಾ ಯೋಜನೆ ತಯಾರಿಸಿದೆಯೇ; ತಯಾರಿಸಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು?

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು)**

**ಅ)** ಬೆಳಗಾವಿ ಜಿಲ್ಲೆಯ 122 ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ.

**ಆ)** ಕೇಂದ್ರ ಸರ್ಕಾರದಿಂದ ಕುಡಿಯುವ ನೀರು ಸರಬರಾಜು ಕಾರ್ಯಕ್ರಮಕ್ಕಾಗಿ ಬಿಡುಗಡೆಯಾದ ಅನುದಾನದ ವಿವರಗಳು.

| ಕ್ರ. ಸಂ | ವರ್ಷ | ಲೆಕ್ಕಶೀರ್ಷಿಕೆ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| **1.** | 2012-13 | NRDWP | 5267.50 |
| **2.** | 2013-14 (ಈವರೆವಿಗೂ) | NRDWP (ಕೇಂದ್ರ ಸರ್ಕಾರ) | 2545.07 |
| **3.** | 2012-13 | ಕಾಂಟಿಜೆನ್ಸಿ (ಕೇಂದ್ರ+ರಾಜ್ಯ) | 1030.75 |
| **4.** | 2013-14 | ಕಾಂಟಿಜೆನ್ಸಿ (ಕೇಂದ್ರ+ರಾಜ್ಯ) | 300.00 |
| | | **ಒಟ್ಟು** | **9143.32** |

ಇ) ಒಂದು ಪಕ್ಷ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ, ತಕ್ಷಣವೇ ಟ್ಯಾಂಕರ್‌ಗಳ ಮೂಲಕ ನಿವಾಸಿಗಳಿಗೆ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. ಶಾಶ್ವತ ಪರಿಹಾರಕ್ಕೆ NRDWP ನಿಯಮಗಳ ಪ್ರಕಾರ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಕೆಳಕಂಡ ಬಹುಗ್ರಾಮ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ ಸಂ. | ತಾಲ್ಲೂಕು | ಯೋಜನೆಗಳ ಸಂ. | ಅಂದಾಜು ಮೊತ್ತ |
|---|---|---|---|
| 1. | ಅಥಣಿ | 9 | 7980.21 |
| 2. | ಬೆಳಗಾವಿ | 6 | 8285.75 |
| 3. | ಬೈಲಹೊಂಗಲ | 5 | 6637.81 |
| 4. | ಚಿಕ್ಕೋಡಿ | 21 | 8707.16 |
| 5. | ಗೋಕಾಕ | 5 | 1458.47 |

| | | | |
|---|---|---|---|
| 6. | ಹುಕ್ಕೇರಿ | 6 | 3500.08 |
| 7. | ರಾಮದುರ್ಗ | 4 | 4796.88 |
| 8. | ರಾಯಬಾಗ | 5 | 5146.69 |
| 9. | ಸವದತ್ತಿ | 4 | 5167.03 |
| | **ಒಟ್ಟು** | **65** | **51680.08** |

**ಶ್ರೀ ವೀರಕುಮಾರ್ ಅಪ್ಪಾಸ್ತೋ ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಯಲ್ಲಿ 122 ಹಳ್ಳಿಗಳನ್ನು 'villages with scarcity of water, problematic villages for drinking Water" ಎಂದು identify ಮಾಡಿದ್ದಾರೆ. ನಮ್ಮ ಸರ್ಕಾರ ಬಂದು 6 ತಿಂಗಳು ಕಳೆದು ಪ್ರತಿ ವರ್ಷದಲ್ಲಿ ಬೆಳಗಾವಿಯಲ್ಲಿ ಅಧಿವೇಶನವನ್ನು ನಡೆಸುತ್ತಿದ್ದಾರೆ. ಇದು ನಾಲ್ಕನೆಯ ಅಧಿವೇಶನವಾಗಿದೆ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, 122 ಹಳ್ಳಿಗಳ ಸಮಸ್ಯೆಗಳನ್ನು ಬಗೆಹರಿಸಲು time bound programme ಹಾಕಿಕೊಂಡು ಮಾಡಬೇಕು. ಪ್ರತಿ ತಾಲೂಕಿನಲ್ಲಿ Multi-Villages Scheme (M.V.S.) ಇವೆ. ಈ Multi-Villages Scheme ನಲ್ಲಿ success rate 20 ರಿಂದ 25 ಪರ್ಸೆಂಟ್ ಇದೆ. ಮುಂದಿನ ಅಧಿವೇಶನಕ್ಕೆ ಬರುವ ಸಮಯದೊಳಗೆ ನಮ್ಮ ಜಿಲ್ಲೆಯಲ್ಲಿ ಯಾವುದೇ ಹಳ್ಳಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರಬಾರದು ಎಂದು ವಿನಂತಿ ಮಾಡುತ್ತೇನೆ. ನಮ್ಮ ಸರ್ಕಾರ ಮೇಲೆ ನನಗೆ ವಿಶ್ವಾಸ ಇದೆ. ಮಾನ್ಯ ಸಚಿವರು ಬೆಳಗಾವಿ ಜಿಲ್ಲೆಯ ಬಗ್ಗೆ ಕಾಳಜಿ ವಹಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮುಖ್ಯವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದು, ಬೆಳಗಾವಿಯ ಅನೇಕ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಲ್ಲಿ ಆರೇಳು ಗ್ರಾಮಗಳನ್ನು ಕೂಡಿಸಿ ಮಾಡಿದ್ದಾರೆ. ಆದರೆ ಬಹುಗ್ರಾಮ ಯೋಜನೆಗಳಲ್ಲಿ ಅನೇಕ ಯೋಜನೆಗಳು ಇವತ್ತು defunct ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? Unstarred

questionಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಸುಮಾರು ಹತ್ತದಿನ್ನೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಬಹುಗ್ರಾಮ ಯೋಜನೆಗಳನ್ನು ಮಾಡಿದ್ದಾರೆ. ಒಮ್ಮೆ ಆ ಗ್ರಾಮಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಬಹುಗ್ರಾಮ ಯೋಜನೆ ಮಾಡಿದ ನಂತರ ಬೇರೆ ಯಾವುದೇ ಯೋಜನೆಗಳಡಿ ಆ ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡಲು ಆಗುವುದಿಲ್ಲ. ಪುನಃ ಆ ಗ್ರಾಮಕ್ಕೆ ಬೋರ್‌ವೆಲ್ ಅಥವಾ ಮತ್ತೊಂದನ್ನು ಕೇಳಿದರೆ ಈಗಾಗಲೇ ಬಹುಗ್ರಾಮ ಯೋಜನೆಯಡಿ cover ಆಗಿರುವುದರಿಂದ, 'it is a covered village' ಎಂದು ಅಧಿಕಾರಿಗಳು ಹೇಳುತ್ತಾರೆ. ಒಂದು ಉದಾಹರಣೆ ಹೇಳಬೇಕೆಂದರೆ, ಖಡಕ್‌ಲಾಟ್ ಎಂಬ ಗ್ರಾಮಕ್ಕೆ ಏಳು ಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಮಾಡಿದ್ದಾರೆ, ಇದರಲ್ಲಿ ಕಡೆಯ ಗ್ರಾಮಗಳಾದ ಪಟ್ಟಣಕೋಡಿ ಮತ್ತು ವಾಳಕಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಆಗಿ 8 ವರ್ಷಗಳು ಕಳೆದಿವೆ. ಈ ಎರಡೂ ಗ್ರಾಮಗಳಿಗೆ ಇನ್ನೂ ನೀರು ಮುಟ್ಟದಿರುವ ಪರಿಸ್ಥಿತಿ ಇದೆ. ಇನ್ನೂ ಹೆಚ್ಚುವರಿಯಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಡುವ ಬಗ್ಗೆ ಹೇಳಿದ್ದಾರೆ. ಬಹುಗ್ರಾಮ ನೀರಿನ ಯೋಜನೆ ಮಾಡಿದ್ದರೂ ಆ ಗ್ರಾಮಗಳಿಗೆ ಕುಡಿಯುವ ನೀರು ಮುಟ್ಟದೇ ಇರುವ ಪರಿಸ್ಥಿತಿ ಇದೆ. ಮಾನ್ಕಾಪುರ ಗ್ರಾಮ ಸೇರಿದಂತೆ ಅನೇಕ ಗ್ರಾಮಗಳಿಗೆ ಇಂತಹ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಸಚಿವರಲ್ಲಿ ಇಂತಹ ತೊಂದರೆ ಇರುವ ಗ್ರಾಮಗಳ ಸಮಸ್ಯೆಗಳನ್ನು ಪರಿಹರಿಸಬೇಕೆಂದು ವಿನಂತಿಸುತ್ತೇನೆ. ಇದನ್ನು ಗ್ರಾಮ ಪಂಚಾಯತಿಗಳು ನಿರ್ವಹಣೆ ಮಾಡುತ್ತಿವೆ. ಮೊದಲು ಇಂತಹ ಯೋಜನೆಗಳನ್ನು monitor ಮಾಡಲು Public Health Engineering ಎಂಬ ಇಲಾಖೆ ಇತ್ತು. ಇಂತಹ ಒಂದು ಇಲಾಖೆಯನ್ನು ಕುಡಿಯುವ ನೀರಿನ ಯೋಜನೆಯನ್ನು ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಕೇಳಿರುವ ಪ್ರಶ್ನೆ ಮತ್ತು ವ್ಯಕ್ತಮಾಡಿರುವ ಅಭಿಪ್ರಾಯಗಳನ್ನು

ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ. ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವಂತೆ ಬೆಳಗಾವಿ ಜಿಲ್ಲೆಯಲ್ಲಿ best ಇವೆ ಮತ್ತು worst ಇವೆ. ಬಹಳ ಸಮೀಪ ಇರುವ ಮಲ್ಲಮ್ಮನ ಬೆಳವಡಿ ಗ್ರಾಮದಲ್ಲಿ 100% tap water

is supplied to the houses and all are metered. It is the best water Supplied village. ಅದೇ ರೀತಿ ಅಥಣಿ ತಾಲ್ಲೂಕಿನ ಶಿರಗುಪ್ಪ ಸಹ ಇದೆ. ಮಾನ್ಯ ಕವಟಗಿಮಠರವರು ಹೇಳಿದಂತೆ ಕೆಲವು M.V.S. ಎಲ್ಲಾ defunct ಆಗಿವೆ. ಕೆಲವು ರಿಪೇರಿ ಆಗಬೇಕಾಗಿದ್ದು, ಕೆಲವನ್ನು ಅರ್ಧ ಮಾಡಿ ಹಾಗೆ ಬಿಟ್ಟಿದ್ದಾರೆ. ಕೆಲವರು contract ತೆಗೆದುಕೊಂಡು ಯಾವುದರಲ್ಲಿ ಲಾಭ ಬರುತ್ತದೋ, ಅದನ್ನು ಮಾಡಿದ್ದಾರೆ, ಉಳಿದಿರುವುದನ್ನು ಹಾಗೆ ಬಿಟ್ಟಿದ್ದಾರೆ. ಇವೆಲ್ಲವೂ ಆಗಿವೆ. ಆದರೆ ಅವುಗಳನ್ನು ಪೂರ್ಣಗೊಳಿಸುವ ಬಗ್ಗೆ ಸರ್ಕಾರವು ಗಂಭೀರವಾಗಿ ನೋಡುತ್ತದೆ. ನಮ್ಮ M.V.S. ಎಲ್ಲೆಲ್ಲಿ ರಿಪೇರಿ ಆಗಬೇಕೋ, ಅದನ್ನು ಮಾಡುವುದಕ್ಕೆ ಸಹ N.R.D.W.P. (National Rural Drinking Water Programme) ನಿಂದ ಹಣಕಾಸು ಲಭ್ಯವಿದ್ದು, ಹಣದ ಕೊರತೆ ಇಲ್ಲ. ಆದರೆ ಕೆಲಸಗಾರರ ಕೊರತೆ ಆಗಿದ್ದು ನಿಜ. 122 ಸಮಸ್ಯಾತ್ಮಕ ಹಳ್ಳಿಗಳು ಇವೆ. ಮಾನ್ಯ ವೀರಕುಮಾರ್ ಪಾಟೀಲರು ಪ್ರಶ್ನೆ ಕೇಳಿದ್ದಾರೆ. ಅವರು ನಮ್ಮ ಹತ್ತಿರ ಜಗಳ ಆಡಿದರು. ನಮ್ಮ ಅಧಿಕಾರಿಗಳ ಜೊತೆ ಮಾತನಾಡುವಾಗ ಮಾನ್ಯ ಸದಸ್ಯರು ಬಂದು ಏನೇನೋ ಕರಾರುಗಳನ್ನು ಹೇಳುತ್ತಿದ್ದರು. ಆಗ ಪ್ರಶ್ನೆಗೆ ಉತ್ತರ ಸಿಕ್ಕಿದೆ ಎಂದು ಅಂದುಕೊಂಡಿದ್ದೆವು. ಆದರೆ ನಮಗೆ time bound programme ಬಗ್ಗೆ ಹೇಳಿದ್ದು, ಮುಂದಿನ ಬೆಳಗಾವಿ ಅಧಿವೇಶನ ನಡೆಯುವುದರೊಳಗೆ ಒಂದು ಸಮಸ್ಯಾತ್ಮಕ ಹಳ್ಳಿ ಇರಬಾರದು ಎಂದು ಹೇಳಿದ್ದಾರೆ. N.R.D.W.P. ನೋಡುವ ನಿರ್ದೇಶಕರಾದ ಶ್ರೀ ಸಿಂಗ್‌ರವರ ಹಿರಿತನದಲ್ಲಿ ಒಂದು ತಂಡ ಮಾಡಿ, ಈ 122 ಸಮಸ್ಯಾತ್ಮಕ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಮತ್ತು ನಿಂತುಹೋಗಿರುವ ಹಾಗೂ defunct ಆಗಿರುವ M.V.S. ಗಳನ್ನು ರಿಪೇರಿ ಮಾಡುವ ಕೆಲಸವನ್ನು ಅವರ ಮೇಲ್ವಿಚಾರಣೆಯಲ್ಲಿ ಮಾಡಿಸಿ, ಮುಂದಿನ ನವೆಂಬರ್ 1ನೇ ತಾರೀಖಿನೊಳಗೆ ಯಾವುದೇ ಸಮಸ್ಯಾತ್ಮಕ ಹಳ್ಳಿಗಳು ಇರಬಾರದು. ಇದನ್ನು ನಮ್ಮ C.E.0.

ನೋಡಬೇಕೆಂಬುದು ನಿಜ. ಆದರೆ ಬಹುಶ: ಹಣಕಾಸಿನ ವ್ಯವಸ್ಥೆ ಹಾಗೂ ಇನ್ನೂ ಹೆಚ್ಚು ಒತ್ತು ಕೊಡಬೇಕೆಂಬ ದೃಷ್ಟಿಯಿಂದ ನಮ್ಮ ನಿರ್ದೇಶಕರನ್ನು ಮೇಲ್ವಿಚಾರಣೆ ಮಾಡಲು ಸೂಚನೆ ಕೊಡುತ್ತೇನೆ.

**ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್:–** ಮೊದಲು ಗ್ರಾಮೀಣ ವಿಕಾಸ್ ಇಲಾಖೆಯಲ್ಲಿ Public Health Engineering ಎಂಬ ಒಂದು ಇಲಾಖೆ ಇತ್ತು. They used to take care of all borewells and all water Supply schemes. ಈ ಇಲಾಖೆ ಪ್ರಾರಂಭವಾಗಬೇಕು, ಏಕೆಂದರೆ ಗ್ರಾಮ ಪಂಚಾಯಿತಿಗಳ ಪರಿಸ್ಥಿತಿ ಬಹಳ ಕೆಟ್ಟಿದ್ದು, ಆರ್ಥಿಕ ಪರಿಸ್ಥಿತಿ sound ಇಲ್ಲ. ಅವರಿಗೆ electricity bill ಮತ್ತು ನೌಕರರ ಪಗಾರಕ್ಕೆ ಹಣ ಸಾಕಾಗುತ್ತದೆ. ಉಳಿಕೆ ಏನೂ ಆಗುವುದಿಲ್ಲ. ಮಾನ್ಯ ಸಚಿವರಲ್ಲಿ ಈ ವಿನಂತಿ ಮಾಡುತ್ತೇನೆ, ಇದನ್ನು ಪರಿಶೀಲನೆ ಮಾಡಬೇಕು.

**ಶ್ರೀ ಹೆಚ್.ಕೆ.ಪಾಟೀಲ್:–** ಆಯಿತು.

**ಬಳ್ಳಾರಿ ಜಿಲ್ಲೆಯ ಕುಡಿಯುವ ನೀರಿನ ಯೋಜನೆ ವ್ಯಾಪ್ತಿಯ ಕೆರೆಗಳ ಕುರಿತು.**

**916; ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**1)** ಬಳ್ಳಾರಿ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ದುರಸ್ಥಿಗೊಳಿಸಿದ ಕೆರೆಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು);

**2)** ಈ ಕೆರೆಗಳ ದುರಸ್ತಿಗೆ ಬಿಡುಗಡೆಯಾದ ಮೊತ್ತವೆಷ್ಟು; (ತಾಲ್ಲೂಕುವಾರು – ಕೆರೆಗಳವಾರ ವಿವರ ನೀಡುವುದು);

**3)** ಪ್ರಸ್ತುತ ಕಾಮಗಾರಿಗಳು ಪೂರ್ಣಗೊಂಡಿದೆಯೇ ಇಲ್ಲದಿದ್ದಲ್ಲಿ ಯಾವ ಹಂತದಲ್ಲಿವೆ (ವಿವರ ನೀಡುವುದು);

**4)** ಈ ಬಾರಿಯ ಬೇಸಿಗೆಯಲ್ಲಿ ನೀರು ಹರಿಸಿ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಸಿದ್ದಗೊಂಡಿರುವ ವಾಸ್ತವ ಸ್ಥಿತಿಯೇನು (ವಿವರ ನೀಡುವುದು)?

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

**1)** ಕಳೆದ 5 ವರ್ಷಗಳಲ್ಲಿ, ಬಳ್ಳಾರಿ ಜಿಲ್ಲೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆಗಾಗಿ ಯಾವುದೇ ಕೆರೆಗಳ ನಿರ್ಮಾಣ/ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ.

**2)** ಅನ್ವಯಿಸುವುದಿಲ್ಲ.

**3)** ಅನ್ವಯಿಸುವುದಿಲ್ಲ.

**4)** ಅನ್ವಯಿಸುವುದಿಲ್ಲ.

**ಶ್ರೀ ಮೃತ್ಯುಂಜಯ ಜಿನಗಾ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡಿದ್ದು, ಬಳ್ಳಾರಿ ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ಕುಡಿಯುವ ನೀರಿಗಾಗಿ ದುರಸ್ಥಿಗೊಳಿಸಿದ ಕೆರೆಗಳ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗೆ " 5 ವರ್ಷಗಳಲ್ಲಿ ಯಾವುದೇ ರೀತಿಯ ದುರಸ್ಥಿ ಹಾಗೂ ನಿರ್ಮಾಣ ಕಾರ್ಯ ಕೈಗೊಂಡಿರುವುದಿಲ್ಲ" ಎಂದು ಉತ್ತರ ಹೇಳಿದ್ದಾರೆ. ಇನ್ನೊಂದು ಪ್ರಶ್ನೆ "ಈ ಬಾರಿಯ ಬೇಸಿಗೆಯಲ್ಲಿ ನೀರು ಹರಿಸಿ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಸಿದ್ದಗೊಂಡಿರುವ ವಾಸ್ತವ ಸ್ಥಿತಿ ಏನು?" ಎಂಬ ಪ್ರಶ್ನೆಗೆ 'ಅನ್ವಯಿಸುವುದಿಲ್ಲ' ಎಂದು ಹೇಳಿದ್ದಾರೆ. ಮಾನ್ಯ ಸಚಿವರಲ್ಲಿ ಮನವಿ ಏನೆಂದರೆ, ನಮ್ಮ ಭಾಗದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ಪ್ರತಿವರ್ಷವೂ ನೋಡುತ್ತಾ ಬರುತ್ತಿದ್ದೇವೆ. ಇದಕ್ಕೆ ಸರಿಯಾದ ಕ್ರಮ ಆಗಬೇಕೆಂದು ಪ್ರಶ್ನೆ ಕೇಳಿದ್ದೇನೆ. ಭಯಂಕರ ಬಿಸಿಲು ಇರುವ ಪ್ರದೇಶದಲ್ಲಿ ದನಕರುಗಳು ಮಾತ್ರವಲ್ಲದೇ ಮನುಷ್ಯನಿಗೂ ನೀರಿನ ಕೊರತೆ ಎದ್ದು ಕಾಣುತ್ತಿರುವುದನ್ನು ನೋಡುತ್ತಿದ್ದೇವೆ. ಕುಡಿಯುವ ನೀರಿಗಾಗಿ ಕೆರೆಗಳ ನಿರ್ಮಾಣ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾಂತ್ರಿಕವಾಗಿ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಅಲ್ಲಿ ಯಾವ ಕೆರೆಗಳ ರಿಪೇರಿ ಇಲ್ಲ. ಪ್ರಶ್ನೆಗಳು ಮುಂದೆ ಉದ್ಭವಿಸುವುದಿಲ್ಲ ಎಂದು ಬಂದಿದೆ. ಮಾನ್ಯ ಸದಸ್ಯರು ಹೇಳಿದಂತೆ ಬಳ್ಳಾರಿಯಲ್ಲಿ ಕುಡಿಯುವ ನೀರಿನ ಅಭಾವ ತೀವ್ರವಾಗಿದ್ದು, ಎಲ್ಲೆಲ್ಲಿ ಬವಣೆಯನ್ನು ನೀಗಿಸುವುದಕ್ಕೆ ಯೋಜನೆಗಳನ್ನು ರೂಪಿಸುವಲ್ಲಿ ಸರ್ಕಾರ ಸಂಪೂರ್ಣ ಪ್ರಯತ್ನ ಮಾಡುತ್ತಿದೆ. ಇನ್ನೂ ಹೆಚ್ಚಿನ ಕೆಲಸ ಆಗಬೇಕೆಂದು ಮಾನ್ಯ ಸದಸ್ಯರು ಸೂಚಿಸಿದಲ್ಲಿ ಅವುಗಳನ್ನು ತೆಗೆದುಕೊಳ್ಳುತ್ತೇವೆ.

**ಸಾರಿಗೆ ಇಲಾಖೆಯಲ್ಲಿ ಸಂಗ್ರಹಿಸಲಾದ ವಾಹನ ತೆರಿಗೆ ಕುರಿತು.**

**632; ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)**

**ಅ)** ಸಾರಿಗೆ ಇಲಾಖೆಯಲ್ಲಿ ಈ ಹಣಕಾಸು ವರ್ಷದಲ್ಲಿ ಇಲ್ಲಿಯವರೆಗೆ ಸಂಗ್ರಹಿಸಿರುವ ವಾಹನ ತೆರಿಗೆ ಎಷ್ಟು; ದಂಡದ ಹಣವೆಷ್ಟು; (ತಿಂಗಳವಾರು ಮಾಹಿತಿ ನೀಡುವುದು);

**ಆ)** ರಾಜ್ಯದಲ್ಲಿ ಇರುವ ಆರ್.ಟಿ.ಓ ಚೆಕ್‌ಪೋಸ್ಟ್‌ಗಳ ಸಂಖ್ಯೆ ಎಷ್ಟು; ಅವು ಯಾವುವು (ಪಟ್ಟಿ ನೀಡುವುದು); ಈ ಎಲ್ಲ ಚೆಕ್‌ಪೋಸ್ಟ್ ಕಳೆದ 6 ತಿಂಗಳುಗಳಲ್ಲಿ ಸಂಗ್ರಹಿಸಿರುವ ವಾಹನ ತೆರಿಗೆ ಮತ್ತು ದಂಡದ ವಿವರ ನೀಡುವುದು.

**ಇ)** ಈ ಚೆಕ್‌ಪೋಸ್ಟ್‌ಗಳಲ್ಲಿ ಎಷ್ಟು ಬಾರಿ ಲೋಕಾಯುಕ್ತರ ದಾಳಿ ನಡೆದಿದೆ; (ದಾಳಿಯಲ್ಲಿ ದೊರೆತಿರುವ ಅಕ್ರಮ ಹಣದ ವಿವರ ಹಾಗೂ ಅದರ ಮೇಲೆ ತೆಗೆದುಕೊಂಡಿರುವ ಸಂಪೂರ್ಣ ಕ್ರಮದ ವಿವರ ನೀಡುವುದು)?

**ಶ್ರೀ ರಾಮಲಿಂಗಾರೆಡ್ಡಿ ( ಸಾರಿಗೆ ಸಚಿವರು)**

**ಅ)** ಪ್ರಸ್ತುತ ಸಾಲಿನಲ್ಲಿ ಸಂಗ್ರಹಿಸಿರುವ ತೆರಿಗೆ ಮತ್ತು ದಂಡದ ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಮಾಹೆಯ ಹೆಸರು | ತೆರಿಗೆ | ದಂಡ | ಒಟ್ಟು |
|---|---|---|---|---|
| 1 | ಏಪ್ರಿಲ್ | 303.10 | 2.55 | 305.65 |
| 2 | ಮೇ | 282.88 | 2.77 | 285.65 |
| 3 | ಜೂನ್ | 292.77 | 3.09 | 295.86 |
| 4 | ಜುಲೈ | 303.81 | 2.85 | 306.66 |
| 5 | ಆಗಸ್ಟ್ | 300.25 | 3.05 | 303.30 |
| 6 | ಸೆಪ್ಟೆಂಬರ್ | 329.91 | 3.15 | 333.06 |
| 7 | ಅಕ್ಟೋಬರ್ | 312.80 | 3.20 | 316.00 |
| | **ಒಟ್ಟು** | **2125.52** | **20.66** | **2146.18** |

**ಅ)** ರಾಜ್ಯದಲ್ಲಿ ಒಟ್ಟು 15 ಚೆಕ್‌ಪೋಸ್ಟ್‌ಗಳು ಇರುತ್ತವೆ. ಅವುಗಳ ವಿವರ ಈ ಕೆಳಕಂಡಂತಿವೆ.

1) ಅತ್ತಿಬೆಲೆ, 2) ನಂಗಲಿ 3) ಬಾಗೇಪಲ್ಲಿ 4) ಗೌರಿಬಿದನೂರು, 5) ರಾಯಲಪಾಡ್ 6) ಗುಂಡ್ಲುಪೇಟೆ 7) ಚಿಕ್ಕಹೊಳೆ ಡ್ಯಾಂ 8) ತಲಪಾಡಿ 9) ಆಳಂದ್ 10) ಹಗರಿ 11) ಝುಳಕಿ 12) ನಿಪ್ಪಾಣಿ 13) ರಾಮನಗರ 14) ಕಾಗವಾಡ ಮತ್ತು 15) ಹುಮನಾಬಾದ್.

**ಆ)** ರಾಜ್ಯದ ಚೆಕ್‌ಪೋಸ್ಟ್‌ಗಳಿಂದ ಕಳೆದ 6 ತಿಂಗಳುಗಳಿಂದ ಸಂಗ್ರಹಿಸಿದ ವಾಹನದ ತೆರಿಗೆ ಮತ್ತು ದಂಡದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ತನಿಖಾ ಠಾಣೆ ಹೆಸರು | ತೆರಿಗೆ | ದಂಡ | ಒಟ್ಟು |
|---|---|---|---|---|
| 1 | ಬಾಗೇಪಲ್ಲಿ | 213.43 | 29.08 | 242.51 |
| 2 | ನಂಗಲಿ | 147.154 | 137.37 | 284.52 |
| 3 | ಗೌರಿಬಿದನೂರು | 15.05 | 0.97 | 16.06 |
| 4 | ರಾಯಲಪಾಡ್ | 25.28 | 0.75 | 26.03 |
| 5 | ಅತ್ತಿಬೆಲೆ | 427.68 | 191.41 | 619.09 |
| 6 | ಗುಂಡ್ಲುಪೇಟೆ | 296.59 | 5.64 | 302.23 |
| 7 | ಚಿಕ್ಕಹೊಳೆ ಡ್ಯಾಂ | 200.00 | 2.23 | 202.23 |
| 8 | ತಲಪಾಡಿ | 228.97 | 5.15 | 234.12 |
| 9 | ನಿಪ್ಪಾಣಿ | 345.89 | 68.49 | 414.38 |
| 10 | ಝುಲ್ಕಿ | 108.06 | 381.04 | 489.10 |
| 11 | ರಾಮನಗರ | 55.75 | 3.44 | 59.19 |
| 12 | ಕಾಗವಾಡ | 26.67 | 1.43 | 28.10 |
| 13 | ಹುಮನಾಬಾದ್ | 245.70 | 32.64 | 278.34 |
| 14 | ಆಳಂದ್ | 14.70 | 3.64 | 18.34 |
| 15 | ಹಗರಿ | 18.81 | 5.05 | 23.86 |
| | **ಒಟ್ಟು** | **2369.77** | **868.33** | **3238.10** |

ಇ) ಈ ಚೆಕ್‌ಪೋಸ್ಟ್‌ಗಳ ಮೇಲೆ ಇದುವರೆವಿಗೂ 19 ಬಾರಿ ಲೋಕಾಯುಕ್ತರ ದಾಳಿ ನಡೆದಿರುತ್ತದೆ. ಈ ದಾಳಿಯಲ್ಲಿ ₹ 11,87,749 /– ಅಕ್ರಮ ಹಣ ದೊರೆತಿರುತ್ತದೆ. 17 ಪ್ರಕರಣಗಳು ವಿಚಾರಣಾ ಹಂತದಲ್ಲಿರುತ್ತದೆ ಹಾಗೂ 2 ಪ್ರಕರಣಗಳು ಮುಕ್ತಾಯಗೊಂಡಿರುತ್ತವೆ. ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

# ಅನುಬಂಧ–I

## ಮಾನ್ಯ ಲೋಕಾಯುಕ್ತ ದಾಳಿಗೆ ಒಳಗಾದ ಸಾರಿಗೆ ಇಲಾಖೆಯ ತನಿಖಾ ಠಾಣೆಯ ಪ್ರಕರಣಗಳು

| | ಕ್ರ. ಸಂ. | ಅಧಿಕಾರಿ /ನೌಕರರ ಹೆಸರು ಮತ್ತು ಪದನಾಮ | ಪ್ರಕರಣದ ಸಂಕ್ಷಿಪ್ತ ವಿವರ | ಟ್ರ್ಯಾಪ್ ಆದ ಹಣದ ಮೊತ್ತ (ರೂ.ಗಳಲ್ಲಿ) | ಅಮಾನತ್ತು ದಿನಾಂಕ/ | ಅಮಾನತ್ತು ತೆರವು ಗೊಳಿಸಿದ ದಿನಾಂಕ | ಇಲಾಖಾ ವಿಚಾರಣೆ/ ಕ್ರಿಮಿನಲ್ ಮೊಕದ್ದಮೆ ಪ್ರಾರಂಭಿಸಲಾಗಿದೆಯೇ? | ಅಭಿಯೋಜನೆ ಗೊಳಿಸಲು ಮಂಜೂರಾತಿ ನೀಡಲಾಗಿದೆಯೇ? | ಅಂತಿಮ ಆದೇಶ |
|---|---|---|---|---|---|---|---|---|---|
| | 1 | 2 | 3 | 4 | 5 | 6 | 7 | 8 | 9 |
| 1 | 1. | ಅಬ್ದುಲ್ ವಾಜಿದ್, ಸಹಾಯಕ, | ಹುಮ್ನಾಬಾದ್ ತನಿಖಾ ಠಾಣೆ ಯಲ್ಲಿ ರಾಜಸ್ವ ಸೋರಿಕೆ ಪಡಿಸಿ ಹೆಚ್ಚಿನ ಹಣ ಸಂಗ್ರಹಣೆ. | 27,155/- | 8-1-13 | -- | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಇಲ್ಲ | |
| | 2. | ಸಿ.ತಿಪ್ಪೇಸ್ವಾಮಿ, ಮೋವಾನಿ | | | | 4-2-13 | | | |
| | 3. | ಜಿ.ಎಲ್.ರಾಥೋಡ್, ಮೋವಾನಿ, | | | 8-1-13 | | | | |
| | 4. | ಅಬ್ದುಲ್ ರಷೀದ್, ವಾಹನ ಚಾಲಕ | | | | -- | | | |
| 2 | 5. | ಎಸ್.ಎಂ.ಭೋಂಕರ್, ಹಿಮೋವಾನಿ | ಕಾಗ್ವಾಳ್ ತನಿಖಾ ಠಾಣೆ ಯಲ್ಲಿ ರಾಜಸ್ವ ಸೋರಿಕೆ ಪಡಿಸಿ ಹೆಚ್ಚಿನ ಹಣ ಸಂಗ್ರಹಣೆ. | 1,22,495 | 04-01-08 | 24-06-09 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | ಆರೋಪ ಸಾಬೀತಾದ ಕಾರಣ ಸೇವೆಯಿಂದ ವಜಾಗೊಳಿಸಿದೆ. |
| | 6. | ಪ್ರಭುಸ್ವಾಮಿ ಹಿರೇಮಠ್ ಮೋವಾನಿ | | | | 24-06-09 | | | |
| 3 | 7. | ಎ.ಎಸ್.ಅಶೋಕ್ ಕುಮಾರ್, ಸಹಾಯಕ | ಕಾಗ್ವಾಳ್ ತನಿಖಾ ಠಾಣೆಯಲ್ಲಿ ರಾಜಸ್ವ ಸೋರಿಕೆ ಪಡಿಸಿ ಹೆಚ್ಚಿನ ಹಣ ಸಂಗ್ರಹಣೆ | 7,330/- | 18-02-10 | 23-07-10 | ಇಲಾಖಾ ವಿಚಾರಣೆಗೆ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿದೆ. | ಇಲ್ಲ. | -- |
| | 8. | ನಾಗಶೆಟ್ಟಿ, ಹಿ.ಮೋ.ವಾ.ನಿ. | | | | 13-09-10 | | | |
| | 9. | [illegible] | [illegible] | | | | | | |
| 4 | 10. | ಸಿ.ಡಿ.ಅರ್ಥಗ್ಯ, ಹಿಮೋವಾನಿ ಆರ್.ರಾಮಸ್ವಾಮಿ, ಮೋವಾನಿ | ಝಳಕಿ ತನಿಖಾಠಾಣೆ ಯ ರಾಜಸ್ವ ಸೋರಿಕೆ ಪಡಿಸಿ ಹೆಚ್ಚಿನ ಹಣ ಸಂಗ್ರಹಣೆ | 9,430/- | 15-2-10 | 23-7-10 / 13-9-10 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು. | -- |
| 5 | 11. | ಜಿ.ಎಸ್.ಕಿರೂರ್, ಹಿ.ಮೋ.ವಾ.ನಿ. | ಝಳಕಿ ತನಿಖಾಠಾಣೆ ಯಲ್ಲಿ ಅಕ್ರಮ ಸಂಭಾವನೆಯನ್ನು ಒತ್ತಾಯಿಸಿ ಪಡೆಯುತ್ತಿದ್ದ ಬಗ್ಗೆ. | 40,000 + 1700 | 4-8-11 | -- | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು. | -- |
| | 12. | ಆನಂದ ಗಮನಗಟ್ಟಿ ಮೋ.ವಾ.ನಿ., | | | | | | | |
| | 13. | ಪಿ.ಆರ್.ಇಬ್ಬರ್, ಜವಾನ | | | | | | | |
| 6 | 14. | ಎನ್.ನಂಜುಂಡಯ್ಯ ಹಿ.ಮೋ.ವಾ.ನಿ | ಅತ್ತಿಬೆಲೆ ತನಿಖಾ ಠಾಣೆ ಯಲ್ಲಿ ವಸೂಲಾದ ರಾಜಸ್ವ ಸಂಗ್ರಹಣೆಯಲ್ಲಿ ಕಡಿಮೆ ಹಣ ಇರುವ ಬಗ್ಗೆ ಮತ್ತು ವೈಯಕ್ತಿಕ ಹಣ ಘೋಷಣೆ ಮಾಡದಿರುವ ಬಗ್ಗೆ. | 5672/- | -- | -- | ಇಲಾಖಾ ವಿಚಾರಣೆಗೆ ಮುಗಿದಿದ್ದು, ಸರ್ಕಾರದ ಹಂತದಲ್ಲಿ ಬಾಕಿ ಇದೆ. | -- | -- |
| | 15. | ಸೈಯದ್ ರಸೂಲ್, ಹಿ.ಮೋ.ವಾ.ನಿ | | | | | | | |
| | 16. | ಐ.ಎ.ಖಾನ್, ಹಿ.ಮೋ.ವಾ.ನಿ. | | | | | | | |
| | 17. | ಎ.ಎಸ್.ನರೇಂದ್ರ, ಮೋ.ವಾ.ನಿ. | | | | | | | |
| 7 | 18. | ಅಜೀಜುಲ್ಲ, ಹಿಮೋವಾನಿ | ಕಾಗ್ವಾಳ್ ತನಿಖಾ ಠಾಣೆ ಯಲ್ಲಿ ರಾಜಸ್ವ ಸೋರಿಕೆ ಪಡಿಸಿ ಹೆಚ್ಚಿನ ಹಣ ಸಂಗ್ರಹಣೆ. | 5003/- | 2-11-12 | 1-3-13 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | -- |

--2--

| 1 | 2 | 3 | 4 | 5 | 6 | 7 | 8 | |
|---|---|---|---|---|---|---|---|---|
| [illegible] | ಎನ್.ಜೆ.ಹಿತ್ತಮಕ್ಕಿ ಹಿಮೋವಾನಿ | ಝುಲ್ಪಿ ತನಿಖಾ ಠಾಣೆಯಲ್ಲಿ ರಾಜಸ್ವ ಹೊರತುಪಡಿಸಿ ಹೆಚ್ಚಿನ ಹಣ ಸಂಗ್ರಹಣೆ. | 2,70,000 | 5-12-12 | 10-1-13 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | -- |
| 20. | ಜೆ.ವಾಸುದೇವ್, ಹಿಮೋವಾನಿ | | | | | | | |
| 21. | ಎಂ.ಎನ್.ಲಕ್ಷ್ಮೀ ನಾರಾಯಣಪ್ಪ, ಹಿ.ಮೋ.ವಾ.ನಿ., | ಝುಲ್ಪಿ ತನಿಖಾ ಠಾಣೆಯಲ್ಲಿ ಶೋಧನಾ ಸಮಯದಲ್ಲಿ ಹೆಚ್ಚಿನ ಹಣ ಪತ್ತೆ. | 79,175/- | -- | -- | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | -- | -- |
| 22. | ಡಿ.ಆರ್.ಸಾದಿಕ್ ಷರೀಫ್ ಹಿ.ಮೋ.ವಾ.ನಿ. | ಚಿಕ್ಕಹೊಳೆ ಡ್ಯಾಂ ತನಿಖಾ ಠಾಣೆಯಲ್ಲಿ ರಾಜಸ್ವ ಹೊರತು ಪಡಿಸಿ ಹೆಚ್ಚಿನ ಹಣ ಸಂಗಹಣೆ. | 2,21,265 | 28-5-12 | -- | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | -- |
| 23. | ಸುದರ್ಶನ್ ಎಸ್. ಜಾಧವ್, ಮೋವಾನಿ, | ನಿಪ್ಪಾಣಿ ಮಾಸಿಕ ಶಿಬಿರದಲ್ಲಿ ರಸೀದಿ ಮೊತ್ತಕ್ಕಿಂತ ಹೆಚ್ಚುವರಿ ಹಣ ಸಂಗ್ರಹಣೆ. | 53,675/- | 27-7-09 | ಇಲಾಖಾ ವಿಚಾರಣೆಗೆ ಮಾನ್ಯ ಉಪ ಲೋಕಾ ಯುಕ್ತ ರಿಗೆ ವಹಿಸಿದೆ. | | ಹೌದು. | -- |
| 24. | ರಾಮಪ್ಪ ಗುರುಪಾದಪ್ಪ ಬಂಡಿ, ಅಧೀಕ್ಷಕರು | | | | | | | |
| 25. | ಜಯರಾಮ್ ನಾನಪ್ಪ ನಾಯಕ್, ಮೋವಾನಿ | ಕಾಗವಾಡ ತನಿಖಾ ಠಾಣೆಯಲ್ಲಿ ರಾಜಸ್ವ ಹೊರತುಪಡಿಸಿ ಹೆಚ್ಚಿನ ಹಣ ಸಂಗ್ರಹಣೆ. | 7,827/- | 27-7-09 | 16-02-10 | -- | ಇಲ್ಲ | ದೋಷ ಮುಕ್ತ ಗೊಂಡಿ ರುತ್ತಾರೆ. |
| 26. | ಇಕ್ರಂಪಾಷ, ಮೋವಾನಿ, | ಹುಮ್ನಾಬಾದ್ ತನಿಖಾ ಠಾಣೆಯಲ್ಲಿ ರಸೀದಿ ಮೊತ್ತಕ್ಕಿಂತ ಹೆಚ್ಚುವರಿ ಹಣ ಸಂಗಹಣೆ. | 7,505/- | 13-8-09 | 25-05-10 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | -- |
| 27. | ಎಂ.ಸಿ.ನರಸಿಂಹ ಮೂರ್ತಿ, ದ್ವಿ.ದ.ಸ., | | | | 02-03-10 | | | |
| 28. | ಬಿ.ಪಿ.ಕೃಷ್ಣೇಗೌಡ, ಮೋ.ವಾ.ನಿ., | ಹಗರಿ ತನಿಖಾಠಾಣೆ ಯಲ್ಲಿ ರಾಜಸ್ವ ಹೊರತುಪಡಿಸಿ ಹೆಚ್ಚಿನ ಹಣ ಸಂಗ್ರಹಣೆ. | 43,500/- | 6-10-09 | 19-01-10 | ಇಲಾಖಾ ವಿಚಾರಣೆಗೆ ಆದೇಶಿಸಿದೆ. | ಇಲ್ಲ | -- |
| 29. | ಬಂದೇನವಾಜ್, ಗ್ರೂಪ್-ಡಿ | | | | 16-07-10 | | | -- |
| 30. | ಜೆ.ಪಿ.ಪ್ರಕಾಶ್, ಮೋವಾನಿ | -- --- | 6,987/- | 09-2-10 | 21-04-10 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಇಲ್ಲ | -- |
| 31. | ಕೆ.ಎಸ್.ರವೀಂದ್ರ, ಮೋವಾನಿ | -- --- | 18,300/- | 24-4-10 | 01-10-10 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | -- |
| 32. | ಉದಯ್ ಕುಮಾರ್ ಕಾಮತ್, ಮೋವಾನಿ | | | | 01-10-10 | | | |
| 33. | ಸಿ.ಹೇಮಂತ್ ಕುಮಾರ್, ಮೋವಾನಿ, | -- --- | 30,130/- | 16-6-10 | 02-12-10 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು | -- |
| 34. | ಬಂದೇನವಾಜ್, ಗ್ರೂಪ್- | | | | 16-07-10 | | | |
| 35. | ಬುಗ್ಗಾ ರೆಡ್ಡಿ, ಮೋವಾನಿ, | -- --- | | 20-09-10 | 7-4-2011 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಇಲ್ಲ | -- |
| 36. | ಯೆರಿ ಸ್ವಾಮಿ, ಗ್ರೂಪ್-ಡಿ ನೌಕರ | | | 20-09-10 | | | | |
| 37. | ಕೆ.ವಿ.ರಘುರಾಮ್ ಮೋ.ವಾ.ನಿ. | ಬಾಗೇಪಲ್ಲಿ ತ.ಠಾಣೆ ಯಲ್ಲಿ ವಾಹನ ಗಳಿಂದ ಹೆಚ್ಚಿನ ಹಣಕ್ಕಾಗಿ ಒತ್ತಾಯ | 2,30,600/- | 27-3-13 | 06-09-13 | ಲೋಕಾಯುಕ್ತ ವಿಚಾರಣಾ ಹಂತದಲ್ಲಿದೆ. | ಹೌದು. | -- |
| 38. | ಆರ್.ಸುರೇಂದ್ರ ಕುಮಾರ್ ಮೋ.ವಾ.ನಿ. | | | | | | | |

* ಒಟ್ಟು 19 ಪ್ರಕರಣಗಳು.

ಆಯುಕರು.ಸಾರಿಗೆ ಮತು

**ಶ್ರೀ ಅರುಣ್ ಶಹಾಪುರ್:-** ಮಾನ್ಯ ಸಭಾಪತಿಯವರೇ, ತಡೆಹಿಡಿದಿದ್ದ ಈ ಪ್ರಶ್ನೆಯನ್ನು ತೆರವುಗೊಳಿಸಿದಕ್ಕೆ ಧನ್ಯವಾದಗಳು. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಇನ್ನೊಂದು ಪ್ರಶ್ನೆ ಹಾಗೆ ತಡೆಹಿಡಿದಿದ್ದಾರೆ. ಇದನ್ನು ತೆರವುಗೊಳಿಸಿದ್ದಕ್ಕೆ ಧನ್ಯವಾದಗಳು.

ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದು, ನಮ್ಮ ರಾಜ್ಯದಲ್ಲಿ ಎರಡು ಬಸ್‌ಗಳು ಸುಟ್ಟಿರುವ ಪ್ರಕರಣಗಳು ನಮ್ಮ ಕಣ್ಣೆದುರಿಗೆ ಇವೆ. ನಾನು ಏಕೆ ಈ ಪ್ರಶ್ನೆಯನ್ನು ಕೇಳಿದೆ ಎಂದರೆ, ನಮ್ಮ ಸಾರಿಗೆ ಇಲಾಖೆಯ ಅಧಿಕಾರಿಗಳು ಇವತ್ತು ತೆರಿಗೆ ಸಂಗ್ರಹ ಮತ್ತು ದಂಡ ಸಂಗ್ರಹದ ಅಧಿಕಾರಿಗಳಾಗಿ ಮಾರ್ಪಟ್ಟಿದ್ದಾರೆ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಈ ಎರಡೂ ಬಸ್‌ಗಳ inspection ಅನ್ನು ಯಾರು ಮಾಡಿದ್ದರು?

ಅವರೇನು ಇನ್ಸ್‌ಪೆಕ್ಷನ್ ಮಾಡಿ ಎರಡೂ ಬಸ್ಸುಗಳಿಗೆ ಪರವಾನಗಿಯನ್ನು ಕೊಟ್ಟಿದ್ದರು ಎನ್ನುವುದು ಮೊದಲನೆಯದಾಗಿ ಪ್ರಶ್ನೆ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯದ ಯಾವುದೇ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳು ಇವತ್ತಿಗೂ technically inspection ಮಾಡುತ್ತಾರೆಯೇ ಎಂಬುದನ್ನು ಒಂದು ಸಾರಿ ದೃಢೀಕರಿಸಿ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಎರಡನೆಯದಾಗಿ ಇಡೀ ರಾಜ್ಯದಲ್ಲಿ ದೂರದ ಪ್ರಯಾಣದ ಬಸ್ಸುಗಳಿಗೆ ಇವತ್ತು ಏನು ಅನುಮತಿಯನ್ನು ನೀಡಿದ್ದಾರೆ, ಆ ಬಸ್ಸುಗಳ ಮೇಲೆ ಓವರ್‌ಲೋಡ್ ಮಾಡುತ್ತಾರೆ. ನಾವು ಪ್ರಯಾಣಿಕರು ಪ್ರಯಾಣಿಸುವುದಕ್ಕಿಂತ ಬಸ್ಸುಗಳ ಮೇಲೆ ಏನು ಓವರ್‌ಲೋಡ್ ಇರುತ್ತದೆ ಎಂಬುದು ಈ ಎರಡು ಪ್ರಕರಣಗಳ ಹಿನ್ನೆಲೆಯನ್ನು ಅರ್ಥ ಮಾಡಕೊಳ್ಳಬೇಕಾಗುತ್ತದೆ. ಇಲ್ಲಿ ಸಾರಿಗೆ ಇಲಾಖೆಯ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳ ಪಾತ್ರವೇನು? ಇವರೇನು ಮಾಡುತ್ತಿದ್ದಾರೆ ಎನ್ನುವಂಥ ಪ್ರಶ್ನೆ ಬರುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ನಾವು ಪ್ರಗತಿ ಪರಿಶೀಲನಾ ಸಭೆಗಳಿಗೆ ಹೋದಾಗ, ಈ ಇಲಾಖೆಗಳಿಗೆ ಸಂಬಂಧಪಟ್ಟಂಥವರಿಗೆ ಕೇಳಿದಾಗ ನಮ್ಮ target ಏನಿತ್ತು ಅದನ್ನು

ತಲುಪಿದ್ದೇವೆ ಎನ್ನುವಂಥ ಭಾವನೆಯಲ್ಲಿ ಹೇಳುತ್ತಾರೆಯೇ ಹೊರತಾಗಿ ಇಲ್ಲಿ technically inspection ಮಾಡಿ ಏನು ಮಾಡುತ್ತಾರೆ ಎನ್ನುವುದು ಎರಡನೆಯ ಅಂಶವಾಗಿದೆ.

ಇನ್ನು ಮೂರನೆಯದಾಗಿ ಬಹಳ ದೊಡ್ಡ ಪ್ರಮಾಣದಲ್ಲಿ Taras Tipper ಗಳಲ್ಲಿ ಇವತ್ತು ಅಕ್ರಮವಾಗಿ ಪರ ರಾಜ್ಯಗಳಿಗೆ ಮರಳು ಸಾಗಾಣಿಕೆಯಾಗುತ್ತಿದೆ. ಆರ್‌ಟಿಓ ಇನ್ಸ್‌ಪೆಕ್ಟರ್‌ಗಳು ಏನು ಮಾಡುತ್ತಿದ್ದಾರೆ? ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಎಷ್ಟು ಪ್ರಕರಣಗಳನ್ನು ಇವರು ತಡೆಗಟ್ಟಿದ್ದಾರೆ. ಒಂದು Taras Tipper ನಲ್ಲಿ 50 ಟನ್‌ಗಿಂತ ಹೆಚ್ಚಿನ ಮಣ್ಣನ್ನು ಸಾಗಿಸುವಂಥ ಕೆಲಸಗಳಾಗುತ್ತಿವೆ. Ten wheel ಇರುವಂಥ ಒಂದು Taras Tipper ನಲ್ಲಿ 50 ಟನ್‌ಗಿಂತ ಹೆಚ್ಚಿನ ಮರಳನ್ನು ಸಾಗಾಣಿಕೆ ಮಾಡುತ್ತಾರೆ. ಅದರ ಪರಿಣಾಮವಾಗಿ ನಮ್ಮ ಭಾಗದ ಬಹುತೇಕ MDR (Major District Road)ಗಳು ಒಳ ಹಾದಿಯನ್ನು ಹಿಡಿದುಕೊಂಡು ಪಕ್ಕದ ರಾಜ್ಯಗಳಿಗೆ ಸಾಗಾಣಿಕೆ ಮಾಡುತ್ತಾರೆ. ಎಷ್ಟು ಮರಳು ಸಾಗಾಣಿಕೆಯನ್ನು ಈ ಆರ್‌ಟಿಓ ಇನ್ಸ್‌ಪೆಕ್ಟರ್‌ಗಳ ಮೂಲಕ ನಿಲ್ಲಿಸಲಾಗುತ್ತಿದೆ ಎಂಬುದು ಎರಡನೆಯ ಪ್ರಶ್ನೆ.

ಇನ್ನೊಂದು ವಿಚಾರವೆಂದರೆ, ಈಗ ಲೋಕಾಯುಕ್ತ ದಾಳಿಗಳಾಗಿವೆ. ಒಂದೊಂದು ಠಾಣೆಯ ಮೇಲೆ ಪ್ರತಿ ವರ್ಷ ಒಂದು, ಎರಡು, ಮೂರು ಬಾರಿ ದಾಳಿಯಾದಾಗಲೂ ಸಹ ಈ ತನಿಖಾ ಠಾಣೆಗಳಲ್ಲಿ repeatedly ಹಣ ಸಿಕ್ಕಿರುವ ಪ್ರಕರಣಗಳಾಗಿವೆ. ನಾನು ಹೇಳುತ್ತಿರುವುದು ಒಂದು ಬಾರಿ ಆಗಿದೆ ಎನ್ನುವ concession ಅಲ್ಲ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ? ಸಿಸಿ ಕ್ಯಾಮೆರಾ ಅಳವಡಿಸುವಂಥ ಹೊಸ ಠಾಣೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ಎಷ್ಟು ಕಡೆಗಳಲ್ಲಿ ಹೊಸ ಠಾಣೆಗಳನ್ನು ಸ್ಥಾಪನೆ ಮಾಡಲಾಗುತ್ತಿದೆ ? ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಎಂಬುದನ್ನು ಮಾನ್ಯ ಸಾರಿಗೆ ಸಚಿವರಿಗೆ ಕೇಳಲಿಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ರಾಮಲಿಂಗಾರೆಡ್ಡಿ:-** ಮಾನ್ಯ ಸಭಾಪತಿಯವರೆ, ಅವರು ಕೇಳಿರತಕ್ಕಂಥ ಪ್ರಶ್ನೆ ನಮ್ಮ ಆರ್‌ಟಿಓಗೆ ಸಂಬಂಧಪಟ್ಟಿದ್ದೆ. ಆದರೆ ಬಸ್ಸುಗಳಿಗೆ ಸಂಬಂಧಪಟ್ಟ ವಿಚಾರವನ್ನು ಸಹ ಅವರು ಹೇಳಿದ್ದಾರೆ. ಅವೆರಡು ಹೊಸ ಬಸ್ಸುಗಳು. ಬಸ್ಸಿನಲ್ಲಿ ಏನೂ ಸಮಸ್ಯೆ ಇರಲಿಲ್ಲ. ಒಂದು ಬಸ್ ತೆಗೆದುಕೊಂಡು ಸುಮಾರು ಒಂದೂವರೆ ತಿಂಗಳು ಸಹ ಆಗಿರಲಿಲ್ಲ. ಇನ್ನೊಂದು ಬಸ್ಸು ತೆಗೆದುಕೊಂಡು ಸುಮಾರು 4 ತಿಂಗಳುಗಳಾಗಿತ್ತು. ಈ ಘಟನೆ rash driving ನಿಂದ ಆಗಿರತಕ್ಕಂಥಾದ್ದು. ಮುಂದಿನ ಪ್ರಶ್ನೆಯಲ್ಲಿ ಈ ವಿಚಾರ ಬರುತ್ತದೆ. National Automotive Testing and R&D Infrastructure Project (NATRiP), ಎನ್ನುವಂಥ ಸಂಸ್ಥೆಗೆ ಈ ಘಟನೆ ಯಾವ ಕಾರಣಕ್ಕಾಗಿ ಅಪಘಾತವಾಯಿತು ಎನ್ನುವುದನ್ನು ಪತ್ತೆ ಹಚ್ಚಲು ವಹಿಸಲಾಗಿದೆ. ಅಂದರೆ ಅಪಘಾತವಾಗಿರುವುದು rash driving ನಿಂದಲೇ. ಬಸ್ಸು ತಕ್ಷಣವೇ 10-15 ನಿಮಿಷಗಳಲ್ಲಿ ಬೆಂಕಿ ಹತ್ತಿಕೊಳ್ಳಲು ಕಾರಣ ಏನೋ technical ಸಮಸ್ಯೆ ಕೂಡ ಇರಬಹುದು. NATRiP ಸಂಸ್ಥೆಯಿಂದ ವರದಿ ಬಂದ ನಂತರ ಅದು ಕೂಡ ಗೊತ್ತಾಗುತ್ತದೆ. ತಾವು ಕೇಳಿರತಕ್ಕಂಥ ಪ್ರಶ್ನೆಗೆ ಹೇಳುವುದಾದರೆ, ನಮ್ಮಲ್ಲಿ Senior Motor Vehicle Inspectors and Junior Motor Vehicle Inspectors, ಇಬ್ಬರು ಇರುತ್ತಾರೆ. ನಮ್ಮಲ್ಲಿ 587 sanctioned posts ನಮ್ಮಲ್ಲಿ ಇದ್ದಾವೆ ಮತ್ತು ಸುಮಾರು 270 ಹುದ್ದೆಗಳು ಖಾಲಿ ಇವೆ. ಹಾಲಿ ಇರತಕ್ಕಂಥಾದ್ದು 317 ಹುದ್ದೆಗಳು. ಹಾಗಾಗಿ ನಮಗೆ ಸರಿಯಾಗಿ inspection ಮಾಡುವುದಕ್ಕೆ ಆಗುತ್ತಿಲ್ಲ. ಇನ್ನು ಮಾನ್ಯ ಸದಸ್ಯರು ಮರಳು ಸಾಗಿಸುತ್ತಿರುವ ವಿಚಾರವನ್ನು ಹೇಳಿದರು. ಇದರ ಬಗ್ಗೆ ನನ್ನ ಬಳಿ ಉತ್ತರವಿಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸಿ ಕೊಡುತ್ತೇನೆ. ಮರಳು ಸಾಗಾಣಿಕೆಯನ್ನು ನಿಯಂತ್ರಣ ಮಾಡುವವರು ಲೋಕೋಪಯೋಗಿ ಇಲಾಖೆಯವರು. ಓವರ್‌ಲೋಡ್ ಆಗಿದ್ದರೆ ನಾವು ಅದಕ್ಕೆ ದಂಡವನ್ನು ವಿಧಿಸುತ್ತೇವೆ. ವೋಲ್ವೋ ಬಸ್ ಅಪಘಾತಕ್ಕೀಡಾದ ನಂತರ ಈಗ ನಾವು ಹೆಚ್ಚಿಗೆ ತಪಾಸಣೆಯನ್ನು ಮಾಡುತ್ತಿದ್ದೇವೆ. ಎಲ್ಲಾ ಕಡೆ ಬಸ್ಸುಗಳಿರಬಹುದು, ಲಾರಿಗಳಿರಬಹುದು ನಾವು ಹೆಚ್ಚಿನ ತಪಾಸಣೆಯನ್ನು ಮಾಡುತ್ತಿದ್ದೇವೆ.

ಲೋಕಾಯುಕ್ತರ ತನಿಖೆಯಾಗಿದೆ. ಕೆಲವರನ್ನು ವಜಾ ಕೂಡ ಮಾಡಿದ್ದೇವೆ. ಇನ್ನು ಕೆಲವು ಪ್ರಕರಣಗಳು ತನಿಖಾ ಹಂತದಲ್ಲಿದೆ.

**ಶ್ರೀ ಅರುಣ ಶಹಾಪುರ :–** ಮಾನ್ಯ ಸಭಾಪತಿಯವರೆ, ಮಹಾರಾಷ್ಟ್ರದಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಿ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡಿದ್ದಾರೆ. ಇಲ್ಲಿಯೂ ಪ್ರತಿಯೊಂದು ಠಾಣೆಯಲ್ಲಿಯೂ ಸಿಸಿ ಕ್ಯಾಮೆರಾವನ್ನು ಅಳವಡಿಸಿ. ಅದೇ ರೀತಿ four track, five track ಮಾಡಿ, ಅಲ್ಲಿಂದ ಪಾಸ್ ಆಗುವ ರೀತಿ ಮಾಡಿ. Technically scanning ಆಗುವ ರೀತಿಯಲ್ಲಿ ಮಾಡಿ. ಏನಾದರೂ ಆಧುನಿಕರಣವನ್ನು ಉಪಯೋಗಿಸಿಕೊಂಡು ಏನು ಗಡಿಗಳ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ಮಾಡುತ್ತಿದ್ದೀರಿ, ಅದು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಮಾಡಬಹುದು. ಆ ನಿಟ್ಟಿನಲ್ಲಿ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಕಳ್ಳ ಸಿಕ್ಕಿ ಬಿದ್ದಾಗ ಶಿಕ್ಷೆಯಾಗಬೇಕೆಂಬುದು ಒಂದು ಭಾಗ. ಇದನ್ನು ನಿಲ್ಲಿಸಲಿಕ್ಕೆ preventive actions ಏನು ತೆಗೆದುಕೊಂಡಿದ್ದೀರಿ ಎನ್ನುವುದು ನನ್ನ ಒಂದು ಪ್ರಶ್ನೆಯಾಗಿದೆ.

**ಶ್ರೀ ರಾಮಲಿಂಗಾರೆಡ್ಡಿ :–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸಿಸಿ ಕ್ಯಾಮೆರಾ ಅಳವಡಿಸುವ ಬಗ್ಗೆ ಒಳ್ಳೆಯ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಖಂಡಿತವಾಗಿ ಅದನ್ನು ಮಾಡುತ್ತೇವೆ

**ಓಲ್ವೋ ಬಸ್‌ಗಳ ಅಪಘಾತದ ಕುರಿತು**

**777; ಶ್ರೀ ರಘುನಾಥ್‌ರಾವ್ ಮಲ್ಕಾಪುರ (ವಿಧಾನಸಭಾ ಕ್ಷೇತ್ರ)**

**ಅ)** ಇತ್ತೀಚೆಗೆ ವೋಲ್ವೋ ಬಸ್ಸುಗಳ ಅಪಘಾತಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಅಪಘಾತಗಳಿಗೆ ಕಾರಣಗಳೇನು;

ಆ) ಹಾಗಿದ್ದಲ್ಲಿ, ಇತ್ತೀಚಿನ ವೋಲ್ವೋ ಬಸ್ ದುರಂತದಲ್ಲಿ ಮೃತಪಟ್ಟಿರುವ ಪ್ರಯಾಣಿಕರ ಸಂಖ್ಯೆ ಎಷ್ಟು; ಮತ್ತು ಮೃತರ ಕುಟುಂಬಕ್ಕೆ ಸರ್ಕಾರದಿಂದ ನೀಡಿರುವ ಪರಿಹಾರವೆಷ್ಟು;

ಇ) ವೋಲ್ವೋ ಬಸ್ ಅಪಘಾತಗಳನ್ನು ತಪ್ಪಿಸಲು ಸರ್ಕಾರದ ಮುಂದಿರುವ ಕ್ರಮಗಳೇನು; ಸಂಬಂಧಪಟ್ಟ ಬಸ್ ತಯಾರಿಕ ಸಂಸ್ಥೆಯ ಮುಖ್ಯಸ್ಥರೊಂದಿಗೆ ಸರ್ಕಾರ ಈ ಬಗ್ಗೆ ಮಾತುಕತೆಗಳನ್ನು ನಡೆಸಿದ್ದಲ್ಲಿ, ಅದರ ವಿವರಗಳೇನು ?

**ಶ್ರೀ ರಾಮಲಿಂಗಾರೆಡ್ಡಿ (ವಿಧಾನ ಸಭಾ ಕ್ಷೇತ್ರ ) ಸಾರಿಗೆ ಸಚಿವರು.**

ಅ) ಇತ್ತೀಚೆಗೆ ಎರಡು ಖಾಸಗಿ ವೋಲ್ವೋ ಬಸ್ಸುಗಳು ಅಪಘಾತಕ್ಕೀಡಾಗಿರುತ್ತವೆ.

ಆಂಧ್ರಪ್ರದೇಶದ ಮೆಹಬೂಬ್ ನಗರ ಸಮೀಪ ಪಾಲೆಂ ಹತ್ತಿರ ಸಂಭವಿಸಿದ ವೋಲ್ವೋ ಬಸ್ ಅಪಘಾತಕ್ಕೆ ಸಂಬಂಧಿಸಿದ ಆಂಧ್ರಪ್ರದೇಶ ರಾಜ್ಯದಿಂದ ಮತ್ತು ಹಾವೇರಿ ಜಿಲ್ಲೆ ಕುಣಿಮಲ್ಲಳ್ಳಿ ಬಳಿ ಸಂಭವಿಸಿದ ವೋಲ್ವೋ ಬಸ್ ಅಪಘಾತಕ್ಕೆ ಸಂಬಂಧಿಸಿದಂತೆ ರಾಜ್ಯದಿಂದ, ಸದರಿ ಅಪಘಾತವನ್ನು ವಿಶ್ಲೇಷಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು NATRiP (National Automotive Testing and R & D Infrastructure Project), New Delhi ಅವರಿಗೆ ಕೋರಲಾಗಿದೆ. ಸದರಿ ಸಂಸ್ಥೆಯ ತಂಡವು ದಿನಾಂಕ: 15-11-2013 ರಂದು ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಪುರಾವೆಗಳನ್ನು ಸಂಗ್ರಹಿಸಿದ್ದು ವರದಿಯನ್ನು ನಿರೀಕ್ಷಿಸಲಾಗಿದೆ.

ಆ) ಆಂಧ್ರಪ್ರದೇಶದ ಮೆಹಬೂಬ್ ನಗರ ಸಮೀಪ ಪಾಲೆಂ ಹತ್ತಿರ ಸಂಭವಿಸಿದ ವೋಲ್ವೋ ಬಸ್ ಅಪಘಾತದಲ್ಲಿ 45 ಪ್ರಯಾಣಿಕರು ಮೃತಪಟ್ಟಿದ್ದು, ಇವರುಗಳಲ್ಲಿ 17 ಮಂದಿ ಕರ್ನಾಟಕದವರಾಗಿರುತ್ತಾರೆ. ಮತ್ತು ಹಾವೇರಿ ಜಿಲ್ಲೆ ಕುಣಿಮಲ್ಲಳ್ಳಿ ಬಳಿ ಸಂಭವಿಸಿದ ಅಪಘಾತದಲ್ಲಿ 8 ಜನ ಪ್ರಯಾಣಿಕರು ಸಾವನ್ನಪ್ಪಿರುತ್ತಾರೆ. ಮೃತರ ಕುಟುಂಬಕ್ಕೆ ತಲಾ

ಒಂದು ಲಕ್ಷ ಪರಿಹಾರವನ್ನು ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಮಂಜೂರು ಮಾಡಿದೆ.

ಇ)

**1)** ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಭಾರಿ ಪ್ರಯಾಣಿಕರ ವಾಹನಗಳಲ್ಲಿ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ನಿಗದಿಪಡಿಸಿದ್ದು, ಅದರಂತೆ, ವಾಹನಗಳ ಕಾರ್ಯಾಚರಣೆ ನಡೆಸಲಾಗುತ್ತಿದೆಯೇ ಎಂಬ ಬಗ್ಗೆ ಕಟ್ಟುನಿಟ್ಟಾಗಿ ತಪಾಸಣೆ ಮಾಡುವಂತೆ ರಾಜ್ಯದ ಎಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ ಹಾಗೂ ಕ್ರಮ ಜಾರಿಯಲ್ಲಿದೆ. ವೋಲ್ವೋ ಸಂಸ್ಥೆಯ ಅಧಿಕಾರಿಗಳೊಂದಿಗೆ ಸುರಕ್ಷತಾ ವಿಧಾನಗಳ ಬಗ್ಗೆ ಸಮಾಲೋಚನೆ ಮಾಡಲಾಗಿದೆ.

**2)** ಜಂಟಿ ಸಾರಿಗೆ ಆಯುಕ್ತರು (ನಗರ ಮತ್ತು ಗ್ರಾಮಾಂತರ), ಬೆಂಗಳೂರು ಇವರ ನೇತೃತ್ವದಲ್ಲಿ ಬೆಂಗಳೂರಿನಾದ್ಯಂತ 10 ವಿಶೇಷ ತಪಾಸಣಾ ತಂಡಗಳನ್ನು ರಚಿಸಿದ್ದು ಎಲ್ಲಾ ಭಾರಿ ಪ್ರಯಾಣಿಕರ ವಾಹನಗಳನ್ನು ತೀವ್ರವಾಗಿ ತಪಾಸಣೆಗೊಳಪಡಿಸಿ ನ್ಯೂನ್ಯತೆಗಳು ಕಂಡುಬಂದಂತಹ ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ.

**3)** ದಿನಾಂಕ: 18-11-2013 ರಿಂದ ಬೆಂಗಳೂರು ನಗರದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಹೊಸ ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ ನವೀಕರಣಕ್ಕಾಗಿ ಬರುವ ಅಭ್ಯರ್ಥಿಗಳಿಗೆ ಹಾಗೂ ವಿವಿಧ ಪ್ರಯಾಣಿಕರ ವಾಹನಗಳ ಚಾಲಕರಿಗೆ ಚಾಲನಾ ನೈಪುಣ್ಯತೆ, ತುರ್ತು ಸಂದರ್ಭಗಳಲ್ಲಿ ಚಾಲಕರು ಪ್ರಯಾಣಿಕರ ಸುರಕ್ಷತೆಗಾಗಿ ಕೈಗೊಳ್ಳಬಹುದಾದ ಕ್ರಮಗಳು, ಒತ್ತಡ ನಿರ್ವಹಣೆ ಇತ್ಯಾದಿ ವಿಷಯಗಳ ಬಗ್ಗೆ ಪುನರ್‌ಮನನ ತರಬೇತಿ ಕಾರ್ಯಕ್ರಮಗಳನ್ನು ಪ್ರಮುಖ ವಾಹನ ತಯಾರಿಕಾ ಸಂಸ್ಥೆಗಳಾದ

ವೋಲ್ವೋ, ಟಾಟಾ ಮತ್ತು ಅಶೋಕ್ ಲೈಲ್ಯಾಂಡ್ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿಸಲಾಗುತ್ತಿದೆ. ಸದರಿ ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಇತರ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ವಿಸ್ತರಿಸಲು ಉದ್ದೇಶಿಸಲಾಗಿದೆ.

**4)** ಪ್ರಮುಖ ಬಸ್ ತಯಾರಿಕಾ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮಾತುಕತೆಯನ್ನು ನಡೆಸಿ ಇತ್ತೀಚೆಗೆ ಸಂಭವಿಸಿದ ಅಪಘಾತಗಳಿಗೆ ಕಾರಣಗಳೇನು ಎಂಬ ಬಗ್ಗೆ ವೊಲ್ವೋ ಸಂಸ್ಥೆಯ ತಾಂತ್ರಿಕ ತಂಡದಿಂದಲೂ ಪರಿಶೀಲನೆ ನಡೆಸಲು ಕೋರಲಾಗಿದೆ.

**5)** ಪ್ರವಾಸಿ ವಾಹನಗಳು ಪ್ರಯಾಣ ಹೊರಡುವ ಪೂರ್ವದಲ್ಲಿ ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರ ಸುರಕ್ಷತೆಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ಪ್ರವಾಸಿ ಪ್ರವರ್ತಕರು ಪ್ರಯಾಣಿಕರಿಗೆ ಸೂಕ್ತ ತಿಳುವಳಿಕೆಯನ್ನು ವೀಡಿಯೋ ಮೂಲಕ ಅಥವಾ ಮೌಖಿಕವಾಗಿ ಕಡ್ಡಾಯವಾಗಿ ತಿಳುವಳಿಕೆ ನೀಡಲು ಕ್ರಮ ವಹಿಸಲು ತಿಳಿಸಲಾಗಿದೆ.

**6)** ನಿಯಮಾನುಸಾರ ಭಾರಿ ಪ್ರಯಾಣಿಕರ ವಾಹನಗಳಲ್ಲಿ ತುರ್ತು ನಿರ್ಗಮನ/ದ್ವಾರಗಳನ್ನು ಅಳವಡಿಸಲು ಸೂಚಿಸಲಾಗಿದೆ.

**7)** ಬೆಂಗಳೂರು ನಗರದ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಹೊಸ ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾ ಪತ್ರ ನವೀಕರಣಕ್ಕಾಗಿ ಬರುವ ಅಭ್ಯರ್ಥಿಗಳಿಗೆ ಹಾಗೂ ವಿವಿಧ ಪ್ರಯಾಣಿಕರ ವಾಹನಗಳ ಚಾಲಕರಿಗೆ ಚಾಲನಾ ನೈಪುಣ್ಯತೆ, ತುರ್ತು ಸಂದರ್ಭಗಳಲ್ಲಿ ಚಾಲಕರು ಪ್ರಯಾಣಿಕರ ಸುರಕ್ಷತೆಗಾಗಿ ಕೈಗೊಳ್ಳಬಹುದಾದ ಕ್ರಮಗಳು, ಒತ್ತಡ ನಿರ್ವಹಣೆ ಇತ್ಯಾದಿ ವಿಷಯಗಳ ಬಗ್ಗೆ ಪುನರ್‌ಮನನ ತರಬೇತಿ ಕಾರ್ಯಕ್ರಮಗಳನ್ನು ಪ್ರಮುಖ ವಾಹನ ತಯಾರಿಕಾ ಸಂಸ್ಥೆಗಳಾದ ವೋಲ್ವೊ, ಟಾಟಾ ಮತ್ತು ಅಶೋಕ್ ಲೈಲ್ಯಾಂಡ್ ಇವರ ಸಂಯುಕ್ತ ಆಶ್ರಯದಲ್ಲಿ ಜರುಗಿಸಲಾಗುತ್ತಿದೆ.

**8)** NATRiP (National Automotive Testing and R & D Infrastructure Project), New Delhi ಇವರಿಂದ ವರದಿ ಬಂದ ನಂತರ ಹಾಗೂ ಈ ಸಂಬಂಧ ಭಾರತ ಸರ್ಕಾರದ ಮಾರ್ಗಸೂಚಿ ಅನುಸರಿಸಿ ವೋಲ್ವೋ ಬಸ್ ವಿನ್ಯಾಸ ಬದಲಾವಣೆ ಬಗ್ಗೆ ಬಸ್ ತಯಾರಿಕ ಸಂಸ್ಥೆಯ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿ ತೀರ್ಮಾನಿಸಲಾಗುವುದು.

**9)** ಅಪಘಾತದ ಪೂರ್ವಾಪರ ಮತ್ತು ವಿವರವಾದ ಸಮ್ರಗ ಅಧ್ಯಯನ ನಡೆಸಲು ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ ಮತ್ತು ಗ್ರಾಮಂತರ) ಇವರನ್ನು ನಿಯೋಜಿಸಲಾಗಿದೆ.

**10)** ಭಾರಿ ಪ್ರಯಾಣಿಕರ ವಾಹನಗಳಿಗೆ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 128(4) ರಲ್ಲಿ ನಿಗದಿಪಡಿಸಿರುವಂತೆ ತುರ್ತು ನಿರ್ಗಮನ ದ್ವಾರ ಇರುವುದನ್ನು ಕಡ್ಡಾಯಗೊಳಿಸುವುದು.

**11)** ತುರ್ತು ನಿರ್ಗಮನ ವ್ಯವಸ್ಥೆ ಬಗ್ಗೆ ವಾಹನಗಳ ತನಿಖಾ ಸಮಯದಲ್ಲಿ ಮತ್ತು ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಕಡ್ಡಾಯವಾಗಿ ಪರಿಶೀಲಿಸುವುದು ಅಲ್ಲದೇ ಬಸ್ಸಿನ ಎರಡು ಬದಿಗಳಲ್ಲಿ ವಾಹನಗಳ ತಯಾರಿಕ ಹಂತದಲ್ಲಿಯೇ ತುರ್ತು ನಿರ್ಗಮನ ದ್ವಾರಗಳನ್ನು ಅಳವಡಿಸುವ ಬಗ್ಗೆ ಕೇಂದ್ರ ಮೋಟಾರು ವಾಹನ ನಿಯಮಾವಳಿಗಳಲ್ಲಿ ತಿದ್ದುಪಡಿ ಮೂಲಕ ಸೂಕ್ತ ಸೇರ್ಪಡೆ ಮಾಡುವಂತೆ ಶಿಫಾರಸ್ಸು ಮಾಡುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

**12)** ಪ್ರವಾಸಿ ವಾಹನವು ಪ್ರಯಾಣ ಹೊರಡುವ ಸಮಯದಲ್ಲಿ ತುರ್ತು ಸಂದರ್ಭಗಳಲ್ಲಿ ಪ್ರಯಾಣಿಕರು ಸುರಕ್ಷತೆಗಾಗಿ ಅನುಸರಿಸಬೇಕಾದ ಕ್ರಮಗಳ ಕುರಿತು ಪ್ರವಾಸಿ ಪ್ರವರ್ತಕರು ಪ್ರಯಾಣಿಕರಿಗೆ ಸೂಕ್ತ ತಿಳುವಳಿಕೆಯನ್ನು ಸಿ.ಡಿ. ಮೂಲಕ ಅಥವಾ ಮೌಖಿಕವಾಗಿ ನೀಡಲು ಕ್ರಮ ವಹಿಸಲಾಗುತ್ತಿದೆ.

**13)** ವಾಹನಗಳಲ್ಲಿ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 128(9) ರಂತೆ ಪ್ರಯಾಣಿಕರ ವೈಯಕ್ತಿಕ ಸಾಮಾಗ್ರಿಗಳನ್ನು ಮಾತ್ರ ಸಾಗಿಸಲು ಅವಕಾಶವಿದ್ದು, ವಾಹನಗಳ ಮೇಲ್ಭಾವಣಿಯ ಮೇಲೆ ವಾಣಿಜ್ಯ ಸರಕನ್ನು ಸಾಗಿಸಲು ಅನುಮತಿ ಇರುವುದಿಲ್ಲ. ಸದರಿ ನಿಯಮ ಉಲ್ಲಂಘನೆಯಾದಲ್ಲಿ ವಾಹನದ ಮಾಲೀಕರು ಹಾಗೂ ಚಾಲಕರ ವಿರುದ್ಧ ತೀವ್ರವಾದ ಕಟ್ಟುನಿಟ್ಟಿನ ಕ್ರಮ ವಹಿಸಲಾಗುತ್ತಿದೆ.

**14)** ಇಂತಹ ಕಾನೂನು ಬಾಹಿರ ಕಾರ್ಯಾಚರಣೆಯನ್ನು ತಡೆಗಟ್ಟಲು ಇಲಾಖೆಯಿಂದ ಬೆಂಗಳೂರು ನಗರದ 10 ಪ್ರಾದೇಶಿಕ ಸಾರಿಗೆ ಕಛೇರಿಗಳ ವ್ಯಾಪ್ತಿಗೊಳಪಟ್ಟಂತೆ 10 ವಿಶೇಷ ತನಿಖಾ ದಳಗಳನ್ನು ನಿಯೋಜಿಸಲು ಕ್ರಮ ವಹಿಸಲಾಗುತ್ತಿದೆ.

**15)** ದಿ:29-11-2013 ರಿಂದ ಜಾರಿಗೆ ಬಂದಿರುವಂತೆ ರಾಜ್ಯದಲ್ಲಿ ನೋಂದಾಯಿತವಾಗುವ ಹಲವು ಮಾದರಿಯ ಸಾರಿಗೆ ವಾಹನಗಳಿಗೆ ಸ್ಪೀಡ್ ಗವರ್ನರ್ ಅಳವಡಿಕೆ ಕಡ್ಡಾಯ ಮಾಡಲಾಗಿರುತ್ತದೆ.

**16)** ಕೇಂದ್ರ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 85 ರ ಪ್ರಕಾರ ಪ್ರತಿಯೊಂದು ಟ್ರಿಪ್ ಶೀಟ್‌ನಲ್ಲಿ ಪ್ರಯಾಣಿಕರ ಹೆಸರು, ವಿಳಾಸ, ವಯಸ್ಸು ಮತ್ತು ಲಿಂಗ, ದೂರವಾಣಿ ಸಂಖ್ಯೆ, ಪ್ರವಾಸದ ಪ್ರಾರಂಭ, ಸೇರುವ ಸ್ಥಳ ಇತ್ಯಾದಿಗಳ ವಿವರಗಳುಳ್ಳ ಟ್ರಿಪ್ ಶೀಟ್ ಅನ್ನು ಕಡ್ಡಾಯಗೊಳಿಸುವುದು. ಒಂದು ಪ್ರತಿ ವಾಹನದಲ್ಲಿ, ಮತ್ತೊಂದು ಪ್ರತಿ ವಾಹನ ಮಾಲೀಕರ ಬಳಿಯಲ್ಲಿ ಮತ್ತು ಇನ್ನೊಂದು ಪ್ರತಿಯನ್ನು ರಾಜ್ಯ ಎಸ್.ಟಿ.ಎ. ಗೆ ತ್ರೈಮಾಸಿಕವಾಗಿ ನೀಡಲು ಸೂಚಿಸಲಾಗಿರುತ್ತದೆ.

**17)** ಸಾರಿಗೆ ಇಲಾಖೆಯ ಅಧಿಕಾರಿಗಳು ವಾಹನಗಳ ಅರ್ಹತೆ ಬಗ್ಗೆ ಮಾಹೆಯಾನ ವಿಶೇಷ ತಪಾಸಣೆಗಳನ್ನು ಕೈಗೊಂಡು ಅನರ್ಹ

ವಾಹನಗಳ ಅರ್ಹತಾ ಪತ್ರಗಳನ್ನು ಅಮಾನತ್ತಿನಲ್ಲಿಡುವುದು /ರದ್ದುಗೊಳಿಸುವುದು.

**18)** ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಅರ್ಹತಾ ಪತ್ರ ನವೀಕರಣಕ್ಕೆ ಹಾಜರುಪಡಿಸುವ ಪ್ರಯಾಣಿಕರ ವಾಹನಗಳ ಪರೀಕ್ಷೆಯನ್ನು ಮೋಟಾರು ವಾಹನ ನೀರಿಕ್ಷಕರು ಮಾಡಿದ ತರುವಾಯ ಕಡ್ಡಾಯವಾಗಿ ಖುದ್ದಾಗಿ ಮರುಪರಿಶೀಲನೆ ಮಾಡಿ ಅರ್ಹತಾ ಪರೀಕ್ಷೆ ಪಾಸಾದ್ದಲ್ಲಿ ಮಾತ್ರ ನವೀಕರಣ ಮಾಡುವುದು.

**19)** ದಿ:31-10-2013 ರಿಂದ ದಿ:03-12-2013 ರ ವರೆಗೆ ಖಾಸಗಿ ಪ್ರಯಾಣಿಕರ ವಾಹನಗಳ ವಿಶೇಷ ತಪಾಸಣೆ ನಡೆಸಿದ್ದು ಒಟ್ಟು 17820 ವಾಹನಗಳ ತಪಾಸಣೆ ನಡೆಸಿ, ನಿಯಮ ಉಲ್ಲಂಘಿಸಿದ 5819 ಪ್ರಕರಣಗಳನ್ನು ದಾಖಲಿಸಿ, 282 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ, ಹಾಗೂ ತೆರಿಗೆ ₹ 1,79,05,997/- ಮತ್ತು ದಂಡ ರೂ.9,07,978/- ಹೀಗೆ ಒಟ್ಟು ₹ 1,81,01,991/- ಗಳನ್ನು ವಸೂಲು ಮಾಡಲಾಗಿದೆ. ಹಾಗೂ ತನಿಖಾ ಕಾರ್ಯ ಜಾರಿಯಲ್ಲಿದೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪುರ:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಾರಿಗೆ ಸಚಿವರಿಗೆ ಪ್ರಮುಖವಾಗಿ ಈ ಪ್ರಶ್ನೆಯನ್ನು ಕೇಳಿದ್ದು ಏಕೆಂದರೆ, ಸುಮಾರು 15 ದಿವಸಗಳು ಅಥವಾ ಒಂದು ತಿಂಗಳ ಹಿಂದೆ ಬೆಂಗಳೂರಿನಿಂದ ಹೈದರಾಬಾದ್‌ಗೆ ಹೊರಟ ವೋಲ್ವೋ ಬಸ್ಸಿನ ಅಪಘಾತದ ಬಗ್ಗೆ ಹೇಳುವುದಾದರೆ, ಅಂದರೆ ವಿಶೇಷವಾಗಿ ವೋಲ್ವೋ ಬಸ್ಸುಗಳು ಏಕೆ ಅಪಘಾತಕ್ಕೀಡಾಗುತ್ತಿವೆ ಎಂದು. ಈ ಬಸ್ಸು ಒಂದು ಖಾಸಗಿ ಸಂಸ್ಥೆಗೆ ಸೇರಿದ್ದು, 45 ಜನರು ಆ ಬಸ್ಸಿನಲ್ಲಿ ಸಜೀವ ದಹನವಾಗಿದ್ದಾರೆ. ಇದಾದ ಒಂದು ವಾರ ಅಥವಾ ಹದಿನೈದು ದಿವಸಗಳ ಒಳಗೆ ಇನ್ನೊಂದು ಬಸ್ಸು ಬೆಂಗಳೂರಿನಿಂದ ಮುಂಬೈಗೆ ಹೊರಟಿದ್ದು, ಹಾವೇರಿಯ ಹತ್ತಿರ 7 ಜನರ ಸಜೀವ ದಹನವಾಗಿದ್ದಾರೆ ಮತ್ತು ಇನ್ನೊಬ್ಬರು ನಂತರ ತೀರಿಕೊಂಡಿದ್ದಾರೆ. ಇನ್ನುಳಿದವರು ಬದುಕಿದ್ದಾರೆ. ಅವರು ಬದುಕಲಿಕ್ಕೆ ಕಾರಣವೇನೆಂದರೆ, ಆ

ಬಸ್ಸಿನಲ್ಲಿದ್ದಂಥ ಒಬ್ಬ co-passenger ಮಾಡಿದಂಥ ಪುಣ್ಯಕ್ಕೋಸ್ಕರ ಉಳಿದಂಥ ಜನರು ಬದುಕಿ ಉಳಿದಿದ್ದಾರೆ. ಇಲ್ಲವೆಂದರೆ ಅವರು ಸಹ ಸುಟ್ಟು ಕರಕಲಾಗುತ್ತಿದ್ದರು. ಸರ್ಕಾರ ಈ ತರಹದ ಅಪಘಾತಗಳು ಆದ ನಂತರ, ನನಗೆ ಅನ್ನಿಸುತ್ತದೆ ಕಳೆದ ಒಂದು ದಶಕದಲ್ಲಿ ಈ ತರಹ ಸಜೀವವಾಗಿ 45 ಜನರು ಮತ್ತು ಇನ್ನೊಂದು ಬಸ್ಸಿನಲ್ಲಿ 7-8 ಜನರು ಸಜೀವ ದಹನ ವಾಗಿರುವುದು ಇದು ಮೊದಲನೆಯ ಘಟನೆಯಾಗಿದೆ ಎಂದು ನಾನು ಭಾವಿಸುತ್ತೇನೆ. ಎಲ್ಲೋ ಒಂದು ಕಡೆ ಘಟನೆ ನಡೆದ ನಂತರ ಪರಿಶೀಲನೆ ಮಾಡುವಂಥಾದ್ದು, ಅವರಿಗೆ ಪರಿಹಾರವನ್ನು ಕೊಡುವುದು ನಮ್ಮ ಉದ್ದೇಶವಲ್ಲ. ನಾನು ಮಾನ್ಯ ಸಾರಿಗೆ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ. ನಾವೆಲ್ಲರೂ ಹೆದ್ದಾರಿಗಳಲ್ಲಿ ಓಡಾಡುತ್ತಿರುತ್ತೇವೆ. ಈ ವೋಲ್ವೋ ಬಸ್ಸುಗಳು ಎಂದೂ ಸಹ ಎಡ ಭಾಗದಿಂದ ಹೋಗುವುದಿಲ್ಲ. ಅವು ಬಲ ಭಾಗದಿಂದ ಹೋಗುತ್ತವೆ. ಅವು ಎಡ ಭಾಗಕ್ಕೆ ಯಾವಾಗ ಬರುತ್ತವೆಂದರೆ, ಎದುರುಗಡೆ ವಾಹನ ಬರಬೇಕಾದರೆ ಬರುತ್ತವೆ. ಅವರ ಸ್ಪೀಡ್ ಎಷ್ಟಿದೆ ಎಂದರೆ ಯಾವ ವಾಹನವೂ ಸಹ ಅಷ್ಟು ಸ್ಪೀಡ್ ಆಗಿ ಹೋಗುವುದಿಲ್ಲ. ಇದನ್ನು ನಿಯಂತ್ರಣ ಮಾಡಲು ಏನು ಮಾಡಿದ್ದೀರಿ ಎಂದು ನಾನು ಪ್ರಶ್ನೆಯನ್ನು ಕೇಳಿದ್ದರೆ ಮಾನ್ಯ ಮಂತ್ರಿಗಳು ಅವರ ಉತ್ತರದಲ್ಲಿ ಸ್ಪೀಡ್ ಗವರ್ನರ್‌ಗಳನ್ನು ಅಳವಡಿಸಲಾಗಿದೆ ಎಂದು ಹೇಳುತ್ತಾರೆ. ಎಷ್ಟು ಸ್ಪೀಡ್‌ಗೆ ಇವರು ಸ್ಪೀಡ್ ಗವರ್ನರ್‌ಗಳನ್ನು ಹಾಕುತ್ತಿದ್ದಾರೆ? ನಾವು ಸ್ವಾಭಾವಿಕವಾಗಿ ರಸ್ತೆಯ ಮೇಲೆ ನೋಡುವುದೇನೆಂದರೆ, ಯಾವುದೋ ಒಂದು ವೋಲ್ವೋ ಬಸ್ಸು ಕೂಡ ಗಂಟೆಗೆ 110, 120 ಅಥವಾ 130 ಕಿ.ಮೀ. ಗಿಂತ ಕಡಿಮೆ ಇರುವುದಿಲ್ಲ. ಈ ರೀತಿಯ ಅಪಘಾತಗಳಾಗಲು ವೇಗವೇ ಪ್ರಮುಖವಾದ ಕಾರಣ ಎಂದು ನಾನು ಭಾವಿಸುತ್ತೇನೆ.

ಇನ್ನು ಎರಡನೆಯದಾಗಿ ಮಾನ್ಯ ಮಂತ್ರಿಗಳು ಏನು ಉತ್ತರವನ್ನು ಕೊಟ್ಟಿದ್ದಾರೆಂದರೆ, ಇದನ್ನು ಯಾವ ರೀತಿಯಾಗಿ ನಿಯಂತ್ರಣ ಮಾಡುತ್ತಿದ್ದರೆಂದರೆ, ಉತ್ತರದಲ್ಲಿ "ವಾಹನಗಳಲ್ಲಿ ಕೇಂದ್ರ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 128(9)ರಂತೆ ಪ್ರಯಾಣಿಕರ ವೈಯಕ್ತಿಕ

ಸಾಮಗ್ರಿಗಳನ್ನು ಮಾತ್ರ ಸಾಗಿಸಲು ಅವಕಾಶವಿದ್ದು, ವಾಹನಗಳ ಮೇಲ್ಛಾವಣಿಯ ಮೇಲೆ ವಾಣಿಜ್ಯ ಸರಕನ್ನು ಸಾಗಿಸಲು ಅನುಮತಿ ಇರುವುದಿಲ್ಲ. ಸದರಿ ನಿಯಮ ಉಲ್ಲಂಘನೆಯಾದಲ್ಲಿ ವಾಹನದ ಮಾಲೀಕರು ಹಾಗೂ ಚಾಲಕರ ವಿರುದ್ಧ ತೀವ್ರವಾದ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು." ಎಂದು ಹೇಳಿದ್ದಾರೆ. ನಾನು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ಒಂದು ಅಂಶವನ್ನು ತರಲು ಬಯಸುತ್ತೇನೆ. ಸದನದಲ್ಲಿದಲ್ಲಿರುವಂಥ ಎಲ್ಲಾ ಸದಸ್ಯರು ಅದಕ್ಕೆ ಪಕ್ಷಾತೀತವಾಗಿ ಬೆಂಬಲವನ್ನು ಕೊಡುತ್ತಾರೆ. ಈ ಖಾಸಗಿ ವಾಹನಗಳು ಏನು ರಸ್ತೆಯ ಮೇಲೆ ಹೋಗುತ್ತಿರುತ್ತವೆ ಅವು ಎಷ್ಟು ಎತ್ತರ ಇವೆಯೋ ಅದಕ್ಕಿಂತ ಎತ್ತರದಲ್ಲಿ ಅದರ ಮೇಲಿರುವ ಸಾಮಗ್ರಿಗಳು ಇರುತ್ತವೆ. ಇನ್ನು ವೋಲ್ವೋ ಬಸ್ಸಿನ ವಿಶೇಷತೆ ಏನೆಂದರೆ, ನಾವೇನು ಪ್ರಯಾಣಿಕರು ಬಸ್ಸಿನಲ್ಲಿ ಕುಳಿತಿರುತ್ತೇವೆ ಅದಕ್ಕಿಂತ ಹೆಚ್ಚಾಗಿ ಕೆಳಗಡೆ ಸಾಮಗ್ರಿಗಳನ್ನಿಡಲು ಸ್ಥಳಾವಕಾಶವನ್ನು ಮಾಡಿದ್ದಾರೆ. ಅದರಲ್ಲಿ ಸರಳವಾಗಿ 50 ರಿಂದ 60 ಮೋಟಾರು ಸೈಕಲ್‌ಗಳನ್ನು ಸಹ ಇಟ್ಟು ಸಾಗಿಸುತ್ತಾರೆ. ಪ್ರಯಾಣಿಕರಿಗೆ ಸಾರಿಗೆಗೋಸ್ಕರ ಕೊಟ್ಟಂತಹ ಈ ಅನುಮತಿಯನ್ನು ಸರಕು ಸಾಗಣೆ ಮಾಡುವುದಕ್ಕೆ ಉಪಯೋಗಿಸುತ್ತಿರುವುದು ಒಂದು ಪ್ರಮುಖ ಆದ್ಯತೆಯಾಗಿದೆ. ಇದರಲ್ಲಿ ಇನ್ನೊಂದು ಮಾತನ್ನು ಸನ್ಮಾನ್ಯ ಮಂತ್ರಿಗಳು ಹೇಳಬೇಕು. ಇದನ್ನು ನಾವು manufacture ಮಾಡಿದಂಥ ವೋಲ್ವೋ ಕಂಪನಿಯವರಿಗೆ ಕೇಳಿದ್ದೇವೆ. ಏಕೆ ಈ ಅಪಘಾತವಾಗಿದೆ ಎನ್ನುವುದನ್ನು ಅವರು ಸಮೀಕ್ಷೆ ಮಾಡುತ್ತಿದ್ದಾರೆ. ನನಗೆ ಅನ್ನಿಸುತ್ತಿದೆ ಈ ಭೂಮಿಯ ಮೇಲೆ ಯಾವ ಒಬ್ಬ ಉತ್ಪಾದಕನು ಕೂಡ ತನ್ನ ಉತ್ಪಾದನೆಗೆ ಏಕೆ ಬೆಂಕಿ ಹತ್ತಿದೆ ಎಂದರೆ ಈ ಕಾರಣಕ್ಕೋಸ್ಕರ ಬೆಂಕಿ ಹತ್ತಿದೆ ಎಂದು ಅವನು ಹೇಗೆ ಹೇಳುವುದಕ್ಕೆ ಸಾಧ್ಯ? ಇದಕ್ಕೆ ಸೂಕ್ತವಾದಂಥ ತನಿಖೆಯಾಗಬೇಕು. ಬಸ್ಸಿನ manufacture ನಲ್ಲಿ ದೋಷವಿದೆ, ಬಸ್ಸಿನ ವ್ಯವಸ್ಥೆಯಲ್ಲಿ ದೋಷವಿದೆ. ಬಸ್ಸಿನಲ್ಲಿ ಸರಕು–ಸಾಮಾನುಗಳನ್ನು ಇಡಲಿಕ್ಕೆ ವ್ಯವಸ್ಥೆಯನ್ನು ಮಾಡಲಿಲ್ಲವೆಂದರೆ ಅವರು ಸರಕನ್ನು ಹೇಗೆ ಸಾಗಣೆ ಮಾಡುತ್ತಾರೆ? ಹಾಗಾಗಿ somewhere there is a fault in manufacturing private buses ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇದು ಪ್ರಮುಖವಾದ

ವಿಷಯವಾದ್ದರಿಂದ ನಾನು ಸ್ವಲ್ಪ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಿದ್ದೇನೆ. ಮಾನ್ಯ ಸಾರಿಗೆ ಸಚಿವರು ಸಹ ಸದನದಲ್ಲಿದ್ದಾರೆ. ಸರ್ಕಾರಿ ಬಸ್ಸುಗಳು ಕೆಟ್ಟು ಹೋಗಿ ರಸ್ತೆಯ ಮೇಲೆ ನಾಯಿ ನಿಂತ ಹಾಗೆ ಎಲ್ಲೆಂದರಲ್ಲಿ ನಿಂತಿರುತ್ತವೆ.

**ಸಭಾಪತಿಯವರು:–** ಬೇರೆ ವಿಷಯ ಮಾತನಾಡಬೇಡಿ. ವೋಲ್ವೋ ಬಸ್‌ನ ಬಗ್ಗೆ ಪ್ರಶ್ನೆ ಕೇಳಿ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ:–** ಅದಕ್ಕೆ ಸಂಬಂಧಪಟ್ಟಂತೆಯೇ ಸುರಕ್ಷತಾ ದೃಷ್ಟಿ ಕುರಿತು ನನ್ನದೊಂದು ಸಲಹೆ ಇದೆ.

**ಸಭಾಪತಿಯವರು:–** ಸಲಹೆ ಬೇಡ. ಪ್ರಶ್ನೆ ಕೇಳಿ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ನೇರವಾಗಿ ಪ್ರಶ್ನೆ ಕೇಳಲಿ.

**ಶ್ರೀ ರಘುನಾಥ್‌ರಾವ್ ಮಲ್ಕಾಪುರೆ:–** ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಏನು ಓಡಾಡುತ್ತವೆಯೋ ಅವುಗಳ ಬಗ್ಗೆ ಒಂದು ನಿಯಂತ್ರಣ ಮಾಡಿಕೊಂಡಿದ್ದಾರೆ, ಒಂದು ಕಾಯಿದೆಯನ್ನು ಮಾಡಿಕೊಂಡಿದ್ದಾರೆ. ಅವರು ಟೈರ್ ಖರೀದಿ ಮಾಡಲಿ, paint, spare parts, ಇವು ಏನೇ ಖರೀದಿ ಮಾಡಿದರೂ ಅದಕ್ಕೆ ಮಾಪದಂಡ L-1(lowest one). ಎಷ್ಟೇ ಒಳ್ಳೆಯ ಸಾಮಗ್ರಿ ಖರೀದಿ ಮಾಡಲಿ, ಯಾವುದು lowest rate ಇರುತ್ತದೆ ಅಂಥದ್ದನ್ನು ಖರೀದಿ ಮಾಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಅಪಘಾತಕ್ಕೆ ಒಳಗಾಗಬಾರದು ಎನ್ನುವ ಮುಂಜಾಗರೂಕತಾ ದೃಷ್ಟಿಯಿಂದ paint, spare parts, tires ಈ ಯಾವುದೇ ಆಗಲಿ ಅಥವಾ ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒಳ್ಳೆಯ ಕಂಪನಿಗಳಿಂದ ಖರೀದಿ ಮಾಡಿದರೆ ಬೆಂಕಿ ಹತ್ತುವಂಥದ್ದು, ಇತರೇ ಅಪಘಾತಗಳು ನಡೆಯುವುದು ಕಡಿಮೆ ಆಗುತ್ತದೆ. ಈ ನಿಟ್ಟಿನಲ್ಲಿ ಹೆಚ್ಚು ಒತ್ತುಕೊಡಬೇಕೆಂದು ನಾನು ಸಾರಿಗೆ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ರಾಮಲಿಂಗರೆಡ್ಡಿ:–** ಮಾನ್ಯ ಸಭಾಪತಿಗಳೆ, ಇತ್ತೀಚೆಗೆ 2 ವೋಲ್ವೋ ಬಸ್‌ಗಳು ಅಪಘಾತಕ್ಕೆ ಒಳಗಾಯಿತು. ಒಂದು, ಮೆಹಬೂಬ್ ನಗರದಲ್ಲಿ. ಅದರಲ್ಲಿ 45 ಜನ ತೀರಿ ಹೋದರು. 2ನೆಯದು ಹಾವೇರಿಯಲ್ಲಿ ನಡೆದ ಅಪಘಾತದಲ್ಲಿ ಮೊದಲು 7 ಜನ ತೀರಿ ಹೋದರು. ನಂತರ ಒಬ್ಬರು

ತೀರಿಹೋದರು. ಈ ಎರಡೂ ಕಡೆಗೆ ನಾನು ಹೋಗಿದ್ದೆ. ಎರಡೂ ಕೂಡ Over speed ನಿಂದ ಅಪಘಾತ ಆಗಿರುವಂಥದ್ದು, ಬೆಂಕಿ ಹತ್ತಿಕೊಂಡಿದ್ದು ಟೆಕ್ನಿಕಲ್ ಸಮಸ್ಯೆಯಿಂದ ಇರಬಹುದು. 10-15 ನಿಮಿಷದಲ್ಲಿ ಬೆಂಕಿ ಹತ್ತಿಕೊಂಡುಬಿಟ್ಟಿತ್ತು. ಅಲ್ಲದೆ emergency exit ಇರಲಿಲ್ಲ. Emergency exit ಇದ್ದಿದ್ದರೆ ಬಹಳ ಜನ ಪ್ರಾಣ ಉಳಿಸಿಕೊಳ್ಳುತ್ತಿದ್ದರು. ಮೆಹಬೂಬ್ ನಗರದಲ್ಲಿ ಆದ ಅಪಘಾತದಲ್ಲಿ, ಬೆಂಕಿ ಮುಂದೆ ಹತ್ತಿಕೊಂಡಿದ್ದರಿಂದ ಸುಮಾರು 20-25 ಜನರೂ ಹಿಂದಕ್ಕೆ ಬಂದು ಬಿಟ್ಟಿದ್ದರು. ಈ ಘಟನೆ ಬೆಳಿಗ್ಗೆ 5.30ಕ್ಕೆ ಸಂಭವಿಸಿತ್ತು. ಆಗ ಕತ್ತಲಿರುತ್ತದೆ. ಹಾಗಾಗಿ ಅವರಿಗೆ ಹ್ಯಾಮರ್‌ನಲ್ಲಿ ಗ್ಲಾಸ್ ಒಡೆಯುವುದಕ್ಕೂ ಸಾಧ್ಯವಾಗಿಲ್ಲ. ಎಲ್ಲಾ ಒಂದೇ ಕಡೆ ಸತ್ತು ಹೋದರು. ಟೆಕ್ನಿಕಲ್ ಆಗಿ ಸಮಸ್ಯೆ ಇರಬಹುದು. ನಮ್ಮ ಅಧಿಕಾರಿಗಳ ಒಂದು ತಾಂತ್ರಿಕ ತಂಡ ಹೋಗಿದೆ. ಅದು ವರದಿ ಕೊಡುತ್ತದೆ. (NATRIP) National Automotive Testing and R&D Infrastructure Project ಕೇಂದ್ರ ಸರ್ಕಾರದ ಸಂಸ್ಥೆ ಕೂಡ ಹೋಗಿದೆ. ಆಂಧ್ರಪ್ರದೇಶ ಸರ್ಕಾರ ಕೂಡ ತನಿಖೆ ಮಾಡಿದೆ. ಆದರೆ unofficial report ಬಂದಿದೆ. Official report ಬರುವುದಿದೆ. ಈ ಬಸ್ಸುಗಳು 7 ಅಡಿ 2 ಅಂಗುಲ ಎತ್ತರ ಇರುತ್ತದೆ. ಹಾವೇರಿಯಲ್ಲಾದ ಘಟನೆಯಲ್ಲಿ, ಇಬ್ಬರು ಹುಡುಗರು ಸೇರಿಕೊಂಡು ಗ್ಲಾಸ್ ಒಡೆದು ಹೊರಗೆ ಬಂದಿದ್ದರು. ಮತ್ತೆ ಜಂಪ್ ಮಾಡಿ ಹೊರಗೆ ಬಂದ ಸುಮಾರು 5 ಜನರ ಕಾಲು ಮುರಿದು ಹೋಗಿತ್ತು. Height ಜಾಸ್ತಿ ಇರುತ್ತದೆ ಮತ್ತು emergency exit ಕೂಡ ಇರುವುದಿಲ್ಲ. ಹಾಗಾಗಿ ನಾವು ಕಂಪನಿಯವರಿಗೆ ಬಹಳ strict ಆಗಿ 10-15 guidelines ಕೊಟ್ಟಿದ್ದೇವೆ. ಡ್ರೈವಿಂಗ್ ಲೈಸೆನ್ಸ್ ಮರುಪರಿಶೀಲನೆ ಮಾಡುವುದಕ್ಕೆ ಹೇಳಿದ್ದೇವೆ. ಟೆಕ್ನಿಕಲ್ ಕಮಿಟಿ ಮಾಡಿದ್ದೇವೆ. 10 squad ಮಾಡಿ ಅವರು inspection ಮಾಡುವಂಥ ವ್ಯವಸ್ಥೆ ಮಾಡಿದ್ದೇವೆ. ವಿಮಾನಗಳಲ್ಲಿ ಪ್ರಯಾಣಿಸಬೇಕಾದರೆ ಪ್ರಯಾಣ ಮಾಡುವುದಕ್ಕೆ ಮುಂಚೆ ವಿಮಾನ ಅಪಘಾತಕ್ಕೆ ಈಡಾದರೆ ಯಾವರೀತಿ ನಡೆದುಕೊಳ್ಳಬೇಕೆಂದು ತಿಳಿ ಹೇಳುತ್ತಾರೋ ಅದೇರೀತಿ ಈ ಬಸ್ಸುಗಳಲ್ಲಿ ಪ್ರಯಾಣ ಮಾಡುವವರಿಗೆ ಅಪಘಾತವಾದರೆ ಹೇಗೆ ತಪ್ಪಿಸಿಕೊಳ್ಳಬೇಕು, ಹೇಗೆ ನಡೆದುಕೊಳ್ಳಬೇಕು ಎಂಬ

ತಿಳಿವಳಿಕೆ ಕೊಡಬೇಕೆಂದು ಹೇಳಿದ್ದೇವೆ. ಬಸ್ಸಿನ ವಿನ್ಯಾಸ ಬದಲಿಸುವ ಹಾಗೆ ವೋಲ್ವೋ ಕಂಪನಿಯವರಿಗೆ ಹೇಳಿದ್ದೇವೆ ಮತ್ತು emergency exit ವಿಚಾರದಲ್ಲಿ ಇವರ ಹತ್ತಿರ ಸಲಹೆ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಮಾನ್ಯ ಸಭಾಪತಿಗಳೆ, ಹಿಂದೆ ಈ ಬಸ್ಸುಗಳಲ್ಲಿ commercial goods ಹಾಕುತ್ತಿದ್ದರು. ಆದರೆ ಒಂದು ತಿಂಗಳ ಇತ್ತೀಚಿನಿಂದ ಆ ರೀತಿ ಎಲ್ಲೂ ಕಾಣಿಸುವುದಿಲ್ಲ. ಅಂಥದ್ದೆಲ್ಲವನ್ನು strict ಆಗಿ ನಿಲ್ಲಿಸಿದ್ದೇವೆ. ಅಂಥದ್ದೇನಾದರೂ ಮಾನ್ಯ ಸದಸ್ಯರ ಗಮನಕ್ಕೆ ಬಂದರೆ ನನಗೆ ತಿಳಿಸಬಹುದು. Commercial goods ನ್ನು ಕೆಳಗೆ ಹಾಕಿಕೊಂಡು ಹೋಗಬಹುದೇ ಹೊರತು ಮೇಲುಗಡೆ ಹಾಕಿಕೊಂಡು ಹೋಗುವ ಹಾಗಿಲ್ಲ. ಅದರಲ್ಲೂ ಪ್ರಯಾಣಿಕರಿಗೆ ಸಂಬಂಧಪಟ್ಟಿದ್ದು ಮಾತ್ರ ತೆಗೆದುಕೊಂಡು ಹೋಗಬೇಕೆಂದು ಆದೇಶ ಮಾಡಿದ್ದೇನೆ. ಮತ್ತೆ, ಕೇಂದ್ರ ಸರ್ಕಾರ All India Tourist Vehicleಗಳ speed governors ಸಂಬಂಧಪಟ್ಟಂತೆ exemption ಕೊಟ್ಟಿದ್ದಾರೆ. ಲಾರಿಗಳಿಗೂ ಕೂಡ ಕೊಟ್ಟಿದ್ದಾರೆ. ಇದು ನಮಗೆ ಸ್ವಲ್ಪ ಸಮಸ್ಯೆ ಆಗುತ್ತಿದೆ. 65 ಕಿಲೋ ಮೀಟರ್ ವೇಗಮಿತಿ ಇದ್ದರೂ ರಾತ್ರಿ ಯಾರೂ ಗಮನಿಸುವುದಿಲ್ಲ ಎಂದು 100-110 ಕಿ.ಮೀ.ವೇಗದಲ್ಲಿ ಓಡಿಸುತ್ತಾರೆ. ನಮ್ಮಲ್ಲೂ ಸಾಕಷ್ಟು ಸಿಬ್ಬಂದಿ ಇಲ್ಲ. ಪೊಲೀಸರೂ ಕೂಡ ರಾತ್ರಿ ಹೊತ್ತು ಇರುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ 100ಕ್ಕೆ ಕಮ್ಮಿ ಯಾರೂ ಓಡಿಸುವುದಿಲ್ಲ. ಇದರಿಂದ ಅಪಘಾತಗಳು ನಡೆಯುತ್ತವೆ. Trip sheet ಸಂಬಂಧಪಟ್ಟಂತೆ ಹೇಳುವುದಾದರೆ ಮುಂಚೆ trip sheet ನಲ್ಲಿ ಪ್ರಯಾಣ ಮಾಡುವವರ ಹೆಸರುಗಳಿರುತ್ತಿರಲಿಲ್ಲ. ಆದರೆ ಈಗ trip sheet ಕಡ್ಡಾಯವಾಗಿ maintain ಮಾಡಬೇಕು ಎಂದು ಹೇಳಿದ್ದೇವೆ. ಅವರ ದೂರವಾಣಿ ಸಂಖ್ಯೆ, ಮನೆ ವಿಳಾಸ ಕೂಡ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇನೆ. ಪ್ರತಿ ವರ್ಷ fitness ಗೆಂದು ಬಂದಾಗ ಮೊದಲು Motor Vehicle Inspector, inspect ಮಾಡುತ್ತಿದ್ದರು. ಆದರೆ ಈಗ ಲಾರಿ ಮತ್ತು ಇಂತಹ ಬಸ್ಸುಗಳಿಗೆ ಸೀನಿಯರ್ ಅಧಿಕಾರಿಗಳೇ ಮಾಡಬೇಕೆಂದು ತಿಳಿಸಿದ್ದೇವೆ. ಮೊದಲು ಒಬ್ಬರು inspect ಮಾಡುತ್ತಿದ್ದರು ಈಗ ಇಬ್ಬರು inspect ಮಾಡುತ್ತಾರೆ. ಮತ್ತೆ, ಹಿಂದಿನ ಸದನದಲ್ಲಿ ತಾವು Contract carriage buses

ಬಗ್ಗೆ ಹೇಳಿದ್ದೀರಿ. ಈಗ ಶೇಕಡ 95 ರಷ್ಟು ನಿಲ್ಲಿಸಿದ್ದೇವೆ. ಇರುವಂಥ ಶೇಕಡ 5ರಷ್ಟನ್ನು ನಿಯಂತ್ರಣ ಮಾಡುತ್ತೇವೆ. ಒಂದು ತಿಂಗಳಲ್ಲಿ 17820 ಬಸ್ಸುಗಳನ್ನು ತಪಾಸಣೆ ಮಾಡಿ 5819 ಕೇಸ್ ಹಾಕಿದ್ದೇವೆ. 282 ಬಸ್ಸುಗಳ ಪರ್ಮಿಟ್ suspend ಮಾಡಿದ್ದೇವೆ. ಒಟ್ಟು 1 ಕೋಟಿ 81 ಲಕ್ಷ ರೂ.ಗಳ ದಂಡ ವಸೂಲಿ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್ನೊಂದು ಸಲಹೆ ಕೊಟ್ಟರು. Road Transport Corporation ನಲ್ಲಿ, lowest tender ಪರಿಗಣಿಸುವುದರಿಂದ ಕಳಪೆ ಮಟ್ಟದ ಟೈರ್‌ಗಳು ಅಥವಾ ಸ್ಪೇರ್ ಪಾರ್ಟ್ಸ್‌ಗಳು ಬರುತ್ತಿವೆ. ಈ ಪದ್ಧತಿಯನ್ನು ಬದಲಾಯಿಸುತ್ತೇವೆ.

**ಶ್ರೀಮತಿ ಮೋಟಮ್ಮ:–** ವೋಲ್ವೋ ಬಸ್‌ನಲ್ಲಿ ಎ.ಸಿ. ಇರಬೇಕು. ಎ.ಸಿ. ಇದ್ದರೂ ಗ್ಲಾಸ್ ಓಪನ್ ಮಾಡಿ ಮುಚ್ಚುವಂತಹ ವ್ಯವಸ್ಥೆ ಇರಬೇಕು. ವಿಮಾನದಲ್ಲಿ ಕುಳಿತಾಗ ಅವರು ಎಮರ್ಜೆನ್ಸಿ ಡೋರ್ ಎಲ್ಲೆಲ್ಲಿದೆ ಎಂದು ಹೇಗೆ ಹೇಳುತ್ತಾರೋ, ವೋಲ್ವೋ ಬಸ್‌ನ ಕಂಡಕ್ಟರ್ ಅಥವಾ ಡ್ರೈವರ್ ಅನೌನ್ಸ್ ಮಾಡಬೇಕು. ಇಂತಹ ಘಟನೆಗಳು ಸಂಭವಿಸಿದಾಗ ಪ್ರಯಾಣಿಕರು ತಪ್ಪಿಸಿಕೊಂಡು ಹೋಗಲು ಅನುಕೂಲವಾಗುತ್ತದೆ.

**ಶ್ರೀ ರಾಮಲಿಂಗಾರೆಡ್ಡಿ:–** ಮಾನ್ಯ ಸಭಾಪತಿಗಳೆ, ಎಮರ್ಜೆನ್ಸಿ ಡೋರ್‌ಗಳನ್ನು ಇಡುವುದಕ್ಕೆ 3 ತಿಂಗಳ ಕಾಲಾವಕಾಶ ಕೊಟ್ಟಿದ್ದೇವೆ. ಈ ಅವಧಿಯಲ್ಲಿ ಎಮರ್ಜೆನ್ಸಿ ಡೋರ್ ಇಡಲಿಲ್ಲ ಎಂದರೆ ಆ ಬಸ್ಸುಗಳನ್ನು ಓಡಿಸುವುದಕ್ಕೆ ಬಿಡುವುದಿಲ್ಲ.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಮುಗಿದಿದೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**ಆ) ಚುಕ್ಕೆರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**ಶ್ರೀ ಎಸ್.ಆರ್.ಪಾಟೀಲ್:–** (ಸಭಾನಾಯಕರು):– ಮಾನ್ಯ ಸಭಾಪತಿಗಳೆ, ದಿನಾಂಕ 6ನೇ ಡಿಸೆಂಬರ್ 2013 ಸಮೂಹ 5 ರ ಲಿಖಿತ ಮೂಲಕ ಉತ್ತರಿಸಲಾಗುವ ಒಟ್ಟು 118 ಪ್ರಶ್ನೆಗಳ ಪೈಕಿ 101 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಆತ್ಮಹತ್ಯೆ ಪ್ರಕರಣವೆಂದು ಪ್ರಕರಣ ಮುಚ್ಚಿ ಹಾಕಿರುವುದು**

**983; ಶ್ರೀ ಸೋಮಣ್ಣ ಮ. ಬೇವಿನಮರದ (ವಿದಾನಸಭೆಯಿಂದ ಚುನಾಯಿತರಾದವರು)**

ಅ) ಕಾರವಾರ ಜಿಲ್ಲೆ ಕುಮಟಾ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್. ಸಂಖ್ಯೆ 31/2005 ಕಲಂ: 174 (ಸಿ) ಸಿ.ಆರ್.ಪಿ.ಸಿ. ರಂತೆ ಪ್ರಕರಣ ದಾಖಲಾದ ಸಂದರ್ಭದಲ್ಲಿ ಆ ಠಾಣೆಯಲ್ಲಿ ಇದ್ದ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿ, ನೌಕರರು ಈ ಹಿಂದೆ ಯಾವ ಯಾವ ಠಾಣೆಯಲ್ಲಿ ಸೇವೆ ಸಲ್ಲಿಸಿದ್ದಾರೆ; ಇವರುಗಳ ಮೇಲೆ ಯಾವ ಯಾವ ಆರೋಪಗಳಿಗಿವೆ; (ಹೆಸರು ಸಮೇತ ವಿವರ ಒದಗಿಸಿ) ಈಗ ಅವರುಗಳ ಎಲ್ಲೆಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ;

ಆ) ಪ್ರಕರಣದ ತನಿಖೆಯನ್ನು ವಹಿಸಿದ ಸಿಓಡಿ ತಂಡದಲ್ಲಿ ಇದ್ದ ಅಧಿಕಾರಿಗಳ ಹೆಸರು ಇವರು ಎಲ್ಲೆಲ್ಲಿ ಸೇವೆ ಸಲ್ಲಿಸಿದ್ದಾರೆ ಇವರುಗಳ ಮೇಲಿರುವ ಆರೋಪಗಳು ಮತ್ತು ಹಾಲಿ ಎಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಹೆಸರು ಸಮೇತ ವಿವರ ಒದಗಿಸುವುದು.

ಇ) ಸದರಿ ಪ್ರಕರಣ ಆತ್ಮಹತ್ಯೆ ಅಲ್ಲದೆ ಇದ್ದರೂ ನಿಜವಾದ ಅಪರಾಧಿ ಯಾರೆಂಬುದು ಇಡೀ ಊರಿಗೆ ಹೊನ್ನಾವರ ತಾಲ್ಲೂಕಿನಲ್ಲಿ ಜಗತ್ತು ಜಾಹಿರಾಗಿದ್ದರೂ ಆತ್ಮಹತ್ಯೆ ಮಾಡಿ ಕೊಂಡಿದ್ದಾರೆಂಬ ನೂರಕ್ಕೆ ನೂರರಷ್ಟು ಸುಳ್ಳು ಕಥೆ ಕಟ್ಟಿ ಈ ಪ್ರಕರಣವನ್ನು ವ್ಯವಸ್ಥಿತವಾಗಿ ಮುಚ್ಚಿ ಹಾಕಿದ್ದು ಇದನ್ನು ರೀ ಓಪನ್ ಮಾಡಿ ಅತ್ಯಂತ ದಕ್ಷ ಪ್ರಾಮಾಣಿಕ ಅಧಿಕಾರಿಯಿಂದ ತನಿಖೆ ನಡೆಸಿ ಸತ್ಯಾಂಶವನ್ನು ಹೊರತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

**ಶ್ರೀ ಕೆ.ಜೆ.ಜಾರ್ಜ್ (ಗೃಹ ಸಚಿವರು)**

ಅ) ಕುಮಟಾ ಪೊಲೀಸ್ ಠಾಣೆಯಲ್ಲಿ ಯು.ಡಿ.ಆರ್ ಸಂಖ್ಯೆ 31/2005 ಕಲಂ: 174(ಸಿ) ಸಿ.ಆರ್.ಪಿ.ಸಿ ರಂತೆ ಪ್ರಕರಣ ದಾಖಲಾದ ಸಂದರ್ಭದಲ್ಲಿ ಆ ಠಾಣೆಯಲ್ಲಿ ಇದ್ದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ಹೆಸರುಗಳು ಈ ಕೆಳಕಂಡಂತಿವೆ.

1) ಶ್ರೀ. ಪಿ.ಎ.ಸೂರಜ್ ಪಿ.ಎಸ್.ಐ
2) ಶ್ರೀ. ಎಂ.ಪಿ.ನಾಯಕ್ ಎ.ಎಸ್.ಐ
3) ಶ್ರೀ. ಗೋಪಾಲ.ಜೆ. ಹರಿಕಂತ್ರ. ಎ.ಹೆಚ್.ಸಿ.396

ಇವರುಗಳ ವಿವರುಗಳನ್ನು ಅನುಬಂಧ–ಅ ನಲ್ಲಿ ನೀಡಲಾಗಿದೆ

ಆ) **ಪ್ರಕರಣದ ತನಿಖೆಯನ್ನು ವಹಿಸಿದ ಸಿಓಡಿ ತಂಡದಲ್ಲಿ ಈ ಕೆಳಕಂಡ ಅಧಿಕಾರಿಗಳು ಇದ್ದರು.**

**1)** ಶ್ರೀ. ಎ.ಬಿ. ಸತ್ಯಣ್ಣರೆಡ್ಡಿ. ಪಿ.ಐ. ಓಓಡಿ (ಹೆಚ್&ಬಿ) ಬೆಂಗಳೂರು. ಪ್ರಸ್ತುತ ಅಂತರಿಕ ಭದ್ರತೆ ವಿಭಾಗ, ಬೆಂಗಳೂರು.
**2)** ಶ್ರೀ. ಹಬೀಬುಲ್ಲಾ. ಪಿ.ಐ. ಸರ್ಕಾರಿ ಸೇವೆಯಿಂದ ವಜಾಗೊಂಡಿರುತ್ತಾರೆ.
**3)** ಶ್ರೀ. ಜಿ.ಆರ್. ದೇಸಾಯಿ. ಪಿ.ಐ. 31-05-13 ರಂದು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.
**4)** ಶ್ರೀ. ಎಂ.ಎಸ್.ಹುಸೇನ್. ಡಿವೈಎಸ್‌ಪಿ. ದಿ:31-08-12ರಂದು ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ.
**5)** ಶ್ರೀ. ಎಂ. ನಾರಾಯಣ ಡಿವೈಎಸ್‌ಪಿ ಪ್ರಸ್ತುತ ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಇವರುಗಳ ವಿವರಗಳನ್ನು ಅನುಬಂಧ–ಆ ನಲ್ಲಿ ನೀಡಲಾಗಿದೆ.

ಇ) ಪ್ರಕರಣದ ತನಿಖಾ ಕಾಲದಲ್ಲಿ ಸಿ.ಐ.ಡಿಯ ತನಿಖಾಧಿಕಾರಿಗಳು 36 ಸಾಕ್ಷಿದಾರರುಗಳನ್ನು ವಿಚಾರಣೆ ಮಾಡಿ ಹೇಳಿಕೆಗಳನ್ನು ಪಡೆದುಕೊಂಡು, ತನಿಖೆ ನಡೆಸಿದ್ದು, ಮೃತಳ ಸಾವಿನಲ್ಲಿ ಇತರೆಯವರ ಕೈವಾಡವಿರುವ ಬಗ್ಗೆ ಯಾವುದೇ ಬಲವಾದ ಸಾಕ್ಷಿ ಪುರಾವೆಗಳು ಲಭ್ಯವಿಲ್ಲದ ಕಾರಣ ಇದು ಆತ್ಮಹತ್ಯೆ ಪ್ರಕರಣವೆಂದು ಪರಿಗಣಿಸಿ, ದಿನಾಂಕ: 12-03-2007 ರಂದು "ಬಿ" ಅಂತಿಮ ವರದಿಯನ್ನು, ತಾಲೂಕು ದಂಡಾಧಿಕಾರಿಗಳು (ತಹಸೀಲ್ದಾರ್), ಕುಮಟಾ, ಕಾರವಾರ ಜಿಲ್ಲೆ ರವರಿಗೆ ತನಿಖಾಧಿಕಾರಿಗಳು ಸಲ್ಲಿಸಿರುತ್ತಾರೆ. ಆದ್ದರಿಂದ ಪ್ರಕರಣವನ್ನು ರಿ ಓಪನ್ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:983 ಕ್ಕೆ ಅನುಬಂಧ–ಅ**

| ಪೊಲೀಸ ಸಿಬ್ಬಂದಿ ಹಾಗೂ ಅಧಿಕಾರಿಗಳ ಹೆಸರು ಹಾಗೂ ಪದನಾಮ | 2005 ರಿಂದ ಯಾವ ಯಾವ ಪೊಲೀಸ ಠಾಣೆಯಲ್ಲಿ/ವಿಭಾಗ/ ಘಟಕದಲ್ಲಿ ಸೇವೆ ಸಲ್ಲಿಸಿದ್ದಾರೆ? (ಸೇವೆ ಸಲ್ಲಿಸಿದ ಅವಧಿಯನ್ನು ಸಹ ನಮೂದಿಸುವುದು. | ಪ್ರಸ್ತುತ ಎಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. (ಎಂದಿನಿಂದ) | ಈ ಸಿಬ್ಬಂದಿರವರುಗಳ ಯಾವ ಯಾವ ಆರೋಪಗಳಿವೆ. ವಿವರ ನೀಡುವುದು. |
|---|---|---|---|
| ಶ್ರೀ ಪಿ.ಎ ಸೂರಜ್, ಪಿ.ಎಸ್.ಐ. ಕುಮಟಾ | **ಕುಮಟಾ ಪಿ.ಎಸ್ ದಿ:07-04-2004 ರಿಂದ 15-05-2006. ರವರೆಗೆ.**<br>ರಾಮನಗರ ಠಾಣೆ ಉತ್ತರ ಕನ್ನಡ ಜಿಲ್ಲೆ ದಿ: 15-05-2006 ರಿಂದ 15-06-2006. ರವರೆಗೆ.<br>ದಾಂಡೇಲಿ ಶಹರ ಠಾಣೆ ದಿ: 16-06-2006 ರಿಂದ 22-06-2006 ರವರೆಗೆ.<br>ರಾಮನಗರ ಠಾಣೆ ಉತ್ತರ ಕನ್ನಡ ಜಿಲ್ಲೆ ದಿ: 25-06-2006 ರಿಂದ 18-06-2007 ರವರೆಗೆ.<br>**ಕೊಡಗು ರಾಜ್ಯ ಗುಪ್ತಿ ವಾರ್ತೆ ದಿ: 29-06-2007 ರಿಂದ 14-02-2008 ರವರೆಗೆ.** | ಸಿ.ಸಿ.ಬಿ ಮೈಸೂರು, ದಿ: 30-09-2013 ರಿಂದ | ಯಾವುದೇ ಆರೋಪಣೆಗಳು ಇರುವುದಿಲ್ಲ. |

| | | | |
|---|---|---|---|
| | ಕುಡಗೂ ಅಬಕಾರಿ ಮತ್ತು ಲಾಟರಿ ದಿ: 16-02-2008 ರಿಂದ 31-06-2008 ರವರೆಗೆ. | | |
| | **ಸಿಪಿಐ ಹೊನ್ನಾವರ ದಿ: 06-09-2008 ರಿಂದ** | | |
| | ಸಿ.ಪಿ.ಐ. ಕುಮಟಾ 24-09-2008 ರಿಂದ 30-06-2011 ವರೆಗೆ. | | |
| | **ಚಿಕ್ಕಮಗಳೂರು ಕೊಪ್ಪಾ ವೃತ್ತ ದಿ: 11-07-2011 ರಿಂದ 05-09-2012 ರವರೆಗೆ.** | | |
| | ಡಿ.ಸಿ.ಆರ್.ಬಿ ಮೈಸೂರ ದಿ: 17-09-2012 ರಿಂದ<br>30-09-2013 ರವರೆಗೆ. | | |
| | ಸಿ.ಸಿ.ಬಿ ಮೈಸೂರು. ದಿ:<br>30-09-2013 ರಿಂದ | | |
| ಶ್ರೀ ಎಂ.ಪಿ.ನಾಯ್ಕ, ಎ.ಎಸ್.ಐ.(ಮರಣಪಟ್ಟಿರುತ್ತಾರೆ). | ಶ್ರೀ ಎಂ.ಪಿ.ನಾಯ್ಕ ಎ.ಎಸ್.ಐ. ರವರು ದಿನಾಂಕ: 15-09-2008 ರಂದು ನಿಧನ ಹೊಂದಿದ್ದು ಸದ್ರಿಯವರ ಸೇವಾ ಪುಸ್ತಕ | | |

| | | | |
|---|---|---|---|
| | ಅನುಕಂಪದ ಆಧಾರದ ಮೇಲೆ ನೇಮಕಾತಿ ಕುರಿತು ಪ್ರಧಾನ ಕಛೇರಿಗೆ ಕಳುಹಿಸಿದ್ದು ಇರುತ್ತದೆ. | | |
| ಗೋಪಾಲ ಜೆ.ಹರಿಕಂತ್ರ ಸಿ.ಎಚ್.ಸಿ. 396 | ಕುಮಟಾ ಠಾಣೆ 2004ರಿಂದ 05-06-2010 ರವರೆಗೆ. | ಚಿತ್ತಾಕುಲಾ ಠಾಣೆಯಲ್ಲಿ ದಿ: 01-03-2011 ರಿಂದ ಈ ವರೆಗೆ. | ಯಾವುದೇ ಆರೋಪಣೆಗಳು ಇರುವುದಿಲ್ಲ |
| | ಕಾರವಾರ ಶಹರ ಠಾಣೆ ದಿ:14-06-2010 ರಿಂದ 23-02-2011 | | |
| | ಚಿತ್ತಾಕುಲಾ ಠಾಣೆ ದಿ: 01-03-2011 ರಿಂದ ಈ ವರೆಗೆ. | | |

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:983 ಕ್ಕೆ ಅನುಬಂಧ–ಆ**

| ಕ್ರಮ ಸಂಖ್ಯೆ **Sl. NO.** | ಶ್ರೀಯುತರ ಹೆಸರು, ಹುದ್ದೆ ಮತ್ತು ಕರ್ತವ್ಯ ನಿರ್ವಹಿಸಿದ ಸ್ಥಳ | ಈ ಹಿಂದೆ ಕರ್ತವ್ಯ ನಿರ್ವಹಿಸಿದ ಸ್ಥಳ | ಆರೋಪಗಳ ವಿವರ. |
|---|---|---|---|
| 1 | Sathyanna Reddy T.B.<br>DySP<br>ISD 5.10.2013 | 1. ISD 5.10.2013<br>2. Anti E & L Enforcement Cell, Ramanagar from 01.08.2011 (Election Deputation- K.R.Puram PS, Bangalore City from 23.04.2013 to 12.07.2013) to 4.10.2013(PI)<br>3. Holenarasipura Circle, Hassan dist from 31.10.2008 to 25.07.2011<br>4. Bellary Rural Circle 5.09.08 to 26.10.2008<br>5. H.Bommanahalli Circle, Bellary dist from 04.04.2008 to 05.09.2008.<br>6. Bellary Traffic PS, Bellary dist from 19.06.2006 to 03/04/2008<br>7. C,I.D., Bangalore 31.12.2005 to 18.06.2006<br>8. Karnataka Lokayukta 06.12.04 to 30.12.05 | No |
| 2 | Habibulla<br>PI<br>**Discharge from service From 16.3.2011** | **1)** DCRE,Tumkuru 5.03.2009 to 15.03.2011<br>**2)** under suspension from 12.03.2007<br>**3)** Hosadurga Circle chitradurga 11.09.2006 to12.03.2007<br>**4)** COD 21.11.2005 TO 10.09.2006 | **-** |

| | | | |
|---|---|---|---|
| | | **5)** IGP Office CR Bangalore 2.12.2002 to 2.11.2005. | |
| 3 | Gadigappa Ramappa Desai Retd Dy SP<br>**Retired on 31.05.2013** | **1.** City SB,Bangalore city from 22.10.2009 to 31.05.2013<br>**2.** DCRB, Haveri Dist from 10.12.2008 to 13.10.2009<br>**3.** Gangavathi Sub division from 07.09.2007 to 02.12.2008<br>**4.** COD Bangalore from 05.06.2007 to 04.09.2007<br>**5.** COD Bangalore from 28.01.2005 to 05.06.2007 (PI) | No |
| 4 | Mir Sujath Hussain Retd DySP<br><br>Retired on 31.08.2012 | 1. Chamarajapet Sub.Dn. b'lore City from 09.09.2010 to 31.08.2012<br>2. COD Hqrs, Bangalore from 03.01.2007 to 09.09.2010<br>3. AWAITING POSTING 20.08.2006 to 02.01.2007<br>4. City Crime Branch, Bangalore city from 19.09.2002 to 19.08.2006 (PI)<br>5. J.B.Nagar PS, Bangalore city from 29.09.1998 to 18.09.2002 | No |

| | | | |
|---|---|---|---|
| **5** | Narayana. M Dysp KSPTS, Channapatna 3.10.2013 | 1. KSPTS, Channapatna 3.10.2013<br>2. State Int. from 21.06.2012 to 30.09.2013<br>3. Under Suspention 24.11.2011 to 13.06.2012.<br>4. DCRB, Chamarajanagar 11.11.2011 to 20.11.2011<br>5. Kushalanagar Sub Dn,Kodau Dist. to 17.11.2010<br>6. KPA, Mysore from 21.09.2010 to 15.11.2010<br>7. Kodagu Dist, Kushal Nagar Sub division from 11.12.2007 to 10.09.2010<br>8. AWAITING POSTING from 02.09.2007 to 10.12.2007<br>9. Mandya Sub division from 10.08.2007 to 01.09.2007<br>10. DCRB, Chamarajanagar Dist from 08.01.2007 to 03.08.2007<br>11. COD Hqrs, Bangalore from 14.09.2006 to 07.01.2007<br>12. Gonikoppa Circle,Kodagu dist from 23.06.2006 to 10.09.2006<br>13. Kollegala Circle from 22.03.2004 to 21.06.2006 | KLA Trap on 18.9.11 |

## ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಖೈದಿ ಪರಾರಿ ಪ್ರಕರಣ

### 948; ಶ್ರೀ ಅಶ್ವಥ್ ನಾರಾಯಣ (ವಿಧಾನ ಪರಿಷತ್ ಸದಸ್ಯರು)

ಅ) ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಶಿಕ್ಷೆಗೆ ಒಳಗಾಗಿದ್ದ ಖೈದಿಯೊಬ್ಬನು ಪರಾರಿಯಾಗಿದ್ದು ನಿಜವೇ? (ಖೈದಿಯ ಹೆಸರು ಮತ್ತು ವಿಳಾಸ ನೀಡುವುದು).

ಆ) ಹಾಗಿದ್ದಲ್ಲಿ, ನ್ಯಾಯಾಲಯವು ಯಾವ ಶಿಕ್ಷೆಯನ್ನು ವಿಧಿಸಿದೆ?

ಇ) ಈ ರೀತಿ ಶಿಕ್ಷೆಗೊಳಗಾಗಿದ್ದ ಖೈದಿಗಳನ್ನು ಪ್ರತ್ಯೇಕ ಸೆಲ್‌ಗಳಲ್ಲಿ ಇರಿಸಲಾಗುತ್ತದೆಯೇ?

ಈ) ಹಾಗಿದ್ದಲ್ಲಿ, ಈ ಖೈದಿಯು ಪರಾರಿಯಾಗಿದ್ದು ಹೇಗೆ? ಖೈದಿಯು ಪರಾರಿಯಾಗಲು ಸಹಕರಿಸಿದ ಜೈಲು ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮಗಳೇನು?

### ಶ್ರೀ ಕೆ.ಜೆ.ಜಾರ್ಜ್ (ಗೃಹ ಸಚಿವರು)

ಅ) ಶಿಕ್ಷಾ ಬಂದಿ ಸಂಖ್ಯೆ 5483 ಶಂಕರ @ ಜಯಶಂಕರ ತಂದೆ ಲೇಟ್ ಮಾರಿಮುತ್ತು ಈತನು ದಿನಾಂಕ 01-09-2013 ರಂದು ಬೆಂಗಳೂರು ಕೇಂದ್ರ ಕಾರಾಗೃಹದಿಂದ ಪರಾರಿಯಾಗಿದ್ದು ನಿಜವಿರುತ್ತದೆ.

ಶಿಕ್ಷಾ ಬಂದಿಯ ವಿಳಾಸ ಈ ಕೆಳಕಂಡಂತಿರುತ್ತದೆ.

ಕನ್ಯಂಪಟ್ಟಣಂ, ಕೋನಸಮುದ್ರ ಗ್ರಾಮ, ಎಡಪ್ಪಾಡಿ ತಾ. ಸೇಲಂ ಜಿಲ್ಲೆ, ತಮಿಳುನಾಡು ರಾಜ್ಯ. ಸದರಿ ಬಂದಿಯ ವಿರುದ್ಧ ನಮ್ಮ ರಾಜ್ಯದಲ್ಲಿ ಮತ್ತು ತಮಿಳುನಾಡು ರಾಜ್ಯದಲ್ಲಿ ಸುಮಾರು 21 ಪ್ರಕರಣಗಳು ಬಾಕಿ ಇರುತ್ತವೆ.

ಆ) ಈ ಪರಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ಪರಪ್ಪನ ಅಗ್ರಹಾರ ಪೋಲಿಸ್ ಠಾಣೆಯಲ್ಲಿ ದಿನಾಂಕ 01-09-2013 ರಂದು ಪ್ರಕರಣ ದಾಖಲಾಗಿದ್ದು ಪ್ರಕರಣ ಸಂಖ್ಯೆ:246/2013 ಆಗಿರುತ್ತದೆ. ಗೌ//

9 ನೇ ಎ.ಸಿ.ಎಂ.ಎಂ. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ.

ಇ) ಸದರಿ ಬಂದಿಯು ಮಾನಸಿಕ ಅಸ್ವಸ್ಥ ಕೈದಿಯಾಗಿದ್ದು, ಸದರಿ ಬಂದಿಯನ್ನು ಭದ್ರತಾ ದೃಷ್ಟಿಯಿಂದ ಆಸ್ಪತ್ರೆಯ ಸೆಲ್ ನಂಬರ್ 26 ರಲ್ಲಿ ಪ್ರತ್ಯೇಕವಾಗಿ ಇರಿಸಲಾಗಿತ್ತು.

**ಈ)** ಸಜಾ ಬಂದಿ ಸಂಖ್ಯೆ 5483ಶಂಕರ @ ಜಯಶಂಕರ ತಂದೆ ಲೇಟ್ ಮಾರಿಮುತ್ತು ಈತನು ಆಸ್ಪತ್ರೆಯ ವಿಭಾಗದ ಸೆಲ್ ನಂಬರ್ 26 ರಿಂದ ಭದ್ರತಾ ಸಿಬ್ಬಂದಿಯ ಕಣ್ತಪ್ಪಿಸಿ ಕಾರಾಗೃಹದ ಹೊರಗೋಡೆಯಿಂದ ತನ್ನ ಬೆಡ್‌ಶೀಟ್‌ನ ಸಹಾಯದಿಂದ ಪರಾರಿಯಾಗಿದ್ದು ದಿನಾಂಕ 06/09/2013 ರಂದು ಪುನರ್ ಬಂಧಿಸಲಾಗಿರುತ್ತದೆ. ಕಾರಾಗೃಹದ ಹೊರಗೋಡೆಯಿಂದ ಪರಾರಿಯಾಗುವ ಸಂದರ್ಭದಲ್ಲಿ ಸದರಿ ಬಂಧಿಯ ಕಾಲುಗಳಿಗೆ ಗಾಯಗಳಾಗಿದ್ದು, ಮೂಳೆ ಮುರಿದ್ದಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿರುತ್ತಾನೆ. ಸದರಿ ಬಂದಿಗೆ ಶಸ್ತ್ರ ಚಿಕಿತ್ಸೆಯಾಗಿದ್ದು, ಪ್ರಸ್ತುತ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಸಜಾಬಂದಿ ಸಂಖ್ಯೆ 5483ಶಂಕರ @ ಜಯಶಂಕರ ಈತನ ಪರಾರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆಯಲ್ಲಿ ತಪ್ಪಿತಸ್ಥರೆಂದು ಕಂಡು ಬಂದ ಇಲಾಖೆಯ ಒಟ್ಟು 13 ಅಧಿಕಾರಿ/ಸಿಬ್ಬಂದಿಯವರನ್ನು ಈಗಾಗಲೇ ಅಮಾನತ್ತಿನಲ್ಲಿಡಲಾಗಿದೆ.

**ವಿದ್ಯುತ್ ಅಪಘಾತಗಳು**

**949; ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ವಿದ್ಯುತ್ ಅಪಘಾತದಲ್ಲಿ ಸತ್ತವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

**ಆ)** ಮೃತರ ಕುಟುಂಬಗಳಿಗೆ ಇಲಾಖೆ ಅಥವಾ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗಿದೆಯೇ;

**ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಗಳು)**

**ಅ)** **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸಂಬಂಧಪಟ್ಟಂತೆ** ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ (2010-11 ರಿಂದ 2012-13) ವಿದ್ಯುತ್ ಅಪಘಾತದಲ್ಲಿ ಮೃತಪಟ್ಟವರ ಒಟ್ಟು ಸಂಖ್ಯೆ **1,114**. ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಸಂಬಂಧಪಟ್ಟಂತೆ** ಕಳೆದ 3 ವರ್ಷಗಳಲ್ಲಿ ರಾಯಚೂರು ಶಾಖೋತ್ಪನ್ನ ಕೇಂದ್ರ, ರಾಯಚೂರು ಜಿಲ್ಲೆಯಲ್ಲಿ 02 ವಿದ್ಯುತ್ ಅಪಘಾತಗಳಲ್ಲಿ (ದಿನಾಂಕ 26.11.2011, ಮತ್ತು 26.07.2013) ಹಾಗೂ ಬಳ್ಳಾರಿ ಶಾಖೋತ್ಪನ್ನ ಕೇಂದ್ರ, ಬಳ್ಳಾರಿಯಲ್ಲಿ 02 ವಿದ್ಯುತ್ ಅಪಘಾತಗಳಲ್ಲಿ (ದಿನಾಂಕ. 02.10.2011, ಹಾಗೂ 30.06.2013) ಗುತ್ತಿಗೆದಾರರಡಿ ಕಾರ್ಯ ನಿರ್ವಹಿಸುತ್ತಿದ್ದ ಒಟ್ಟು 04 ಜನ ಕಾರ್ಮಿಕರು ಮೃತರಾಗಿರುತ್ತಾರೆ.

**ಆ)** **ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಸಂಬಂಧಪಟ್ಟಂತೆ** ರಾಜ್ಯದ ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಅಪಘಾತಗಳು ಮೃತಪಟ್ಟವರ ಅಜಾಗರೂಕತೆಯಿಂದ ಸಂಭವಿಸಿದಲ್ಲಿ ಯಾವುದೇ ಪರಿಹಾರವನ್ನು ನೀಡಲಾಗುವುದಿಲ್ಲ. ಅರ್ಹ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಗಳ ಕುಟುಂಬದವರಿಗೆ ನೀಡಲಾಗಿರುವ ಪರಿಹಾರದ ವರ್ಷವಾರು ವಿವರಗಳು ಕೆಳಕಂಡಂತಿವೆ:

| ಕ್ರಮ ಸಂಖ್ಯೆ | ವರ್ಷ | ಮೃತಪಟ್ಟ ವ್ಯಕ್ತಿಗಳ ಸಂಖ್ಯೆ | ನೀಡಲಾದ ಪರಿಹಾರದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | 2010-11 | 133 | 193.58 |
| 2 | 2011-12 | 171 | 207.55 |
| 3 | 2012-13 | 153 | 171.95 |

**ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಸಂಬಂಧಪಟ್ಟಂತೆ** ಉದ್ಯೋಗಿಗಳ ನಷ್ಟ ಪರಿಹಾರ ಕಾಯ್ದೆಯಡಿ ಮೃತರ ಕುಟುಂಬಗಳಿಗೆ ಸಲ್ಲಬೇಕಿರುವ ನಷ್ಟ ಪರಿಹಾರ ಮೊತ್ತವನ್ನು ಉದ್ಯೋಗಿಗಳ ನಷ್ಟ ಪರಿಹಾರ ಆಯುಕ್ತ ಹಾಗೂ ಕಾರ್ಮಿಕ ಅಧಿಕಾರಿಯವರಲ್ಲಿ ಗುತ್ತಿಗೆದಾರರು ಠೇವಣಿ ಮಾಡಿರುತ್ತಾರೆ. (ವಿವರ ಅನುಬಂಧ–2 ರಲ್ಲಿದೆ)

**ಅನುಬಂಧ–1**

**ರಾಜ್ಯದ ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ (2010-11 ರಿಂದ 2012-13) ವಿದ್ಯುತ್ ಅಪಘಾತಗಳಲ್ಲಿ ಮೃತಪಟ್ಟವರ ಸಂಖ್ಯೆಯ ಜಿಲ್ಲಾವಾರು ವಿವರಗಳು**

| ಕ್ರಮ ಸಂಖ್ಯೆ | ಜಿಲ್ಲೆ | **2010-11** | **2011-12** | **2012-13** | ಒಟ್ಟು |
|---|---|---|---|---|---|
| 1. | ಬೆಂಗಳೂರ ನಗರ | 13 | 21 | 29 | **63** |
| 2. | ಬೆಂಗಳೂರ ಗ್ರಾಮಾಂತರ | 16 | 8 | 11 | **35** |
| 3. | ಕೋಲಾರ | 14 | 11 | 9 | **34** |
| 4. | ಚಿಕ್ಕಬಳ್ಳಾಪೂರ | 1 | 7 | 11 | **19** |
| 5. | ರಾಮಗನರ | 1 | 8 | 12 | **21** |
| 6. | ದಾವಣಗೆರೆ | 15 | 19 | 15 | **49** |

| | | | | | |
|---|---|---|---|---|---|
| 7. | ಚಿತ್ರದುರ್ಗ | 18 | 16 | 16 | **50** |
| 8. | ತುಮಕೂರು | 32 | 26 | 26 | **84** |
| 9. | ಮಂಡ್ಯ | 6 | 17 | 15 | **38** |
| 10. | ಮೈಸೂರು | 16 | 10 | 11 | **37** |
| 11. | ಚಾಮರಾಜನಗರ | 4 | 5 | 4 | **13** |
| 12. | ಕೊಡಗು | 9 | 8 | 8 | **25** |
| 13. | ಹಾಸನ | 16 | 16 | 16 | **48** |
| 14. | ದಕ್ಷಿಣ ಕನ್ನಡ | 15 | 10 | 20 | **45** |
| 15. | ಉಡುಪಿ | 6 | 15 | 4 | **25** |
| 16. | ಶಿವಮೊಗ್ಗ | 12 | 10 | 13 | **35** |
| 17. | ಚಿಕ್ಕಮಗಳೂರು | 17 | 17 | 12 | **46** |
| 18. | ಬೆಳಗಾಂ | 37 | 37 | 47 | **121** |
| 19. | ಧಾರವಾಡ | 5 | 5 | 5 | **15** |
| 20. | ಗದಗ | 9 | 4 | 2 | **15** |
| 21. | ಹಾವೇರಿ | 7 | 9 | 11 | **27** |
| 22. | ಬಿಜಾಪೂರ | 12 | 11 | 4 | **27** |
| 23. | ಬಾಗಲಕೋಟೆ | 14 | 13 | 14 | **41** |
| 24. | ಉತ್ತರಕನ್ನಡ | 10 | 9 | 5 | **24** |
| 25. | ಗುಲ್ಬರ್ಗಾ | 7 | 9 | 12 | **28** |
| 26. | ಯಾದಗಿರಿ | 8 | 9 | 5 | **22** |
| 27. | ಬೀದರ್ | 11 | 12 | 13 | **36** |
| 28. | ರಾಯಚೂರು | 11 | 7 | 11 | **29** |
| 29. | ಕೊಪ್ಪಳ | 15 | 4 | 7 | **26** |
| 30. | ಬಳ್ಳಾರಿ | 13 | 6 | 17 | **36** |
| | **ಒಟ್ಟು** | **370** | **359** | **385** | **1114** |

**ಅನುಬಂಧ–2**

| ಕ್ರಮ ಸಂಖ್ಯೆ | ನಿಧನ ಹೊಂದಿದ ಕಾರ್ಮಿಕನ ಹೆಸರು / ವಿಳಾಸ | ವರ್ಷ | ವಿದ್ಯುತ್ ಅಪಘಾತದಲ್ಲಿ ನಿಧನ ಹೊಂದಿದ ಸ್ಥಳ | ನಿಧನ ಹೊಂದಿದ ಕಾರ್ಮಿಕರು ನಿರ್ವಹಿಸುತ್ತಿದ್ದ ಕೆಲಸ | ಅಪಘಾತ ಸಂಭವಿಸಿದ ದಿನಾಂಕ | ಪರಿಹಾರ |
|---|---|---|---|---|---|---|
| 1 | ಚೋತು ಸೋನಿ, ತೆಲ್ಮ(ಜಿ/ಪೊಸ್ಟ, ಜಮಲೂದ್ದಿನ್‌ಪುರ್ ಬೆತೆರಾ ರೋಡ್, ಉಭವನ್, ಠಾಣಾ(ತಾ) ಉತ್ತರ ಪ್ರದೇಶ | 20 ವರ್ಷ | ಬಳ್ಳಾರಿ ಶಾಖೋತ್ಪನ್ ಕೇಂದ್ರದ ಬಾಯ್ಲರ್ 2ನೇ ಘಟಕದ ಕನ್‌ಸ್ಟ್ರಕ್ಷನ್ ಸೈಟ್ | ಮೆ॥ಭವಾನಿ ಎರಕ್ಷನ್ ಪ್ರೈ.,ಲಿ ಗುತ್ತಿಗೆದಾರರ ಕಾರ್ಮಿಕರ (ಹೆಲ್ಪರ್) | 30.06.13 | ನಷ್ಟ ಪರಿಹಾರ ಮೊತ್ತವಾದ ₹ 5,37,600/- ಯನ್ನು ಉದ್ಯೋಗಿಗಳ ನಷ್ಟ ಪರಿಹಾರ ಹಾಗೂ ಕಾರ್ಮಿಕ ಅಧಿಕಾರಿಯವರಲ್ಲಿ ಗುತ್ತಿಗೆದಾರರು ಠೇವಣಿ ಮಾಡಿರುವರು. |
| 2 | ದಲಿಮ್,ಚರ ಬಾಪ್ಮರ ದಿನಟೊಲ್ಲ ಪೋಲಿಸ್ | 24 ವರ್ಷ | ಬಳ್ಳಾರಿ ಶಾಖೋತ್ತನ್ನ | ಮೆ॥ ಹೆರಾ ಇನ್ಫ್ರಾಸ್ಟ್ರಕ್ಚರ್ | 02.10.11 | ನಷ್ಟ ಪರಿಹಾರ ಮೊತ್ತವಾದ |

| | | | | | | |
|---|---|---|---|---|---|---|
| | ಸ್ಟೇಷನ್, ಖಾಲಿಯಾ ಚೌಕ್, ಸುಲ್ತನ್ ಗಂಜಿ ತಾ॥ ಮಂಡಲ್ (ಜಿ), ಪಶ್ಚಿಮ ಬಂಗಾಳ | | ಕೇಂದ್ರದ 2ನೇ ಘಟಕ ಎಸ್. ಡಬ್ಲೂಎಸ್ ರೂಮ್ | ಪ್ರೈ.,ಲಿ., ಕಾರ್ಮಿಕ (ಹೆಲ್ಪರ್) | | ₹ 300000/-ಯನ್ನು ಉದ್ಯೋಗಿಗಳ ನಷ್ಟ ಪರಿಹಾರ ಹಾಗೂ ಕಾರ್ಮಿಕ ಅಧಿಕಾರಿಯಲ್ಲಿ ಗುತ್ತಿಗೆದಾರರು ಠೇವಣಿ ಮಾಡಿರುವರು |
| 3 | ಸತ್ಯವಾನ ತಂದೆ ರಾಮನಿವಾಸ, ನಿಂದನ(ಪೋ), ಟೋಟಕ್(ಜಿ) ಹರಿಯಾಣ ರಾಜ್ಯ | | ಇನ್‌ಟೇಕ್ ಏರಿಯಾ ಪಂಪ್ ಹೌಸ್ | ಗುತ್ತಿದಾರಡಿ ನಿರ್ವಹಿಸುತ್ತಿದ್ದ ಕಾರ್ಮಿಕ ಮೆ॥ ಅಕ್ಷತಾ ಆಂಡರ್ ವಾಟರ್ ಸರ್ವಿಸಿಸ್ ಬೆಳಗಾವಿ. | 26.11.11 | ನಷ್ಟ ಪರಿಹಾರ ಮೊತ್ತವಾದ ₹ 5,27,547/–ಅನ್ನು ಉದ್ಯೋಗಿಗಳ ನಷ್ಟ ಪರಿಹಾರ ಹಾಗೂ ಕಾರ್ಮಿಕ ಅಧಿಕಾರಿಯಲ್ಲಿ ಗುತ್ತಿಗೆದಾರರು ಠೇವಣಿ ಮಾಡಿರುವರು. |

| | | | | | | |
|---|---|---|---|---|---|---|
| 4 | ಅನಂತ ವರ್ಘ ತಂದೆ ವಿವೇಕಾನಂದ ನಂ. ಎ1/1 ಹೊಸಯಲ್ಲಾಪೂರ ರಾಯಚೂರ (ಜಿ) | | 220 ಕೆ.ವಿ.ಔಟ್ ಡೋರ್ ಯಾರ್ಡನಲ್ಲಿ | ನಾಗೇಶ ಮೆ॥ಸಾಗರ ಇಲೆಕ್ಟ್ರಿಕಲ್ಸ್ | 26.07.13 | ನಷ್ಟ ಪರಿಹಾರ ಮೊತ್ತವಾದ ₹ 3,50,000/– ಅನ್ನು ಉದ್ಯೋಗಿಗಳ ನಷ್ಟ ಪರಿಹಾರ ಹಾಗೂ ಕಾರ್ಮಿಕ ಅಧಿಕಾರಿಯಲ್ಲಿ ಗುತ್ತಿಗೆದಾರರು ಠೇವಣಿ ಮಾಡಿರುವರು. |

## ಭಾರತೀಯ ಆಡಳಿತ ಸೇವೆ, ಭಾರತೀಯ ಅರಣ್ಯ ಸೇವೆ ಮತ್ತು ಭಾರತೀಯ ಪೋಲಿಸ್ ಸೇವೆಗಳ ಬಗ್ಗೆ

**894; ಶ್ರೀ ಡಿ.ಎಸ್. ವೀರಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಅ)** ರಾಜ್ಯದ ಸೇವೆ ಸಲ್ಲಿಸುತ್ತಿರುವ ಹೊರರಾಜ್ಯಗಳ ಹಾಗೂ ಕೇಂದ್ರ ಕೇಡರ್‌ಗಳಾದ, ಭಾ.ಆ.ಸೇ, ಭಾ.ಅ.ಸೇ ಮತ್ತು ಭಾರತ ಪೋಲಿಸ್ ಸೇವೆಗೆ ಸೇರಿದ ಎಷ್ಟು ಅಧಿಕಾರಿಗಳು ಸೇವೆ ಸಲ್ಲಿಸುತಿದ್ದಾರೆ; (ವಿವರ ನೀಡುವುದು).

**ಆ)** ಅಂತಹವರ ಹುದ್ದೆ ಹಾಗೂ ಸೇವೆ ಸಲ್ಲಿಸುತ್ತಿರುವ ಇಲಾಖೆಗಳ ಕಳೆದ ಹದಿನೈದು ವರ್ಷಗಳ ವಿವರ ನೀಡುವುದು.

**ಇ)** ಅಂತಹವರು ಯಾವ ಮೂಲ ಇಲಾಖೆಯಿಂದ ಸೇವೆಗೆ ನಿಯುಕ್ತರಾಗಿರುತ್ತಾರೆ? (ಸಂಪೂರ್ಣ ವಿವರ ನೀಡುವುದು).

**ಶ್ರೀ ಸಿದ್ದರಾಮಯ್ಯ (ಮುಖ್ಯ ಮಂತ್ರಿಯವರು)**

**ಅ)** ರಾಜ್ಯದ ಸೇವೆ ಸಲ್ಲಿಸುತ್ತಿರುವ ಹೊರರಾಜ್ಯಗಳ ಹಾಗೂ ಕೇಂದ್ರ ಕೇಡರ್‌ಗಳಾದ ಭಾ.ಆ.ಸೇ ಮತ್ತು ಭಾ.ಪೊ.ಸೇ ಸೇವೆಗೆ ಸೇರಿದ ಅಧಿಕಾರಿಗಳು ಯಾರು ಇರುವದಿಲ್ಲ.

**ಭಾರತೀಯ ಅರಣ್ಯ ಸೇವೆ ಅದಿಕಾರಿಗಳು:**

ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಹೊರ ರಾಜ್ಯಗಳ ಹಾಗೂ ಕೇಂದ್ರದ ಕೇಡರ್ ಆದ ಭಾರತೀಯ ಅರಣ್ಯ ಸೇವೆಗೆ ಸೇರಿದ ಅಧಿಕಾರಿ ಒಬ್ಬರು ಮಾತ್ರ.

ಶ್ರೀ ಡಿ. ಮಂಜುನಾಥ್, ಐಎಫ್‌ಎಸ್ ರವರು ಸಿಕ್ಕಿಂ ಕೇಡರ್‌ನಿಂದ ಕರ್ನಾಟಕ ಕೇಡರ್‌ಗೆ ನಿಯೋಜನೆಗೊಂಡಿರುತ್ತಾರೆ (ದಿನಾಂಕ 17/10/2013 ರಂದು ವರದಿ ಮಾಡಿಕೊಂಡಿರುತ್ತಾರೆ. ಪ್ರಸ್ತುತ ಉಪ

ಅರಣ್ಯ ಸಂರಕ್ಷಣಾಧಿಕಾರಿ ಭದ್ರಾವತಿ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ)

**ಆ)** ಪ್ರಶ್ನೆ ಉದ್ಭವಿಸುವುದಿಲ್ಲ.

**ಇ)** (ಅ) ನಲ್ಲಿನ ಉತ್ತರದ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ ಸಭಾಪತಿಯವರು ಮಂಡಿಸಲಾಯಿತು.

**ಬಿ.ಬಿ.ಎಂ.ಪಿ ವ್ಯಾಪ್ತಿಯ ಮಾರ್ಕೆಟ್**

**952; ಶ್ರೀ ಅಶ್ವಥನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು)**

**ಅ)** ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ ಮಾರ್ಕೆಟ್‌ಗಳು ಯಾವುವು; ಸದರಿ ಮಾರ್ಕೆಟ್‌ಗಳಲ್ಲಿ ಎಷ್ಟು ಅಂಗಡಿಗಳಿವೆ; ಇವುಗಳಿಂದ ಬರುವ ಬಾಡಿಗೆ ಎಷ್ಟು;

**ಆ)** ಬಾಡಿಗೆ ನೀಡದೇ ಇರುವ ಅಂಗಡಿಗಳೆಷ್ಟು; ಬಾಡಿಗೆ ಪಡೆದು ಸಬ್‌ಲೀಸ್ ಮಾಡಿರುವ ಅಂಗಡಿಗಳೆಷ್ಟು;

**ಇ)** ಚಿನ್ನಸ್ವಾಮಿ ಕ್ರೀಡಾಂಗಣದಿಂದ ಬಿ.ಬಿ.ಎಂ.ಪಿ.ಗೆ ಬರುತ್ತಿರುವ ವಾರ್ಷಿಕ ಕಂದಾಯವೆಷ್ಟು? (ಮಾಹಿತಿ ನೀಡುವುದು)

**ಶ್ರೀ ಸಿದ್ದರಾಮಯ್ಯ ( ಮುಖ್ಯಮಂತ್ರಿಯವರು)**

**ಅ)** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಒಟ್ಟು– 121 ಮಾರುಕಟ್ಟೆಗಳಿದ್ದು ವಿವರಗಳನ್ನು **ಅನುಬಂಧ–1** ರಲ್ಲಿ ನೀಡಿದೆ.

ಸದರಿ ಮಾರುಕಟ್ಟೆಗಳಲ್ಲಿ ಒಟ್ಟು 6016 ಮಳಿಗೆಗಳು ಇರುತ್ತವೆ. ಇವುಗಳ ಮಾಸಿಕ ಬಾಡಿಗೆಯ ಒಟ್ಟು ₹ 1,79,15,419 ಆಗಿರುತ್ತದೆ.

**ಆ)** ಬಾಡಿಗೆ ಬಾಕಿ ಉಳಿಸಿಕೊಂಡಿರುವ ಒಟ್ಟು ಅಂಗಡಿಗಳ ಸಂಖ್ಯೆ: 523. ಬಾಡಿಗೆ ಪಡೆದು ಸಬ್‌ಲೀಸ್ ಮಾಡಿರುವ ಅಂಗಡಿಗಳ ಮಾಹಿತಿಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಚಿನ್ನಸ್ವಾಮಿ ಕ್ರೀಡಾಂಗಣದಿಂದ ಬಿ.ಬಿ.ಎಂ.ಪಿ.ಗೆ ಬರುತ್ತಿರುವ ವಾರ್ಷಿಕ ಕಂದಾಯ ₹ 53,48,771/–

ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಸದರಿ ಖಾತೆದಾರರು ವಾರ್ಷಿಕ ಕಂದಾಯ ₹ 21,53,591/– ಪಾವತಿಸುತ್ತಿದ್ದು, ಕಂದಾಯ ಪರಿಷ್ಕರಣೆಯ ಸಮಯದಲ್ಲಿ ₹ 53,48,771/– ಗಳಿಗೆ 2008–09ನೇ ಸಾಲಿನಿಂದ ಕಂದಾಯ ನಿಗಧಿಪಡಿಸಿದ್ದು, 2008–09ನೇ ಸಾಲಿನಿಂದ 2012–13ನೇ ಸಾಲಿನವರೆಗೆ ₹ 1,54,00,000 /– ಗಳ ಪರಿಷ್ಕೃತ ಕಂದಾಯವನ್ನು ಪಾವತಿಸಿರುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 952 ಕ್ಕೆ

ಅನುಬಂಧ-I

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಬರುವ ಮಾರುಕಟ್ಟೆಗಳು, ಸದರಿ ಮಾರುಕಟ್ಟೆಗಳಲ್ಲಿ ಇರುವ ಅಂಗಡಿಗಳು ಮತ್ತು ಇವುಗಳಿಂದ ಬರುವ ಬಾಡಿಗೆ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಉತ್ತರಗಳು | | | | Answers | | | |
|---|---|---|---|---|---|---|---|
| ಕ್ರ.ಸಂ. | ಮಾರುಕಟ್ಟೆಗಳ ಹೆಸರು | ಮಳಿಗೆಗಳ ಸಂಖ್ಯೆ | ಮಾಸಿಕ ಬಾಡಿಗೆ ಮೊತ್ತ ರೂ. | Sl. No. | Markets Name | Shops No. | Monthly Rents |
| 1 | ಪಿ.ಯು.ಬಿ (ಎಂ.ಜಿ.ರೋಡ್) | 111 | 1949682 | 1 | PUB M.G Road | 111 | 1949682 |
| | ಶಂಕರ್‌ನಾಗ್ ಚಿತ್ರಮಂದಿರ (ಎಂ.ಜಿ.ರೋಡ್) | 1 | 1912272 | | Shankarnag Theatre | 1 | 1912272 |
| 2 | ಗರುಡಾಮಾಲ್ | 1 | 3896349 | 2 | Garuda Mall | 1 | 3896349 |
| 3 | ರಸೆಲ್ ಮಾರುಕಟ್ಟೆ | 481 | 67816 | 3 | Russel Market | 481 | 67816 |
| 4 | ಸ್ಟೀಫನ್ ಸ್ಕ್ವೇರ್ ಮಾರುಕಟ್ಟೆ | 140 | 17668 | 4 | Stephen Square Market | 140 | 17668 |
| 5 | ಒಣ ಮೀನಿನ ಮಳಿಗೆಗಳು | 20 | 2400 | 5 | Dry Fish Stall | 20 | 2400 |
| 6 | ದನದ ಮಾಂಸದ ಅಂಗಡಿ | 119 | 15258 | 6 | Beef Market | 119 | 15258 |
| 7 | ಬ್ರಾಡ್‌ವೇ ರೋಡ್ ಅಂಗಡಿಗಳು | 27 | 14889 | 7 | Broadway Road Shops | 27 | 14889 |
| 8 | ಜೋಗುಪಾಳ್ಯ | 66 | 11920 | 8 | Jogupalya | 66 | 11920 |
| 9 | ಡಿಸ್ಪೆನ್ಸರಿ ರಸ್ತೆ | 11 | 10400 | 9 | Dispensary Road | 11 | 10400 |
| 10 | ಎಂ.ಎಂ.ರೋಡ್ | 8 | 1185 | 10 | MM Road | 8 | 1185 |
| 11 | ಜಯರಾಜ್‌ನಗರ ಮಾರುಕಟ್ಟೆ | 6 | 2785 | 11 | Jayarajnagar Market | 6 | 2785 |
| 12 | ಮರ್ಫಿಟೌನ್ | 29 | 4155 | 12 | Murphy Town | 29 | 4155 |
| 13 | ಮೋರ್ ರೋಡ್ | 27 | 5974 | 13 | More Road | 27 | 5974 |
| 14 | ಸಂಪಂಗಿರಾಮನಗರ | 4 | 1888 | 14 | Sumpangiramnagar | 4 | 1888 |
| 15 | ಕ್ವಾಡ್ರೆಂಟ್ ಸರ್ಕಲ್ | 12 | 21740 | 15 | quadrant Circle | 12 | 21740 |
| 16 | ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ | 1 | 750 | 16 | DR. B.R. Ambedkar Road | 1 | 750 |
| 17 | ವೀರಪಿಳ್ಳೈ ಸ್ಟ್ರೀಟ್ ಮತ್ತು ಕಮರ್ಷಿಯಲ್ ಸ್ಟ್ರೀಟ್ | 3 | 1050 | 17 | Veerapilyee Stree & Commercial Street | 3 | 1050 |

| | | | | | | | |
|---|---|---|---|---|---|---|---|
| 18 | ಹಲಸೂರು ಬಜಾರ್ ಹಳೇ ಮಾರುಕಟ್ಟೆ | 2 | 440 | 18 | Ulsoor Bazaar Old Market | 2 | 440 |
| 19 | ಮೀನಾಕ್ಷಿ ಕೋಯಿಲ್ ಸ್ಟ್ರೀಟ್ | 23 | 8410.5 | 19 | Meenakshi Kohil Street | 23 | 8410.5 |
| 20 | ಗಂಗಾನಗರ | 26 | 15684 | 20 | Ganganagar | 26 | 15684 |
| 21 | ಲೇಜರ್ ರೋಡ್ | 34 | 21365 | 21 | Lazer Road | 34 | 21365 |
| 22 | ವಸಂತನಗರ | 22 | 3095 | 22 | Vasanth Nagar | 22 | 3095 |
| 23 | ಕಾಕ್ಸ್‌ಟೌನ್ | 21 | 3671 | 23 | Cox Town | 21 | 3671 |
| 24 | ಹೇನ್ಸ್ ರಸ್ತೆ | 3 | 1425 | 24 | Haines Road | 3 | 1425 |
| 25 | ಬಂಡಿಮಟ್ ರೋಡ್ | 5 | 550 | 25 | Bundimutt Road | 5 | 550 |
| 26 | ಮುನಿರೆಡ್ಡಿ ಪಾಳ್ಯ | 14 | 1580 | 26 | Munireddy Palya | 14 | 1580 |
| 27 | ಓ.ಪಿ.ಹೆಚ್ ಮತ್ತು ಮೀನಾಕ್ಷಿ ಕೋಯಿಲ್ ಸ್ಟ್ರೀಟ್ | 6 | 942 | 27 | OPH & Meenakshi Kohil Street | 6 | 942 |
| 28 | ರೆಸಿಡೆನ್ಸಿ ರೋಡ್ | 13 | 18139 | 28 | Residency Road | 13 | 18139 |
| 29 | ಸುಲ್ತಾನ್‌ಗುಂಟ | 3 | 540 | 29 | Sultangunta | 3 | 540 |
| 30 | ಜಾನ್ಸನ್ ಮಾರುಕಟ್ಟೆ | 100 | 12446 | 30 | Johnson Market | 100 | 12446 |
| 31 | ಶಾಂತಿನಗರ | 7 | 770 | 31 | Shantinagar | 7 | 770 |
| 32 | ಅಕ್ಕಿತಿಮ್ಮನಹಳ್ಳಿ | 6 | 690 | 32 | Akkithimmenahall | 6 | 690 |
| 33 | ಆಸ್ಟಿನ್ ಟೌನ್ | 37 | 7717 | 33 | Austin Town | 37 | 7717 |
| 34 | ವಿವೇಕನಗರ | 3 | 726 | 34 | Viveknagar | 3 | 726 |
| 35 | ಲಿಂಡನ್ ಸ್ಟ್ರೀಟ್ | 4 | 865 | 35 | Lindon Stree | 4 | 865 |
| 36 | ಆಡುಗೋಡಿ ವಾಣಿಜ್ಯ ಸಂಕೀರ್ಣ | 30 | 40775 | 36 | Adugodi Shopping Complex | 30 | 40775 |
| 37 | ಸೆಪ್ಪಿಂಗ್ಸ್ ರೋಡ್ | 9 | 1672 | 37 | Seppings Road | 9 | 1672 |
| 38 | ಗೋತಮ್‌ಪುರ | 6 | 1985 | 38 | Gothampura | 6 | 1985 |
| 39 | ರಿಚರ್ಡ್ ಸ್ಕ್ವೇರ್ | 60 | 32916 | 39 | Richard Square | 60 | 32916 |
| 40 | ಹಲಸೂರು ಮಾರುಕಟ್ಟೆ | 76 | 9483 | 40 | Ulsoor Market | 76 | 9483 |

| | | | | | | | |
|---|---|---|---|---|---|---|---|
| 41 | ಟ್ಯಾನರಿ ರೋಡ್ | 36 | 15515 | 41 | Tannery Road | 36 | 15515 |
| 42 | ವೀಲರ್ಸ್ ರಸ್ತೆ | 16 | 14576 | 42 | Wheelers Road | 16 | 14576 |
| 43 | ಸ್ಟೈಂಟ್ ಜಾನ್ಸ್ ರಸ್ತೆ | 4 | 5110 | 43 | St. Johns Road | 4 | 5110 |
| 44 | ಹಳೇ ಮದ್ರಾಸ್ ರಸ್ತೆ | 7 | 2378 | 44 | Old Madras Road | 7 | 2378 |
| 45 | ನಾಲಾ ಮಾರುಕಟ್ಟೆ | 184 | 49947 | 45 | Nala Market | 184 | 49947 |
| 46 | ಪ್ಯಾಲೇಸ್ ಗುಟ್ಟಹಳ್ಳಿ | 6 | 710 | 46 | Palace Gutthalli | 6 | 710 |
| 47 | ನೆಹರುಪುರಂ | 6 | 660 | 47 | Nehrupuram | 6 | 660 |
| 48 | ಎಸ್.ಕೆ.ಆರ್. ಅಪ್ಪರ್‌ಬೇಸ್‌ಮೆಂಟ್ | 518 | 328899 | 48 | S.K.R Upperbasement | 518 | 328899 |
| 49 | ಎಸ್.ಕೆ.ಆರ್. ನೆಲಮಹಡಿ | 486 | 238725 | 49 | S.K.R Ground Floor | 486 | 238725 |
| 50 | ಎಸ್.ಕೆ.ಆರ್. ಮೊದಲನೇ ಮಹಡಿ | 265 | 197713 | 50 | S.K.R First Floor | 265 | 197713 |
| 51 | ಎಸ್.ಕೆ.ಆರ್. ಮಟನ್ ಮಾರುಕಟ್ಟೆ | 165 | 88068 | 51 | S.K.R Mutton Market | 165 | 88068 |
| 52 | ಎಸ್.ಕೆ.ಆರ್.ಹಳೇ ಮಾರುಕಟ್ಟೆ | 469 | 131856 | 52 | S.K.R Old Market | 469 | 131856 |
| 53 | ದರ್ಜಿಪೇಟೆ | 0 | 0 | 53 | Darjipete | 0 | 0 |
| 54 | ಬಳೇಪೇಟೆ ಚೌಕ ಮಳಿಗೆ | 1 | 1007 | 54 | Balepete Chowks Shop | 1 | 1007 |
| 55 | ಸೇತುರಾವ್ ಸ್ಟ್ರೀಟ್ ಮಳಿಗೆ | 1 | 277 | 55 | Sethurao Street Shops | 1 | 277 |
| 56 | ಬಳ್ಳಾಪುರ ಮಾರುಕಟ್ಟೆ | 53 | 6284 | 56 | Ballapura Market | 53 | 6284 |
| 57 | ಪೂರ್ಣಯ್ಯ ಛತ್ರಂ ರಸ್ತೆ, ನೆಲಮಹಡಿ & 1ನೇ ಮಹಡಿ | 14 | 11485 | 57 | Poornaian Chatram Raod, Ground Floor & First Floor | 14 | 11485 |
| 58 | ಸುಬೇದಾರ್ ಛತ್ರಂ ರಸ್ತೆ, ನೆಲಮಹಡಿ & 1ನೇ ಮಹಡಿ | 14 | 8737 | 58 | Subedhar Chatra Road, Ground Floor | 14 | 8737 |
| 59 | ಗಾಂಧಿನಗರ ಮಾರುಕಟ್ಟೆ | 37 | 11519 | 59 | Gandhinagara Market | 37 | 11519 |
| 60 | ಟಿ.ಸಿ.ಎಂ. ರಾಯನ್ ರಸ್ತೆ, 1ನೇ ಮಹಡಿ | 24 | 5105 | 60 | TCM Royan Road First Floor | 24 | 5105 |

| | | | | | | | |
|---|---|---|---|---|---|---|---|
| 61 | ಓಲ್ಡ್ ಪೆನ್ಷನ್ ಮೊಹಲ್ಲಾ | 6 | 660 | 61 | Old Pension Mohalla | 6 | 660 |
| 62 | ಬಿನ್ನಿಮಿಲ್ ಚೀಫ್ ವೆರೈಟಿ | 10 | 3173 | 62 | Biiniymill Chief Variety | 10 | 3173 |
| 63 | ಬಿನ್ನಿಮಿಲ್ ಚೀಫ್ ವೆರೈಟಿ 7 ಶಾಪ್ | 7 | 970 | 63 | Biiniymill Chief Variety 7 Shops | 7 | 970 |
| 64 | ಬಿನ್ನಿಮಿಲ್ ಚೀಫ್ ವೆರೈಟಿ 8 ಶಾಪ್ | 8 | 980 | 64 | Binny Mill Chief Variety 8 Shops | 8 | 980 |
| 65 | ಬಳೇಪೇಟೆ ಮತ್ತು ಕಿಲಾರಿ ರಸ್ತೆ, 1ನೇ ಮಹಡಿ (ಜಂಕ್ಷನ್) ನೆಲಮಹಡಿ | 7 | 5218 | 65 | Balepete & Killari Road First Floor (Junction) Ground Floor | 7 | 5218 |
| 66 | ಹನುಮಂತಪ್ಪ ಕಾಲೋನಿ | 3 | 1452 | 66 | Hanumanthappa Colony | 3 | 1452 |
| 67 | ಕೆಂಪೇಗೌಡ ಮಹಾರಾಜ ಕಾಂಪ್ಲೆಕ್ಸ್ | 1 | 1256950 | 67 | Kepegowda Maharaja Complex | 1 | 1256950 |
| 68 | ಅಕ್ಕಿಪೇಟೆ ಮಾರುಕಟ್ಟೆ (ಜಗುಲಿ) ನೆಲ, 1ನೇ ಮಹಡಿ | 90 | 11796 | 68 | Akkipete Market (Jaguli) Ground, First Floor | 90 | 11796 |
| 69 | ಶೇಷಾದ್ರಿಪುರಂ ಹೂವು, ತರಕಾರಿ, ಮಟನ್ ಮಾರುಕಟ್ಟೆ | 39 | 8799 | 69 | Sehshadripuram Flower/Vegetable/Mutton Marktet | 39 | 8799 |
| 70 | ಮೈಸೂರು ರಸ್ತೆ | 5 | 593 | 70 | Mysore Road | 5 | 593 |
| 71 | ಸುಭಾಷ್‌ನಗರ ಶಾಪಿಂಗ್ ಕಾಂಪ್ಲೆಕ್ಸ್ | 26 | 75301 | 71 | Subash Nagar Shopping complex | 26 | 75301 |
| 72 | ಶ್ರೀರಾಮಪುರ ಮಾರುಕಟ್ಟೆ | 2 | 224 | 72 | Sriramapura Market | 2 | 224 |
| 73 | ದೇವಯ್ಯ ಪಾರ್ಕ್ ಮಾರುಕಟ್ಟೆ (ಬೀಗದ) ಕೆ.ಬಿ.ಜಿ. ರಸ್ತೆ | 24 | 30524 | 73 | Devaiah Park Market KBG Road | 24 | 30524 |
| 74 | ಗಾಯತ್ರಿನಗರ ಮಾರುಕಟ್ಟೆ | 21 | 8939 | 74 | Gaytrinagar Market | 21 | 8939 |
| 75 | ಮಾಗಡಿ ರಸ್ತೆ, ಬಸವೇಶ್ವರನಗರ | 4 | 675 | 75 | Magadi Road, Basaveshwara nagar | 4 | 675 |
| 76 | ಮಾಗಡಿ ರಸ್ತೆ ಮಟನ್ ಮಾರುಕಟ್ಟೆ | 23 | 2811 | 76 | Magadi Road Mutton Market | 23 | 2811 |

5

| | | | | | | | |
|---|---|---|---|---|---|---|---|
| 77 | ರಾಜಾಜಿನಗರ ವಾಣಿಜ್ಯ ಸಂಕೀರ್ಣ | 111 | 94519 | 77 | Rajajinagara Shopping Complex | 111 | 94519 |
| 78 | ರಾಜಾಜಿನಗರ 5ನೇ ಬ್ಲಾಕ್ | 32 | 4103 | 78 | Rajajinagar 5th Block | 32 | 4103 |
| 79 | ರಾಜಾಜಿನಗರ 4ನೇ ಬ್ಲಾಕ್ ರಾಮಮಂದಿರ | 7 | 18278 | 79 | Rajajinagar 4th Block | 7 | 18278 |
| 80 | ಲಕ್ಷ್ಮೀನಾರಾಯಣಪುರ ಮಾರುಕಟ್ಟೆ | 17 | 2454 | 80 | Lakshminarayanapura Market | 17 | 2454 |
| 81 | ಯಶವಂತಪುರ ವಾಣಿಜ್ಯ ಸಂಕೀರ್ಣ | 142 | 144725 | 81 | Yeshwanthapur Shopping Complex | 142 | 144725 |
| 82 | ಸಂಪಿಗೆ ರಸ್ತೆ ಮಲ್ಲೇಶ್ವರಂ ಮಾರುಕಟ್ಟೆ | 9 | 4126 | 82 | Sampige Road Malleswaram Market | 9 | 4126 |
| 83 | ಮಲ್ಲೇಶ್ವರಂ 8ನೇ ಕ್ರಾಸ್ ಮಟನ್ ಮಾರುಕಟ್ಟೆ | 10 | 1266 | 83 | Malleswaram 8th Cross Mutton Market | 10 | 1266 |
| 84 | ಮಲ್ಲೇಶ್ವರಂ ರೈಲ್ವೆ ಸ್ಟೇಷನ್ | 5 | 634 | 84 | Malleswaram Railway Station | 5 | 634 |
| 85 | ಮಲ್ಲೇಶ್ವರಂ ಪೈಪ್‌ಲೈನ್ ಮಾರುಕಟ್ಟೆ | 5 | 604 | 85 | Malleswaram Pipeline Market | 5 | 604 |
| 86 | ಮಲ್ಲೇಶ್ವರಂ 18ನೇ ಕ್ರಾಸ್ ಮಾರುಕಟ್ಟೆ | 4 | 2489 | 86 | Malleswaram Market18 the Cross | 4 | 2489 |
| 87 | ಮಲ್ಲೇಶ್ವರಂ ಸ್ವಿಮ್ಮಿಂಗ್ ಪೂಲ್ (ಪೋಸ್ಟ್ ಆಫೀಸ್) | 1 | 1047 | 87 | Malleswaram Swimming Pool (Post Office) | 1 | 1047 |
| 88 | ಹೋಲ್‌ಸೇಲ್ ಯಾರ್ಡ್ | 6 | 2153 | 88 | Wholesale Yard | 6 | 2153 |
| 89 | ಪ್ಲಾಂಟೇನ್ ಸ್ಟಾಲ್ | 5 | 575 | 89 | Plaintain Stall | 5 | 575 |
| 90 | ಮಲ್ಲೇಶ್ವರಂ ನಾರ್ತ್ ಬ್ಲಾಕ್ ಮಾರುಕಟ್ಟೆ | 46 | 5290 | 90 | Mallewaram Market North Block | 46 | 5290 |
| 91 | ಮಲ್ಲೇಶ್ವರಂ ಸೌತ್ ಬ್ಲಾಕ್ ಮಾರುಕಟ್ಟೆ | 25 | 2994 | 91 | Malleswaram Market South Block | 25 | 2994 |

6

| | | | | | | |
|---|---|---|---|---|---|---|
| [illegible] | | 783 | 92 | Newly Constructedyard Fruits stall | 6 | 783 |
| [illegible] | [illegible] | 8356 | 93 | Jayaprakash Narayana park | 3 | 8356 |
| [illegible] | [illegible] | 2020 | 94 | Flower bed Market | 19 | 2020 |
| [illegible] | [illegible] | 17503 | 95 | Malleswaram Minor Market | 144 | 17503 |
| [illegible] | 277 | 2273334 | 96 | Jayanagar Shopping Complex | 277 | 2273334 |
| [illegible] | 464 | 288680 | 97 | Kalasipalya (WSY) | 464 | 288680 |
| [illegible] | 1 | 3569794 | 98 | Madivala Market | 1 | 3569794 |
| [illegible] | 1 | 300000 | 99 | A.P.M.C | 1 | 300000 |
| [illegible] | 4 | 812 | 100 | Jayachamarajendra WSY West | 4 | 812 |
| [illegible] | 3 | 554 | 101 | Albert Victor Road | 3 | 554 |
| [illegible] | 23 | 16500 | 102 | Srinagar | 23 | 16500 |
| [illegible] | 59 | 20786 | 103 | Cubbonpet Market | 59 | 20786 |
| [illegible] | 5 | 2400 | 104 | Cubbonpet Barlane | 5 | 2400 |
| [illegible] | 9 | 26456 | 105 | N.R.Colony | 9 | 26156 |
| [illegible] | 14 | 3549 | 106 | H Siddaiah Road | 14 | 3549 |
| [illegible] | 55 | 60080 | 107 | New Mutton Market | 55 | 60080 |
| [illegible] | 16 | 46080 | 108 | Old Bamboo Bazar | 16 | 46080 |
| [illegible] | 4 | 1062 | 109 | Sajjan Rao Circle | 4 | 1062 |
| [illegible] | 65 | 41360 | 110 | Gandhi Bazar | 65 | 41360 |
| [illegible] | 34 | 51709 | 111 | J.C.Road | 34 | 51709 |
| [illegible] | 71 | 38340 | 112 | Jayanagar 2nd Block | 71 | 38340 |
| [illegible] | 8 | 1100 | 113 | Sirsi Road | 8 | 1100 |

1

| | | | | | | | |
|---|---|---|---|---|---|---|---|
| 114 | ಚಾಮರಾಜಪೇಟೆ ಮಾರುಕಟ್ಟೆ | 3 | 1151 | 114 | Chamarajpet | 3 | 1151 |
| 115 | ಅಜಾದ್‌ನಗರ 6ನೇ ಕ್ರಾಸ್ | 3 | 3679 | 115 | Azadnagar 6th cross | 3 | 3679 |
| 116 | ಯಡಿಯೂರು | 30 | 19200 | 116 | Yediyur | 30 | 19200 |
| 117 | ಜಯನಗರ 4ನೇ 'ಟಿ' ಬ್ಲಾಕ್ | 28 | 7250 | 117 | Jayanagar 4th T Block | 28 | 7250 |
| 118 | ಕೆಂಪಯ್ಯ ಸರ್ಕಲ್ ಮಾರುಕಟ್ಟೆ | 11 | 70100 | 118 | Kempaiah Circle | 11 | 70100 |
| 119 | ವಿ.ವಿ.ಪುರಂ ಮಾರುಕಟ್ಟೆ | 12 | 76720 | 119 | V.V.Puram | 12 | 76720 |
| 120 | ವಿಲ್ಸನ್‌ಗಾರ್ಡನ್ ಮಾರುಕಟ್ಟೆ | 13 | 8320 | 120 | Wilson Garden | 13 | 8320 |
| 121 | ಲಕ್ಕಸಂದ್ರ ಮಾರುಕಟ್ಟೆ | 17 | 20480 | 121 | Lakkasandra Market | 17 | 20480 |
| | **ಒಟ್ಟು** | **6016** | **17915418.5** | | **Total** | **6016** | **17915418.5** |

(Signature)

ಉಪ ಆಯುಕ್ತರು (ಮಾರುಕಟ್ಟೆಗಳು)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೆಂಗಳೂರಿನ ಪೊಲೀಸರು ನಾಗರಿಕರಿಂದ ದಂಡ ರೂಪದಲ್ಲಿ ಸಂಗ್ರಹಿಸಿದ ಹಣ

**950; ಶ್ರೀ ಅಶ್ವಥ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು)**

ಅ) ಬೆಂಗಳೂರಿನ ಪೋಲಿಸರು ನಾಗರಿಕರಿಂದ ದಂಡ ರೂಪದಲ್ಲಿ 2011-12ರಲ್ಲಿ ಸಂಗ್ರಹಿಸಿದ ಹಣವೆಷ್ಟು;

ಆ) ಬೆಂಗಳೂರಿನಲ್ಲಿ 2010ರಿಂದ ಹೆಲ್ಮೆಟ್ ಇಲ್ಲದೇ ಅಪಘಾತಕ್ಕೀಡಾಗಿ ಸತ್ತವರ ಸಂಖ್ಯೆ ಎಷ್ಟು;

ಇ) ಬೆಂಗಳೂರಿನ ಸೋಮೇಶ್ವರ ನಗರದ ಕಟ್ಟಡ ಕುಸಿದು ಸತ್ತವರ ಸಂಖ್ಯೆ ಎಷ್ಟು; ಕಟ್ಟಡ ಮಾಲೀಕರ ಮೇಲೆ ತೆಗೆದುಕೊಂಡ ಕ್ರಮವೇನು;

ಈ) ಬೆಂಗಳೂರಿನಲ್ಲಿ ಇತರೆ ಕೆಲಸ ಮಾಡುವಾಗ ಕಟ್ಟಡ ಕುಸಿತದಿಂದ ಬಿದ್ದು ಅಪಘಾತದಲ್ಲಿ ಸತ್ತವರ ಸಂಖ್ಯೆ ಎಷ್ಟು? (2010 ರಿಂದ ಮಾಹಿತಿ ನೀಡುವುದು)

**ಶ್ರೀ ಕೆ.ಜೆ.ಜಾರ್ಜ (ಗೃಹ ಸಚಿವರು)**

ಅ) ಬೆಂಗಳೂರು ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನ ಚಾಲಕರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಸೂಲಿ ಮಾಡಲಾದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವರ್ಷ | ದಾಖಲಿಸಿದ ಪ್ರಕರಣಗಳು | ಸಂಗ್ರಹಿಸಿದ ದಂಡದ ಮೊತ್ತ ರೂಗಳಲ್ಲಿ |
|---|---|---|---|
| 1 | 2011 | 4790841 | 50,56,61,525.00 |
| 2 | 2012 | 5204800 | 53,85,17,929.00 |
| 3 | 2013ನೇ ಸಾಲಿನ ಅಕ್ಟೋಬರ್‌ವರೆಗೆ | 4270016 | 45,05,97,803.00 |

ಆ) ಬೆಂಗಳೂರು ನಗರದಲ್ಲಿ 2010 ರಿಂದ 2013ನೇ ಸಾಲಿನ ಅಕ್ಟೋಬರ್‌ವರೆಗೆ ಹೆಲ್ಮೆಟ್ ಇಲ್ಲದೇ ಅಪಘಾತಕ್ಕೀಡಾಗಿ ಮೃತಪಟ್ಟವರ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ವರ್ಷ | ಸವಾರ | ಹಿಂಬದಿ ಸವಾರ | ಒಟ್ಟು |
|---|---|---|---|---|
| 1 | 2010 | 83 | 27 | 110 |
| 2 | 2011 | 69 | 20 | 89 |
| 3 | 2012 | 96 | 13 | 109 |
| 4 | 2013ನೇ ಸಾಲಿನ ಅಕ್ಟೋಬರ್‌ವರೆಗೆ | 72 | 31 | 103 |

ಇ) ಬೆಂಗಳೂರು ನಗರದ ದಕ್ಷಿಣ ವಿಭಾಗದ ಸೋಮೇಶ್ವರ ನಗರದಲ್ಲಿ ಕಟ್ಟಡ ಕುಸಿದು ಸತ್ತವರ ಸಂಖ್ಯೆ ಒಟ್ಟು 03 ಜನರು. ಸಿದ್ದಾಪುರ ಪೋಲಿಸ್‌ಠಾಣೆ ಮೊ.ಸಂ.200/2013 ಕಲಂ 336,337,338,304 ರೆ.ವಿ 34 ಐ.ಪಿ.ಸಿ. ಪ್ರಕಾರ ಕಟ್ಟಡ ಮಾಲೀಕರಾದ ಸಲೀಂ, ಶ್ರೀಮತಿ ಫಾತಿಮ ಬೇಗಂ, ಮುದಸೀರ್ ಪಾಷ ರವರ ವಿರುದ್ಧ ಕೇಸು ದಾಖಲು ಮಾಡಿದ್ದು, ಸದರಿಯವರು ಮಾನ್ಯ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿರುತ್ತಾರೆ. ಮಾಲೀಕರ ವಿರುದ್ದ ಪ್ರಕರಣ ದಾಖಲಿಸಿ ಕಾನೂನು ರೀತ್ಯಾ ಕ್ರಮ ಕೈಗೊಂಡಿರುತ್ತದೆ.

ಈ) 2010 ರಿಂದ 2013 ಅಕ್ಟೋಬರ್‌ವರೆಗೆ ಮಾಹಿತಿ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವರ್ಷ | ಮೃತಪಟ್ಟವರ ಸಂಖ್ಯೆ |
|---|---|---|
| 01 | 2010 | 03 |
| 02 | 2011 | 01 |
| 03 | 2012 | 05 |
| 04 | 2013(ಅಕ್ಟೋಬರ್‌ವರೆಗೆ) | 06 |

**ಸಭಾಪತಿಯವರು ಮಂಡಿಸಲಾಯಿತು:–** ಮಾನ್ಯ ಸಭಾನಾಯಕರ ಗಮನಕ್ಕೆ. ಶೂನ್ಯವೇಳೆ ಅಡಿ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಪಟ್ಟಂತೆ ಯಾವುದಾದರೂ ಉತ್ತರಗಳು ಬಂದಿದ್ದರೆ ಅದನ್ನು ಸದನದ ಮುಂದೆ ಮಂಡಿಸಬಹುದು.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೆ, ಶೂನ್ಯವೇಳೆ ಅಡಿ ಎತ್ತಿದ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಉತ್ತರ ಬಂದಿದೆ. ಅದನ್ನು ಸದನದಲ್ಲಿ ಮಂಡಿಸುತ್ತೇನೆ. ಶೂನ್ಯವೇಳೆ ಅಡಿ ಬಾಕಿ ಇರುವ ವಿಚಾರಗಳಿಗೆ ಸಂಬಂಧಪಟ್ಟಂತೆ ಅವುಗಳ ಉತ್ತರಗಳನ್ನು ಸಂಬಂಧಪಟ್ಟ ಸಚಿವರಿಗೆ ಕಳುಹಿಸುವ ವ್ಯವಸ್ಥೆ ಮಾಡುತ್ತೇನೆ.

**(ಅ) ಬಳ್ಳಾರಿ ಜಿಲ್ಲೆಯ ಸಂಡೂರ ಯಶವಂತ ನಗರದವರಾದ ಹಾಗೂ ಪ್ರಸ್ತುತ ಒಡಿಸ್ಸಾದ ಭುವನೇಶ್ವರದ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಅಸಿಸ್ಟೆಂಟ್ ಕಂಟ್ರೋಲರ್ ಆಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಮಾಣಿಕ ಅಧಿಕಾರಿ ಶ್ರೀ ಇಬ್ರಾಹಿಂಷರೀಫ್ (ಐ.ಬಿ.ಎಂ) ಇವರು ಕಣ್ಮರೆಯಾಗಿರುವ ಬಗ್ಗೆ.**

**ಶ್ರೀ ಎಸ್. ಆರ್.ಪಾಟೀಲ್:– (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಮೃತ್ಯುಂಜಯ ಜಿನಗಾ ಅವರು ಶೂನ್ಯವೇಳೆ ಅಡಿ ಮೇಲ್ಕಂಡ ವಿಚಾರಕ್ಕೆ ಸಂಬಂಧಪಟ್ಟಂತೆ ಎತ್ತಿದ್ದ ಪ್ರಶ್ನೆಗೆ ಮಾನ್ಯ ಗೃಹ ಸಚಿವರು ನೀಡಿರುವ ಉತ್ತರ ಒದಗಿಸುತ್ತಿದ್ದೇನೆ. . . .

"ಶ್ರೀ ಇಬ್ರಾಹಿಂ ಷರೀಪ್, ಐ.ಬಿ.ಎಂ. ಸರ್ಕಾರಿ ಅಧಿಕಾರಿ. ಇವರು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನವರಾಗಿದ್ದು. ಇವರು ಒಡಿಸ್ಸಾ ರಾಜ್ಯದ ಭುವನೇಶ್ವರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ದಿನಾಂಕ: 25/11/2013 ರಂದು ಇವರು ದ್ವಿಚಕ್ರ ವಾಹನದಲ್ಲಿ ಕೆಲಸಕ್ಕೆ ಹೋಗಿದ್ದಾಗ ಕಾಣೆಯಾಗಿರುತ್ತಾರೆ.

ಈ ಪ್ರಕರಣದಲ್ಲಿ ಪೂರ್ಣ ವಿವರಗಳನ್ನು ಪಡೆಯಲು ನಾನು ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ ಕರ್ನಾಟಕ ಸರ್ಕಾರ

ಬೆಂಗಳೂರು ಮತ್ತು ಅಪರ ಪೊಲೀಸ್ ಮಹಾನಿರ್ದೇಶಕರು ರಾಜ್ಯ ಗುಪ್ತ ವಾರ್ತೆ, ಬೆಂಗಳೂರು. ಇವರುಗಳಿಗೆ ಸೂಚಿಸಿದ್ದೆ. ಆ ಪ್ರಕಾರ ಅವರು ಒಡಿಸ್ಸಾ ರಾಜ್ಯದ ಗೃಹ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಮಾತನಾಡಿರುತ್ತಾರೆ. ಅದರಂತೆ ತಿಳಿದು ಬಂದ ಮಾಹಿತಿ ಪ್ರಕಾರ ಭುವನೇಶ್ವರ ಪೊಲೀಸ್ ಠಾಣೆಯಲ್ಲಿ ಕ್ರೈಂ.ನಂ. 27/13ರಲ್ಲಿ ಕಾಣೆಯಾದ ವ್ಯಕ್ತಿಯ ಪತ್ತೆಯಾಗಿ ಪ್ರಕರಣ ದಾಖಲಾಗಿರುತ್ತದೆ. ಒಡಿಸ್ಸಾ ಸರ್ಕಾರವು ಭುವನೇಶ್ವರದ ಪೊಲೀಸ್ ಆಯುಕ್ತರ ಉಸ್ತುವಾರಿಯಲ್ಲಿ ಕೆಲವು ತಂಡಗಳನ್ನು ಈಗಾಗಲೇ ರಚಿಸಿದ್ದು, ಕಾಣೆಯಾಗಿರುವ ಅಧಿಕಾರಿಯನ್ನು ಪತ್ತೆ ಹಚ್ಚಲು ಕಾರ್ಯೋನ್ಮುಖರಾಗಿರುತ್ತಾರೆ.

ನಮ್ಮ ರಾಜ್ಯದ ಗೃಹ ಇಲಾಖೆಯ ಉನ್ನತಾಧಿಕಾರಿಗಳು ಅಪರ ಪೊಲೀಸ್ ಮಹಾ ನಿರ್ದೇಶಕರು (ಗುಪ್ತ ವಾರ್ತೆ) ಹಾಗೂ ಅಪರ ಪೊಲೀಸ್ ಮಹಾ ನಿರ್ದೇಶಕರು (ಕಾನೂನು ಮತ್ತು ಸುವ್ಯವಸ್ಥೆ), ಭುವನೇಶ್ವರದ ಪೊಲೀಸ್ ಅಧಿಕಾರಿಗಳ ಜೊತೆ ಸತತ ಸಂಪರ್ಕದಲ್ಲಿರುತ್ತಾರೆ. ಕಾಣೆಯಾದ ಅಧಿಕಾರಿಯ ಪತ್ತೆಗೆ ಎಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ."

**(ಆ) ಉಡುಪಿ ಜಿಲ್ಲೆ ತಾಲ್ಲೂಕಿನ ಕಡೆಕಾರ್ ಎಂಬ ಗ್ರಾಮದಲ್ಲಿ ದಲಿತ ಕುಟುಂಬದ ವಿದ್ಯಾರ್ಥಿನಿಯಾದ ಕುಮಾರಿ ರಂಜಿತಾಳನ್ನು ವಿಕೃತ ಕಾಮಿಯೊಬ್ಬ ಹಾಡುಹಗಲಲ್ಲೇ ಚೂರಿಯಿಂದ ಇರಿದು ಕೊಲೆ ಮಾಡಿರುವುದರ ಬಗ್ಗೆ.**

**ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಕೋಟಾ ಶ್ರೀನಿವಾಸ ಪೂಜಾರಿಯವರು ಶೂನ್ಯವೇಳೆ ಅಡಿ ಮೇಲ್ಕಂಡ ವಿಚಾರಕ್ಕೆ ಸಂಬಂಧಪಟ್ಟಂತೆ ಎತ್ತಿದ್ದ ಪ್ರಶ್ನೆಗೆ ಮಾನ್ಯ ಗೃಹಸಚಿವರು ನೀಡಿರುವ ಉತ್ತರ ಒದಗಿಸುತ್ತಿದ್ದೇನೆ.

ದಿನಾಂಕ: 28.09.2013 ರಂದು ಕುಮಾರಿ ರಂಜಿತಾ ಆರೋಪಿ ಯೋಗೀಶ ಕಾಲೇಜಿಗೆ ಹೋಗಿ ಬರುವಾಗಲೆಲ್ಲಾ, ತನಗೆ ಕಿರುಕುಳ ಕೊಡುತ್ತಿರುವ ಬಗ್ಗೆ ಮಲ್ಪೆ ಪೊಲೀಸ್ ಠಾಣೆಯಲ್ಲಿ ದೂರು ಅರ್ಜಿಯನ್ನು ನೀಡಿದ್ದು. ಅದನ್ನು ಮಲ್ಪೆ ಠಾಣೆಯಲ್ಲಿ ಅರ್ಜಿ ಸಂಖ್ಯೆ : 207/2013 ರಲ್ಲಿ

ದಾಖಲೆ ಮಾಡಲಾಗಿದೆ. ಪಿ.ಎಸ್.ಐ., ಮಲ್ಪೆರವರು ಅರ್ಜಿ ವಿಚಾರಣೆ ಕುರಿತು ಆರೋಪಿ ಯೋಗೀಶನನ್ನು ದಿನಾಂಕ: 29/09/2013 ರಂದು ಠಾಣೆಗೆ ಕರೆಯಿಸಿ, ಕುಮಾರಿ ರಂಜಿತಾ ಹಾಗೂ ಅವಳ ತಂದೆ, ತಾಯಿ ಮತ್ತು ಆರೋಪಿತ ಯೋಗೀಶನ ತಂದೆ, ತಾಯಿ ಹಾಗೂ ಅವರ ಸಮುದಾಯದ ಮುಖಂಡರನ್ನು ಕರೆಯಿಸಿ, ವಿಚಾರಣೆ ನಡೆಸಿ ಆರೋಪಿ ಯೋಗೀಶನಿಗೆ ಸೂಕ್ತ ಎಚ್ಚರಿಕೆ ನೀಡಿರುತ್ತಾರೆ.

ದಿನಾಂಕ: 27/11/2013 ರಂದು ಆರೋಪಿ ಯೋಗೀಶನು, ಕುಮಾರಿ ರಂಜಿತ ತನ್ನ ನೆರೆಮನೆಯ ಸ್ನೇಹಿತೆ ಕುಮಾರಿ ಅಶ್ವಿನಿ ಬಳಿ ಮಾತನಾಡುತ್ತಿದ್ದಾಗ, ಕುಮಾರಿ ರಂಜಿತಳಿಗೆ ಹಿಂಬದಿಗೆ ಚೂರಿಯಿಂದ ಜೋರಾಗಿ ಚುಚ್ಚಿ ತಿವಿದು ಗಾಯಗೊಳಿಸಿದ್ದು, ಅವಳನ್ನು ಆಸ್ಪತ್ರೆಗೆ ಚಿಕಿತ್ಸೆಗೆಂದು ತೆಗೆದುಕೊಂಡು ಹೋಗುವ ಮಾರ್ಗ ಮಧ್ಯದಲ್ಲಿಯೇ ಅವಳು ಮೃತಪಟ್ಟಿರುತ್ತಾಳೆ. ಈ ಹಿನ್ನೆಲೆಯಲ್ಲಿ ಆರೋಪಿತನು ಪೂರ್ವ ದ್ವೇಷದಿಂದ ರಂಜಿತಳ ಕೊಲೆ ಮಾಡಿರುವ ಬಗ್ಗೆ ಮಲ್ಪೆ ಠಾಣೆಯಲ್ಲಿ ಅಪರಾಧ ಕೃತ್ಯ ಸಂಖ್ಯೆ: 140/13 ಕಲಂ 302 ಐ.ಪಿ.ಸಿಯಂತೆ ಪ್ರಕರಣ ದಾಖಲಾಗಿದೆ.

ಸದರಿ ಪ್ರಕರಣದಲ್ಲಿ ಆರೋಪಿತನಾದ ಯೋಗೀಶ್ ಬಿನ್ ರಾಜು ಪಟೇಲ್‌ನನ್ನು ದಿನಾಂಕ:30/11/2013 ರಂದು ದಸ್ತಗಿರಿ ಮಾಡಿ ದಿನಾಂಕ:01/12/2013 ರಂದು ಮಾನ್ಯ ಸಿಜೆಎಮ್ ಉಡುಪಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ಸದರಿ ಆರೋಪಿತನಿಗೆ ದಿನಾಂಕ: 13/12/2013 ರವರೆಗೆ ನ್ಯಾಯಾಂಗ ಬಂಧನ ವಿಧಿಸಿರುತ್ತದೆ.

ಈ ಪ್ರಕರಣದಲ್ಲಿ, ಪಿಎಸ್‌ಐ ಕರ್ತವ್ಯ ನಿರ್ಲಕ್ಷತನ ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಮಲ್ಪೆ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀ ಜಯಂತ ಇವರನ್ನು ದಿ:28/11/2013 ರಿಂದ ಅಮಾನತ್ತಿನಲ್ಲಿಡಲಾಗಿದೆ. ತನಿಖೆ ಮುಂದುವರೆದಿದೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಗಳೆ, ನಾನು ಕಳುಹಿಸಿದ್ದ ಶೂನ್ಯವೇಳೆ ಪ್ರಸ್ತಾವಕ್ಕೆ ಉತ್ತರ ಬಂದಿಲ್ಲ. ನಿಯಮ 330, ಗಮನ ಸೆಳೆಯುವ

ಸೂಚನೆ ಇವುಗಳಿಗೆ ಸಂಭಂದಪಟ್ಟಂತೆಯೂ ಉತ್ತರಗಳು ಬಂದಿಲ್ಲ. ನಾವಿಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಚಾರ್ಜ್ ಮಾಡಿದರೆ ಅವರು ಅಲರ್ಟ್ ಆಗುತ್ತಾರೆ. ಮಾಹಿತಿ ಕಾಯಿದೆ ಅಡಿಯಲ್ಲಿ ಹೇಗೆ ವಿಷಯಗಳನ್ನು ಮಾತ್ರ ತೆಗೆದುಕೊಳ್ಳುತ್ತೇವೆಯೋ ಅದೇರೀತಿ ಇಲ್ಲಿ ತೆಗೆದುಕೊಂಡರೆ ಏನು ಪ್ರಯೋಜನ ಆಗುವುದಿಲ್ಲ.

ನೀವು ಬೇರೆ ಬೇರೆ ವಿಷಯಗಳಿಗೆ ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ. ನಾನು ನಿಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ. ಆದರೆ, ನಿಯಮ 330, ಶೂನ್ಯ ವೇಳೆಯ ಉತ್ತರ, ಗಮನ ಸೆಳೆಯುವ ಸೂಚನೆ, ಇವೆಲ್ಲಾ ಕೂಡ ಮುಖ್ಯವಲ್ಲವೆ? ಈಗ ಗಮನ ಸೆಳೆಯುವ ಸೂಚನೆಯಲ್ಲಿ ಸವದತ್ತಿ ಎಲ್ಲಮ್ಮ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಕೊಡುವ ವಿಷಯದ ಬಗ್ಗೆ ಕೊಟ್ಟಿದ್ದೇವೆ. ಅಲ್ಲಿಗೆ ಬಂದಿರುವ ಹೆಣ್ಣುಮಕ್ಕಳೆಲ್ಲಾ ನಮಗೆ ಕೂರುವುದಕ್ಕೆ ಜಾಗ ಇಲ್ಲ ಎಂದು ಹೇಳಿದರು. ತಾವು ಉಪ ಸಭಾಪತಿಯವರಿಗೆ ಕೇಳಿ. ಅಲ್ಲಿಯೇ ಮಲಮೂತ್ರ ವಿಸರ್ಜನೆ ಮಾಡುತ್ತಾರೆ, ಅಲ್ಲಿಯೇ ಬೇರೆಯವರು ಬಂದು ಅಡಿಗೆ ಮಾಡಿಕೊಂಡು ತಿನ್ನುತ್ತಾರೆ. ಹತ್ತು ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಅಲ್ಲಿಗೆ ಬರುತ್ತಾರೆ. ಜಾತ್ರೆಗೆ ಸಾಕಷ್ಟು ಜನರು ಬರುತ್ತಾರೆ. ಅಲ್ಲಿ ಅಭಿವೃದ್ಧಿ ಕೆಲಸ ಆಗಬೇಕು. ಹನ್ನೊಂದು ಕೋಟಿರೂಪಾಯಿಗಳ ಆದಾಯವಿದೆ. ಅಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಹೇಳಿ ನೋಡೋಣ? ನಾವೆಲ್ಲ ಹೆಣ್ಣುಮಕ್ಕಳು, ಅದು ಬಡವರ ದೇವರು. ಅಲ್ಲಿಗೆ ಬಹಳಷ್ಟು ಹೆಣ್ಣುಮಕ್ಕಳು ಹೋಗುತ್ತಾರೆ. ಈ ವಿಷಯವನ್ನು ಗಮನ ಸೆಳೆಯುವ ಸೂಚನೆಯಲ್ಲಿ ನಾನು, ಮಾನ್ಯ ವೀರಣ್ಣ ಮತ್ತಿ ಕಟ್ಟಿಯವರು, ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಕೊಟ್ಟಿದ್ದೇವೆ. ಅದನ್ನು ತೆಗೆದುಕೊಳ್ಳಲೇ ಇಲ್ಲ. ಇದು ಉತ್ತರ ಕರ್ನಾಟಕ. ಉತ್ತರ ಕರ್ನಾಟಕದಲ್ಲಿ ಸುವರ್ಣಸೌಧ ಇದೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:–** ಇನ್ನೂ ನೀವು ಸದಾನಂದಗೌಡರವರ ಹತ್ತಿರ ಕೇಳುತ್ತಿದ್ದೀರಲ್ಲಾ?

**ಶ್ರೀಮತಿ ಮೋಟಮ್ಮ:-** ನಾನು ಸದಾನಂದಗೌಡರವರನ್ನು ಕೇಳಲಿಲ್ಲ. ಎಲ್ಲಾ ಸಮಯವನ್ನು ಆ ಕಡೆಯವರೇ ತಿಂದು ಹಾಕಿಬಿಟ್ಟರು. ಉಳಿದವರು ಇಲ್ಲಿ ಏನು ಮಾಡುವುದಕ್ಕೆ ಬರುವುದು? ಮಾನ್ಯ ಸಭಾಪತಿಗಳೇ, ಮುಂದಿನ ಸಲ ನಾವೆಲ್ಲಾ ಸಹಿ ಹಾಕಿ ಹೊರಗಡೆ ಕುಳಿತುಬಿಡುತ್ತೇವೆ. ಇದು ಸರಿಯಲ್ಲ. ದಯವಿಟ್ಟು ಇದನ್ನು ಸರಿ ಮಾಡಿ.

**ಶ್ರೀ ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಮನಸ್ಸಿನಲ್ಲಿ ಏನಿತ್ತು ಎಂದರೆ ಮೋಟಮ್ಮನವರು ನಮಗೆ ಉತ್ತರ ಕೊಡುವವರಾಗುತ್ತಾರೆ, ಅವರು ಪ್ರಶ್ನೆ ಕೇಳುವವರಲ್ಲ ಎಂದು. ಈಗಲೂ ಉತ್ತರ ಕೊಡುವವರಾಗುತ್ತಾರೆಂದು ನಮ್ಮ ಮನಸ್ಸಿನಲ್ಲಿದೆ.

**ಉಪ ಸಭಾಪತಿಯವರು:-** ಈಗಲಾದರೂ ಮನಸ್ಸು ಮಾಡಿ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸಭಾಪತಿಯವರೇ, ಎಲ್ಲಮ್ಮನ ಗುಡ್ಡದ ಬಗ್ಗೆ ನೋಟಿಸ್ ಕೊಟ್ಟಿದ್ದೇವೆ. ಕೊನೆಗಾದರೂ ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಅಲ್ಲಿ ಅಭಿವೃದ್ಧಿ ಕೆಲಸ ಆಗಬೇಕು. ಮುಂದಿನ ಸಲ ನಾವು ಬಂದಾಗ ಒಂದಷ್ಟು ಜನ ಸಮಾಧಾನಕರವಾಗಿರಬೇಕು. ಅಲ್ಲಿಗೆ ಹೆಣ್ಣುಮಕ್ಕಳೇ ಜಾಸ್ತಿ ಹೋಗುವುದು.

**ಸಭಾಪತಿಯವರು:-** ತಾವು ಹೇಳುವುದು ಸರಿ ಇದೆ.

**ಡಾಃ ಮತ್ತಿಕಟ್ಟಿ ವೀರಣ್ಣ:-** ಮಾನ್ಯ ಸಭಾಪತಿಯವರೇ, ಬೇರೆ ದೇವಾಲಯಗಳನ್ನು ಅಭಿವೃದ್ಧಿ ಮಾಡಿದ ಹಾಗೆ ವ್ಯವಸ್ಥಿತವಾಗಿ ಅಭಿವೃದ್ಧಿ ಮಾಡಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ತಾವೇ ಆದೇಶವನ್ನು ಕೊಡಿ.

**ಸಭಾಪತಿಯವರು:-** ಮಾಡೋಣ. ಆದರೆ, ನಮ್ಮ ಸದನದಲ್ಲಿ ಒಂದು ಪದ್ದತಿ ಇದೆ. ಪದ್ಧತಿ ಪ್ರಕಾರ ಪಟ್ಟಿ ಮಾಡುತ್ತೇವೆ. ಸಮಯದ ಪ್ರಕಾರ ಪ್ರಶ್ನೆಗಳನ್ನು, ಗಮನ ಸೆಳೆಯುವ ಸೂಚನೆ, ನಿಯಮ 330, ವಿಧೇಯಕಗಳೆಲ್ಲಾ ತೆಗೆದುಕೊಳ್ಳುತ್ತೇನೆ. ಅವೆಲ್ಲಾ ತೆಗೆದುಕೊಳ್ಳುತ್ತಿರುವಾಗ ಕೆಲವು reach ಆಗುತ್ತದೆ,

ಕೆಲವು reach ಆಗುವುದಿಲ್ಲ. reach ಆಗದಿರುವುದಕ್ಕೆ ಉತ್ತರವನ್ನು ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಈಗ ನಾನು ಮಾಡಿಸಿದ್ದೇನೆ. ಅದನ್ನು ಸರ್ಕಾರ ಮಾಡುತ್ತದೆ. ಕೆಲವು ಸಲ ನಾವು ಎತ್ತಿರತಕ್ಕಂಥ ವಿಷಯಗಳ ಬಗ್ಗೆ ಸಂಭಂಧಪಟ್ಟ ಸಚಿವರೆ ಇಲ್ಲದಿದ್ದರೆ ನಾನು ಅದನ್ನು ನಡೆಸುವುದಕ್ಕಾಗುವುದಿಲ್ಲ. ಸರ್ಕಾರವನ್ನು ಮುಜುಗರಕ್ಕೆ ಸಿಕ್ಕಿಸುವುದಕ್ಕೆ ನನಗೆ ಆಗುವುದಿಲ್ಲ. ಈ ಎಲ್ಲಾ ಹಿನ್ನಲೆಯಲ್ಲಿ ಯಾವ್ಯಾವುದು reach ಆಗಿಲ್ಲ ಅವುಗಳಿಗೆ ಉತ್ತರವನ್ನು ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಿಸಿದ್ದೇನೆ. ಈ ಸಲ ಬಹಳ ಸಂತೋಷಪಡುವಂಥದ್ದೇನೆಂದರೆ ಬಹಳ ದೊಡ್ಡ ಸಂಖ್ಯೆಯಲ್ಲಿ ಪ್ರಶ್ನೆಗಳು ಬಂದಿವೆ, ಗಮನ ಸೆಳೆಯುವ ಸೂಚನೆಯ ನೋಟಿಸ್‌ಗಳು, ನಿಯಮ 330 ರ ನೋಟಿಸ್‌ಗಳು ಬಂದಿವೆ. ನಮ್ಮ ಸದಸ್ಯರ ಭಾಗವಹಿಸುವಿಕೆ ತುಂಬಾ ಚೆನ್ನಾಗಿದೆ. ಸಾಧಾರಣವಾಗಿ ಪ್ರತಿನಿತ್ಯ ಸದನವನ್ನು ಮುಂದೂಡುವಾಗ ಎಷ್ಟು ಜನರಿದ್ದಾರೆಂದು ಎಣಿಸುತ್ತೇನೆ. ಎಂದೂ ಕೂಡ 30 ಜನರಿಗಿಂತ ಕಡಿಮೆ ಇಲ್ಲ. ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ. ಇಷ್ಟೆಲ್ಲಾ ಆಸಕ್ತಿ ಇರುವುದು ನನಗಂತೂ ತುಂಬಾ ಸಂತೋಷ. ನಮ್ಮ ಸದನಕ್ಕೆ ಘನತೆ, ಗೌರವ ಜಾಸ್ತಿಯಾಗಿದೆ. ಆದರೆ, ಬಹಳಷ್ಟು ಸಲ ನನಗೆ ಸಮಯದ ಪ್ರಶ್ನೆ ಬರುತ್ತದೆ. ಸದನ ನಡೆಸುವಾಗ ರಾತ್ರಿ 8 ಗಂಟೆ, 9 ಗಂಟೆ ಆಯಿತು, ಸಾಕು ಎಂದು ಹೇಳಿದಾಗ ನಾನು ಸದನವನ್ನು ನಡೆಸುವುದಕ್ಕಾಗುವುದಿಲ್ಲ. ಮುಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಕೆಲವು ವಿಷಯಗಳಿಗೆ ಸರ್ಕಾರ ಉತ್ತರ ಕೊಟ್ಟಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ತಾವು ಈ ಸಲ ಏನು ಮಾಡಿದ್ದೀರಿ ಎಂದರೆ, ತಮ್ಮ ಹಿಂದಿನ ಎಲ್ಲಾ ಸಂಪ್ರದಾಯವನ್ನು ಬಿಟ್ಟು ಎಲ್ಲರ ಪ್ರಶ್ನೆಗಳನ್ನು ಕೂಡ 15-20 ಎಷ್ಟು ಪ್ರಶ್ನೆಗಳು ಬಂದಿವೆ ಅಷ್ಟನ್ನು list out ಮಾಡುವ ಕೆಲಸ ಕಾರ್ಯಗಳನ್ನು ಕೂಡ ಮಾಡಿದ್ದೀರಿ. ಕನಿಷ್ಟ ನಮ್ಮದು ಪಟ್ಟಿಯಲ್ಲಾದರೂ ಬಂದಿದೆ. ನೀವು ಹಿಂದಿನ ಸಂಪ್ರದಾಯಗಳನ್ನೆಲ್ಲಾ ಮುರಿದಿದ್ದೀರಿ. ಅಂದರೆ, ನಮ್ಮೆಲ್ಲರ ವಿನಂತಿ ಮೇರೆಗೆ ಎಷ್ಟು ಆಗುತ್ತದೆ ಅಷ್ಟು ನೋಡೋಣ ಎಂದು ಮತ್ತು ಈ ಸದನದಲ್ಲಿ ನಾನು ಭಾರಿ ಬಲವಾಗಿ

ಹೇಳುತ್ತೇನೆ, ಬೆಳಗ್ಗೆಯಿಂದ ಸಾಯಂಕಾಲದವರೆಗೆ ಒಂದು ನಿಮಿಷ ಕೂಡ ವ್ಯರ್ಥ ಮಾಡದ ಹಾಗೆ ತಾವು ಸದನವನ್ನು ನಡೆಸುವಂಥದ್ದನ್ನು ಮಾಡಿದ್ದೀರಿ. ಇದನ್ನು ಯಾರು ಅಲ್ಲಗೆಳೆಯುವ ಹಾಗಿಲ್ಲ. ಆದರೆ ಏನು ಮಾಡುವುದು ಬಹಳ ಜನರಿಗೆ ಸಾಕಷ್ಟು ಪ್ರಶ್ನೆಗಳನ್ನು ಕೇಳಬೇಕು ಎನ್ನುವುದು ಇರುತ್ತದೆ. ಆದರೆ, ಸಮಯಾವಕಾಶ ಇಲ್ಲದೆ ಆಗಿದೆಯೇ ಹೊರತು ಸದನದ ಯಾವುದೇ ಒಂದು ನಿಮಿಷ ಕೂಡ ದುರುಪಯೋಗವಾಗಲಿಲ್ಲ, ಅಪವ್ಯಯವಾಗಲಿಲ್ಲ, ಎಲ್ಲವೂ ಕೂಡ ಅತ್ಯಂತ ಯಶಸ್ವಿಯಾಗಿ ನಡೆಸುವಂತಹ ಕೆಲಸ ಕಾರ್ಯಗಳು ನಡೆದಿವೆ, ಇದು ನನ್ನ ಅಭಿಪ್ರಾಯ.

**ಶ್ರೀ ಬಸವರಾಜ ಹೊರಟ್ಟಿ:-** ನೀವು ಮೋಟಮ್ಮನವರ ಪ್ರಶ್ನೆಗೆ ಉತ್ತರ ಹೇಳಲಿಲ್ಲ.

**ಶ್ರೀ ಡಿ.ವಿ.ಸದಾನಂದಗೌಡ:-** ಅವರ ಬಗ್ಗೆಯೂ ಹೇಳುತ್ತೇನೆ.

**ಶ್ರೀಮತಿ ಮೋಟಮ್ಮ:-** ಮಾನ್ಯ ಸದಾನಂದಗೌಡರು ನಮಗೆ ಸಮಜಾಯಿಷಿ ಹೇಳುವುದು ಬಿಟ್ಟು ಸಮಯ ವ್ಯರ್ಥವಾಗಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಸಮಯ ವ್ಯರ್ಥವಾಗಿದೆ ಎಂದು ಹೇಳುತ್ತಿಲ್ಲ. ಒಂದು ವಿಷಯ ತೆಗೆದುಕೊಂಡರೆ ಹತ್ತು ಜನರು ಅದನ್ನೇ ಮಾತಾನಾಡುವುದರಲ್ಲಿ ಏನಿದೆ? ಕೆಲವರು expert, intelligent ಇದ್ದೀರಿ. ನಿಮ್ಮಂಥವರು, ನಾಣಯ್ಯ, ಬಸವರಾಜ ಹೊರಟ್ಟಿಯವರು ಮಾತನಾಡಿದ ಮೇಲೆ ಅದರ ಹಿಂದುಗಡೆ ನಾಲ್ಕು ಜನ ಅದನ್ನೆ repeat ಮಾಡುವುದರಲ್ಲಿ ಏನು ಅರ್ಥವಿದೆ? ಪ್ರತಿ ವಿಷಯಗಳ ಬಗ್ಗೆಯೂ ಎಲ್ಲರೂ ಮಾತನಾಡಬೇಕೆಂದರೆ ಬಜೆಟ್ ಚರ್ಚೆಯ ರೀತಿಯಲ್ಲಿ ಸಮಯವನ್ನು ನಿಗದಿ ಮಾಡಿ. This is not correct. ಬೇರೆ ವಿಷಯಗಳು ಬರಬೇಕು. ಗಮನ ಸೆಳೆಯುವ ಸೂಚನೆಗೂ ಅಷ್ಟೆ ಮರ್ಯಾದೆ ಇದೆ, ನಿಯಮ 330ಕ್ಕೂ ಅಷ್ಟೆ ಮರ್ಯಾದೆ ಇದೆ. ಆದರೆ ಒಂದೊಂದು ವಿಧೇಯಕದ ಬಗ್ಗೆಯೂ ಎರಡು ಗಂಟೆ, ಮೂರು ಗಂಟೆ ಕಾಲ ಮಾತನಾಡಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–**ಮೋಟಮ್ಮನವರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮೋಟಮ್ಮನವರು ಇಲ್ಲಿ ಬಂದುಕುಳಿತುಕೊಳ್ಳಲಿ.

**ಶ್ರೀಮತಿ ಮೋಟಮ್ಮ:–** ನಾವು ಅಲ್ಲಿ ಕುಳಿತಾಗ ಸಮಯವನ್ನು ತಿಂದಿಲ್ಲ. ಸಭಾಪತಿಯವರು ನನಗೆ ಯಾವಾಗಲೂ ಸ್ಪಷ್ಟೀಕರಣವನ್ನು ಕೇಳಬೇಡಿ ಕುಳಿತುಕೊಳ್ಳಿ ಎಂದು ಹೇಳುತ್ತಿದ್ದರು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಈ ಸದನದಲ್ಲಿ ಅತ್ಯಂತ ಹೆಚ್ಚು ಮಾತನಾಡಿದವರು.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ,....

**ಸಭಾಪತಿಯವರು :–** ಮಾನ್ಯ ಲಕ್ಷ್ಮೀನಾರಾಯಣರವರೆ, ತಾವು ನೋಟಿಸ್ ಕೋಡಬೇಕಾಗುತ್ತದೆ. ನನಗೆ ಯಾವುದೇ ನೋಟಿಸ್ ಬಂದಿಲ್ಲ, ದಯಮಾಡಿ ಕುಳಿತುಕೊಳ್ಳಿ. ನೊಟೀಸ್ ಕೊಡದೆ ಮಾತನಾಡುವುದಕ್ಕೆ ನಾನು ಒಪ್ಪುವುದಿಲ್ಲ. ತಾವು ಮಾತನಾಡುವುದು ರೆಕಾರ್ಡ್‌ಗೆ ಹೋಗುವುದಿಲ್ಲ.

**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ:–** ಮಾನ್ಯ ಸಭಾಪತಿಯವರೇ, ಸದನಕ್ಕೆ ಅಗೌರವವನ್ನು ತಂದಿದ್ದಾರೆ.

**ಸಭಾಪತಿಯವರು:–** ಆ ರೀತಿ ಮಾತನಾಡುವುದಕ್ಕಾಗುವುದಿಲ್ಲ. ನೋಟಿಸ್ ಕೊಡಿ.

### 3.ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ:-** ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2013ನೇ ಸಾಲಿನ "ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡುಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲ ಹಂಚಿಕೆ ಮತ್ತು ಬಳಕೆ) ವಿಧೇಯಕ"ವನ್ನು ಸಭೆಯ ಮುಂದಿಡುತ್ತಿದ್ದೇನೆ.

### 4. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

### ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡುಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕ,2013

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರ ಸಚಿವರು) (ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡುಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕವನ್ನು ಪರ್ಯಾಯಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ಭಾರತ ಸಂವಿಧಾನದ ಅನುಚ್ಛೇದ 46ರ ಪ್ರಕಾರ ವಾರ್ಷಿಕವಾದಂತಹ ಯೋಜನೆಯನ್ನು ರೂಪಿಸಬೇಕಾದಾಗ ಯೋಜನಾ ಆಯೋಗ ಹೊರಡಿಸಿದಂತಹ ಮಾರ್ಗಸೂಚಿಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಬೇಕು ಎನ್ನುವ ಕಾರಣಕೋಸ್ಕರ ಅನುಸೂಚಿತ ಜಾತಿ ಮತ್ತು ಬುಡುಕಟ್ಟು ಉಪಯೋಜನೆಗಳಿಗೆ ಒಂದು ವಿಧೇಯಕವನ್ನು ಇವತ್ತು ತರಬೇಕೆಂದು ತೀರ್ಮಾನ ಮಾಡಿ ತಂದಿದ್ದೇವೆ. ಈಗ ಯೋಜನೆಗಳಿಗೆ ಮೀಸಲಾಗಿರತಕ್ಕಂಥ ಹಣವನ್ನು ಅತ್ಯಂತ ಸಮರ್ಪಕವಾಗಿ ತತ್ವಶಃ ಯಾವ ವರ್ಗದ ಜನರಿಗೆ ತಲುಪಿಸಬೇಕೋ ಅವರಿಗೆ ತಲುಪಿಸುವಂತಹ ಕೆಲಸವನ್ನು ಮಾಡಬೇಕಾದಾಗ ಎಲ್ಲೋ ಒಂದು ಕಡೆ ನಿರ್ಲಕ್ಷ್ಯತೆಯಿಂದಾಗಿ ತೊಂದರೆಯಾಗಿದೆ ಎನ್ನುವುದು ಸರ್ಕಾರಕ್ಕೆ ಮನದಟ್ಟಾಗಿರುವ ಹಿನ್ನಲೆಯಲ್ಲಿ ಒಂದು ವಿಧೇಯಕವನ್ನು ತರುವುದು ಸೂಕ್ತ ಎಂದು ಭಾವಿಸಿ ಇವತ್ತು ವಿಧೇಯಕವನ್ನು ತಂದಿದ್ದೇವೆ. ಆ ವಿಧೇಯಕವನ್ನು ಅನುಷ್ಠಾನ ಮಾಡತಕ್ಕಂಥ ರೀತಿಯಲ್ಲಿ ಈಗಾಗಲೇ ರಾಜ್ಯ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಮತ್ತು ಅದನ್ನು ಅಧಿಕಾರಿಗಳ ಮಟ್ಟದಲ್ಲಿ ಸಮಿತಿಗಳನ್ನು ಮಾಡತಕ್ಕಂಥ ಎಲ್ಲಾ ಪ್ರಕ್ರಿಯೆಗಳನ್ನು ಕೂಡ ನಾವು ಇವತ್ತು ಮಾಡಿದ್ದೇವೆ. ಈಗಾಗಲೇ ಸದನದಲ್ಲಿ ಎಲ್ಲರ ಅರಿವಿಗೆ ಬಂದಿರತಕ್ಕಂಥ ವಿಚಾರವಾಗಿರುವ ಹಿನ್ನಲೆಯಲ್ಲಿ ಇದರ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ. ಇವತ್ತು ಡಿಸೆಂಬರ್ 6, ಬಹಳ ಪ್ರಾಮುಖ್ಯವಾದ ದಿನ. ಇವತ್ತು ಬಾಬಾ ಸಾಹೇಬ್ ಅಂಬೇಡ್ಕರವರ ಪರಿನಿರ್ವಾಣ ದಿನದಂದು, ಮತ್ತು ಅಷ್ಟೆ ಪ್ರಮಾಣದಲ್ಲಿ ಈಗ ತಾನೇ ಇಡೀ ಸದನ ಡಾ:ನೆಲ್ಸನ್‌ಮಂಡೇಲಾರವರ ನಿಧನದ ಸಂತಾಪ ಸೂಚನಾ ನಿರ್ಣಯವನ್ನು ಇವತ್ತು ಕಳುಹಿಸತಕ್ಕಂಥ ಹಿನ್ನಲೆಯಲ್ಲಿ ಅವರು ಯಾವ ವರ್ಗಕ್ಕೆ ಹೋರಾಟವನ್ನು ಮಾಡಿದ್ದರು, ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನವನ್ನು ಮಾಡಿದ್ದರು, ಆ ಹಿನ್ನಲೆಯಲ್ಲಿ ಮಾಡಿದಂತಹ ಸಂವಿಧಾನ ಬಾಬಾ ಸಾಹೇಬ್ ಅಂಬೇಡ್ಕರವರು

ರಚಿಸಿದಂತಹ 46ನೇ ಅನುಚ್ಛೇದವನ್ನು ತತ್ವಶಃ ಅನುಷ್ಠಾನ ಮಾಡುವುದಕ್ಕೋಸ್ಕರ ಇವತ್ತು ಈ ವಿಧೇಯಕವನ್ನು ತಂದಿದ್ದೇವೆ. ಅದಕ್ಕೆ ಒಪ್ಪಿಗೆ ಕೊಡಬೇಕೆನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

**ಶ್ರೀ ಎಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಧೇಯಕದ 24 ಮತ್ತು 25ನೇ ವಿಷಯವನ್ನು ನೀವು ಜಾರಿಗೆ ತಂದರೆ ಈ ವಿಧೇಯಕವನ್ನು ಅನುಷ್ಠಾನಕ್ಕೆ ತರಲಿಕ್ಕೆ ಆಗದಂತಹ ಪರಿಸ್ಥಿತಿಯನ್ನು ನೀವೇ ನಿರ್ಮಾಣ ಮಾಡಿಕೊಳ್ಳುತ್ತೀರಿ ಎಂದು ನಾನು ಖಂಡಿತವಾಗಿ ಹೇಳಲಿಕ್ಕೆ ಬಯಸುತ್ತೇನೆ. ಆದ್ದರಿಂದ, 24ನೇ ವಿಷಯಕ್ಕೆ ಸಂಬಂಧಪಟ್ಟಂತೆ ಅದರಲ್ಲಿ ಏನು ಹೇಳಿದ್ದೀರಿ ಎಂದರೆ ಪ್ರೋತ್ಸಾಹಧನ ಮತ್ತು ದಂಡನೆಗಳು, ಸರ್ಕಾರವು ಪ್ರಶಂಸಾರ್ಹವಾದ ಕಾರ್ಯಸಾಧನೆಗೆ ಪ್ರೋತ್ಸಾಹಧನವನ್ನು ನೀಡಲು ಸೂಕ್ತವಾದ scheme ಒಂದನ್ನು ರೂಪಿಸತಕ್ಕದ್ದು. ಸಾರ್ವಜನಿಕ ನೌಕರನಾಗಿರುವ ಯಾರೇ ಕಾರ್ಯನಿರ್ವಾಹಕನು ಅಥವಾ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ತಾನು ನಿರ್ವಹಿಸಬೇಕೆಂದು ಅಗತ್ಯಪಡಿಸಿರುವ ತನ್ನ ಕರ್ತವ್ಯಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರೆ, ಅವನು ಸರ್ಕಾರಿ ನೌಕರರು ಮತ್ತು ಕಾರ್ಯನಿರ್ವಾಹಕರಿಗೆ ಅನ್ವಯವಾಗಹುದಾದ ಸಂಬಂಧಪಟ್ಟ ಸೇವಾ/ಶಿಸ್ತುಪಾಲನಾ ನಿಯಮಗಳ ಮೇರೆಗೆ ಶಿಸ್ತಿನ ಕ್ರಮಕ್ಕೆ ಒಳಗಾಗತಕ್ಕದ್ದು ಎಂದು ಇದೆ. ದಯವಿಟ್ಟು ನೀವು ಅಲ್ಲಿಗೆ ನಿಲ್ಲಿಸಿ.

ಅದಾದಮೇಲೆ ಏನು ಹೇಳಿದ್ದೀರಿ ಎಂದರೆ ಅಥವಾ ಅಂಥ ನಿರ್ಲಕ್ಷದ ತೀವ್ರತೆಯನ್ನವಲಂಬಿಸಿ ಅನುಸೂಚಿ ಜಾತಿಗಳ ಉಪಯೋಜನೆ/ಬುಡಕಟ್ಟು ಉಪಯೋಜನೆಯ ನೋಡಲ್ ಏಜೆನ್ಸಿಯು ನಿರ್ಧರಿಸುವಂತೆ, ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಎಂದು ಇದೆ. ದಯವಿಟ್ಟು ಇದನ್ನು ನಿಲ್ಲಿಸಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಇದನ್ನು ಯಾವುದೇ ಕಾನೂನಿನಲ್ಲಿ ತರಲಿಕ್ಕೆ ಆಗುವುದಿಲ್ಲ. ತಂದರೆ ಏನಾಗುತ್ತದೆ ಎಂದರೆ ಅಧಿಕಾರಿಗಳು ಎಲ್ಲವನ್ನೂ ಸ್ವಲ್ಪಮಟ್ಟಿಗೆ ಹೆದರಿಕೆಯಿಂದ ನೋಡಿಕೊಂಡು,

ತಾವು ಯಾವುದನ್ನು ತರಬೇಕೆಂದು ಇಚ್ಛೆಪಟ್ಟಿದ್ದೀರಿ, ಅದನ್ನು ತರಲಿಕ್ಕೆ ಆಗದೇ ಇರತಕ್ಕಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಒಂದು ವಿಚಾರ. ಆದ್ದರಿಂದ, ಆ ಭಾಗವನ್ನು ನೀವು delete ಮಾಡಿ.

ಮತ್ತೆ 25ರಲ್ಲಿನ ಅಪರಾಧ ಸಂಜ್ಞೇಯತೆಯ ಬಗ್ಗೆ ಏನು ಹೇಳಲಾಗಿದೆ ಎಂದರೆ 24ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅಪರಾಧಗಳು ಸಂಜ್ಞೇಯವಲ್ಲದ ಅಪರಾಧಗಳಾಗಿರತಕ್ಕದ್ದು. ಗೊತ್ತುಪಡಿಸಿದ ಪ್ರಾಧಿಕಾರವು ಲಿಖಿತ ರೂಪದಲ್ಲಿ ನೀಡಿದ ದೂರಿನ ಮೇಲೆ ಹೊರತು, ಯಾವುದೇ ನ್ಯಾಯಾಲಯವು ಸದರಿ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ ಎಂದು ಹೇಳಲಾಗಿದೆ. ದಯವಿಟ್ಟು ಈ ಎರಡು ವಿಷಯಗಳನ್ನು delete ಮಾಡಿ. Delete ಮಾಡುವಂಹ ಸಂದರ್ಭದಲ್ಲಿ ಮುಂದಿನ ಅಧಿವೇಶನದ ಅವಧಿಯಲ್ಲಿ ನೀವು ಅದಕ್ಕೆ ತಿದ್ದುಪಡಿಯನ್ನು ತನ್ನಿ. ನಾವು ಇವತ್ತು ಪಾಸ್ ಮಾಡೋಣ. ಆದರೆ, ಇವತ್ತು delete ಮಾಡುತ್ತೇವೆಂದು ನೀವು ಒಂದು ಭರವಸೆಯನ್ನು ಸದನದಲ್ಲಿ ಕೊಡಬೇಕಾಗುತ್ತದೆ. ಮುಂದಿನ ಅಧಿವೇಶನದಲ್ಲಿ ನೀವು ಅದಕ್ಕೆ ತಿದ್ದುಪಡಿಯನ್ನು ತರಬೇಕು. ಮತ್ತೆ ಈ ಒಂದು ವಿಧೇಯಕ ಜಾರಿಗೆ ಬರುವಂತಹದ್ದು ನೀವು ತಿದ್ದುಪಡಿಯನ್ನು ತಂದ ಮೇಲೆ ಮಾತ್ರ ಅದು ಜಾರಿಗೆ ಬರಬೇಕು ಮತ್ತು ಅದು ರಾಜ್ಯ ಪತ್ರದಲ್ಲಿ ಪ್ರಕಟವಾಗಬೇಕು. ಇದಕ್ಕೆ ಒಳಪಟ್ಟು ಇದನ್ನು ಮಾಡಬೇಕೆಂದು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಈ ವಿಧೇಯಕದ 13ರಲ್ಲಿ ಏನು ಹೇಳಲಾಗಿದೆ ಎಂದರೆ ಅದನ್ನು ಮುಂದಿನ ಹಣಕಾಸು ವರ್ಷದ ಹಂಚಿಕೆಗೆ ಸೇರಿಸಬಹುದು. ಆದರೆ ಆ ವರ್ಷವು ಮೀರಿದ ನಂತರ ಅದನ್ನು ಮುಂದುವರೆಸತಕ್ಕದ್ದಲ್ಲ: ಇದರಲ್ಲಿ

ಸ್ವಲ್ಪ ಕ್ಲಾರಿಟಿ ಇರಬೇಕೆಂದು ನನಗೆ ಅನಿಸುತ್ತದೆ. ಏಕೆಂದರೆ, ಈ ವರ್ಷದ್ದು ಮುಂದಿನ ವರ್ಷ consolidate ಆಗುತ್ತದೆ. ಒಟ್ಟು ಏನು ಆಗುತ್ತದೆ ಎಂದರೆ ಈ ವರ್ಷ 12 ಕೋಟಿ ರೂಪಾಯಿಗಳು ಉಳಿಯುತ್ತದೆ ಎಂದು ತಿಳಿದುಕೊಳ್ಳಿ. ಬರುವ ವರ್ಷ 36 ಕೋಟಿ ರೂಪಾಯಿಗಳಿಗೆ 12 ಕೋಟಿ ರೂಪಾಯಿಗಳನ್ನು ಸೇರಿಸಿದರೆ ಒಟ್ಟು 48 ಕೋಟಿ ರೂಪಾಯಿಗಳಾಗುತ್ತದೆ. 48 ಕೋಟಿ ರೂಪಾಯಿಗಳಲ್ಲಿ ಯಾವುದನ್ನು specific ಮಾಡಿ ಅಂದರೆ ಮುಂದುವರಿಸಿದ್ದನ್ನು ಮತ್ತೆ ಮುಂದುವರಿಸುವುದಿಲ್ಲವೆಂದು ಹೇಳುವಂತಹ clarityಗಳು ಬೇಕಾಗಬಹುದು ಎಂದು ನನಗೆ ಅನಿಸುತ್ತದೆ. ಏಕೆಂದರೆ, ಮತ್ತೆ ಅದನ್ನು ಮುಂದುವರಿಸಲಿಕ್ಕೆ ಅಗದಂತಹ ಸಂದರ್ಭಗಳು ನಿರ್ಮಾಣವಾಗುತ್ತವೆ. ಇದರಲ್ಲಿ 16ರಲ್ಲಿ ಹೇಳಿರುವ ವಿಷಯ ನನಗೆ ಸರಿಯಾಗಿ ಅರ್ಥವಾಗುತ್ತಿಲ್ಲ. ಅದು ಸರಿ ಇರಬಹುದು. ಅನುಸೂಚಿತ ಜಾತಿಗಳು/ ಅನುಸೂಚಿತ ವರ್ಗಗಳನ್ನು ಅವರ ಅರ್ಹತೆಗೆ ಅನುಗುಣವಾಗಿರುವ, ಪ್ರಗತಿಯಲ್ಲಿರುವ ಸಾಮಾನ್ಯ schemeಗಳ ವ್ಯಾಪ್ತಿಯಲ್ಲಿ ತರಲಾಗಿದೆ ಎಂಬುದನ್ನು ಇಲಾಖೆಗಳು ಖಚಿತಪಡಿಸಿಕೊಳ್ಳತಕ್ಕದ್ದು ಎಂದು ಇದೆ. ಇದು ಏನು ಎನ್ನುವ ಬಗ್ಗೆ ಸ್ವಲ್ಪ clarify ಮಾಡಿಕೊಡಬೇಕು.

**ಶ್ರೀಮತಿ ಮೋಟಮ್ಮ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇವತ್ತು ಏನು ಈ ಹೊಸ ಬಿಲ್ಲನ್ನು ನಮ್ಮ ಸರ್ಕಾರದ ವತಿಯಿಂದ ತಂದಿದ್ದಾರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಯಾವುದೇ ಇಲಾಖೆಗೆ, ಸರ್ಕಾರಕ್ಕೆ ಒಂದು ಬದ್ಧತೆ, ಅಥವಾ commitments ಇದ್ದರೆ, ಇದರ ಅವಶ್ಯಕತೆ ನಿಜವಾಗಿಯೂ ಸಹ ಇರಲಿಲ್ಲ ಎನಿಸುತ್ತದೆ. ಏಕೆಂದರೆ, ನಿಮಗೆ ಗೊತ್ತಿರುವ ಹಾಗೆ as per the constitutional reservetions ಈ ಜನರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಕೊಡುವ ಸೌಲಭ್ಯಗಳೇನಿದೆ, ಅದನ್ನು ಕೊಡಬೇಕಾಗಿರುವುದು ಒಂದು ಧರ್ಮ. ಜೊತೆಗೆ ಅದು ಕಡ್ಡಾಯವಾಗಿರುತ್ತದೆ. ಆದರೆ, ಇಷ್ಟು ವರ್ಷಗಳದರೂ ಕೂಡ ಎಷ್ಟೋ ಬಾರಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಜನರಿಗೆ ನ್ಯಾಯ ಒದಗಿಸುವಲ್ಲಿ ಬಹಳಷ್ಟು ಹಿಂದೆ ಬಿದ್ದಿದ್ದೇವೆ ಎಂದು ನನಗೆ ಅನಿಸುತ್ತದೆ. ಅದಕ್ಕಾಗಿ ಇಂತಹ ಕ್ರಾಂತಿಕಾರಕ ಕಾಯಿದೆಗಳನ್ನು

ಇವತ್ತು ತರಬೇಕಾದಂತಹ ಸಂದರ್ಭ ಒದಗಿ ಬರುತ್ತದೆ. ಈ ಕಾಯಿದೆ ಬಂದ ನಂತರವಾದರೂ ಕೂಡ ಇದನ್ನು ಜಾರಿಗೆ ತರುವಲ್ಲಿ ಅಭಿವೃದ್ಧಿ ಪರಿಷತ್ತು ಎಂದು ಏನು ಮಾಡಿದ್ದಾರೆ, ಅಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳಿರಬಹುದು, ಸದಸ್ಯರುಗಳಿರಬಹುದು ಅವರುಗಳು ಅಷ್ಟೇ ಬದ್ಧತೆಯಿಂದ ಈ ಪರಿಷತ್ತಿಗೆ ಏನು ಜವಾಬ್ದಾರಿಗಳನ್ನು ಕೊಟ್ಟಿರುತ್ತಾರೆ, ಅದನ್ನು ಮಾಡಿದ್ದೇ ಆದರೆ, ಇದುವರೆವಿಗೂ ಇದಕ್ಕೆ ಏನೇನು ಅಡೆತಡೆಗಳಾಗಿವೆ, ಅನ್ಯಾಯವಾಗಿದೆ, ಅವುಗಳನ್ನು ಸರಿಪಡಿಸುವಲ್ಲಿ ಸಾಧ್ಯವಾಗುತ್ತದೆ. ಈಗಾಗಲೇ SC & ST Development Corporation Ltd ಎಂದು ಇತ್ತು. ಅದನ್ನು ಈಗ Dr. B.R.Ambedkar Development Corporation ಎಂದು ಮಾಡಿದ್ದಾರೆ. ಮತ್ತೆ ಇದಕ್ಕೆ "ಅಭಿವೃದ್ಧಿ ಪರಿಷತ್ತು" ಎಂದು ಹೆಸರನ್ನು ಕೊಡಲಾಗಿದೆ. ಅದರಲ್ಲಿ ಸಾಲ–ಸೌಲಭ್ಯವನ್ನು ಕೊಡುವುದಾದರೂ ಕೂಡ ಇದರಲ್ಲಿ ಇಲಾಖಾವಾರು 18% ರಷ್ಟು ಹಣವನ್ನು ಖರ್ಚುಮಾಡಬೇಕೆಂದು ಏನು ಹಿಂದೆ ಈ Special Component Plan ಎಂದು ಏನು ಇತ್ತು. ಅದನ್ನು ಈಗ ಈ ಯೋಜನೆಯ ಒಂದು ಭಾಗದಷ್ಟನ್ನು ಈ ಭಾಗದವರಿಗೆ ಖರ್ಚು ಮಾಡಬೇಕೆನ್ನುವ ಉದ್ದೇಶವನ್ನಿಟ್ಟುಕೊಂಡು ತಂದಿರುವ ಈ ಬಿಲ್ಲು ಇದಾಗಿದೆ.

ಇವತ್ತು ಡಿಸೆಂಬರ್, 6, ಈ ದಿನ ಡಾ॥ ಅಂಬೇಡ್ಕರ್‌ರವರ ಪರಿನಿರ್ವಾಣ ದಿನವಾಗಿದ್ದು, ಇದನ್ನು ನಾವೆಲ್ಲರೂ ಮೇಲ್ಮನೆಯಲ್ಲಿ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ. ಕಾಯಾ, ವಾಚಾ, ಮನಸಾ ಇದನ್ನು ಜಾರಿಗೆ ತರಲಿಕ್ಕೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ. ಇನ್ನೊಂದು High Power Committee ಎಂದು ಇದೆ. ಈ ಜನರ ಹಿತರಕ್ಷಣೆಗೋಸ್ಕರ ಈ ಕಮಿಟಿಯನ್ನು ಮಾಡಲಾಗಿದ್ದು, ಇದಕ್ಕೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುತ್ತಾರೆ. ಈ ಕಮಿಟಿಯನ್ನು ಹಿಂದೆ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾಡಲಾಗಿತ್ತು. ನಿಜವಾಗಿಯೂ ಸಹ ಈ High Power Committeeಗೆ ಹೇಳುವವರು ಕೇಳುವವರಿಲ್ಲ. ಎಸ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಈ

High Power Committee ಎನ್ನುವುದು ಸರ್ಕಾರದಲ್ಲಿ ಇದೆಯೇ, ಇದ್ದಲ್ಲಿ ಅದು ಎಷ್ಟು ಬಾರಿ ಸಭೆಗಳನ್ನು ನಡೆಸಿದೆ ಎಂದು ನಾನು ಅವರಿಗೆ ಪ್ರಶ್ನೆಯನ್ನು ಕೇಳಿದ್ದೆ.

**ಸಭಾಪತಿಯವರು:-** ಅದರ ಸಭೆಯೇ ಆಗಿರುವುದಿಲ್ಲ.

**ಶ್ರೀಮತಿ ಮೋಟಮ್ಮ:-** ಅದರ ಸಭೆಯೇ ಆಗಿರುವುದಿಲ್ಲ. ನಾನು ಕೇಳಿದಂತಹ ಪ್ರಶ್ನೆಗೆ ಅವರು ಹೇಳಿದ್ದು ಏನೆಂದರೆ, ಇದರ ಉದ್ದೇಶ ಈ ಜನರ, ಈ ನೌಕರರ ಬೇಡಿಕೆಗಳ ಅಂದರೆ ಅವರುಗಳ ಉದ್ಯೋಗ ಮತ್ತು ಮುಂಬಡ್ತಿಯ ಬಗ್ಗೆ ಅವರಿಗೆ ಇರುವಂತಹ ಆಸಕ್ತಿಯನ್ನು ರಕ್ಷಣೆ ಮಾಡಲಿಕ್ಕೆ ಇರುವುದು ಎಂದರು. ಇನ್ನು ಮುಂದೆ ಅದಕ್ಕೆ ಒಂದು Monitoring Cell ಎಂದು ಮಾಡುತ್ತೇವೆ. ಯಾವ ಇಲಾಖೆಯಲ್ಲಿ ಇದನ್ನು overlook ಮಾಡುತ್ತಾರೆ, ಅಥವಾ ಇದನ್ನು deprive ಮಾಡುತ್ತಾರೆ, ಅವರ ಮೇಲೆ Punishment ಎಂದು ಮಾಡಿದರು. ಮಾನ್ಯ ಸದಸ್ಯರಾದ ಶ್ರೀಯುತ ನಾಣಯ್ಯನವರು ಈ ವಿಧೇಯಕದ 24 ಮತ್ತು 25ರಲ್ಲಿ ಕೊಟ್ಟಿರುವ Punishment ಬಗ್ಗೆ ಹೇಳಿದರು. ಈ Job Reservation and Promotion Reservationಅನ್ನು ಸರಿಯಾಗಿ Monitoring ಮಾಡಬೇಕೆಂದು High Power Committeeಯಲ್ಲಿಯೂ ಸಹ ಇದೆ. ಅದನ್ನು ಯಾವ ಇಲಾಖೆಯವರು ಮಾಡುವುದಿಲ್ಲ. ಅವರನ್ನು Punish ಮಾಡಬೇಕೆಂದು ಅಲ್ಲಿ ಕೂಡ ಇದೆ. ಇದುವರೆವಿಗೂ ಆ Monitoring Cell ಏನಾಗಿದೆ ಎಂದು ಗೊತ್ತಿಲ್ಲ, High Power Committee ಸಭೆ ಸೇರುವುದಿಲ್ಲ. ಕೊನೆಯ ಪಕ್ಷ ವರ್ಷಕ್ಕೆ ಒಮ್ಮೆಯಾದರೂ ಒಂದು ಮೀಟಿಂಗ್ ಮಾಡಿ ಇದನ್ನು ಒಂದು review ಮಾಡಬಹುದು. ಅದು ಆಗದಿದ್ದರೆ, ಈ ಕಾಯಿದೆ ಕಾನೂನಿಗೆ ಅರ್ಥ ಬರುವುದಿಲ್ಲ. ಮುಂದೆ ಆದರೂ ಸಹ ಇದನ್ನು pledge ಆಗಿ ತೆಗೆದುಕೊಂಡು ಇದನ್ನು ಮಾಡಬೇಕಾಗಿದೆ. ಸರ್ಕಾರದ ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ, ನಾವುಗಳೆಲ್ಲರೂ ಇಲ್ಲಿ ಕುಳಿತಿದ್ದೇವೆ, ಈ ಜನರಿಗೆ ನ್ಯಾಯ ಒದಗಿಸುವಲ್ಲಿ ಈ ಮೂಲಕ ಮಾಡೋಣ. ಈ ಬಗ್ಗೆ ಮಾತುಗಳು ಏನು ಬರುತ್ತವೆ ಎಂದರೆ ಇನ್ನು ಎಷ್ಟು ವರ್ಷಗಳ ಕಾಲ ಈ reservations ಎಂದು youngstersಗಳು

ಕೇಳುತ್ತಾರೆ. ಎಸ್.ಸಿ/ಎಸ್.ಟಿಯವರೆಗೆ ಇನ್ನೂ ಏತಕ್ಕೆ reservation ಬೇಕು? ಉಳಿದವರಿಗೆ ಏತಕ್ಕೆ ಇಲ್ಲವೆಂದು ಕೇಳುತ್ತಾರೆ. ಈಗ ಆಗಿರುವಂತಹ ಅನ್ಯಾಯ ಅವರ ತಲೆಗಳಿಗೆ ಹೋಗುವುದೇ ಇಲ್ಲ. ಇಷ್ಟು ವರ್ಷಗಳಾದರೂ ನಾವು ಏನು ಅವರುಗಳಿಗೆ ನ್ಯಾಯ ದೊರಕಿಸಿಕೊಟ್ಟಿದ್ದೇವೆ, ಏತಕ್ಕೆ ಅವರುಗಳಿಗೆ ನ್ಯಾಯ ದೊರಕಿಸಿಕೊಡಲಿಕ್ಕೆ ಆಗಲಿಲ್ಲ ಎನ್ನುವುದು ಆ youngstersಗಳ ತಲೆಗೆ ಹೋಗುವುದೇ ಇಲ್ಲ.

**ಶ್ರೀ ಗೋ.ಮಧುಸೂಧನ್ (ಪದವೀಧರರ ಕ್ಷೇತ್ರ):–**ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಧ್ಯೆ ಬಾಯಿ ಹಾಕಲಿಕ್ಕೆ ಹೋಗಬೇಡಿ. ಮಾನ್ಯ ಸದಸ್ಯರು yield ಆದರೆ ನೀವು ಮಾತನಾಡಿ.

**ಶ್ರೀ ಗೋ.ಮಧುಸೂಧನ್:–**ಇಲ್ಲಿಯವರೆಗೂ ಸಹ ಆ ವರ್ಗದವರನ್ನು ಬಿಟ್ಟು ಬೇರೆ ಯಾರೂ ಈ ಖಾತೆಯ ಮಂತ್ರಿಗಳಾಗಿರುವುದಿಲ್ಲ. ಬಹುತೇಕವಾಗಿ ಈ ಇಲಾಖೆಗೆ ಆ ವರ್ಗಕ್ಕೆ ಸೇರಿದ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳನ್ನು, ಅಧಿಕಾರಿಗಳನ್ನು ಹುಡುಕಿ ಹಾಕುವಂತಹ ಪದ್ಧತಿ ಇದೆ. ಇಷ್ಟಾದರೂ ಸಹ.

**ಸಭಾಪತಿಯವರು:–**ಇದನ್ನೆಲ್ಲಾ ಏತಕ್ಕೆ ಮಾತನಾಡುತ್ತೀರಿ? ಈ ವಿಚಾರವನ್ನು ಈ ಬಿಲ್ ಮಂಡನೆಯ ಸಮಯದಲ್ಲಿ ಚರ್ಚೆ ಮಾಡಬೇಡಿ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸದಸ್ಯರು ಹೇಳುತ್ತಿರುವುದು ತಪ್ಪು.

**(ಗೊಂದಲ)**

**ಡಾ॥ ಹೆಚ್.ಸಿ.ಮಹಾದೇವಪ್ಪ (ಲೋಕೋಪಯೋಗಿ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಶ್ರೀ ಕಾಗೋಡ ತಿಮ್ಮಪ್ಪನವರು ಸಮಾಜ ಕಲ್ಯಾಣ ಸಚಿವರಾಗಿ ಕೆಲಸ ನಿರ್ವಹಿಸಿದ್ದಾರೆ. ಮತ್ತೆ ಬೇರೆಯವರು ಸಹ ಈ ಖಾತೆಯ

ಸಚಿವರಾಗಿ ಕೆಲಸ ನಿರ್ವಹಿಸಿದ್ದಾರೆ. ಹೀಗಿರುವಾಗ ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿ ಇರುವುದಿಲ್ಲ. ಈ ಖಾತೆಗೆ ಇಂತಹ ವರ್ಗದವರೇ ಸಚಿವರಾಗಿ ಕಾರ್ಯನಿರ್ವಹಿಸಬೇಕೆಂದು ಮ್ಯಾನ್‌ಡೇಟರಿ ಇಲ್ಲ. ಕೆಲಸವನ್ನು ಬದ್ಧತೆಯನ್ನಿಟ್ಟುಕೊಂಡು ಮಾಡಬೇಕು, ರಾಜ್ಯಾಂಗದ ಆಶಯಗಳನ್ನು ಜಾರಿ ಮಾಡುವಂತಹದ್ದು ಅತ್ಯಂತ ಪ್ರಮುಖವಾದಂತಹ ಸಂಗತಿಯಾಗಿದೆ. ಮೊದಲು ಬೇರೆ ವರ್ಗದವರು ಸಚಿವರಾಗಿಲ್ಲವೆಂದು ಹೇಳಿದರಲ್ಲಾ ಅದಕ್ಕಾಗಿ ಈ ವಿಚಾರವನ್ನು ಹೇಳಬೇಕಾಯಿತು.

**ಸಭಾಪತಿಯವರು:–**ಎಲ್ಲರೂ ಕುಳಿತುಕೊಳ್ಳಿ. ಶ್ರೀಮತಿ ಮೋಟಮ್ಮನವರು ತಮ್ಮ ಚರ್ಚೆಯನ್ನು ಮುಗಿಸಲಿ.

**ಶ್ರೀಮತಿ ಮೋಟಮ್ಮ:–**ಮಾನ್ಯ ಸದಸ್ಯರಾದ ಶ್ರೀ ನಾಣಯ್ಯನವರು punishment ವಿಚಾರವನ್ನು ಹೇಳಿದರು. ಆದರೆ ಯಾರಿಗೂ punishment ಆಗುವುದಿಲ್ಲ. ಎಲ್ಲರೂ ಅದರಿಂದ ತಪ್ಪಿಸಿಕೊಳ್ಳುತ್ತಾರೆ. ಅದರಲ್ಲಿ ಆ ವಿಷಯ ಇದ್ದರೆ, ಅದನ್ನು delete ಮಾಡುವ ಅಗತ್ಯ ಇಲ್ಲ. ಅದು ಇದ್ದರೆ, ಒಂದು ಭಯದ ವಾತಾವರಣ ಅವರಿಗೆ ಇರುತ್ತದೆ, ಹೆದರಿಕೆ ಇರುತ್ತದೆ. ಒಂದಲ್ಲಾ ಒಂದು ರೀತಿಯಲ್ಲಿ...

**ಶ್ರೀ ಎಂ.ಸಿ.ನಾಣಯ್ಯ:–** ನಾನು ಹೇಳಿದ್ದು ನಿಮಗೆ ಅರ್ಥವಾದಂತೆ ಕಾಣುತ್ತಿಲ್ಲ. ಈ ಕಾನೂನನ್ನು ತಂದು, ಇದನ್ನು ಎಲ್ಲಿಯಾದರೂ ಅಳವಡಿಸಿಕೊಂಡಾಗ ಅಧಿಕಾರಿಗಳು ಏನು ಮಾಡುತ್ತಾರೆಂದು ತಮಗೆ ಗೊತ್ತೇ? ದಯವಿಟ್ಟು ಇದನ್ನು ತಿಳಿದುಕೊಳ್ಳಿ. ಒಂದು ಕಾನೂನು ಇತ್ತು, ಅದರಿಂದ ಏನೂ ಆಗಲಿಲ್ಲವೆನ್ನುವುದು ನಿಮಗೆ ಗೊತ್ತಿದೆ. ಇಂತಹ ಕಾನೂನು ಇದ್ದಾಗ, ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಾಗ ನಾನು ಈ ಕೆಲಸವನ್ನು ಏಕೆ ಮಾಡಬೇಕು, ಬಹುಶಃ ನಾಳೆ ಏನಾದರೂ ಆಗಿ ಇದರಲ್ಲಿ ಸಿಕ್ಕಿಹಾಕಿಕೊಂಡರೆ ಹೇಗೆ ಎಂದು ಹೇಳಿ, ಅದನ್ನು ಹಾಗೆಯೇ ಇಡುವಂತಹ ಪರಿಸ್ಥಿತಿ ನಿರ್ಮಾಣವಾಗತ್ತದೆ. ಆದ್ದರಿಂದ, ದಯವಿಟ್ಟು ಇದು ಬೇಡವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಈ ವಿಷಯವಾಗಿ ನಾನು ಮಂತ್ರಿಗಳ ಜೊತೆಯಲ್ಲಿ

ಚರ್ಚೆ ಮಾಡಿ ನಾನು ಇದು ಬೇಡವೆಂದು ಹೇಳಿದ್ದೇನೆ. ಆದ್ದರಿಂದ, ಇದನ್ನು delete ಮಾಡಿ.

**ಸಭಾಪತಿಯವರು:–** ಶ್ರೀಮತಿ ಮೋಟಮ್ಮನವರು ಮಾತನಾಡಲಿ. ಅವರಿಗೆ ಅಪರೂಪಕ್ಕೆ ಒಂದು ಅವಕಾಶ ಸಿಕ್ಕಿದೆ. ಅವರು ಮಾತನಾಡುವುದೇ ಬೇಡವೆಂದರೆ ಹೇಗೆ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರು ಈಗ ನನಗೆ ಸರಿಯಾಗಿ justice ಕೊಡುತ್ತಿದ್ದಾರೆ. ಅದಕ್ಕೆ ವಂದನೆಗಳು. ಮತ್ತೆ ಇನ್ನೊಂದು ವಿಷಯವೇನೆಂದರೆ, ನಾನು ಹಿಂದೆ ಬಜೆಟ್ ಬಗ್ಗೆ ಮಾತನಾಡುವ ಸಮಯದಲ್ಲಿಯೂ ಸಹ ನಾನು ಈ ವಿಷಯವಾಗಿ ಮಾತನಾಡಿದ್ದೆ. ಆ ಸಮಯದಲ್ಲೂ ತಾವು ಮಾತನಾಡಿದ್ದೀರಿ. ಈ ಇಲಾಖೆಯನ್ನು ನಿರ್ವಹಣೆ ಮಾಡಲಿಕ್ಕೆ ಯಾವುದೇ ಐ.ಎ.ಎಸ್. ಅಧಿಕಾರಿಗಳು ಸಂತೋಷವಾಗಿ ನಿರ್ವಹಣೆ ಮಾಡಲಿಕ್ಕೆ ಬರುವುದಿಲ್ಲ. ನಿಮ್ಮವರೇ ಕಾರ್ಯದರ್ಶಿಯಾಗಿ ಇರುತ್ತಾರೆ ನಿಮ್ಮವರೇ ಮಂತ್ರಿಯಾಗಿ ಇರುತ್ತಾರೆ ಎಂದು ಈಗ ಹಿಂದೆ ಮಾತನಾಡಿದ ಸದಸ್ಯರು ಹೇಳಿದರು. ನಾನು ಮಾನ್ಯ ಬಂಗಾರಪ್ಪನವರಿಗೆ ಈ ಸಮಾಜ ಕಲ್ಯಾಣ ಇಲಾಖಾ ಖಾತೆಯನ್ನು ನಿರ್ವಹಿಸುವುದಕ್ಕೆ ಬೇರೆ ವರ್ಗದವರಿಗೆ ಕೊಡಿ ಎಂದು ಹೇಳಿದ್ದೆನು. ವೈದ್ಯರುಗಳು ಗ್ರಾಮೀಣ ಮಟ್ಟದಲ್ಲಿ ಕಡ್ಡಾಯವಾಗಿ ಕೆಲಸವನ್ನು ನಿರ್ವಹಣೆ ಮಾಡಿರಬೇಕು ಎಂದು ಏನು ನಾವು ಹೇಳುತ್ತೇವೆ ಅದೇ ರೀತಿಯಲ್ಲಿ ಯಾವುದೇ ಇಲಾಖಾ ಕಾರ್ಯದರ್ಶಿಯವರು ಕೂಡ ಮುಖ್ಯ ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸಬೇಕಾದರೆ ಅವರು ಕಡ್ಡಾಯವಾಗಿ ಹಿಂದುಳಿದ ವರ್ಗದ ಮತ್ತು ಸಮಾಜಕಲ್ಯಾಣ ಇಲಾಖಾ ಕಾರ್ಯದರ್ಶಿಗಳಾಗಿ ಕರ್ತವ್ಯ ನಿರ್ವಹಿಸಿರಬೇಕು ಮತ್ತು ಆ ಇಲಾಖೆಯಲ್ಲಿ ಯಾವ ರೀತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂಬ ಒಂದು ಕ್ವಾಲಿಫಿಕೇಷನ್ ಅನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅವರು ಅಲ್ಲಿ ಯಾವ ರೀತಿ ಕೆಲಸ ಮಾಡಿದ್ದಾರೆ ಎನ್ನುವುದಕ್ಕೆ ಇದು ಒಂದು ಕ್ವಾಲಿಫಿಕೇಷನ್ ರೀತಿ ಇರಬೇಕು. ಆದರೆ ನೀವು ಬೇರೆ ರೀತಿ ಹೇಳಿದ್ದೀರಿ. ಇದರ ಬಗ್ಗೆ ಯಾವುದೇ ಒಂದು ಗ್ರೂಪ್ ಮಾಡಬೇಡಿ ಮತ್ತು ಇದರ ಬಗ್ಗೆ

ಯಾವುದೇ ಒಂದು discriminate ಮಾಡಬೇಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಎಲ್ಲರಿಗೂ ಇದರಲ್ಲಿ ಬದ್ಧತೆ ಇದ್ದರೆ ಒಳ್ಳೆಯದು. ಇದು ಸರಿಯಾಗಿರುತ್ತದೆ. ಏನೇ ಆದರೂ ಈ ಒಂದು ಕ್ರಾಂತಿಕಾರಕವಾದ ಮಸೂದೆಯಾಗಿದೆ. ಆಂಧ್ರಪ್ರದೇಶದಲ್ಲಿ ಈಗಾಗಲೇ ಈ ಮಸೂದೆ ಇದೆ. ಈ ಒಂದು ವಿಧೇಯಕವನ್ನು ಇಲ್ಲಿ ತಂದುದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ನಿನ್ನೆ ಮಾನ್ಯ ಸಚಿವರು ಬಹಳ ಭಾವುಕರಾಗಿ ಮಾತನಾಡಿದ್ದಾರೆ. ಕಣ್ಣೀರು ಇಟ್ಟರು ಎಂದು ಕೂಡ ತಿಳಿದು ಬಂತು. ನಾನು ಈ ಮಸೂದೆಯನ್ನು ಸ್ವಾಗತ ಮಾಡುತ್ತಾ ನನಗೆ ಮಾತನಾಡಲು ಸಮಯವನ್ನು ನೀಡಿದ್ದಕ್ಕಾಗಿ ವಿಶೇಷವಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಸಿದ್ದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ವಿಧೇಯಕವನ್ನು ಇಲ್ಲಿ ಏನು ತಂದಿದ್ದಾರೆ ಇದನ್ನು ನಾನು ಸ್ವಾಗತ ಮಾಡುತ್ತೇನೆ. ವಿಶೇಷವಾಗಿ ಸಂವಿಧಾನ ಶಿಲ್ಪಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಮಹಾಪರಿ ನಿರ್ವಾಣದ ದಿನ ಈ ವಿಧೇಯಕವನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಿರುವುದು ಈ ದೀನದಲಿತ ವರ್ಗಕ್ಕೆ ಸಿಕ್ಕಂತಹ ನ್ಯಾಯವೆಂದು ನಾನು ಭಾವಿಸುತ್ತೇನೆ. ಈ ವಿಧೇಯಕದಲ್ಲಿ ರಾಜ್ಯದಲ್ಲಿ ಇರತಕ್ಕಂತಹ 101 ಪರಿಶಿಷ್ಠ ಜಾತಿ ಮತ್ತು 14 ಪರಿಶಿಷ್ಠ ವರ್ಗಕ್ಕೆ ಸೇರಿದಂತಹ ಜನರಿಗೆ ಇದರ ವಿಶೇಷ ಸವಲತ್ತುಗಳು ತಲುಪಬೇಕು. ತನ್ಮೂಲಕ ಇದರ ಅವ್ಯವಹಾರಗಳು ಏನು ನಡೆಯುತ್ತಿತ್ತು ಅದು ಇನ್ನು ಮುಂದಾದರೂ ತಪ್ಪುತ್ತದೆ ಎಂದು ನಾನು ಭಾವಿಸಿದ್ದೇನೆ. ಹಾಗೇ ಜೊತೆ ಜೊತೆಗೆ ಇದರ ದುರುಪಯೋಗದ ಬಗ್ಗೆ ಹಿರಿಯ ಸದಸ್ಯರಾದ ಮಾನ್ಯ ನಾಣಯ್ಯನವರು ಪ್ರಸ್ತಾಪ ಮಾಡಿದ್ದಕ್ಕೋಸ್ಕರ ನಾನು ಒಂದು ಘಟನೆಯನ್ನು ಹೇಳಬಯಸುತ್ತೇನೆ. ಎರಡು ವರ್ಷದ ಹಿಂದಿನ ಅಧಿವೇಶನದ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಕೋಲಾರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಸುಮಾರು 1 ಕೋಟಿ 80 ಲಕ್ಷ ರೂಪಾಯಿಯ ಹಣ ದುರುಪಯೋಗ

ಮಾಡಿದ್ದರು. ಈ ಬಗ್ಗೆ ಮಾನ್ಯ ಸಚಿವರು ಅವರನ್ನು ಅಮಾನತ್ತಿನಲ್ಲಿ ಇಟ್ಟಿದ್ದೇವೆ ಅವರ ಬಗ್ಗೆ ಕ್ರಮವನ್ನು ಜರುಗಿಸುತ್ತೇವೆ ಎಂದು ಹೇಳಿ ಉತ್ತರವನ್ನು ನೀಡಿದ್ದರು. ಅವರನ್ನು ಅಮಾನತ್ತಿನಲ್ಲಿ ಇಡುವುದು ಒಂದು ಭಾಗ ಮತ್ತೊಂದು ಭಾಗದಲ್ಲಿ ಈ ರೀತಿಯ ಹಣ ದುರುಪಯೋಗ ಮಾಡಿದ್ದಕ್ಕಾಗಿ ಕಾನೂನಿನಲ್ಲಿ ಯಾವುದೇ ಶಿಕ್ಷೆಯನ್ನು ವಿಧಿಸುವ ಹಾಗಿಲ್ಲವೇ? ಅವರಿಗೆ ಶಿಕ್ಷೆ ಆಗಬೇಕು. ಇದಕ್ಕೆ ಏನಾದರೂ ಒಂದು ಯೋಚನೆ ಮಾಡಿ ಎಂದು ಹೇಳಿದ್ದೆ. ಈ ವಿಧೇಯಕದಲ್ಲಿ ಆ ಹಣವನ್ನು ದುರುಪಯೋಗಪಡಿಸಿಕೊಳ್ಳುವ ವ್ಯಕ್ತಿಗೆ ಕಠಿಣ ಶಿಕ್ಷೆಯನ್ನು ಕೊಡುವ ಪ್ರಯತ್ನ ಮಾಡಿರುವುದು ಬಹಳ ಸ್ವಾಗತಾರ್ಹವೆಂದು ಹೇಳಬಯಸುತ್ತೇನೆ. ಅಷ್ಟಕ್ಕೇ ಬಿಟ್ಟಿಲ್ಲ. ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅವರಿಗೆ ವಿಶೇಷವಾಗಿ ಪ್ರೋತ್ಸಾಹ ಕೊಡುವುದನ್ನು ಈ ವಿಧೇಯಕದಲ್ಲಿ ತಂದಿರುವುದನ್ನು ನಾವು ಕಾಣುತ್ತಿದ್ದೇವೆ. ಸಮಾಜ ಕಲ್ಯಾಣ ಇಲಾಖೆಯ ಒಂದು ದೊಡ್ಡ ಹೆಜ್ಜೆ ಇದು ಎಂದು ನಾನು ಭಾವಿಸುತ್ತೇನೆ. ನಮ್ಮ ಹಿಂದುಳಿದ, ದೀನದಲಿತ ವರ್ಗದವರಿಗೆ ಸಂಬಂಧಪಟ್ಟಂತೆ ಇನ್ನೂ ಎಷ್ಟು ವರ್ಷ ಈ ಮೀಸಲಾತಿ ಇರಬೇಕು ಎಂಬುದರ ಬಗ್ಗೆ ಸಹೋದರಿ ಶ್ರೀಮತಿ ಮೋಟಮ್ಮನವರು ಬಹಳ ಚೆನ್ನಾಗಿ ಮಾತನಾಡಿದರು. ಈ ವರ್ಗದವರು ಎಲ್ಲಿಗೆ ತಲುಪಬೇಕೋ ಅಲ್ಲಿಗೆ ತಲುಪುವಂತಹ ಪ್ರಯತ್ನ ಇವತ್ತಿಗೂ ಸಹ ಸಾಧ್ಯವಾಗಿಲ್ಲ. ಇದು ಒಂದು ದೊಡ್ಡ ದುರಂತ. ಈ ಒಂದು ವಿಧೇಯಕದ ಮೂಲಕ ಇನ್ನು ಮುಂದೆ ಬರುವಂತಹ ದಿನಗಳಲ್ಲಿ ಸಂವಿಧಾನದ ಸರ್ಕಾರದ ಯೋಜನೆಗಳು ಕಟ್ಟ ಕಡೆಯ ವ್ಯಕ್ತಿಗೆ ಈ ಸೌಲಭ್ಯಗಳು ಸಿಗಬೇಕೆನ್ನುವ ಆಶಯ ಏನು ಇದೆ ಅದು ಅವರುಗಳಿಗೆ ಸಿಗಲಿ ಎಂದು ಹೇಳಬಯಸುತ್ತೇನೆ. ಈ ಒಂದು ವಿಧೇಯಕವನ್ನು ನಾನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು :–** ಮಾನ್ಯ ಸಚಿವರೆ, ಈ ವಿಧೇಯಕದ ಬಗ್ಗೆ ಇನ್ನೂ 2-3 ಸದಸ್ಯರು ಮಾತನಾಡಬೇಕೆಂದಿದ್ದಾರೆ. ಅವರು ಮಾತನಾಡಿದ ನಂತರ ತಾವು ಉತ್ತರವನ್ನು ಕೊಡಿ.

**ಶ್ರೀ ಅಲ್ಲಮ ಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಬಹಳ ಒಳ್ಳೆಯ ಕೆಲಸವನ್ನು ಮಾಡಿದೆ. ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬಯಸುತ್ತೇನೆ. ಇದರಲ್ಲಿ ವಿಧಾನ ಪರಿಷತ್ತಿನ 5 ಜನ ಸದಸ್ಯರು ಅಥವಾ 5 ಜನ ವಿಧಾನಸಭಾ ಸದಸ್ಯರು ಅಥವಾ ಸಂಸತ್ತ ಸದಸ್ಯರು ಎಂದು ಇದೆ. ಹೀಗೆ ಆದಾಗ ವಿಧಾನ ಪರಿಷತ್ತಿನ ಸದಸ್ಯರಿಗೆ ಇಲ್ಲಿ ಅವಕಾಶ ಸಿಗುವುದು ಬಹಳ ಕಷ್ಟವಾಗುತ್ತದೆ. ಆದುದರಿಂದಾಗಿ ನಾವು ನಿನ್ನೆ ಅಂದರೆ ವಿಶ್ವವಿದ್ಯಾನಿಲಯಕ್ಕೆ ನೇಮಕಾತಿಯನ್ನು ಮಾಡಿರುವಂತಹ ರೀತಿಯಲ್ಲಿ ಮೂರು ಜನ ವಿಧಾನ ಸಭಾ ಸದಸ್ಯರು ಒಬ್ಬರು ಇಲ್ಲಿನ ಸದಸ್ಯರು ಮತ್ತು ಮತ್ತೊಬ್ಬರು ಎಂ.ಪಿ. ಯವರು ಇರಬೇಕು ಎಂಬಂತೆ ಒಂದು ತಿದ್ದುಪಡಿಯನ್ನು ಮಾಡಿಕೊಂಡಿದ್ದೇ ಆದರೆ ಒಳ್ಳೆದಾಗುತ್ತದೆ ಇಲ್ಲವಾದಲ್ಲಿ ನಮ್ಮ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಮಂತ್ರಿ ಪಟ್ಟ ಸಿಗುವಲ್ಲಿ ಬಂದಿರುವ ಪರಿಸ್ಥಿತಿ ಇದರಲ್ಲೂ ನಮ್ಮ ವಿಧಾನ ಪರಿಷತ್ತಿನ ಸದಸ್ಯರಿಗೆ ಬಂದೀತು ಎಂಬ ಕಳಕಳಿಯ ವಿನಂತಿ. ಈ ವಿಧೇಯಕವನ್ನು ಸ್ವಾಗತ ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಪ್ರೊ ಪಿ.ವಿ.ಕೃಷ್ಣಭಟ್(ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ಇದೊಂದು ಬಹಳ ಶ್ಲಾಘನೀಯವಾದ ಮತ್ತು ಅವಶ್ಯಕವಾದ ವಿಧೇಯಕವೆಂದು ನಾನು ಭಾವಿಸುತ್ತೇನೆ. ಅನುಸೂಚಿತ ಜಾತಿ ಮತ್ತು ವರ್ಗಗಳಿಗೋಸ್ಕರವಾಗಿಯೇ ಸರ್ಕಾರದ ಅನೇಕ ಯೋಜನೆಗಳು ಇವೆ ಆದರೆ ಆ ಯೋಜನೆಗಳು ಬಹಳ ಮಟ್ಟಿಗೆ ಕಾಗದದ ಮೇಲೆ ಇರುತ್ತವೆ. ಅವುಗಳ ಇಂಪ್ಲಿಮೆಂಟೇಷನ್ ವ್ಯವಸ್ಥಿತವಾಗಿ ಆಗುತ್ತಿಲ್ಲ. ಇತ್ತೀಚಿಗೆ ನನ್ನ ಗಮನಕ್ಕೆ ಬಂದಿತಕ್ಕಂತಹ ಒಂದು ಸಂಗತಿಯನ್ನು ನಾನು ಹೇಳಬಯಸುತ್ತೇನೆ. ಇಡೀ ರಾಜ್ಯದಲ್ಲಿರತಕ್ಕಂತಹ ಪರಿಶಿಷ್ಠ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿ ನಿಲಯಗಳ ಸ್ಥಿತಿಗತಿ ಹೇಗೆ ಇದೆ ಎಂಬುದರ ಬಗ್ಗೆ ವಿದ್ಯಾರ್ಥಿ ಸಂಘಟನೆಯ

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನವರು ಒಂದು ಅಧ್ಯಯನ ಮಾಡಿ ವರದಿಯನ್ನು ನೀಡಿದ್ದು ಆ ವರದಿ ಈಗಾಗಲೇ ಪಬ್ಲಿಷ್ ಆಗಿದೆ. ಬಹುಶಃ ಅದು ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ಬಂದಿರಬಹುದು. ಪೇಪರಿನ ಮೇಲೆ ಎಲ್ಲಾ ಹಾಸ್ಟೆಲ್‌ಗಳೂ ಚೆನ್ನಾಗಿಯೇ ಇವೆ. ಆದರೆ ಅಲ್ಲಿರತಕ್ಕಂತಹ ಹಾಸ್ಟೆಲ್‌ಗಳ ಸ್ಥಿತಿ ಬಹಳ ಹದಗೆಟ್ಟಿವೆ. 150-200 ಜನ ವಿದ್ಯಾರ್ಥಿಗಳು ಇರತಕ್ಕಂತಹ ಆ ವಿದ್ಯಾರ್ಥಿ ನಿಲಯಗಳಲ್ಲಿ 2-3 ಶೌಚಾಲಯಗಳು ಇವೆ. ಮತ್ತು ಅಲ್ಲಿ ಬಚ್ಚಲು ಮನೆಯೇ ಇಲ್ಲದೇ ಇರುವುದು ಇನ್ನು ಕೆಲವು ಕಡೆಗಳಲ್ಲಿ ಬಚ್ಚಲು ಮನೆ ಇದ್ದರೂ ಅದಕ್ಕೆ ಸೂಕ್ತ ರಕ್ಷಣೆಯೇ ಇಲ್ಲದಂತಾಗಿದೆ. ಮತ್ತು ಅವರಿಗೆ ಮಧ್ಯಾಹ್ನ ನೀಡುವ ಊಟ ಏನು ಇದೆ ಅದು ಅತ್ಯಂತ ಕಳಪೆ ಮಟ್ಟದ್ದಾಗಿದೆ. ಅನುಸೂಚಿತ ಜಾತಿ ಮತ್ತು ವರ್ಗಗಳವರ ಬಗ್ಗೆ ಬರೀ ಲಿಪ್ ಸಿಂಪತಿ ಆಗುತ್ತಿದೆ. ಅದು ಬರೀ ಕಾಗದದ ಮೇಲೆ ಇದೆ. ಈ ಯೋಜನೆ ಏನು ಇದೆ ಇದು ಸರಿಯಾಗಿ ಜಾರಿಯಾಗುತ್ತಿಲ್ಲ. ಸೆಕ್ಷನ್ 5ರಲ್ಲಿ ನೋಡಲ್ ಏಜೆನ್ಸಿ ಮತ್ತು ನೋಡಲ್ ಇಲಾಖೆಯಲ್ಲಿ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ ಈ ಮುಂದಿನ ನೋಡಲ್ ಏಜೆನ್ಸಿಯು ಈ ಮುಂದಿನವುಗಳನ್ನು ಒಳಗೊಂಡಿರತಕ್ಕಂಥಾದ್ದು ಎಂದು ಸಮಿತಿಯನ್ನು ರಚನೆ ಮಾಡತಕ್ಕಂಥಾದ್ದನ್ನು ಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರದ ಕಾರ್ಯದರ್ಶಿಗಳು ಇದ್ದಾರೆ. ಕೇವಲ ಸರ್ಕಾರದ ಕಾರ್ಯದರ್ಶಿಗಳು ಅಷ್ಟೇ ಇದ್ದರೆ ಅವರಿಗೆ ಕೆಲಸದ ಒತ್ತಡದ ಮಧ್ಯೆ ಈ ಎಲ್ಲಾ ಯೋಜನೆಗಳ ಅನುಷ್ಠಾನದ ಬಗ್ಗೆ ಹೆಚ್ಚಿನ ಗಮನವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಆದುದರಿಂದ ಇದಕ್ಕೆ ಒಂದಷ್ಟು ನಾನ್ ಆಫಿಷಿಯಲ್ ಮೆಂಬರ್ಸ್‌ಗಳನ್ನು ಮತ್ತು ವಾಲಂಟರಿ ಆರ್ಗನೈಸೇಷನ್ಸ್‌ಗಳವರನ್ನು ನೇಮಕ ಮಾಡಿದ್ದೇ ಆದರೆ ಆಗ ಈ ಯೋಜನೆಗಳ ಸೂಪರ್‌ವಿಷನ್ನಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಾನ್ಯ ಸಚಿವರು ವಿಚಾರ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಮಹಾಂತೇಶ ಮಲ್ಲಿಕಾರ್ಜುನ ಕವಟಗಿಮಠ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟುಗಳ ಜಾತಿಯ ಉಪಯೋಜನೆ ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಈ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕೊಡುವಂತಹ ಸೌಲಭ್ಯಗಳನ್ನು ಸಿಂಗಲ್ ವಿಂಡೋದಿಂದ ಮಾಡುವುದರಿಂದ ಹೆಚ್ಚು ವಿಶೇಷವಾಗಿ ಅನುಷ್ಠಾನಗೊಳಿಸುವುದಕ್ಕೆ ಅನುಕೂಲವಾಗುತ್ತದೆ ಎಂಬ ವಿಚಾರ ಇದೆ. ಬಹಳಷ್ಟು ಇಲಾಖೆಗಳಲ್ಲಿ ವರ್ಷದ ಕೊನೆಯಲ್ಲಿ unspent money (ಖರ್ಚಾಗದ ಹಣ) ಉಳಿಯುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಈ ಹಣವನ್ನು ವ್ಯವಸ್ಥಿತವಾಗಿ ಆ ವರ್ಗದ ಜನರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಈ ಒಂದು ಶಾಸನ ಉಪಯೋಗವಾಗುತ್ತದೆ ಎನ್ನುವ ಅಂಶವನ್ನು ವ್ಯಕ್ತ ಮಾಡುತ್ತೇನೆ. ಶಿಕ್ಷಣಕ್ಕೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಡಬೇಕೆಂಬ ಒಂದು ಬೇಡಿಕೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮಂಡನೆ ಮಾಡುತ್ತಿದ್ದೇನೆ. ಏಕೆಂದರೆ ಎಲ್ಲಾ ವಿಷಯಗಳನ್ನು ಅಥವಾ ಎಲ್ಲಾ ಅವಕಾಶಗಳನ್ನು ಕೊಡುವುದಕ್ಕಿಂತಲೂ ಆ ವರ್ಗದವರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದೇ ಆದರೆ ಅವರು ಸಾಮಾಜಿಕವಾಗಿ ಹೆಚ್ಚಿನ ಸದೃಢರಾಗುವುದಕ್ಕೆ ಒಂದು ಅವಕಾಶ ಸಿಕ್ಕಂತಾಗುತ್ತದೆ. ಈ ಒಂದು ಸೌಲಭ್ಯವನ್ನು ತಮ್ಮ ಇಲಾಖೆಯಿಂದ ಮಾಡಿಕೊಡಬೇಕೆಂದು ನನ್ನ ಮನವಿ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಬಹಳ ಒಳ್ಳೆಯ ಕಾನೂನನ್ನು ಇಲ್ಲಿ ತಂದಿದ್ದಾರೆ. ಬಹಳ ಪ್ರಮುಖವಾಗಿ ಇಲ್ಲಿ ಏನು ಹಣವನ್ನು ಇಟ್ಟಿದ್ದೀರಿ ಆ ಹಣ ಲ್ಯಾಪ್ಸ್ ಆಗಬಾರದು ಮುಂದಕ್ಕೆ ಹೋಗಬೇಕೆನ್ನುವುದು ಇದರ ಪ್ರಮುಖವಾದ ಉದ್ದೇಶವಾಗಿದೆ. ಬಹಳ ಜನರು ಅನಾವಶ್ಯಕವಾಗಿ ವರ್ಷದ ಕೊನೆಯವರೆವಿಗೆ ಆ ಹಣವನ್ನು ಹಾಗೇ ಇಟ್ಟುಕೊಂಡಿದ್ದು ನಿಮ್ಮ ಹಣ ಲ್ಯಾಪ್ಸ್ ಆಯಿತು ಈಗ

ನಾವೇನು ಮಾಡುವುದು ಎಂದು ಹೇಳುತ್ತಾರೆ. ಇದರಲ್ಲಿ ಪ್ರಮುಖವಾಗಿ ಮಾಡಿರುವಂಥದ್ದು, ಒಪ್ಪಬೇಕಾಗಿರುವಂಥದ್ದು, ಅದಕ್ಕೆ ಒತ್ತು ಕೊಟ್ಟಿರುವಂಥದ್ದು ಏನು ಅಂದರೆ ನೀವು ಇದರಲ್ಲಿ ಏನು ಹಣ ಇಟ್ಟಿರುತ್ತೀರಿ ಆ ಹಣ ಲ್ಯಾಪ್ಸ್ ಆಗುವುದಿಲ್ಲ. ಯಾವ ರೀತಿಯಾಗಿ ಲೆಜಿಸ್ಲೇಚರ್‌ಗೆ ಕೊಟ್ಟಿರುವಂಥ ಹಣ ಮುಂದುವರೆಯುತ್ತದೆ ಅದೇ ರೀತಿಯಾಗಿ ಆ ವರ್ಗಕ್ಕೆ ಕೊಟ್ಟಿರುವಂಥ ಹಣ ಮುಂದುವರೆಯುತ್ತದೆ. ನೀವು ಏನು ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕಮಿಟಿಗಳನ್ನು ಮಾಡಿದ್ದೀರಿ ಆ ಕಮಿಟಿಗಳು ಸರಿಯಾಗಿ ಕೆಲಸ ಮಾಡುವಂಥ ವ್ಯವಸ್ಥೆ ಸರಿಯಾಗಿ ಆಗಬೇಕು. ರಾಜ್ಯ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಗಳು ಇರುತ್ತಾರೆ, ಜಿಲ್ಲಾ ಮಟ್ಟದಲ್ಲಿ ಆ ಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ ಮಾಡಬಹುದು. ಆದರೆ ಇದು ಮಾಡುವುದಕ್ಕೆ ಮನಸ್ಸು ಇರಬೇಕು. ಇದನ್ನು ಆ ಮನಸ್ಸು ಇದ್ದರೆ ಮಾತ್ರ ಮಾಡುವುದಕ್ಕಾಗುತ್ತದೆ. ಇದನ್ನು ಮಾಡುವುದಕ್ಕೆ ಇವೊತ್ತಿನ ಸರ್ಕಾರದಲ್ಲಿ ಸಾಧ್ಯವಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಇದ್ದಾಗ ಏನೂ ತೊಂದರೆಯಾಗುವುದಿಲ್ಲವೆಂದು ನನಗೆ ಅನಿಸುತ್ತಿದೆ. ನಿಮ್ಮ ಮಂತ್ರಿಮಂಡಲವೂ ಚೆನ್ನಾಗಿದೆ. ಏನೂ ತೊಂದರೆ ಇಲ್ಲ. ಸಾಧ್ಯವಾದರೆ ಶ್ರೀಮತಿ ಮೋಟಮ್ಮನವರಿಗೂ ಸೇರಿಸಿಕೊಂಡರೆ ಒಳ್ಳೆಯದಾಗುತ್ತದೆ ಎಂದು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತಿಕಟ್ಟಿಯವರನ್ನು ಕೂಡ ಸೇರಿಸಿಕೊಳ್ಳುತ್ತಾರೆ, ಅದಕ್ಕಾಗಿ ಈಗಾಗಲೇ ಮಾತನಾಡಿದ್ದಾರೆ.

**ಶ್ರೀ ಎಂ.ಸಿ.ನಾಣಯ್ಯ:–** ಮಾನ್ಯ ಸಭಾಪತಿಯವರೆ, ಮೋಟಮ್ಮನವರು ಮಾತನಾಡುವುದೇ ಇಲ್ಲ ಎಂದು ಹೇಳುತ್ತಾರೆ. ಆದರೆ ಮೋಟಮ್ಮನವರನ್ನು ಕೂಡ ಮಂತ್ರಿ ಮಂಡಲಕ್ಕೆ ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಈ ಬಿಲ್ ಅನ್ನು ತಂದಿರುವಂಥ ದಿವಸ ಬಹಳ ಒಳ್ಳೆಯದಿದೆ. ಯಾರು ದೈವಾಧೀನರಾಗಿದ್ದಾರೆ, ಆ ದಿವಸದಂದು ಇದನ್ನು ತಂದಿರುವಂಥದ್ದು. ಪಾಲ್ ಬ್ರಂಟನ್ (Paul Brunton) ಎಂದು ಇಂಗ್ಲೆಂಡಿನ ಒಬ್ಬ ತತ್ವಜ್ಞಾನಿ ಒಂದು ಮಾತು ಹೇಳುತ್ತಾನೆ. "ಹುಟ್ಟು ಒಂದು ಪ್ರಾರಬ್ಧ, ಜೀವನ ನಡೆಸುವುದು ಪುರುಷಾರ್ಥ" ಎಂದು

ಒಂದು ಒಳ್ಳೆಯ ಮಾತನ್ನು ಹೇಳಿದ್ದಾನೆ. ಆತ ರಮಣ ಮಹರ್ಷಿಗಳ ಶಿಷ್ಯ. ರಮಣ ಮಹರ್ಷಿಗಳು ನೀನು ಹರಿಜನ ಆಗಿ ಹುಟ್ಟಿರಬಹುದು, ಬಡವನಾಗಿ ಹುಟ್ಟಿರಬಹುದು, ಕೈ ಇಲ್ಲದೆ ಹುಟ್ಟಿರಬಹುದು, ಕಾಲಿಲ್ಲದೆ ಹುಟ್ಟಿರಬಹುದು, ಅಂಗವಿಕಲನಾಗಿ ಹುಟ್ಟಿರಬಹುದು, ಏನಾಗಿಯಾದರು ಹುಟ್ಟಿರಬಹುದು, ಅದು ಪ್ರಾರಬ್ಧ. ಆದರೆ ನೀನು ಹೇಗೆ ಬದುಕಿದಿಯಾ ಎಂದು ಹೇಳುವುದು ಪುರುಷಾರ್ಥ. ಇದನ್ನು ಸರಿಯಾಗಿ ವರ್ಣನೆ ಮಾಡಿರುವುದು ಪಾಲ್ ಬ್ರಂಟನ್. ಇಸ್ಪೀಟ್ ಆಟ ಆಡುವಾಗ ಯಾರು ಯಾರಿಗೆ ಏನೇನು ಎಲೆ ಬೀಳುತ್ತದೆ ಅದು ಪ್ರಾರಬ್ಧ, ಆ ಎಲೆಯನ್ನು ಹೇಗೆ ಆಟ ಆಡಿ ಗೆಲ್ಲುತ್ತಾನೆ, ಅದು ಪರುಷಾರ್ಥ. ನೀವುಗಳು ಅದರ ವಿಚಾರ ಅರ್ಥ ಮಾಡಿಕೊಳ್ಳಿ. ನಾನು ಹೇಗೆ ಹುಟ್ಟಿರಲಿ, ಯಾವುದೇ ಜಾತಿಯಲ್ಲಿ ಹುಟ್ಟಿರಲಿ, ಯಾವುದೇ ಕುಲದವನಾಗಿರಲಿ, ಈ ಜಗತ್ತಿನಲ್ಲಿ ನಾನು ಏನು achieve ಮಾಡಬೇಕು. ನೆಲ್ಸನ್ ಮಂಡೇಲಾರವರು 27 ವರ್ಷಗಳ ಕಾಲ ಜೈಲಿನಲ್ಲಿದ್ದರು. ಡಾ: ಬಾಬಾಸಾಹೇಬ್ ಅಂಬೇಡ್ಕರ್‌ರವರು ಪಟ್ಟಂತಹ ಪಾಡಿನ ಜೀವನವನ್ನು ತಾವು ಓದಬೇಕು, ಅವರು ಜೀವನದಲ್ಲಿ ಹೇಗೆ ಮುಂದೆ ಬಂದರು, ಹೇಗೆ ಬೆಳವಣಿಗೆಯಾದರು, ಎನ್ನುವಂಥ ವಿಚಾರವನ್ನು ನಾವು ಇಂದು ನೆನಪು ಮಾಡಿಕೊಳ್ಳಬೇಕು. ಅದಕ್ಕಾಗಿ ನಾನು ಎರಡು ಮಾತುಗಳನ್ನಾಡಬೇಕೆಂದು ಇಷ್ಟಪಟ್ಟಿದ್ದೆ. ಇದನ್ನು ಆಚರಣೆಗೆ ತರಬೇಕು. ಆಚರಣೆಗೆ ತರದ ವಿಚಾರ ನರಕಕ್ಕೆ ಸಮಾನ. ಅದನ್ನು ಆಚರಣೆಗೆ ತರದಿದ್ದರೆ ಏನೂ ಪ್ರಯೋಜನವಿಲ್ಲ.

**ಶ್ರೀ ಭಾನುಪ್ರಕಾಶ ( ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಾಜ್ಯ ಪರಿಷತ್‌ನಲ್ಲಿ ಸರ್ಕಾರವು ನಾಮ ನಿರ್ದೇಶಿತದಂತಹ ಅನುಸೂಚಿತ ಜಾತಿಗಳ, ಅನುಸೂಚಿತ ಪಂಗಡಕ್ಕೆ ಸೇರಿದ ಐದು ಜನ ವಿಧಾನ ಸಭಾ ಸದಸ್ಯರು ಎಂದು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಅಥವಾ ಅಥವಾ ಎಂದು ಇದೆ ಅದನ್ನು ಸರಿ ಮಾಡಿ. ನನ್ನ ಪ್ರಶ್ನೆ ಏನೆಂದರೆ ಅನುಸೂಚಿತ ಜಾತಿ/ಪಂಗಡಗಳ ವಿಧಾನ ಸಭಾ ಸದಸ್ಯರು ಅಥವಾ ವಿಧಾನ ಪರಿಷತ್ತಿನ ಸದಸ್ಯರಿಗೆ ಮಾತ್ರ ಅವರ ಬಗ್ಗೆ ಕಳಕಳಿ ಇದೆ. ಬಾಕಿಯವರಿಗೆ ಇಲ್ಲವೆಂದು ಅರ್ಥವೇ? ಆ ಕಮಿಟಿಯಲ್ಲಿ ಬೇರೆಯವರು ಇರುವಂಥ ಅವಶ್ಯಕತೆಯೇ

ಇಲ್ಲವೇ? ಸಾಮಾಜಿಕ ಸಾಮರಸ್ಯದ ದೃಷ್ಟಿಯಿಂದ ಎಲ್ಲಾ ಸದಸ್ಯರು ಇರಬೇಕು. ನಾವು ಜಾತಿಯನ್ನು ಕೇಳಿಕೊಂಡು ಹುಟ್ಟಿಲ್ಲ. ಜಾತಿಗಾಗಿ ನಾವು ಅರ್ಜಿಯನ್ನು ಹಾಕಿ ಹುಟ್ಟಿಲ್ಲ. ಬೇರೆ ಜನಾಂಗದ ಸದಸ್ಯರು ಕೂಡ ಆ ಜನಾಂಗದ ಕಮಿಟಿಯಲ್ಲಿ ಪಾರ್ಟಿಸಿಪೇಟ್ ಮಾಡಿ ಅವರ ಯೋಗದಾನವನ್ನು ಕೊಡುವ ಅವಕಾಶದಿಂದ ವಂಚಿತರಾಗಬೇಕೇ? ಈ ಪ್ರಶ್ನೆಯನ್ನು ಕೂಡ ಮಾನ್ಯ ಸಚಿವರು ಗಮನಿಸಿ ರಿಸರ್ವೇಶನ್ ಪಾಲಿಸಿ ಮಾಡುವಾಗ ಚಿಂತನೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸಾಮರಸ್ಯ ಮೂಡಿಸುವುದರಲ್ಲಿ ನಾವೆಲ್ಲರೂ ಒಟ್ಟಾಗಿ ಹೋಗುವಂಥ ಅವಶ್ಯಕತೆ ಇದೆ. ಇದೊಂದು ವಿಶೇಷವಾದಂಥ ಬಿಲ್. ಬೇಕಾದರೆ ಇದರಲ್ಲಿ ಒಂದೆರಡು ಸಂಖ್ಯೆ ಜಾಸ್ತಿ ಮಾಡಿ. ಆದರೆ ಬಾಕಿ ಎಲ್ಲಾ ಸಮಾಜದವರಿಗೂ ಕೂಡ ಆ ಸಮಾಜದ ಬಗ್ಗೆ ಕಳಕಳಿ ಇದೆ ಎನ್ನುವುದು ಅರ್ಥ ಮಾಡಿಕೊಂಡು ಸದಸ್ಯರ ಸಂಖ್ಯೆಯನ್ನು ಸೇರಿಸಬೇಕೆಂದು ನನ್ನ ವಿನಂತಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ನಮ್ಮ ಲೋಕೋಪಯೋಗಿ ಸಚಿವರು ರಿಸರ್ವೇಶನ್ ಕೊಟ್ಟರೂ ಏತಕ್ಕಾಗಿ 60 ವರ್ಷಗಳಾದರೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವರ್ಗದವರು ಕೆಳಗಡೆ ಇದ್ದಾರೆಂದು ಕೇಳಿದ್ದಾರೆ.

**ಸಭಾಪತಿಯವರು :-**ಈಗ ಆ ಚರ್ಚೆ ಬೇಡ. ತಾವು ಕೇವಲ ಬಿಲ್ ಬಗ್ಗೆ ಮಾತ್ರ ಮಾತನಾಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಅದೇನೆಂದರೇ creamy layerಗೆ ನೀವು ನಾವು ಇಬ್ಬರು ಒಪ್ಪಿಕೊಳ್ಳಬೇಕು. Income limit ಅನ್ನು ಜಾಸ್ತಿ ಮಾಡಿದರು. ಯಾರು ಅಧಿಕಾರಿಗಳು, ರಾಜಕೀಯ ವ್ಯಕ್ತಿಗಳ ಯಾರ Income ಜಾಸ್ತಿ ಇರುತ್ತದೆ ಅವರೇ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಅದೆಲ್ಲಾ ಆ ಶೆಡ್‌ನಲ್ಲಿರತಕ್ಕಂಥವರಿಗೆ ತಲುಪುವುದೇ ಇಲ್ಲ. ಇದು ಎಲ್ಲಿಯವರೆಗೆ ನಿಲ್ಲುವುದಿಲ್ಲವೊ, ನೀವು ನಾವು

ಹಿಂದುಳಿದ ವರ್ಗದವರು ಎಲ್ಲಿಯವರೆಗೆ sacrifice ಮಾಡುವುದಿಲ್ಲವೋ ಅಲ್ಲಿಯವರೆಗೆ ಆ ಶೆಡ್‌ನಲ್ಲಿರುವವರು ಹಿಂದುಳಿದ ವರ್ಗದವರಿರಬಹುದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿರಬಹುದು ಅವರು ಉದ್ಧಾರ ಆಗುವುದಿಲ್ಲ. ಆದ್ದರಿಂದ ನೀವು ನಾವು ಎಲ್ಲಾ ಈ creamy layer ನ income limit increase ಮಾಡುತ್ತಾರಲ್ಲ ಅದನ್ನು ದಯಮಾಡಿ ಕಡಿಮೆ ಮಾಡಬೇಕು. ಮೊನ್ನೆ ಬಜೆಟ್‌ನಲ್ಲಿ ಹಿಂದುಳಿದ ವರ್ಗದವರಿಗೆ ಎರಡೂವರೆ ಲಕ್ಷದಿಂದ ನಾಲ್ಕುವರೆ ಲಕ್ಷ ಮಾಡಿದರು. ನಾಲ್ಕವರೆ ಲಕ್ಷ ಯಾರಿಗೆ ಬರುತ್ತದೆ? ಅಧಿಕಾರಿಗಳಿಗೆ ಬರುತ್ತದೆ. ಸಂಬಳ ಬರುವವರಿಗೆ ಬರುತ್ತದೆ. ಆ ಹಳ್ಳಿಯಲ್ಲಿರುವವರಿಗೆ ಎಲ್ಲಿ ಬರುತ್ತದೆ? ಹಳ್ಳಿಯಲ್ಲಿರುವವರಿಗೆ ಸಿಗುವುದಿಲ್ಲ. ಅವರಿಗೆ ಪಾಪ ಕಡಿಮೆ income ಇದೆ. ಆದರೆ ಅವನಿಗೆ influence ಇಲ್ಲ, ಆ ಬೆನಿಫಿಟ್ ಅವರೇ ತೆಗೆದುಕೊಳ್ಳುತ್ತಾರೆ. ಆದ್ದರಿಂದ ನಾವು ನೀವು, ಎಲ್ಲಾ ಸದಸ್ಯರು ಈ creamy layer ಗೆ ಒಪ್ಪಿಕೊಳ್ಳಬೇಕು. ಅವರನ್ನು ಈ ಮೀಸಲಾತಿಯಲ್ಲಿ ತರಬಾರದು. ಅವರನ್ನು ತರದೆ ಇದ್ದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಜನರಲ್‌ನವರು ನಮಗೆ sacrifice ಮಾಡುತ್ತಾರೆ. ಆದರೆ ನಮಗೆ ನಾವೇ sacrifice ಮಾಡುವುದಿಲ್ಲ. ಹಾಗೆ ಮಾಡದಿದ್ದರೆ ಇದು ಯಾವ ಕಾಲಕ್ಕೂ ಆಗುವುದಿಲ್ಲ.

**Dr. H.C.MAHADEVAPPA:-** It is a different entity. Let's debate it later.

**ಸಭಾಪತಿಯವರು :-** ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ ಅದರ ಬಗ್ಗೆ ಈಗ ಚರ್ಚೆ ಬೇಡ. ಪುಟ್ಟಸ್ವಾಮಿಯವರೇ, ಈಗ ಸಾಕು ಕುಳಿತುಕೊಳ್ಳಿ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿ ನಾವು ತಂದಿರತಕ್ಕಂಥ ಮಸೂದೆಗೆ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ಮೆಚ್ಚುಗೆಯ ಮಾತನ್ನು ಕೂಡ ಆಡಿದ್ದಾರೆ ಹಾಗೂ ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಇಲ್ಲಿ ಮುಖ್ಯವಾಗಿ ಮಾನ್ಯ

ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂಥ ವಿಚಾರದಲ್ಲಿ ಸೆಕ್ಷನ್ 16ರಲ್ಲಿ ಯಾವ ಅನುಸೂಚಿತ ಜಾತಿಗಳು, ಅನುಸೂಚಿತ ವರ್ಗಗಳು ಅವರ ಅರ್ಹತೆಗೆ ಅನುಗುಣಿಸುವ, ಪ್ರಗತಿಯಲ್ಲಿರುವ ಸಾಮಾನುಗಳ ಸ್ಕೀಮ್ ಅಂದರೆ ನಿರ್ಧಿಷ್ಟವಾಗಿ ಅವರಿಗೆ ತಲುಪಬೇಕು ಎನ್ನುವ ಉದ್ದೇಶದಿಂದ ಆ Clause ಅನ್ನು ಇಟ್ಟಿದ್ದೇವೆ. ಆ ವರ್ಗಕ್ಕೆ ಮಾತ್ರ ಕೊಡಬೇಕು. ಈಗ ಪರಿಶಿಷ್ಠ ಜಾತಿಗಳ ಕಾಲೋನಿಯ ಹೆಸರು ಹೇಳಿ ಪಕ್ಕದಲ್ಲಿ ರಸ್ತೆಗಳನ್ನು ಮಾಡುತ್ತಿದ್ದರು.

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೆ, ಅದು ಬಾಕಿಯವರಿಗೆ ಉಪಯೋಗ ಆಗುವುದಿಲ್ಲವೆಂದು ನಾನು ಹೇಳುವುದಿಲ್ಲ. ನನ್ನ ಉಪಯೋಗಕ್ಕೆ ಬೇಕಾಗಿ ಅದನ್ನು ತೋರಿಸಿಕೊಂಡು ಮಾಡುವಂಥದ್ದು ಭಾರಿ ಸಂಗತಿಗಳು ನಡೆಯುತ್ತಿವೆ. ಅವರ ಮೂರು-ನಾಲ್ಕು ಮನೆಗಳಿದ್ದರೆ ಸಾಕು ಐವತ್ತು ಮನೆ ಇದ್ದಲ್ಲಿ ಹೋಗುವುದಿಲ್ಲ  ಆ ಮೂರ್‍ನಾಲ್ಕು ಮನೆಗಳ ಆಚೆ ನನ್ನ ಮನೆ, ನನ್ನ ತೋಟ ಇದ್ದರೆ ಇದನ್ನೆ ಅದು ಎಂದು ಮಾಡಿ ದುರುಪಯೋಗ ಮಾಡುವಂಥದ್ದು ಇಡೀ ರಾಜ್ಯದಲ್ಲಿ ಭಾರೀ ಕಡೆಗಳಲ್ಲಿ ನಡೆಯುವಂಥದ್ದು ನಾವು ನೋಡುತ್ತಿದ್ದೇವೆ. ಅದನ್ನೇ ನಾನು ಹೇಳಿದ್ದೇನೆ.

**ಶ್ರೀ ಟಿ.ಬಿ ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಇದನ್ನೆಲ್ಲಾ ಅನುಭವಿಸಿ ಈ ಮಸೂದೆ ಬೇಕೆಂದು ಹೇಳಿ ಇವೊತು ತಂದಿರತಕ್ಕಂಥದ್ದು. ನಾವು ಕೂಡ ದಿನನಿತ್ಯ ನೋಡಿದ್ದೇವೆ. ಹೆಸರು ಮಾತ್ರ ಅವರದ್ದಿರುತ್ತದೆ. ಅದರ ಉಪಯೋಗ ಇನ್ನೊಬ್ಬರದ್ದಾಗುತ್ತದೆ. ಆ ರೀತಿಯಾದಂಥ ವಿಚಾರಗಳಿವೆ ಆದ್ದರಿಂದ ಅದನ್ನು ನಿರ್ದಿಷ್ಟಪಡಿಸಬೇಕಾದಂತಹ ಕಾರಣಕ್ಕಾಗಿ ಅದನ್ನು ಅಳವಡಿಸಿದ್ದೇವೆ. ಇನ್ನು ಶ್ರೀಮತಿ ಮೋಟಮ್ಮನವರು ಮಾತನಾಡುತ್ತ atrocity ಬಗ್ಗೆ ಒಂದು ಹೈ ಪವರ್ ಕಮಿಟಿ ಇದೆ, ಅದು ಒಂದು ವರ್ಷಕ್ಕಾದರು ಸೇರಬೇಕು, ಬಹಳ ವರ್ಷಗಳಿಂದ ಸಭೆ ಸೇರಿಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಒಂದು ವರ್ಷ ಕೂಡ ಆಗಿರಲಿಲ್ಲ ನಿಜ. ಆದರೆ ಮೊನ್ನೆ ಒಂದು ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಾನು ಮಹಾದೇವಪ್ಪನವರು ಎಲ್ಲರೂ ಸಭೆ ಸೇರಿ ಭಾಗವಹಿಸಿ

ಸುದೀರ್ಘವಾಗಿ ನಾಲ್ಕೂವರೆ ಗಂಟೆಗಳ ಕಾಲ atrocity ಬಗ್ಗೆ ಚರ್ಚೆ ಮಾಡಿದ್ದೇವೆ.

**ಸಭಾಪತಿಯವರು:–** ಅದು ಆಗಿರಲಿಲ್ಲವೆಂದು ನಮಗೆ ಒಂದು ರೀತಿಯ ಬೇಸರ ಇತ್ತು. ಆದರೆ ತಾವು ಆ ಸಭೆಯನ್ನು ಮಾಡಿ ಅಭಿನಂದನೀಯ ಕೆಲಸವನ್ನು ಮಾಡಿದ್ದೀರಿ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಅದಕ್ಕೋಸ್ಕರ ಈಗಲೂ ಕೂಡ ರಾಜ್ಯ ಮಟ್ಟದಲ್ಲಿ ಆಗತಕ್ಕಂಥ ಕೌನ್ಸಿಲ್ ಮೀಟಿಂಗ್ ಕೂಡ ಕಡ್ಡಾಯವಾಗಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆಗಬೇಕೆನ್ನುವಂಥ ಕಾರಣಕ್ಕೋಸ್ಕರವಾಗಿ ಇವತ್ತು ನಾನು ಅದನ್ನು ಮಸೂದೆಯಲ್ಲಿ ಸೇರಿಸಿರತಕ್ಕಂಥದ್ದು. ಅದೇ ಶಾಸಕರನ್ನು ಕೂಡ ಸೇರಿಸುವ ಬಗ್ಗೆ ಅನೇಕ ರೀತಿಯಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ವಿಧಾನ ಸಭಾ ಸದಸ್ಯರು/ವಿಧಾನ ಪರಿಷತ್ತಿನ ಸದಸ್ಯರು ಜೊತೆಗೆ ಸಂಸತ್ ಸದಸ್ಯರು ಕೂಡ ಇರಬೇಕು. ಐದು ಜನರ ಸಮಿತಿಯನ್ನು ಮಾಡುವಾಗ ಸಂಸತ್ ಸದಸ್ಯರನ್ನು ಕೂಡ ಒಬ್ಬರನ್ನು ಕಡ್ಡಾಯ ಮಾಡಲಾಗಿದೆ. /ವಿಧಾನ ಪರಿಷತ್ತಿನ ಸದಸ್ಯರೊಬ್ಬರು ಇದ್ದೇ ಇರುತ್ತಾರೆ. ಅದರಲ್ಲಿ ಅನುಮಾನ ಬೇಡ.

**ಸಭಾಪತಿಯವರು:–** ಮಾನ್ಯ ಅಲ್ಲಮಪ್ರಭು ಪಾಟೀಲರು ಪ್ರಸ್ತಾಪ ಮಾಡಿದಂತಹ ವಿಷಯ ಸರಿಯಾಗಿದೆ. 'ಅಥವಾ' ಎಂದರೆ ಮೂರು ಜನ ವಿಧಾನ ಸಭಾ ಸದಸ್ಯರನ್ನು ಇಬ್ಬರು ಲೋಕ ಸಭಾ ಸದಸ್ಯರನ್ನು ನೇಮಕ ಮಾಡಿದರೆ ವಿಧಾನಪರಿಷತ್ತು ಸ್ವಾಭಾವಿಕವಾಗಿ ತಪ್ಪೋಗುತ್ತದೆ ಆದಕಾರಣ ದಯವಿಟ್ಟು ಅದನ್ನು specify ಮಾಡಿ ಎಂದು ಅವರ ಅಭಿಪ್ರಾಯವನ್ನು ತಿಳಿಸಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ನಾವು ರೂಲ್ಸ್ ಮಾಡುವುದಕ್ಕೂ ಸಹ ಅವಕಾಶವಿದೆ. ರೂಲ್ಸ್ ಮಾಡುವಾಗ ಅದನ್ನು ಕ್ಲಿಯರ್ ಆಗಿ define ಮಾಡಿ ಒಬ್ಬ ಲೋಕಸಭಾ ಸದಸ್ಯ, ಇಬ್ಬರು ವಿಧಾನಸಭಾ ಸದಸ್ಯರು, ಒಬ್ಬರು ವಿಧಾನ ಪರಿಷತ್ತಿನ ಸದಸ್ಯರು ಇರಬೇಕೆಂದು ಆ

ರೂಲ್ಸ್‌ನಲ್ಲಿ ತರುವಂತಹ ಕೆಲಸವನ್ನು ಮಾಡುತ್ತೇವೆ. ಎಲ್ಲವನ್ನೂ ಸಹ Actನಲ್ಲಿ ತರುವಂತಹ ಕೆಲಸ ಆಗುವುದಿಲ್ಲ.

**ಸಭಾಪತಿಯವರು:–** ಬೇಡ, ರೂಲ್ಸ್‌ನಲ್ಲಿ ತಂದರೆ ಸಾಕು.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರ, ಮೀನುಗಾರಿಕೆ):–** ಅದೇರೀತಿ ಮಾನ್ಯ ನಾಣಯ್ಯನವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು panalities ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು ತಿಳಿಸಿದ್ದಾರೆ. ಸರ್ಕಾರದ ಸದುದ್ದೇಶವೇನೆಂದರೆ, ಬಹುಶಃ ಆ provision ಮಾಡುವುದರಿಂದ ಸ್ವಲ್ಪ ಎಚ್ಚರಿಕೆಯ ಗಂಟೆ ಆಗುತ್ತದೆ, ಅನುಷ್ಠಾನ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಭಾವನೆಯಿಂದ ಇದನ್ನು ನಾವು ತರಬೇಕೆಂಬ ಪ್ರಯತ್ನ ಮಾಡಿದ್ದೇವೆ. ಈಗ Government of Indiaದ The Scheduled Castes and Scheduled Tribes (Prevention of Atrocities) Actನಲ್ಲಿಯೂ ಸಹ ಆ penal provisionಇದೆ.

**ಶ್ರೀ ಎಂ.ಸಿ.ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, the Scheduled Caste and Scheduled Tribes (Prevention of Atrocities) Act ಕೆಳಗೆ ಮಾಡಲಾಗುವ ನೂರು complaints ನಲ್ಲಿ ಎಷ್ಟು complaints ಗಳು genuine, ಎಷ್ಟು complaints ಗಳು genuine ಅಲ್ಲವೆಂದು ನಿಮಗೆ ತಿಳಿದಿದೆಯೇ? ಬಹಳಷ್ಟು ರಾಜಕಾರಣಿಗಳು ಅದನ್ನೇ ಉಪಯೋಗಿಸಿಕೊಂಡು ಹೋಗುತ್ತಿದ್ದಾರೆ. ಪಾಪ ಆ ಭಾಗದಲ್ಲಿರುವಂಥವರ ಬಗ್ಗೆ ಯೋಚನೆ ಇಲ್ಲ, ರಾಜಕಾರಣಿಗಳು ಅದನ್ನು ಉಪಯೋಗಿಸಿಕೊಂಡು ಬಹಳಷ್ಟು ಕೆಲಸವನ್ನು ಮಾಡುತ್ತಿದ್ದಾರೆ. Professors and Vice Chancellors of Universities ಮೇಲೆ ಈಗ complaint ಮಾಡುತ್ತಾರೆ. ಅದು ನಿಮ್ಮ ಗಮನಕ್ಕೆ ಬಂದಿದೆಯೇ? It is missing of that power.

**ಶ್ರೀ ಟಿ.ಬಿ.ಜಯಚಂದ್ರ:–** ನಮ್ಮ ವಿಶ್ವವಿದ್ಯಾನಿಲಯದಲ್ಲಿಯೂ ಸಹ ಆಗಿದೆ.

**ಶ್ರೀ ಎಂ.ಸಿ.ನಾಣಯ್ಯ:-** ಇದನ್ನು ನಾವು ತಂದಿದ್ದಂತಹ ಕಾನೂನು, ಇದು ನಿಜವಾಗಿ ಸರ್ವವ್ಯಾಪಿಯಾಗಿ ಜಾರಿಗೆ ಬರಬೇಕಾದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಕು. ನಿರ್ಮಾಣ ಮಾಡಿಕೊಳ್ಳಬೇಕಾದರೆ ಹೆದರಿಕೆಯ ವಿಚಾರವನ್ನು ಅಧಿಕಾರಿಗಳ ಮನಸ್ಸಿನಲ್ಲಿ ಮೂಡುವಂತೆ ಮಾಡಬೇಡಿ. It becomes counter productive. ಅದಕ್ಕೋಸ್ಕರ ಅದು ಬೇಕು ಎಂದರೆ ಮಾಡಿಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನೂರಕ್ಕೆ ನೂರರಷ್ಟು ಹಣ ಖರ್ಚಾಗಬೇಕು ಎಂಬುದು ಇರುವಂತಹ ಉದ್ದೇಶ. ಈ ಮಸೂದೆಯನ್ನು ತಂದ ಮೇಲೆ ಹಣ ಖರ್ಚಾಗುವುದೇ ಇಲ್ಲ ಎಂಬ ಪ್ರಶ್ನೆ ಬರುವುದೇ ಇಲ್ಲ. ಖರ್ಚು ಆಗೇ ಆಗುತ್ತದೆ. ಒಂದು ವೇಳೆ ಯಾವುದೋ ಕಾರಣಕ್ಕೆ ಖರ್ಚು ಆಗಲಿಲ್ಲವೆಂದರೆ ಮುಂದಿನ ವರ್ಷಕ್ಕೆ ಅದು lapse ಆಗದ ರೀತಿಯಲ್ಲಿ ಯೋಜನೆಯನ್ನು ಮುಗಿಸಬೇಕು ಎನ್ನುವ ಕಾರಣಕ್ಕೋಸ್ಕರ ತಂದಿದ್ದೇವೆ. ಬಹುಶಃ ಆ ಹಣ lapse ಆಗುವುದಿಲ್ಲವೆಂದು ಹೇಳಿದ ಮೇಲೆ ಎಲ್ಲೋ ಒಂದು ಕಡೆಗೆ ಅದು ಮುಂದುವರೆದಂತಹ ಸಂದರ್ಭದಲ್ಲಿ ಅದರ ಆಕ್ಷೇಪಗಳು ಬರುತ್ತದೆ. CAG ಅವರು ಇರುತ್ತಾರೆ ಅವರೆಲ್ಲರೂ ಅದಕ್ಕೆ ಆಕ್ಷೇಪ ಮಾಡುತ್ತಾರೆ. ಆದುದರಿಂದ ಅದಕ್ಕೆ ಎಲ್ಲಾದರು ಒಂದು ಕಡೆ ಕಡಿವಾಣ ಹಾಕಬೇಕು ಎನ್ನುವ ಕಾರಣಕ್ಕೋಸ್ಕರ ತಂದಿರುವುದು. ಬಹುಶಃ ನಾವು ಇದನ್ನು ನೂರಕ್ಕೆ ನೂರರಷ್ಟು ಅತ್ಯಂತ ಸಮರ್ಪಕವಾಗಿ ಕಾನೂನಾತ್ಮಕವಾಗಿ ಹಣ ಸದ್ವಿನಿಯೋಗ ಆಗಬೇಕು ಎನ್ನುವ ಉದ್ದೇಶದಿಂದ ತಂದಿದ್ದೇವೆ. ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪಿದ್ದೇನೆ. ಈಗ ಈ ಮಸೂದೆಯನ್ನು ಯಥಾವತ್ತಾಗಿ ಪಾಸ್ ಮಾಡಿಕೊಟ್ಟರೆ ಮುಂದೆ ಬರುವಂತಹ ಸಂದರ್ಭದಲ್ಲಿ ಇದಕ್ಕೆ ಚರ್ಚೆ ಮಾಡಿ modification ತಂದು ಬಹುಶಃ ತಾವು ಸಲಹೆ ಮಾಡಿರುವಂತಹ ರೀತಿಯಲ್ಲಿ 74ರಲ್ಲಿ ಕೊನೆಯ ಭಾಗ ಮತ್ತು 25ನೇ–'Cognizance of offence' ಇದನ್ನೂ ಕೂಡ delete ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಇದು ನೂರಕ್ಕೆ ನೂರರಷ್ಟು ಅನುಷ್ಠಾನವಾಗಬೇಕು, ಎಲ್ಲಾ ಶಾಸಕರ

ಸಹಾಯವಿರಬೇಕು, ಅದಕ್ಕೆ ಇವತ್ತು ಆ ಮಸೂದೆಗೆ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಎಲ್ಲಾ ಗೌರವಾನ್ವಿತ ಸದಸ್ಯರನ್ನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ "2013ರ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕವನ್ನು ಪರ್ಯಾಲೋಚಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ರಿಂದ 28ರ ವರೆಗೆ**

**ಸಭಾಪತಿಯವರು :– "ಖಂಡ 2 ರಿಂದ 28ರ ವರೆಗೆ ಎರಡೂ ಸೇರಿದಂತೆ ಈ ವೀಧೇಯಕದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 28ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆ ಖಂಡ, ಪೀಠಿಕೆ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ “2013ರ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ “2013ರ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಸಭಾಪತಿಯವರು:–** ಇವತ್ತು ಶುಕ್ರವಾರ ಖಾಸಗಿ ಸದಸ್ಯರ ನಿರ್ಣಯ. ಮಾನ್ಯ ಆರ್.ಕೆ.ಸಿದ್ದರಾಮಣ್ಣನವರು ಹಿಂದಿನ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದ್ದರು. ಅದರ ಬಗ್ಗೆ ಮಾನ್ಯ ಸದಸ್ಯರು ಮುಂದುವರೆಸಿದರೆ ಸರ್ಕಾದಿಂದ ಉತ್ತರ ಸಿಗುತ್ತದೆ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, ನಾನು ಕೊಟ್ಟಂತಹ ಗಮನ ಸೆಳೆಯುವ ಸೂಚನೆಗೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ.

**ಸಭಾಪತಿಯವರು:–** ಉತ್ತರವನ್ನು ಕೊಡಿಸುತ್ತೇನೆ. ತಾವು ಶಾಂತವಾಗಿರಿ.

## 5. ಖಾಸಗಿ ಸದಸ್ಯರ ಕಾರ್ಯಕಲಾಪಗಳು

## ಖಾಸಗಿ ಸದಸ್ಯರ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ

**"ಭಾರತ ಸಂವಿಧಾನದ ಭಾಗ–xvii ರ ಅಧ್ಯಾಯ iii ರಲ್ಲಿನ ಅನುಚ್ಛೇದ 348(2)ರ ಮೇರೆಗೆ ಕರ್ನಾಟಕ ರಾಜ್ಯದ ಉಚ್ಛ ನ್ಯಾಯಾಲಯದಲ್ಲಿನ ನಡವಳಿಕೆಗಳನ್ನು ರಾಜ್ಯದ ಅಧಿಕೃತ ಭಾಷೆಯಾದ ಕನ್ನಡದಲ್ಲಿ ನಡೆಸಲು ಅನುವಾಗುವಂತೆ ರಾಜ್ಯದ ಘನತೆವೆತ್ತ ರಾಜ್ಯಪಾಲರು, ಘನತೆವೆತ್ತ ರಾಷ್ಟ್ರಪತಿಗಳ ಪೂರ್ವಾನುಮತಿ ಪಡೆಯಬೇಕೆಂದು ಕೋರಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ"**

**ಶ್ರೀ ಆರ್.ಕೆ.ಸಿದ್ದರಾಮಣ್ಣ** (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):– ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಖಾಸಗಿ ಸದಸ್ಯರ ನಿರ್ಣಯವನ್ನು ಮಂಡಿಸಲು ತಾವು ನನಗೆ ಅವಕಾಶವನ್ನು ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಕಾಲಾವಕಾಶದ ಕೊರತೆ ಇತ್ತು. ಹಾಗಾಗಿ ಅದಕ್ಕೆ ಸಂಬಂಧ ಪಟ್ಟಂತಹ ಪೂರ್ಣ ವಿಚಾರವನ್ನು ಆ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದಕಾರಣ ಇವತ್ತು ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ಸದನದಲ್ಲಿ ಹಂಚಿಕೊಳ್ಳುವುದಕ್ಕೆ ಒಂದು ಅವಕಾಶ ಕಲ್ಪಿಸಿದ್ದೀರಿ. ಅದಕ್ಕೋಸ್ಕರ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತಾ, ಮಾನ್ಯ ಸಭಾಪತಿಯವರೇ, ನಾವು ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಣೆ ಮಾಡುತ್ತೇವೆ, ಕನ್ನಡದ ಬಗ್ಗೆ ವಿಶೇಷವಾಗಿ ಕಾಳಜಿಯನ್ನು ವಹಿಸುತ್ತೇವೆ. ಅದರಲ್ಲೂ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತಿದೆ. ಹಾಗಾಗಿ ಕನ್ನಡ ಭಾಷೆಯ ಬಗ್ಗೆ ಇನ್ನಷ್ಟು ಜಾಗೃತಿ ಆಗುವಂತಹ ಕನ್ನಡದ ಬಗ್ಗೆ ಇನ್ನಷ್ಟು ಕಾಳಜಿ ವ್ಯಕ್ತಪಡಿಸುತ್ತಾ ಅನೇಕ ರೀತಿಯಲ್ಲಿ ಚಟುವಟಿಕೆಗಳು ಈ ಸಂದರ್ಭದಲ್ಲಿ ನಡೆದಿದೆ. ಅದಕ್ಕೆ ಪೂರಕವಾಗಿ ನಿರ್ಣಯವು ಇದೆ ಎಂದು ಹೇಳುತ್ತಾ, ಕಳೆದ ಅಧಿವೇಶನದ ಸಂದರ್ಭದಲ್ಲಿ ನಾನು ಒಂದು ಸಣ್ಣ ಪೀಠಿಕೆಯನ್ನು ಹಾಕುವಂತಹ ಪ್ರಯತ್ನ ಮಾಡಿದ್ದೆ. ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಸಂಪೂರ್ಣ ನಡವಳಿಗಳನ್ನು ಅದರಲ್ಲೂ ಉಚ್ಚ ನ್ಯಾಯಾಲಯ

ಕೊಡುವಂತಹ ತೀರ್ಪು ಇರಬಹುದು, ಆದೇಶ ಇರಬಹುದು ಎಲ್ಲಾ ನಡವಳಿಗಳನ್ನು ಕನ್ನಡದಲ್ಲಿಯೇ ಮಾಡಿಕೊಡುವುದಕ್ಕೆ ಅವಕಾಶ ಸಂವಿಧಾನದಲ್ಲಿದೆ ಎಂಬ ಅಂಶವನ್ನು ನಾನು ಸದನದ ಗಮನಕ್ಕೆ ತಂದಿದ್ದೆ. ಆ ರೀತಿಯಾದಂತಹ ಬಳಕೆ ಮಾಡುವುದಕ್ಕೆ ಇರುವಂತಹ ಅವಕಾಶವೆಂದರೆ ಸಂವಿಧಾನದ 348(2)ನೇ ಅನುಚ್ಛೇದದಲ್ಲಿ ಅದರ ಅವಕಾಶ ನಮಗಿದೆ. ಅದೇನೆಂದರೆ, ಸಂಬಂಧಪಟ್ಟಂತಹ ರಾಜ್ಯಪಾಲರು ರಾಷ್ಟ್ರಪತಿಗಳ ಪೂರ್ವಾನುಮತಿಯನ್ನು ಪಡೆದು ಕನ್ನಡ ಭಾಷೆಯನ್ನು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಬಳಕೆ ಮಾಡಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗಾಗಿ ಈ ನಿರ್ಣಯದ ಮುಖಾಂತರ ನಮ್ಮ ರಾಜ್ಯಪಾಲರನ್ನು ವಿನಂತಿ ಮಾಡುವುದೇನೆಂದರೆ, ಈ ರೀತಿಯಾದಂತಹ ಒಂದು ಅವಕಾಶವನ್ನು ರಾಷ್ಟ್ರಪತಿಗಳ ಪೂರ್ವಾನುಮತಿಯನ್ನು ಪಡೆದು ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಕನ್ನಡ ಬಳಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ವಿನಂತಿ ಈ ನಿರ್ಣಯದ ಸಾರ. ಈ ರೀತಿಯ ಅವಕಾಶ ಸಂವಿಧಾನದಲ್ಲಿ ಇರಬೇಕಾದರೆ ನಾವು ಇದರಲ್ಲಿ ಮೂರು ಸಂಗತಿಗಳನ್ನು ಗಮನಿಸಬೇಕು. ನಾನು ಇದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಕ್ಕೆ ಎಷ್ಟು ಸಾಧ್ಯವಿದೆಯೋ ಅಷ್ಟನ್ನು ಮಾತ್ರ ಹೇಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇನೆ. ಯಾವುದೇ ಭಾಷೆ ಉಳಿಯಬೇಕಾದರೆ ಅದರ ಬಳಕೆ ಜಾಸ್ತಿ ಆಗಬೇಕು. ಈ ಬಳಕೆಯ ಪ್ರಶ್ನೆ ಬಂದಂತಹ ಸಂದರ್ಭದಲ್ಲಿ ಇದು ವೈಜ್ಞಾನಿಕವಾಗಿಯೂ ಕೂಡ ಸತ್ಯವಾಗಿದೆ. ಡಾರ್ವಿನ್‌ನ ವಿಕಾಸ ವಾದದಲ್ಲಿ ಕೆಲವು ಸಿದ್ಧಾಂತಗಳು ಬರುತ್ತವೆ. 'Survival of the fittest' – 'ಯಾವುದು ಶಕ್ತಿಯುತವಾಗಿರುತ್ತದೆಯೋ ಅದು ಉಳಿಯುತ್ತದೆ, ಯಾವುದು ಅಶಕ್ತವಾಗಿರುತ್ತದೆಯೋ ಅದು ಅಳಿಯುತ್ತದೆ' ಎನ್ನುವುದು ಒಂದು ಸಿದ್ಧಾಂತ. ಅದೇ ರೀತಿ ಇರುವಂತಹ ಇನ್ನೊಂದು ಸಿದ್ಧಾಂತವೆಂದರೆ, 'ಯಾವುದು ಬಳಕೆಯಾಗುತ್ತದೆಯೋ ಅದು ಉಳಿಯುತ್ತದೆ, ಯಾವುದು ಬಳಕೆಯಾಗುವುದಿಲ್ಲವೋ ಅದು ಕಣ್ಮರೆಯಾಗುತ್ತದೆ' ಎನ್ನುವುದಾಗಿದೆ. 'Use and Disuse' ಎನ್ನುವುದು ಈ ಸಿದ್ಧಾಂತದಲ್ಲಿರುವಂತಹ ಒಂದು theory

ಆಗಿದೆ, ಅದೇ ಥಿಯರಿಯನ್ನು ಇದಕ್ಕೂ ಅನ್ವಯಿಸುವುದಾದರೆ, ಭಾಷೆ ಉಳಿಯಬೇಕಾದರೆ ಅದು ಬಳಕೆ ಆಗಬೇಕಾಗುತ್ತದೆ, ಭಾಷೆ ಬಳಕೆಯಾಗದೆ ಹೋದರೆ ಅದು ಕಣ್ಮರೆಯಾಗುತ್ತದೆ. ಹಾಗಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರುವ ನಾವು ಭಾಷೆ ಬಳಕೆಯಾಗಬೇಕು ಎನ್ನುವುದಾದರೆ ಪ್ರಜಾಪ್ರಭುತ್ವದ ಎಲ್ಲಾ ಅಂಗಗಳಲ್ಲಿ ಕೂಡ ಅದರ ಬಳಕೆಯಾಗಬೇಕು. ಅದು ಕಾರ್ಯಾಂಗ ಇರಬಹುದು, ಶಾಸಕಾಂಗ ಇರಬಹುದು, ನ್ಯಾಯಾಂಗ ಇರಬಹುದು. ಎಲ್ಲಾ ಅಂಗಗಳಲ್ಲಿಯೂ ಕನ್ನಡ ಭಾಷೆ ಬಳಕೆಯಾಗಬೇಕು.

ನಿಜ, ನಾವು ಕನ್ನಡವನ್ನು ಅಧಿಕೃತ ಭಾಷೆ ಎಂದು ಘೋಷಣೆ ಮಾಡಿದ್ದೇವೆ, ಕಾರ್ಯಾಂಗದಲ್ಲಿಯೂ ಅದು ಸಾಕಷ್ಟು ಪ್ರಗತಿಯಾಗುತ್ತಿದೆ. ಶಾಸಕಾಂಗದಲ್ಲಿಯೂ ಅದನ್ನು ಬಳಕೆ ಮಾಡಿಕೊಳ್ಳುವುದಕ್ಕೆ ನಾವು ಅವಕಾಶವನ್ನು ಮಾಡಿಕೊಂಡಿದ್ದೇವೆ. ನ್ಯಾಯಾಂಗದಲ್ಲಿಯೂ ಇದರ ಬಳಕೆ ಆಗಬೇಕಾಗಿದೆ. ಹಾಗಾಗಿ ಎಲ್ಲ ಹಂತಗಳಲ್ಲಿಯೂ ಇದರ ಬಳಕೆ ಆದಂತಹ ಸಂದರ್ಭದಲ್ಲಿ ಬಳಕೆ ಪರಿಪೂರ್ಣವಾಗುತ್ತದೆ, ಭಾಷೆ ಉಳಿಯುವುದಕ್ಕೆ ಅನುವಾಗುತ್ತದೆ. ಹಾಗಾಗಿ ಇವೊತ್ತು ನ್ಯಾಯಾಂಗದಲ್ಲಿರುವಂತಹ ವ್ಯವಸ್ಥೆ ಏನು ಎಂದರೆ, ಇವೊತ್ತಿನ ದಿವಸ ನಮ್ಮ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಮತ್ತು ರಾಜ್ಯಗಳ ಉಚ್ಚ ನ್ಯಾಯಾಲಯಗಳಲ್ಲಿ ಇಂಗ್ಲೀಷ್ ಭಾಷೆಯನ್ನೇ ಬಳಕೆ ಮಾಡಿಕೊಳ್ಳಬೇಕು ಎನ್ನುವಂತಹ ನಿಯಮವಿದೆ. ಆದರೆ ನಮ್ಮ ರಾಜ್ಯದ ಒಳಗೆ ಇರುವಂತಹ ಕೆಳಹಂತದ ನ್ಯಾಯಾಲಯಗಳಲ್ಲಿ ಇವೊತ್ತಿನ ದಿವಸ ನಾವು ಕನ್ನಡವನ್ನು ಬಳಕೆ ಮಾಡುತ್ತಿದ್ದೇವೆ. ಇಂಗ್ಲೀಷ್ ಭಾಷೆಯನ್ನೇ ಬಳಕೆ ಮಾಡಬೇಕು ಎನ್ನುವಂತಹದ್ದಿರುವುದು, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಮಾತ್ರ. ಹೀಗಾಗಿ ಕೆಳಹಂತದ ನ್ಯಾಯಾಲಯಗಳಲ್ಲಿ ಕೂಡ ಇಂಗ್ಲೀಷ್ ಭಾಷೆಯನ್ನೇ ಬಳಕೆ ಮಾಡಬೇಕು ಎನ್ನುವಂತಹ ಪ್ರಶ್ನೆ ಅದರಲ್ಲಿ ಬರುವುದಿಲ್ಲ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಕೆಳಹಂತದ ನ್ಯಾಯಾಲಯಗಳಲ್ಲಿ ನಾವು ಬಳಕೆ ಮಾಡುತ್ತಿದ್ದೇವೆ. ಕಕ್ಷಿದಾರರು ಯಾರಿದ್ದಾರೆ ಅವರು ತಮ್ಮ ಕೇಳಿಕೆಯನ್ನು ಅದು Plaint ಇರಬಹುದು, Written Statement ಇರಬಹುದು, ವಾದಪತ್ರ,

ಪ್ರತಿವಾದ ಪತ್ರ ಇವೆಲ್ಲವನ್ನೂ ಈಗಾಗಲೇ ಕೆಳಹಂತದ ನ್ಯಾಯಾಲಯಗಳಲ್ಲಿ ಕನ್ನಡದಲ್ಲಿಯೇ ಮಾಡಲಾಗುತ್ತಿದೆ. ಅದೇರೀತಿ ವಕೀಲರು ಸಹ ತಮ್ಮ ವಾದವನ್ನು ಕನ್ನಡದಲ್ಲಿಯೇ ಮಂಡಿಸುತ್ತಿದ್ದಾರೆ. ಸಾಕ್ಷಿಗಳ ಹೇಳಿಕೆಗಳನ್ನು ಕೂಡ ಕನ್ನಡದಲ್ಲಿಯೇ ದಾಖಲಿಸುವಂತಹ ವ್ಯವಸ್ಥೆ ಇದೆ. ಕೆಳಹಂತದ ನ್ಯಾಯಾಲಯಗಳಲ್ಲಿನ ಬಹಳಷ್ಟು ನ್ಯಾಯಾಧೀಶರು ಸಹ ತಮ್ಮ ತೀರ್ಪುಗಳನ್ನು ಕನ್ನಡದಲ್ಲಿಯೇ ನೀಡುವಂತಹ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ.

ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಂದು ಕಾರ್ಯಕ್ರಮ ನಡೆಯಿತು, ಆ ಸಂದರ್ಭದಲ್ಲಿ ಸುಮಾರು 30ಕ್ಕೂ ಹೆಚ್ಚು ಕೆಳಹಂತದ ನ್ಯಾಯಾಲಯಗಳ ನ್ಯಾಯಾಧೀಶರನ್ನು ಕನ್ನಡದಲ್ಲಿ ತೀರ್ಪು ನೀಡಿರುವ ಕಾರಣಕ್ಕಾಗಿ ಸನ್ಮಾನಿಸಲಾಯಿತು. ಆ ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಹಾಗೂ ಕಾನೂನು ಸಚಿವರು ಸಹ ಭಾಗವಹಿಸಿದ್ದರು. ಅಲ್ಲದೆ ನ್ಯಾಯಮೂರ್ತಿ ಎನ್.ಕುಮಾರ್‌ರವರು ಸಹ ಭಾಗವಹಿಸಿದ್ದರು. ಸನ್ಮಾನ್ಯ ಕಾನೂನು ಸಚಿವರಿಗೆ ಕೂಡ ಈ ವಿಚಾರ ನೆನಪಿರಬಹುದೆಂದು ನಾನು ಭಾವಿಸಿದ್ದೇನೆ. ಅವರು ಆ ಸಂದರ್ಭದಲ್ಲಿ ಒಂದು ವಿಚಾರವನ್ನು ಪ್ರಸ್ತಾಪಿಸಿದರು, ನಾನು ಈ ನಿರ್ಣಯವನ್ನು ಜುಲೈ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದೆ, ಅಕ್ಟೋಬರ್ ತಿಂಗಳಿನಲ್ಲಿ ಈ ಕಾರ್ಯಕ್ರಮ ನಡೆದಿದೆ, ಆ ಕಾರ್ಯಕ್ರಮದಲ್ಲಿಯೂ ಸಹ ಈ ವಿಚಾರವನ್ನು ಸನ್ಮಾನ್ಯ ನ್ಯಾಯಮೂರ್ತಿಗಳಾದ ಎನ್.ಕುಮಾರ್‌ರವರು ಪ್ರಸ್ತಾಪ ಮಾಡಿದ್ದಾರೆ. ಅವರು ಆ ಸಂದರ್ಭದಲ್ಲಿ ನೀಡಿರುವಂತಹ ಹೇಳಿಕೆ ಪತ್ರಿಕೆಯಲ್ಲಿ ಕೂಡ ವರದಿಯಾಗಿದ್ದು, ನಾನು ಅದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಯಸುತ್ತೇನೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ನ್ಯಾಯಮೂರ್ತಿ ಎನ್.ಕುಮಾರ್‌ರವರು ಪ್ರಸ್ತಾಪಿಸಿರುವಂತಹ ವಿಚಾರ "ಕನ್ನಡದಲ್ಲಿಯೇ ಕಾನೂನು ಕರಡು ರಚಿಸಲು ಚಿಂತನೆ" ಎನ್ನುವಂತಹ ಶೀರ್ಷಿಕೆಯ ಅಡಿಯಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದ್ದು, ಅದು ಈ ಕೆಳಕಂಡಂತಿದೆ.

**"ರಾಜ್ಯ ಹೈಕೋರ್ಟ್‌ನ ಬಹುತೇಕ ವಾದ-ಪ್ರತಿವಾದಗಳು ಕನ್ನಡದಲ್ಲಿಯೇ ನಡೆಯುತ್ತವೆ, ಆದರೆ ಸಧ್ಯದ ಸಂದರ್ಭದಲ್ಲಿ ಕನ್ನಡದಲ್ಲಿ ತೀರ್ಪು ನೀಡಬೇಕೆಂದರೆ, ರಾಜ್ಯಪಾಲರು, ರಾಷ್ಟ್ರಪತಿಗಳ ಅನುಮತಿ ಪಡೆದು ಕನ್ನಡದಲ್ಲಿ ತೀರ್ಪು ನೀಡುವಂತೆ ಆದೇಶಿಸಬೇಕು. ರಾಷ್ಟ್ರಪತಿಯವರು ಹಿಂದಿಯಲ್ಲಿ ತೀರ್ಪು ನೀಡಲು ಅನುಮತಿ ನೀಡಿರುವ ಉದಾಹರಣೆ ನಮ್ಮ ಮುಂದಿದೆ. ಅದರ ಹೊರತು ದೇಶದ ಇತರೆ ಯಾವುದೇ ಪ್ರಾದೇಶಿಕ ಭಾಷೆಗಳಲ್ಲಿ ತೀರ್ಪು ನೀಡಲು ಈವರೆಗೆ ಅನುಮತಿ ಸಿಕ್ಕಿಲ್ಲ."** ಎನ್ನುವಂತಹ ಪ್ರಸ್ತಾಪವನ್ನು ನ್ಯಾಯಮೂರ್ತಿಗಳು ಮಾಡಿದ್ದಾರೆ. ಹಾಗಾದರೆ ನಾವು ಆ ಅವಕಾಶವನ್ನು ಬಳಸಿಕೊಳ್ಳಬೇಕು, ಅವಕಾಶ ಎಲ್ಲಿದೆ ಎಂದು ಹುಡುಕುತ್ತಾ ಹೋದರೆ, ನಮಗೆ ಸಂವಿಧಾನದಲ್ಲಿಯೂ ಆ ಅವಕಾಶವಿದೆ, ಸಂವಿಧಾನದ ಆಧಾರದ ಮೇಲೆ ರಚನೆಯಾಗಿರತಕ್ಕಂತಹ ಕಾಯಿದೆಗಳಲ್ಲಿ ಕೂಡ ಈ ಅವಕಾಶವಿದೆ. ಇದನ್ನು ಸಾರಾಂಶವಾಗಿ ಹೇಳುವುದಾದರೆ ಒಟ್ಟು 3 ಕಡೆ ಇದನ್ನು ನಾವು ಗಮನಿಸಬಹುದಾಗಿದೆ.

ಮೊದಲನೆಯದಾಗಿ ಸಂವಿಧಾನದಲ್ಲಿ ಆಡಳಿತ ಭಾಷೆಯ ಬಗ್ಗೆ ಹೇಳಿರತಕ್ಕಂತಹ ವಿಚಾರ, ಅದರ ಆಧಾರದ ಮೇಲೆ ಕೇಂದ್ರ ಸರ್ಕಾರ ಪಾಸ್ ಮಾಡಿರುವಂತಹ ಕಾಯಿದೆ- The Official Language Act, 1963. ಅದೇರೀತಿ ನಾವು ಸಹ ರಾಜ್ಯಕ್ಕೆ ಸಂಬಂಧಪಟ್ಟಂತೆ The Karnataka Official Language Act , 1963ನ್ನು ನಾವು ಕೂಡ ಪಾಸ್ ಮಾಡಿಕೊಂಡಿದ್ದೇವೆ. ಈ 3 ಸಂಗತಿಗಳನ್ನೂ ಒಟ್ಟಿಗೆ ಇಟ್ಟುಕೊಂಡು ಸ್ವಲ್ಪಮಟ್ಟಿಗೆ ವಿಶ್ಲೇಷಣೆ ಮಾಡಿದರೆ, ನಾವು ಕೂಡ ಉಚ್ಛನ್ಯಾಯಾಲಯದಲ್ಲಿ ಕನ್ನಡವನ್ನು ಬಳಕೆ ಮಾಡಿಕೊಂಡು ಕನ್ನಡದಲ್ಲಿಯೇ ತೀರ್ಪು ಬರುವಂತೆ ಮಾಡಲು ಸಾಧ್ಯವಾಗುತ್ತದೆ. ಹಾಗಾಗಿ ಸಂವಿಧಾನದಲ್ಲಿ ತಿಳಿಸಿರುವಂತಹ ಅಂಶಗಳ ಕಡೆಗೆ ಸೂಕ್ಷ್ಮವಾಗಿ ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತಿದ್ದೇನೆ. ಸಂವಿಧಾನದ ಭಾಗ 17ರಲ್ಲಿ ಇದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಅದರಲ್ಲಿ ಒಟ್ಟು 4 ಅಧ್ಯಾಯಗಳಿವೆ, ಅದರಲ್ಲಿ ಮೊದಲನೆಯ ಅಧ್ಯಾಯದಲ್ಲಿ ಒಕ್ಕೂಟದ ಭಾಷೆ ಯಾವುದಿರಬೇಕು ಎಂಬುದನ್ನು ಪ್ರಸ್ತಾಪಿಸಲಾಗಿದೆ. 2ನೇ ಅಧ್ಯಾಯದಲ್ಲಿ ಪ್ರಾದೇಶಿಕ ಭಾಷೆ

ಯಾವ ರೀತಿ ಬಳಕೆ ಮಾಡಿಕೊಳ್ಳಬೇಕು ಎಂಬುದಿದೆ. 3ನೇಯ ಅಧ್ಯಾಯದಲ್ಲಿ ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟಂತಹ ನಡವಳಿಕೆಗಳು ಯಾವ ಭಾಷೆಯಲ್ಲಿ ಆಗಬೇಕು, ಹೇಗೆ ಆಗಬೇಕು ಎನ್ನುವಂಥದ್ದರ ಬಗ್ಗೆ ಪ್ರಸ್ತಾಪಿಸಲಾಗಿದೆ. 4ನೆಯ ಅಧ್ಯಾಯದಲ್ಲಿ ಕೆಲವು ನಿರ್ದೇಶನಗಳನ್ನು ನೀಡಲಾಗಿದೆ. ನಾನು ಈ ಸಂದರ್ಭದಲ್ಲಿ ಅವೆಲ್ಲವನ್ನೂ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಆದರೆ ಅಲ್ಲಿರುವಂತಹ ಕೆಲವು ಸೂಕ್ಷ್ಮ ಅಂಶಗಳನ್ನು ಮಾತ್ರ ನಾನು ಸದನದ ಗಮನಕ್ಕೆ ತರಬಯಸುತ್ತೇನೆ.

ಮೊದಲನೆಯ ಅಧ್ಯಾಯದಲ್ಲಿರತಕ್ಕಂಥದ್ದು, ನಾವು ಇಡೀ ದೇಶದ ಆಡಳಿತವನ್ನು ಯಾವ ಭಾಷೆಯಲ್ಲಿ ನಡೆಸಬೇಕು ಎನ್ನುವಂತಹ ವಿಚಾರದಲ್ಲಿ ಸಂವಿಧಾನದ ಆಶಯವೇನೆಂಬುದನ್ನು ಅಧ್ಯಾಯ 1 ಭಾಗ 14 ಆರ್ಟಿಕಲ್ 343ರಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಿದೆ. ಅದರ ಪ್ರಕಾರ ಇಡೀ ದೇಶದ ಆಡಳಿತವನ್ನು ಹಿಂದಿ ಭಾಷೆಯಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಗಿದೆ. ನಮ್ಮ ಸಂವಿಧಾನ ದಿನಾಂಕ:26ನೇ ಜನವರಿ 1950ರಿಂದ ಜಾರಿಯಾಗಿರುತ್ತದೆ. ಆದರೆ ಅದರಲ್ಲಿ ಇನ್ನೊಂದಿಷ್ಟು ಸಂಗತಿಗಳನ್ನು ನಮ್ಮ ಸಂವಿಧಾನದ ಕರ್ತೃಗಳು ಸೇರಿಸಿದ್ದಾರೆ. ಅದೇನೆಂದರೆ, ನಾವು ಹಿಂದಿಯಲ್ಲಿ ಇಡೀ ದೇಶದ ಆಡಳಿತ ನಡೆಸಬೇಕೆಂದು ಹೇಳಿಕೊಂಡರೂ ಕೂಡ ಸುಮಾರು 15 ವರ್ಷಗಳ ಕಾಲ ಇಂಗ್ಲೀಷ್ ಭಾಷೆಯ ಬಳಕೆಯನ್ನು ನಾವು ಮುಂದುವರಿಸಿದ್ದೇವೆ. ಅಂದರೆ ನಮ್ಮ ಸಂವಿಧಾನದಲ್ಲಿ ರಾಷ್ಟ್ರದ ಆಡಳಿತ ಭಾಷೆ ಹಿಂದಿ ಎಂದು declare ಮಾಡಿದ್ದರೂ ಸಹ ಸಂವಿಧಾನ ಜಾರಿಗೆ ಬಂದ ದಿನಾಂಕ: 26ನೇ ಜನವರಿ 1950 ರಿಂದ 26ನೇ ಜನವರಿ 1965ರವರೆಗೆ ನಮ್ಮ ಎಲ್ಲ ಆಡಳಿತದಲ್ಲಿಯೂ ಹಿಂದಿಯ ಜೊತೆಜೊತೆಗೆ ಇಂಗ್ಲೀಷ್ ಭಾಷೆಯ ಬಳಕೆಯನ್ನು ಮುಂದುವರಿಸಿದ್ದೇವೆ. ಎರಡೂ ಒಟ್ಟಿಗೆ ಬಳಸುವಂತಹ ಅವಕಾಶ ಇದ್ದರೆ ಎರಡನ್ನೂ ಒಟ್ಟಿಗೆ ಬಳಸಬಹುದು ಎನ್ನುವಂಥದ್ದನ್ನು ಕೂಡ ಅದರಲ್ಲಿ ತಿಳಿಸಲಾಗಿದೆ. ಮತ್ತೊಂದು ಸಂಗತಿ ಎಂದರೆ, ಪಾರ್ಲಿಮೆಂಟ್‌ಗೆ ಅನಿಸಿದರೆ 15 ವರ್ಷಗಳ ನಂತರ ಕೂಡ ಇಂಗ್ಲೀಷ್ ಭಾಷೆಯ ಬಳಕೆಯನ್ನು ಮುಂದುವರೆಸಬಹುದು ಎಂದು ತಿಳಿಸಲಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಸದನದಲ್ಲಿ ಇಷ್ಟು ಉತ್ತಮವಾದ ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ಆಡಳಿತ ಪಕ್ಷದ ಕಡೆ ಕೇವಲ 4 ಮಂದಿ ಉಪಸ್ಥಿತರಿದ್ದಾರೆ, ಅದರಲ್ಲಿ ಒಬ್ಬರು ನಿದ್ದೆ ಮಾಡುತ್ತಿದ್ದಾರೆ, ಇನ್ನು ಮೂರು ಜನರು ಮಾತನಾಡುತ್ತಿದ್ದಾರೆ, ಹೀಗಾಗಿ ಅವರಿಗೆ ಈ ಚರ್ಚೆಯ ಬಗ್ಗೆ ಕಾಳಜಿ ಇಲ್ಲ ಎಂಬುದು ಸ್ಪಷ್ಟವಾಗುತ್ತಿದೆ.

**ಸಭಾಪತಿಯವರು:-** ಕಾನೂನು ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ, ಅವರು ಹೆಡಫೋನ್ ಹಾಕಿಕೊಂಡು ಚರ್ಚೆಯನ್ನು ಆಲಿಸುತ್ತಿದ್ದಾರೆ. ಹಾಗಾಗಿ ಈ ಚರ್ಚೆಯ ಸಂದರ್ಭದಲ್ಲಿ ಕಾನೂನು ಸಚಿವರ ಉಪಸ್ಥಿತಿ ಬಹಳ ಅಗತ್ಯವಾಗಿದೆ, ಅವರು ಉಪಸ್ಥಿತರಿದ್ದು ಚರ್ಚೆಯನ್ನು ಗಮನಿಸುತ್ತಿದ್ದಾರೆ. ಅವರು ಸದಸ್ಯರು ಪ್ರಸ್ತಾಪಿಸುತ್ತಿರುವ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತರ ಕೊಡುತ್ತಾರೆ.

**ಶ್ರೀ ಬಸವವರಾಜ ಹೊರಟ್ಟಿ:-**ಮಾನ್ಯ ಸಭಾಪತಿಯವರೇ, ಕಾನೂನು ಸಚಿವರೊಬ್ಬರಿದ್ದರೆ ಸಾಕು ಎನ್ನುವುದಾದರೆ ದಯಮಾಡಿ ಉಳಿದವರೆಲ್ಲರೂ ಹೋಗಲಿಬಿಡಿ ಸರ್ಕಾರದ ಮುಖ್ಯ ಸಚೇತಕರು ಎಲ್ಲ ವಿಷಯಗಳಿಗೂ ಎದ್ದು ನಿಲ್ಲುತ್ತಾರೆ, ಈ ವಿಷಯದಲ್ಲೇಕೆ ಅವರು ಮಾತನಾಡದೆ ಸುಮ್ಮನೆ ಕುಳಿತಿದ್ದಾರೆ?

**ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರಿ ಮುಖ್ಯ ಸಚೇತಕರು):-** ಸದಸ್ಯರು ಲಾಂಜ್‌ನಲ್ಲಿದ್ದಾರೆ, ಬರುತ್ತಾರೆ-ಹೋಗುತ್ತಾರೆ.

**ಸಭಾಪತಿಯವರು:-** ಮಾನ್ಯ ಸಿದ್ದರಾಮಣ್ಣನವರು ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ,ದಯಮಾಡಿ ಮಧ್ಯದಲ್ಲಿ ಯಾರೂ ಮಾತನಾಡುವುದು ಬೇಡ, sidetrack ಆಗುವುದು ಬೇಡ, ಮಾನ್ಯ ಸಿದ್ದರಾಮಣ್ಣನವರೇ, ದಯಮಾಡಿ ಚರ್ಚೆಯನ್ನು ಮುಂದುವರಿಸಿ.

**ಶ್ರೀ ಆರ್.ಕೆ.ಸಿದ್ದರಾಮಣ್ಣ:-** ಮಾನ್ಯ ಸಭಾಪತಿಯವರೇ, 15 ವರ್ಷಗಳ ನಂತರ ಕೂಡ ಇಂಗ್ಲೀಷ್ ಭಾಷೆಯ ಬಳಕೆಯನ್ನು ನಾವು

ಮುಂದುವರೆಸಬೇಕು ಎಂದು ಪಾರ್ಲಿಮೆಂಟ್ ನಿಶ್ಚಯ ಮಾಡಿದ್ದರೆ, ಅದನ್ನು ಮುಂದುವರೆಸಬಹುದು ಎಂಬುದಾಗಿ ಸಂವಿಧಾನವನ್ನು ಜಾರಿಗೆ ತಂದಂತಹ ಸಂದರ್ಭದಲ್ಲಿಯೇ ತಿಳಿಸಲಾಗಿದೆ. ಅದರ ಜೊತೆಗೆ ಮತ್ತೊಂದು ಸಂಗತಿಯನ್ನು ಕೂಡ ಸಂವಿಧಾನದಲ್ಲಿ ತಿಳಿಸಲಾಗಿದೆ. ಅದೇನೆಂದರೆ ಸಂವಿಧಾನ ಜಾರಿಗೆ ಬಂದು ಐದು ವರ್ಷ ಆದ ತಕ್ಷಣವೇ ಒಂದು ಭಾಷಾ ಆಯೋಗದ ರಚನೆ ಆಗಬೇಕು. ಭಾಷಾ ಆಯೋಗಕ್ಕೆ ಒಬ್ಬರು ಅಧ್ಯಕ್ಷರಿರಬೇಕು. ಅದಕ್ಕೆ ಸದಸ್ಯರು ಯಾರು ಇರಬೇಕೆಂದರೆ, ಸಂವಿಧಾನ ಮಾನ್ಯತೆ ಕೊಟ್ಟಂತಹ ಭಾಷೆಗಳ ಪ್ರತಿನಿಧಿಗಳು ಆ ಆಯೋಗದಲ್ಲಿ ಇರಬೇಕು ಎನ್ನುವಂಥದ್ದು ಇದೆ. ಈ ಆಯೋಗ 1955–56ನೇ ಸಾಲಿನಲ್ಲಿಯೇ ರಚನೆಯಾಗಿದೆ. ಈ ಆಯೋಗಕ್ಕೆ ಶ್ರೀ ಬಿ.ಜಿ.ಖೇರ್ ಎಂಬುವರು ಅಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಈ ಆಯೋಗದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದಂತಹವರು ದಿವಂಗತ ಶ್ರೀ ಡಿ.ಸಿ.ಪಾವಟೆ ಆಗ ಅವರು ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ಭಾಷಾ ಆಯೋಗದ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದರು. ಈ ಆಯೋಗದ ಕೆಲಸ ಏನು, ಏನು ಮಾಡಬೇಕೆಂಬುದರ ಬಗ್ಗೆ ತಿಳಿಸಲಾಗಿದೆ. ಆದರೆ ನಾನು ಇದರ ಬಗ್ಗೆ ವಿಸ್ತಾರವಾಗಿ ಹೋಗುವುದಿಲ್ಲ. ಹಿಂದಿ ಭಾಷೆಯನ್ನು ಹೆಚ್ಚಾಗಿ ಯಾವ ರೀತಿ ಬಳಕೆ ಮಾಡಬೇಕು, ಇಂಗ್ಲೀಷ್ ಭಾಷೆಯ ಮೇಲೆ ಯಾವ ರೀತಿ ನಿಯಂತ್ರಣವನ್ನು ಹೇರಬೇಕು, ಸರ್ವೋಚ್ಛ ನ್ಯಾಯಾಲಯದಲ್ಲಿ, ಉಚ್ಛನ್ಯಾಯಾಲಯದಲ್ಲಿ ಭಾಷಾ ಯಾವ ರೀತಿ ಆಗಬೇಕು, ಅದೇ ರೀತಿ ಇದನ್ನೆಲ್ಲಾ ಮಾಡುವಂತಹ ಸಂದರ್ಭದಲ್ಲಿ ಗಮನಿಸಬೇಕಾಗಿರುವಂತಹದ್ದು ಆಗಿನ ಸಂದರ್ಭದಲ್ಲಿ ಇದ್ದಂತಹ ಸಾಂಸ್ಕೃತಿಕ ವಾತಾವರಣ, scientific development, industrial development ಇದೆಲ್ಲವನ್ನೂ ಸಹ ಗಮನದಲ್ಲಿಟ್ಟುಕೊಂಡು ರಾಷ್ಟ್ರಪತಿಗಳಿಗೆ ಒಂದಿಷ್ಟು ಶಿಫಾರಸ್ಸುಗಳನ್ನು ಮಾಡುವಂತಹ ಒಂದು ಆಯೋಗದ ರಚನೆ ಆ ಸಂದರ್ಭದಲ್ಲಿ ಆಗಿತ್ತು. ಭಾಷಾ ಆಯೋಗ ಶಿಫಾರಸ್ಸುಗಳನ್ನು ಮಾಡಿದೆ. ಅದೇ ರೀತಿ ಇನ್ನೊಂದು 'ಆಡಳಿತ ಭಾಷಾ ಸಮಿತಿ' ರಚನೆ ಆಗಬೇಕು ಎನ್ನುವುದರ ಬಗ್ಗೆ

ಪ್ರಸ್ತಾಪವಾಗಿತ್ತು. ಈ ಸಮಿತಿಯೊಳಗೆ ಒಟ್ಟು 30 ಜನ ಪಾರ್ಲಿಮೆಂಟ್ ಸದನಗಳ ಸದಸ್ಯರು ಇರಬೇಕೆಂದು ಆಗಿತ್ತು. ಆ ಸಂದರ್ಭದಲ್ಲಿ ಆ ಕಮಿಟಿಯು ಸಹ ರಚನೆಯಾಗಿದೆ. ಸನ್ಮಾನ್ಯ ದಿವಂಗತ G.B.Pant ಅವರು ಅಂದಿನ ಗೃಹ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರ ಅಧ್ಯಕ್ಷತೆಯಲ್ಲಿ ಒಂದು ಭಾಷಾ ಸಮಿತಿ ಕೂಡ ರಚನೆಯಾಗಿತ್ತು. ಈ ಸಮಿತಿಯ ಕರ್ತವ್ಯ ಏನೆಂದರೆ ಆಯೋಗ ಕೊಟ್ಟಂತಹ ಶಿಫಾರಸ್ಸುಗಳನ್ನು ಪರಿಶೀಲನೆ ಮಾಡುವಂತಹ ಕೆಲಸವನ್ನು ಆ ಸಮಿತಿಗೆ ವಹಿಸಲಾಗಿತ್ತು. ಈ ಸಮಿತಿಯಲ್ಲಿ ಕರ್ನಾಟಕದ ದಕ್ಷಿಣ ಕನ್ನಡದ ಒಬ್ಬ ಸಂಸತ್ ಸದಸ್ಯರಾದಂತಹ ಶ್ರೀ ಯು.ಶ್ರೀನಿವಾಸ್ ಮಲ್ಯ ಎಂಬುವರು ಇದ್ದರು. ಅಂದರೆ ಆಯೋಗದ ರಚನೆಯಾಗಿದೆ, ಆಯೋಗ ಗೌರವಾನ್ವಿತ ರಾಷ್ಟ್ರಪತಿಗಳಿಗೆ ಶಿಫಾರಸ್ಸು ಕೊಟ್ಟಿದೆ, ಆ ಶಿಫಾರಸ್ಸುಗಳ ಪರಿಶೀಲನೆಯನ್ನು ಈ ಸಮಿತಿ ಮಾಡಿದೆ. ಈ ಸಮಿತಿ ಮಾಡಿ ಆದ ನಂತರ ಬಂದಿರುವಂಥದ್ದು ಯಾವುದು ಎಂದರೆ, The Official Language Act of 1963. ಕೇಂದ್ರ ಸರ್ಕಾರ ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾಡಿರುವುದು ಯಾವುದೆಂದರೆ, The Official Language Act of 1963. ನಾನು ಈ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದೆ ಎಂದರೆ, ಕೇವಲ ಇಷ್ಟನ್ನೇ ಗಮನಿಸಿದರೆ ಸಾಧ್ಯವಾಗುವುದಿಲ್ಲ. ಸಂವಿಧಾನದಲ್ಲಿ ಹೇಳಿರುವಂತಹ ಅಂಕಿ–ಅಂಶಗಳು ಸಾಕಾಗುವುದಿಲ್ಲ. ಅಲ್ಲಿಂದ ಏನು ಬೆಳವಣಿಗೆ ಆಗಿದೆ ಎಂಬುದನ್ನು ಸಹ ನಾವು ಗಮನಿಸಬೇಕಾಗಿದೆ. 1963ರಲ್ಲಿ The Official Language Act of 1963 ಬಂದಿದೆ. ಅದು ಇವತ್ತಿನ ದಿವಸ ಜಾರಿಯಲ್ಲಿದೆ. ಅದರ ಆಧಾರದ ಮೇಲೆಯೇ ನಾವು ಸಹ ರಾಜ್ಯಕ್ಕೆ ಸಂಬಂಧಪಟ್ಟಂತಹ Official Language Act 1963 ಪಾಸ್ ಮಾಡಿರುವಂಥದ್ದು. ಹಾಗಾಗಿ ನಾನು ಹೇಳುವಂಥದ್ದು ಏನೆಂದರೆ, ಈ ಮೂರನ್ನು ಸಮಗ್ರವಾಗಿ ನೋಡಬೇಕಾದಂತಹ ಅವಶ್ಯಕತೆ ಇದೆ. ಈ ಮೂರನ್ನು ನೋಡಬೇಕೆಂದರೆ ನಾನು ನೇರವಾಗಿ ಅಧ್ಯಾಯ 3ಕ್ಕೆ ಹೋಗುತ್ತೇನೆ. ಅಧ್ಯಾಯ 3ರಲ್ಲಿ ಇರುವಂಥದ್ದು ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದಲ್ಲಿ ನಾವು ಯಾವ ಭಾಷೆಯನ್ನು ಬಳಕೆ

ಮಾಡಿಕೊಳ್ಳಬೇಕು ಎನ್ನುವಂಥದ್ದು. I will quote Article 348 of the Constitution of India . It is as follows :-

"Notwithstanding anything contained in the foregoing provision of this Part, until Parliament by law otherwise provides…."

ಇದು ಬಹಳ ಪ್ರಮುಖವಾಗುತ್ತದೆ. "…until Parliament by law otherwise provides…." ಇದು ಯಾವಾಗ ಹೇಳಿರುವಂಥದ್ದು? ದಿನಾಂಕ:26/01/1956 ಹೇಳಿರುವಂತಹದ್ದು. ಬೆಳವಣಿಗೆ ಆಯಿತು. ಇದು ಎಲ್ಲಿಯವರೆಗೆ ನಡೆಯುತ್ತದೆ ಎಂದರೆ, ಪಾರ್ಲಿಮೆಂಟ್ ಇನ್ನೊಂದು ಕಾಯಿದೆ ಮಾಡುವವರೆಗೆ ನಾವು ಈ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ. ನಾವು ಯಾವ ರೀತಿಯಾದಂತಹ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೇವೆ?

"...all proceedings in the Supreme Court and in every High Court shall be in the English language."

ಇದನ್ನು ಆಗ ನಾವು ಹೇಳಿಕೊಂಡಿದ್ದೆವು. ನಂತರ ನಾವು ಇದರಲ್ಲಿ ಒಂದು ಸಣ್ಣ ಅವಕಾಶವನ್ನು ಸಹ ಮಾಡಿಕೊಂಡಿದ್ದೇವೆ. Article 348(2) ನಲ್ಲಿ "Notwithstanding anything contained in sub clause (a) of clause (1),the Governor…" ಇಲ್ಲಿ ನಮಗೆ ಸಂವಿಧಾನದಲ್ಲಿ ಹೇಳಿರುವಂತಹ ಬಹಳ ಪ್ರಮುಖವಾದಂತಹ ಅಂಶ. ನಾನು ನಿರ್ಣಯದಲ್ಲಿ ಪ್ರಸ್ತಾಪ ಮಾಡುತ್ತಿರುವಂತಹ ಅಂಶವೇನೆಂದರೆ, 348(2)ರಲ್ಲಿ ಇರುವಂಥದ್ದನ್ನು ದಯಮಾಡಿ ಸದನ ಗಮನಿಸಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಅದೇನೆಂದರೆ,

"… the Governor of a State may, with the previous consent of the President, authorize the use of the Hindi language, or any other language used for any official purposes of the State, in proceedings in the High Court having its principal seat in that State …"

ಏಕೆಂದರೆ ಆ ಸಂದರ್ಭದಲ್ಲಿ ಯಾವುದೋ ರಾಜ್ಯದ High Court ಇನ್ನೊಂದು ರಾಜ್ಯದಲ್ಲಿತ್ತು. ಹಾಗಾಗಿ ಆ ಕಾರಣಕ್ಕೋಸ್ಕರ ಈ ರೀತಿಯಾಗಿ ನಾವು ಆ ಸಂದರ್ಭದಲ್ಲಿ ಹೇಳಿಕೊಂಡಿದ್ದೆವು. ಅದಕ್ಕೆ ಒಂದು proviso ಸಹ ಇದೆ. "...Provided that nothing in this clause shall apply to any judgment, decree or order passed or made by such High Court" ಎನ್ನುವುದು ಇಲ್ಲಿ ಪ್ರಸ್ತಾಪವಾಗಿದೆ. ಈ ರೀತಿ ಹೇಳಿದ್ದರೂ ಸಹ ಗೌರವಾನ್ವಿತ ರಾಜ್ಯಪಾಲರು ಗೌರವಾನ್ವಿತ ರಾಷ್ಟ್ರಪತಿಗಳ ಒಪ್ಪಿಗೆ ಪಡೆದು ಭಾಷೆ ಬಳಕೆಗೆ ಅವಕಾಶ ಮಾಡಿಕೊಟ್ಟರೂ ಸಹ High Court ಆ ಭಾಷೆಯಲ್ಲಿ judgment ಕೊಡುವುದಕ್ಕೆ ಅವಕಾಶವಿಲ್ಲ ಎನ್ನುವಂತಹ ಅಂಶ ಸಹ ಇದೆ. ಅದು ಸಹ ಯಾವಾಗ ಎಂದರೆ, ಪಾರ್ಲಿಮೆಂಟ್ ಒಂದು ಕಾಯಿದೆ ಮಾಡುವವರೆಗೆ. ಆದ ಕಾರಣ ನಾನು ಪ್ರಾರಂಭಿಕ ಹಂತದಲ್ಲಿಯೇ ಈ ವಿಷಯದ ಬಗ್ಗೆ ಸದನದ ಗಮನವನ್ನು ಸೆಳೆದೆ. "…until Parliament by law otherwise provides…." ಪಾರ್ಲಿಮೆಂಟ್ ಇನ್ನೊಂದು ಕಾಯಿದೆಯನ್ನು ತರುವ ತನಕ ನಾವು ಈ ವ್ಯವಸ್ಥೆಯಲ್ಲಿಯೇ ಮುಂದುವರೆಯುವಂಥದ್ದು ಇತ್ತು. ಹಾಗಾಗಿ ಈಗ ನಾವು ಎಲ್ಲಿಗೆ ಹೋಗಿದ್ದೇವೆ ಎಂದರೆ, ಭಾಷಾ ಆಯೋಗ, ಭಾಷಾ ಸದನ ಸಮಿತಿ, ನಂತರ ಪಾರ್ಲಿಮೆಂಟಿನಲ್ಲಿ ನಡೆದಂತಹ ಚರ್ಚೆ ಇವೆಲ್ಲದರ ಆಧಾರದ ಮೇಲೆಯೇ ಪಾರ್ಲಿಮೆಂಟ್ ಮಾಡಿರುವಂಥದ್ದು ಯಾವುದು ಎಂದರೆ, The Official Language Act of 1963. ಇದರ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. The Official Language Act of 1963, ಇದರ ಬಗ್ಗೆ ನಾನು ಪೂರ್ಣವಾಗಿ ಓದುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಇರುವಂತಹ Statement of Objects and Reasons, ಒಂದೆರಡು section ಗಳನ್ನು ಮಾತ್ರ ಈ ಸದನದ ಗಮನಕ್ಕೆ ತರಬಯಸುತ್ತೇನೆ. "Statement of Objects and Reasons: The Committee constituted under…" ಇಲ್ಲಿ 'Committee' ಎಂದರೆ ಸದನ ಸಮಿತಿ ಎಂದು ಭಾವಿಸಬೇಕಾಗುತ್ತದೆ. The Statement of Objects and Reasons is as under:-

> "The Committee constituted under clause (4) of Article 344 of the Constitution to examine the recommendations of the Commission constituted under clause (1) thereof expressed the opinion that the complete change – over to Hindi by 26th January, 1965 was not practicable and that the provision should be made in pursuance of clause (3) of Article 343 of the Constitution for the continued use of English even after 1965 for purposes to be specified by Parliament by law for as long as may be necessary…"

ಇಲ್ಲಿ ಹೇಳಿರುವಂತಹ ಕಾರಣಗಳು ಏನು ಎಂಬುದು ಸ್ಪಷ್ಟವಾಗಿದೆ. ಈ ಕಾಯಿದೆಯನ್ನು ಮಾಡುವಂತಹ ಸಂದರ್ಭದಲ್ಲಿ Committee ಯ ವರದಿ ಇದೆ. ಪಾರ್ಲಿಮೆಂಟ್ ಸದನ ಸಮಿತಿಯ ವರದಿಯನ್ನು ಗಮನಿಸಿ ಈ ಕಾಯಿದೆಯನ್ನು ಮಾಡಿರುವಂಥದ್ದು. ಆಯೋಗದ report ಇರಬಹುದು, Committee ಯ opinion ಇರಬಹುದು. ಅದೇನೆಂದರೆ, ನಿಜ, ಹದಿನೈದು ವರ್ಷದವರೆಗೆ ಮಾತ್ರ ನಾವು ಇಂಗ್ಲೀಷ್ ಭಾಷೆಯನ್ನು ಮುಂದುವರೆಸಬೇಕೆಂದು ಇತ್ತು. ಆದರೆ ಹದಿನೈದು ವರ್ಷದ ನಂತರ ಇಡೀ ದೇಶದ ಆಡಳಿತ ಯಾವ ಭಾಷೆಯಲ್ಲಿ ಇರಬೇಕಾಗಿತ್ತು? ಹಿಂದಿ ಭಾಷೆಯಲ್ಲಿ ಇರಬೇಕಾಗಿತ್ತು. ಆದರೆ ಆ ಭಾಷೆಗೆ ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ, change-over ಎಲ್ಲಿಂದ? ಇಂಗ್ಲೀಷಿನಿಂದ ಹಿಂದಿ ಭಾಷೆಗೆ ಹೋಗುವಂಥದ್ದು it was not practicable ಎನ್ನುವಂಥದ್ದನ್ನು ಮನಗಂಡು ಪಾರ್ಲಿಮೆಂಟ್ ಏನು ಮಾಡಿದೆ ಎಂದರೆ 'The Official Languages Act of 1963' ಈ ಕಾಯಿದೆಯನ್ನು ಪಾಸ್ ಮಾಡಿದೆ. ಹಾಗಾಗಿ ಇದರಲ್ಲಿ ಉದ್ದೇಶ ಬಹಳ ಸ್ಪಷ್ಟವಾಗಿದೆ. ಯಾವ ಉದ್ದೇಶಕ್ಕಾಗಿ ಈ ಕಾಯಿದೆ ಬಂತು ಎಂದರೆ, ಇಂಗ್ಲೀಷ್ ಭಾಷೆಯನ್ನು ನಾವು ಬಿಡುವುದಕ್ಕೆ ಆಗುವುದಿಲ್ಲ, ಹಾಗಾಗಿ ಈ ಭಾಷೆಯನ್ನು ನಾವು ಮುಂದುವರೆಸಬೇಕಾಗಿದೆ. ಮುಂದುವರೆಸುವುದಕ್ಕೆ ಸಂವಿಧಾನದಲ್ಲಿಯೂ ಸಹ ಅವಕಾಶವಿದೆ. ಹಾಗಾಗಿ Article 343 ಕೆಳಗಡೆಯೇ

ಇಂಗ್ಲೀಷ್ ಭಾಷೆಯನ್ನು ಮುಂದುವರೆಸಿದರೆ ಇಂಗ್ಲೀಷ್ ಭಾಷೆಯ ಆಡಳಿತದಲ್ಲಿ ಇಂಗ್ಲೀಷ್ ಭಾಷೆಯನ್ನು ಮುಂದುವರೆಸುವಂತಹ ಉದ್ದೇಶವನ್ನು ಇಟ್ಟುಕೊಂಡು ಈ ಕಾಯಿದೆಯನ್ನು ತಂದಿರುವಂಥದ್ದು. ಆದರೆ ಇಲ್ಲಿ ಇನ್ನೊಂದು ಅಂಶವು ಸಹ ಇದೆ. ಅದೇನೆಂದರೆ, 'Statement of Objects and Reasons' ಪ್ರಸ್ತಾಪ ಆಗಿರುವಂಥದ್ದು. "The Bill also seeks to make provision by law for certain other matters covered by the Presidential order, namely, (a) authorized Hindi translation of Central Acts…" ಇದಕ್ಕೂ ಸಹ ಅವಕಾಶ ಮಾಡಿಕೊಟ್ಟಿದೆ. "(b) publication of a Hindi translation of State Acts and Ordinances…" ಅದಕ್ಕೂ ಸಹ ಅವಕಾಶ ಮಾಡಿಕೊಟ್ಟಿದೆ, ಅದರ ಜೊತೆಗೆ ನಾವೆಲ್ಲರೂ ಒಂದು ಅಂಶವನ್ನು ಗಮನಿಸಬೇಕಾಗಿರುವುದೇನೆಂದರೆ, "(c) for the use optionally of Hindi and other official languages of States for purposes of judgments, decrees and orders of High Courts with the previous consent of the President." ಈ ಕಾಯಿದೆಯನ್ನು ಏಕೆ ತರುತ್ತಿದ್ದೇವೆ ಎಂದರೆ ಹೈಕೋರ್ಟಿನ ನಡವಳಿಕೆಗಳು, judgments, decrees , orders ಎಲ್ಲವೂ ಸೇರಿದ ಹಾಗೆ ಹಿಂದಿ ಭಾಷೆಯಲ್ಲಿ ಪಾಸ್ ಮಾಡುವುದಕ್ಕೆ ಮತ್ತು ಇದರಲ್ಲಿ ಪ್ರಾದೇಶಿಕ ಭಾಷೆಗಳ ಬಳಕೆಗೂ ಕೂಡ ಇಲ್ಲಿ ಅವಕಾಶವನ್ನು ಮಾಡಿಕೊಡಲಾಗಿದೆ. ಇದರಲ್ಲಿರುವ Section 7 of the Official Languages Act ಅನ್ನು ಮಾತ್ರ ಸದನದ ಗಮನಕ್ಕೆ ತರಬಯಸುತ್ತೇನೆ. It reads thus,

"**7. Optional use of Hindi or other official language in judgements etc., of High Courts-** As from the appointed day or any day thereafter the Governor of a State may, with the previous consent of the President, authorize the use of Hindi or the official language of the State, in addition to the English language, for the purposes of any judgment, decree or order passed or made by the High Court for that State and where any judgment, decree or order is

passed or made in any such language (other than the English language), it shall be accompanied by a translation of the same in the English language issued under the authority of the High Court."

ಹಾಗಾಗಿ ನಾವು ಸಂವಿಧಾನದಲ್ಲಿ ಇರತಕ್ಕ ಮೂರನೆಯ ಅಧ್ಯಾಯ, 'The Official Languages Act of 1963ಅನ್ನು ನಾವು ಸಮಗ್ರವಾಗಿ ಪರಿಶೀಲನೆ ಮಾಡಿದರೆ ಅದರಲ್ಲಿರುವ ಅವಕಾಶದ ಹಾಗೆ ರಾಜ್ಯಪಾಲರು ರಾಷ್ಟ್ರಪತಿಗಳ ಪೂರ್ವಾನುಮತಿಯನ್ನು ಪಡೆದು ನಮಗೆ ಕನ್ನಡದ ಬಳಕೆಯ ಅವಕಾಶವನ್ನು ಮಾಡಿಕೊಡಬಹುದು ಎನ್ನಬಹುದು ಈ ಅಧ್ಯಾಯದಲ್ಲಿ ಬಹಳ ಸ್ಪಷ್ಟವಾಗಿದೆ. ಇದಕ್ಕಾಗಿ ಸಂವಿಧಾನದ ಯಾವುದೇ ಪರಿಚ್ಛೇದಕ್ಕೆ ತಿದ್ದುಪಡಿಯನ್ನು ಮಾಡುವ ಅವಶ್ಯಕತೆಯಿಲ್ಲ. ಇದನ್ನು ನಾವೇ ಮಾಡಿಕೊಳ್ಳಬಹುದು. ಈ ರೀತಿಯಾದಂತಹ ಪ್ರಯತ್ನವನ್ನು ಬೇರೆ ರಾಜ್ಯದವರು ಮಾಡಿದ್ದಾರೆಯೇ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಈಗಾಗಲೇ Article 348 (2) ಅನ್ನು ಬಳಸಿ ಈ ರೀತಿಯ ಅವಕಾಶವನ್ನು ಮಾಡಿಕೊಂಡಿದ್ದಾರೆಯೇ ಎಂದರೆ ರಾಜಸ್ತಾನ, ಮಧ್ಯಪ್ರದೇಶ, ಉತ್ತರಪ್ರದೇಶ, ಬಿಹಾರ ಈ ನಾಲ್ಕು ರಾಜ್ಯಗಳು ಹಿಂದಿ ಭಾಷೆಯನ್ನು ಬಳಕೆ ಮಾಡುವುದಕ್ಕೆ ಅವಕಾಶ ಕೋರಿದ್ದಾರೆ. ಸಂವಿಧಾನದಲ್ಲಿ ಇಂಗ್ಲೀಷ್ ಭಾಷೆಯನ್ನೇ ಬಳಸಬೇಕೆನ್ನುವ ಆದೇಶ ಇದ್ದರೂ ಕೂಡ Article 348 (2) ಅನ್ನು ಬಳಸಿ ಹಿಂದಿ ಭಾಷೆಯನ್ನು ಬಳಸುವುದಕ್ಕೆ ಅವರು ಅವಕಾಶವನ್ನು ಮಾಡಿಕೊಂಡಿದ್ದಾರೆ. ಪಶ್ಚಿಮಬಂಗಾಳ ಕೂಡ ತಮ್ಮ ಉಚ್ಚ ನ್ಯಾಯಾಲಯದ ನಡವಳಿಕೆಗಳನ್ನು ಮತ್ತು ತೀರ್ಪುಗಳನ್ನು ನೀಡಲು ಬೆಂಗಾಲಿ ಭಾಷೆಯನ್ನು ಬಳಸಲು ಸಾಕಷ್ಟು ಪ್ರಯತ್ನ ಮಾಡಿದರೂ ಸಹ ಕೇಂದ್ರದಿಂದ ಅದಕ್ಕೆ ಒಪ್ಪಿಗೆ ಸಿಗಲಿಲ್ಲ. ಅದೇ ರೀತಿ ತಮಿಳುನಾಡಿನವರು 2005ರಿಂದ ಇದೇ ಪ್ರಯತ್ನವನ್ನು ಮಾಡುತ್ತಿದ್ದರೂ ಸಹ ಈ ಕ್ಷಣದವರೆಗೆ ಅವರಿಗೂ ಸಹ ಅವಕಾಶ ಸಿಕ್ಕಿರುವುದಿಲ್ಲ. ಆದರೆ ಹಿಂದಿ ಮಾತನಾಡದಂತಹ ಪ್ರದೇಶಗಳಿಗೆ ತಾರತಮ್ಯ ಆಗುತ್ತಿದೆಯೇನೋ ಎನ್ನುವ ಭಾವನೆ ನಮ್ಮಲ್ಲಿ ಬರುತ್ತಿದೆ. ಹಾಗಾಗಿ ಈಗ ನಾವೆಲ್ಲರೂ ಸೇರಿ ಹಿಂದಿ ಮಾತನಾಡದ ನಾವೆಲ್ಲರೂ ಒಟ್ಟಿಗೆ ಸೇರಿ ಕೇಂದ್ರದ

ಮೇಲೆ ಒತ್ತಾಯವನ್ನು ತರಬೇಕಾಗುತ್ತದೆ. ಯಾರಾದರೂ ಒಂದು ರಾಜ್ಯದವರು ಹೋದಲ್ಲಿ ಅಷ್ಟು ಶಕ್ತಿ ದೊರೆಯುವುದಿಲ್ಲ. ಇದರ ಬಗ್ಗೆ ಮಾನ್ಯ ಕರುಣಾನಿಧಿಯವರು ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಒಂದು ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ನಾನು ಆ ಪತ್ರವನ್ನು ಪೂರ್ಣ ಓದುವುದಿಲ್ಲ, ಅದರ ಕೊನೆಯ ಪ್ಯಾರಾವನ್ನು ಮಾತ್ರ ಈ ಸದನದ ಗಮನಕ್ಕೆ ತರಬಯಸುತ್ತೇನೆ. ದಿನಾಂಕ 11.3.2007ರಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಕರುಣಾನಿಧಿಯವರು ಬರೆದಿರುವ ಪತ್ರ ಆಗ ಕೇಂದ್ರದಲ್ಲಿ ಈಗ ನಮ್ಮ ರಾಜ್ಯದ ರಾಜ್ಯಪಾಲರಾಗಿರುವ ಹಂಸರಾಜ್ ಭಾರದ್ವಜ್‌ರವರು ಕಾನೂನು ಸಚಿವರಾಗಿದ್ದರು, ಅವರಿಗೂ ಸಹ ಇದರ ಬಗ್ಗೆ ಪತ್ರವನ್ನು ಬರೆಯಲಾಗಿತ್ತು. The last paragraph of that letter reads thus,

"Tamil Nadu expects that it would be treated on an equal footing with Bihar, Uttar Pradesh , Madhya Pradesh ,and Rajasthan, in so far as the application of Article 348 (2) of the Constitution of India read with Section 7 of the Official Languages Act, 1963, are concerned. I am quite confident that you will take urgent steps to give effect to the will and desire of the people of Tamil Nadu expressed unequivocally through the unanimous Resolution of the Tamil Nadu Legislative Assembly on 6.12.2006. I am hopefull that you would certainly appreciate the sentiments of the people of Tamil Nadu and accede to rightfull claim of Tamil Nadu. Therefore I kindly request…"

ಮಾನ್ಯ ಸಭಾಪತಿಗಳೇ, ನಾವು ಕೂಡ ಈ ರೀತಿಯ ಪ್ರಯತ್ನವನ್ನು ಮಾಡಬೇಕಾಗುತ್ತದೆ, ಈ ರೀತಿಯ ಪ್ರಯತ್ನವನ್ನು ಮಾಡಿರತಕ್ಕ ರಾಜ್ಯಗಳ ಜೊತೆಯಲ್ಲೂ ಕೂಡ ನಾವು ಸೇರಬೇಕಾಗುತ್ತದೆ. ಇದು ನಮ್ಮ ಭಾಷೆಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಇದರಲ್ಲಿ ಆಡಳಿತ ಪಕ್ಷ ವಿರೋಧ

ಪಕ್ಷ ಎನ್ನದೇ ಎಲ್ಲರೂ ಒಟ್ಟಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ನನ್ನ ಈ ನಿರ್ಣಯಕ್ಕೆ ಈ ಸದನದ ಸರ್ವಾನುಮತದ ಅಂಗೀಕಾರ ಬೇಕಾಗುತ್ತದೆ ಹಾಗೆಯೇ ಸರ್ಕಾರ ಕೂಡ ಇದರ ಬಗ್ಗೆ ಗಮನವನ್ನು ಹರಿಸಬೇಕಾಗುತ್ತದೆ ಹಾಗೆಯೇ ಸರ್ಕಾರದ ಸಹಮತ ಕೂಡ ಬೇಕಾಗುತ್ತದೆ. ತಮಿಳುನಾಡಿನಲ್ಲಿರುವುದು ಒಂದೇ ಸದನ ಅಲ್ಲಿ ಅವರು ಭಾಷಾ ಬಳಕೆಯ ಬಗ್ಗೆ ಸರ್ವಾನುಮತದಿಂದ ಅಂಗೀಕಾರವನ್ನು ಪಡೆದಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಕೂಡ ಕೆಳಮನೆ ಮತ್ತು ಮೇಲ್ಮನೆಯಲ್ಲಿಯೂ ಕೂಡ ನಿರ್ಣಯಕ್ಕೆ ಅಂಗೀಕಾರ ನೀಡಿ, ಸರ್ಕಾರದಿಂದಲೂ ಸಹ ಪ್ರಯತ್ನಗಳು ಆಗಬೇಕಾಗುತ್ತದೆ. ಹಾಗಾಗಿ ನಾನು ಮಂಡಿಸಿರತಕ್ಕ ಈ ಮಸೂದೆಯನ್ನು ಸದನ ಸರ್ವಾನುಮತದಿಂದ ಅಂಗೀಕಾರ ನೀಡಬೇಕೆಂದು ತಮ್ಮ ಮೂಲಕ ಈ ಸದನವನ್ನು ವಿನಂತಿಸಿಕೊಳ್ಳುತ್ತಾ, ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಸಿದ್ದರಾಮಣ್ಣನವರು ಒಂದು ಅದ್ಭುತವಾದ ವಿಚಾರಸರಣಿಯನ್ನು ಮಂಡನೆ ಮಾಡಿದ್ದಾರೆ. ನಮ್ಮ ರಾಜ್ಯದ 6 ಕೋಟಿ ಜನರೂ ಕೂಡ ಒಪ್ಪುವ ಒಂದು ವಾದದ ಸರಣಿಯನ್ನು ಮಾನ್ಯ ಸದಸ್ಯರು ಮಂಡಿಸಿದ್ದಾರೆ. ಅವರು ಸಂವಿಧಾನದ ಬೇರೆ ಬೇರೆ ಭಾಗಗಳನ್ನು ಓದಿ ಸದನದಲ್ಲಿ ಹೇಳಿದ್ದಾರೆ. ಇವತ್ತು ಕರ್ನಾಟಕದಲ್ಲಿ ನಮ್ಮ ಕನ್ನಡ ಭಾಷೆ ಅಳಿಸಿ ಹೋಗುತ್ತಿರುವ ಸಂದರ್ಭದಲ್ಲಿ, ಕರ್ನಾಟಕದಲ್ಲಿಯೇ ಕನ್ನಡದ ಮೇಲೆ ಸಾಕಷ್ಟು ಬೇರೆ ಭಾಷೆಗಳಿಂದ ಸವಾರಿಗಳು ನಡೆಯುತ್ತಿರುವಂತಹ ಸಂದರ್ಭದಲ್ಲಿ, ಇದೇ ರೀತಿಯ ಅನೇಕ ದಾವೆಗಳು High Courtಗಳಲ್ಲಿ ಬಾಕಿಯಿರುವಂತಹ ಸಂದರ್ಭಗಳಲ್ಲಿ ಈ ಕನ್ನಡ ಭಾಷೆಯ ಬಳಕೆಯನ್ನು High Courtನಲ್ಲಿ ಬಳಕೆ ಮಾಡುವುದರ ಮುಖಾಂತರ ಕನ್ನಡ ಭಾಷೆಗೆ ಒಂದು ಹೊಸ ಅಧ್ಯಾಯಕ್ಕೆ ನಾಂದಿ ಆದಂತೆ ಆಗುತ್ತದೆ. ಸಿದ್ದರಾಮಣ್ಣನವರ ವಾದದ ಸರಣಿಗಳು ಮತ್ತು ಅವರು ಹಂತ ಹಂತವಾಗಿ ವಾದ ಮಾಡಿದ್ದು, ಬಹಳ ಅದ್ಭುತ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಅವರನ್ನು

ಅಭಿನಂದಿಸುತ್ತೇನೆ. ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರ ಇದನ್ನು ಪೂರ್ತಿ ಪ್ರಮಾಣದಲ್ಲಿ ಇದನ್ನು ಅಂಗೀಕಾರ ಮಾಡಬೇಕು, ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಇದನ್ನು ಕೆಳಗಿನ ಮನೆಯಲ್ಲಿಯೂ ಸಹ ಆಡಳಿತ ಪಕ್ಷದಿಂದಲೇ resolution ಮಂಡಿಸಿ ಸದನದ ಒಪ್ಪಿಗೆಯನ್ನು ಪಡೆಯಬೇಕು, ನಂತರ ಇದನ್ನು ರಾಜ್ಯಪಾಲರ ಮುಖಾಂತರ ಕೇಂದ್ರಕ್ಕೆ ಕಳುಹಿಸಿಕೊಡಬೇಕು. ಈಗ ದಕ್ಷಿಣ ಭಾಗದಲ್ಲಿರುವ ಹಿಂದಿ ಬಳಸದ ರಾಜ್ಯಗಳು, ತಮಿಳುನಾಡು ಈಗಾಗಲೇ ಈ ಬಗ್ಗೆ ಮನವಿಯನ್ನು ಸಲ್ಲಿಸಿದೆ, ಇವರ ಜೊತೆಯಲ್ಲಿ ನಾವು ಕೂಡ ಹೋರಾಟವನ್ನು ಮಾಡಬೇಕು. ಈಗಾಗಲೇ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡುವ ಬಗ್ಗೆ ತಮಿಳುನಾಡಿನ High Court ನಲ್ಲಿ ಒಂದು case pending ನಲ್ಲಿದೆ. ಇಂತಹ ಸಂದರ್ಭದಲ್ಲಿ ನಾವು ನಮ್ಮ ನಮ್ಮಲ್ಲಿ ವ್ಯತ್ಯಾಸ ಬರದ ರೀತಿಯಲ್ಲಿ 1963ರ Act ನ ಆಧಾರದಲ್ಲಿ ಕನ್ನಡ ಭಾಷೆಯನ್ನು ರಾಜ್ಯದ High Court ನಲ್ಲಿ ಬಳಸುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ನಿರ್ಣಯದಿಂದ ಅದ್ಭುತವಾದ ಪರಿಣಾಮ ಇಡೀ ರಾಜ್ಯದ ಮೇಲೆ ಬೀಳುತ್ತದೆ. ಅದಕ್ಕಾಗಿ ತಮ್ಮ ಮೂಲಕ ಸಿದ್ದರಾಮಣ್ಣನವರಿಗೆ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ಇದು ಸ್ವರ್ಣಾಕ್ಷರದಲ್ಲಿ ಬರೆದಿರಬೇಕಾದ ನಿರ್ಧಾರ. ನಾನು ವಿಶೇಷವಾಗಿ ಈ ನಿರ್ಣಯವನ್ನು ಕರ್ನಾಟಕ ರಾಜ್ಯದ “ಸ್ವರ್ಣ ನಿರ್ಣಯ” ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಕಾನೂನಿನ ಎಲ್ಲಾ ಪದರಗಳನ್ನು ಬಿಡಿಸಿ ಯಾವ ರೀತಿಯಲ್ಲೂ ತೊಂದರೆ ಆಗದ ರೀತಿಯಲ್ಲಿ ಸಂಪೂರ್ಣವಾಗಿ ವಿಶದವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಇದನ್ನು ರಾಜ್ಯಸರ್ಕಾರವೂ ಬಹಳ ಇದನ್ನು 1956 ನವೆಂಬರ್ 1ರಲ್ಲಿಯೇ ಮುಂಚಿತವಾಗಿಯೇ ಮಾಡಬೇಕಾಗಿತ್ತು. ಆದರೂ ಯಾವುದೋ ಕಾರಣಕ್ಕೆ ತಡವಾಗಿದೆ. Better late than never; ತಡ ಆದರೂ ಚಿಂತೆ ಇಲ್ಲ. ಈಗಲಾದರೂ ಸಹ ಸರ್ಕಾರ ಕಣ್ಣು ತೆಗೆದು ಮುಂದಿನ ಅಧಿವೇಶನದಲ್ಲಿ ಸರ್ಕಾರವೇ ಈ ಮಸೂದೆಯನ್ನು ಮಂಡನೆ ಮಾಡಿದಲ್ಲಿ ಸರ್ಕಾರಕ್ಕೂ ಕೂಡ ಒಳ್ಳೆಯ ಹೆಸರು ಬರುತ್ತದೆ. ಕರ್ನಾಟಕದ ಆರೂಕಾಲು

ಕೋಟಿ ಜನರಿಗೂ ಸಹ ಇದರಿಂದ ಸಂತೋಷ ಆಗುತ್ತದೆ. ಇದರಲ್ಲಿ ಆಗುವ ತೊಂದರೆಗಳ ಬಗ್ಗೆಯೂ ಮಾನ್ಯ ಸದಸ್ಯರು ವಿಶದವಾಗಿ ಹೇಳಿದ್ದಾರೆ. ಮತ್ತೆ ಹೇಳುವ ಅವಶ್ಯಕತೆ ಇಲ್ಲ. ಕನ್ನಡ ನೆಲ, ಭಾಷೆ ಮತ್ತು ಜಲ ಈ ಮೂರನ್ನು ಉಳಿಸುವ ಕೆಲಸ ಮಾಡುತ್ತಾರೆ ಎಂಬ ನಂಬಿಕೆ ನನಗಿದೆ. ಮತ್ತೊಮ್ಮೆ ನಾನು ಮಾನ್ಯ ಸದಸ್ಯರಿಗೆ ಅಭಿನಂದಿಸುತ್ತಾ, ಮಾನ್ಯ ಸಭಾಪತಿಯವರಿಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ಸರ್ಕಾರ ಇದನ್ನು ಸ್ವಾಗತ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರು);–** ಮಾನ್ಯ ಸಭಾಪತಿಯವರೇ, ಶ್ರೀ ಸಿದ್ದರಾಮಣ್ಣನವರು ಅತ್ಯಂತ ಮಹತ್ವದ ನಿರ್ಣಯವನ್ನು ತಂದಿದ್ದು, ಅವರು ಈಗಾಗಲೇ ಉಲ್ಲೇಖ ಮಾಡಿದಂತೆ ಒಂದು ಸಮಾರಂಭದಲ್ಲಿ ನಾನೂ ಹಾಗೂ ನ್ಯಾಯಾಧೀಶರಾದ ಕುಮಾರ್‌ರವರು ಇದ್ದಾಗ ಇದರ ಬಗ್ಗೆ ಸಾಕಷ್ಟು ವ್ಯಾಖ್ಯಾನ ಹಾಗೂ ಚರ್ಚೆ ಆಯಿತು. ಇದಲ್ಲದೇ ಬೇರೆ ಬೇರೆ ರಾಜ್ಯಗಳಲ್ಲಿ ಏನೇನು ಆಗಿದೆ ಎಂಬ ಬಗ್ಗೆ ಸಮರ್ಪಕವಾಗಿ ಪ್ರತಿಪಾದನೆ ಮಾಡಿ, ರಾಜ್ಯದ ಭಾಷೆಯ ಉಳಿವಿಗೋಸ್ಕರ ಹಾಗೂ ಅದರ ಸಾರ್ವಭೌಮತೆಯನ್ನು ಎತ್ತಿಹಿಡಿಯುವುದಕ್ಕೋಸ್ಕರ ಸರ್ಕಾರದ ಮನಸ್ಸನ್ನು ಒಲಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ. ಬಹುಶಃ ಈ ವಿಚಾರದಲ್ಲಿ ಸರ್ಕಾರವು ತೆರೆದ ಮನಸ್ಸಿನಿಂದಲೇ ಇರುತ್ತದೆ. ಭಾಷೆಯ ವಿಚಾರದಲ್ಲಿ ಒಂದು ಕ್ಲೇಶ, ಒಂದು ಲವಲೇಶವೂ ಇಲ್ಲದ ರೀತಿಯಲ್ಲಿ ತೆರೆದ ಮನಸ್ಸಿನಿಂದ ಇದ್ದು, ಮುಂದಿನ ಸಂದರ್ಭದಲ್ಲಿ ಸರ್ಕಾರದ ಪ್ರಮುಖ ನಿರ್ಧಾರ ಏನು ಎಂಬುದುನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಡಿ.ವಿ.ಸದಾನಂದಗೌಡ:–**ಈ ಸದನದಲ್ಲಿ ಅನುಮೋದನೆ ಮಾಡುವ ಕೆಲಸ ಕಾರ್ಯಗಳನ್ನು ಮಾಡೋಣ. ಅವರ ಕಡೆಯಿಂದಲೂ ಎಲ್ಲಾ ಸಹಕಾರ ಇದೆ. ಕೆಳಗಿನ ಸದನದಲ್ಲಿ ಮುಂದಿನ ಅಧಿವೇಶನದಲ್ಲಿ ಮಾಡೋಣ.

**ಶ್ರೀ ಟಿ.ಬಿ.ಜಯಚಂದ್ರ:–** ಇಷ್ಟು ತರಾತುರಿ ಏಕೆ?

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಚಿವರಿಗೆ ಕನ್ನಡದ ಬಗ್ಗೆ ಗೌರವ ಇದ್ದು, 1963ರ ಕಾಯಿದೆ ಮತ್ತು ಸಂವಿಧಾನದ ಎಲ್ಲಾ ಪರಿಚ್ಛೇದಗಳ ಪ್ರಕಾರ ಇಷ್ಟು ಸೂಕ್ಷ್ಮವಾಗಿ ಮಾಡಿದ ನಂತರ ಮುಂದುವರೆಸುವ ಅವಶ್ಯಕತೆ ಏನುಂಟು?

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಿದ್ದರಾಮಯ್ಯನವರು...

**ಶ್ರೀ ಡಿ.ವಿ.ಸದಾನಂದಗೌಡ:–** ಶ್ರೀ ಸಿದ್ದರಾಮಣ್ಣನವರಿಗೆ ಅಭಿನಂದನೆ ಆಯಿತು, ಇದನ್ನು ಇಡೀ ರಾಜ್ಯದಲ್ಲಿ ಮಾಡಿದರೆ ಮಾನ್ಯ ಸಿದ್ದರಾಮಯ್ಯನವರಿಗೂ ಅಭಿನಂದನೆ ಆಗುತ್ತದೆ.

**ಶ್ರೀ ಟಿ.ಬಿ.ಜಯಚಂದ್ರ:–** ಆ ಸಿದ್ದರಾಮಣ್ಣನವರು ಸದನದಲ್ಲಿ ಇದ್ದಾರೆ, ನಮ್ಮ ಮಾನ್ಯ ಸಿದ್ದರಾಮಯ್ಯನವರು ದೆಹಲಿಗೆ ಹೋಗಿದ್ದಾರೆ. ಇದೊಂದು ಸರ್ಕಾರ, ಇದೊಂದು ಪ್ರಮುಖವಾದ ನಿರ್ಧಾರವನ್ನು ಮಾಡಬೇಕಾಗುತ್ತದೆ. ಈ ನಿರ್ಣಯಕ್ಕೆ ಒಪ್ಪಿಗೆಯನ್ನು ಕೊಡುವಾಗ ಸರ್ಕಾರದ ನಿರ್ಧಾರವೂ ಪ್ರಮುಖವಾಗುತ್ತದೆ. ಹಾಗಾಗಿ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ನಾನು ಈಗಾಗಲೇ ನಾವು ತೆರೆದ ಮನಸ್ಸಿನಲ್ಲಿದ್ದೇವೆ ಎಂದು ಹೇಳಿದ್ದೇನೆ. ಈ ಹಿನ್ನೆಲೆಯಲ್ಲಿ ದಯಮಾಡಿ ಅರ್ಥಮಾಡಿಕೊಳ್ಳಬೇಕು. ಈ ಸಂದರ್ಭದಲ್ಲಿಯೇ ಆಗಬೇಕೆಂದರೆ ಹೇಗೆ?

**ಶ್ರೀ ಡಿ.ವಿ.ಸದಾನಂದಗೌಡ:–** ಇದು ಸರ್ಕಾರದ ನಿರ್ಣಯ ಅಲ್ಲ, ಇದು ಸದನದ ನಿರ್ಣಯ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಸದನದಲ್ಲಿ ತಂದಿದ್ದಾರೆ. ಸರ್ಕಾರದ ನಿರ್ಣಯ ಆದರೆ ಅವರು ಯಾರನ್ನು ಬೇಕಾದರೆ ಕೇಳಿಕೊಳ್ಳಲಿ. ಅವರ ಆಡಳಿತ ಪಕ್ಷದವರನ್ನು ಕೇಳಿಕೊಳ್ಳಲಿ.

**ಶ್ರೀ ಟಿ.ಬಿ.ಜಯಚಂದ್ರ:–** ಹಾಗಾದರೆ ಸರ್ಕಾರದ ಸಹಮತ ಬೇಕಾಗಿಲ್ಲವೇ?

**ಶ್ರೀ ಡಿ.ವಿ.ಸದಾನಂದಗೌಡ:-** ಸದನದಲ್ಲಿ ನಿರ್ಣಯ ಮಾಡಿ ಸರ್ಕಾರ ತೆಗೆದುಕೊಳ್ಳಲಿ.

**ಶ್ರೀ ಟಿ.ಬಿ.ಜಯಚಂದ್ರ:-** ಸದನದ ನಿರ್ಣಯಗಳು ಅನುಷ್ಠಾನವಾಗಬೇಕಾದರೆ ಸರ್ಕಾರದ ಸಹಮತ ಬೇಕಾಗುತ್ತದೆ. ಸರ್ಕಾರದ ಸಹಮತ ಇಲ್ಲದೇ ಬರೀ ನಿರ್ಣಯ ಮಾಡಿ ಎನ್ನುವುದು ಎಷ್ಟು ಸಾಧುವಾಗುತ್ತದೆ? ಅವರು ದಯಮಾಡಿ ಯೋಚನೆ ಮಾಡಬೇಕು.

**ಸಭಾಪತಿಯವರು:-** ಮಾನ್ಯ ಸಚಿವರೇ, ಇದೊಂದು ಖಾಸಗಿ ನಿರ್ಣಯವಾಗಿದ್ದು, ಇದಕ್ಕೆ ತಮ್ಮ ಸಹಮತಿ ಇರುವುದರಿಂದ, ಇದನ್ನು ತಾವೇ ಅಧಿಕೃತವಾಗಿ ಇನ್ನಷ್ಟು ವಿಸ್ತಾರವಾಗಿ ಮಂಡಿಸುತ್ತೇವೆ ಎನ್ನುವುದಾದರೆ ಮುಂದೂಡಲು ಸುಲಭವಾಗುತ್ತದೆ. ನಿಮ್ಮ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರ ಸಲಹೆಯನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ ಇದರ ಬಗ್ಗೆ ಚರ್ಚೆ ಕೂಡ ಆಗಿದೆ. ಅದನ್ನು ಹೇಗೆ ಮತ್ತು ಯಾವಾಗ ಮಾಡಬೇಕೆಂಬ ಬಗ್ಗೆ ಮತ್ತೊಮ್ಮೆ ಸಚಿವ ಸಂಪುಟದಲ್ಲಿ ವಿಚಾರಗಳು ಪ್ರಸ್ತಾಪವಾಗಬೇಕಾಗುತ್ತದೆ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿದ್ದವರು, ಪ್ರಮುಖ ನಿರ್ಧಾರಗಳಾಗಬೇಕಾದರೆ ಚರ್ಚೆಗಳಾಗಬೇಕು. ನಿರ್ಣಯಕ್ಕೆ ಸಹಮತಿ ವ್ಯಕ್ತಮಾಡಲು ಚರ್ಚೆಗಳಾಗಿ ಅನುಷ್ಠಾನವಾಗಬೇಕು. ಮಾನ್ಯ ಸಿದ್ದರಾಮಣ್ಣನವರು ಹಿಂದಿ ರಾಜ್ಯಗಳಿಗೆ ಮಾತ್ರ ಅವಕಾಶ ಕೊಟ್ಟಿದ್ದು, ಹಿಂದಿಯೇತರ ರಾಜ್ಯಗಳಿಗೆ ಅಂದರೆ ತಮಿಳುನಾಡು, ಅಥವಾ ಪಶ್ಚಿಮ ಬಂಗಾಳ ಆಗಿರಬಹುದು, ಈ ಭಾಗದಲ್ಲಿಯೂ ಕೊಟ್ಟಿಲ್ಲ ಎಂದಾಗ ಅದರ ಬಗ್ಗೆ ಪ್ರಮುಖವಾಗಿ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ, ದಯಮಾಡಿ ಅರ್ಥಮಾಡಿಕೊಳ್ಳಬೇಕು. ಅವರ ಭಾವನೆ ಮತ್ತು ಕಾತುರತೆ ನಮಗೂ ಅರ್ಥವಾಗುತ್ತದೆ. ನಮಗೂ ಅವರಷ್ಟೇ ಕಾತುರತೆ ಇದೆ. ಆದರೆ ಅದು ಸಮರ್ಪಕವಾಗಿ ಆಗಬೇಕೆಂದರೆ ಸರ್ಕಾರದಿಂದ ನಿರ್ಧಾರವಾಗಬೇಕು. ಅದಕ್ಕೆ ಹೋರಾಟ ಮಾಡುವ ಮಟ್ಟಕ್ಕೆ ಇರಬೇಕಾಗುತ್ತದೆ. ಇದನ್ನು achive ಮಾಡುವ

ರೀತಿ ಹೋಗಬೇಕಾಗುತ್ತದೆ. ಆದ್ದರಿಂದ ಮುಂದಿನ ಸದನ ಅಂದರೆ ಮತ್ತೆ ನಾವು ಜನವರಿಗೆ ಸೇರುತ್ತೇವೆ. ಆಗ ನಾನು ನಿರ್ಧಾರವನ್ನು ಪ್ರಕಟ ಮಾಡುತ್ತೇನೆ.

**ಸಭಾಪತಿಯವರು:–** ಸರ್ಕಾರವು ಈ ನಿರ್ಣಯದ ಬಗ್ಗೆ ಅಭಿಪ್ರಾಯವನ್ನು ತಿಳಿಸುವ ಬಗ್ಗೆ ಹೇಳಿರುವುದರಿಂದ ಹಾಗೂ ಮಾನ್ಯ ಸಿದ್ದರಾಮಣ್ಣನವರು ಪೂರ್ತಿ ವಾದವನ್ನು ಮಂಡಿಸಿದ್ದರೂ, ನಿರ್ಣಯವನ್ನು ಇಲ್ಲಿಗೆ ನಿಲ್ಲಿಸಿ, ಸರ್ಕಾರವು ನಿರ್ಣಯವನ್ನು ಮಂಡಿಸಿದ ಮೇಲೆ ಮುಂದಿನ ನಿರ್ಣಯವನ್ನು ಮಾಡೋಣ. ಈಗ ನಾನು ಒಂದು ವಿಷಯವನ್ನು ತಮ್ಮ ಎದುರು ಪ್ರಸ್ತಾಪ ಮಾಡುತ್ತೇನೆ.

## 6. ಸಾರಾಂಶ

**ಸಭಾಪತಿಯವರು :**

ವಿಧಾನ ಪರಿಷತ್ತಿನ 123ನೇ ಉಪವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುವ ಪೂರ್ವದಲ್ಲಿ ಸದರಿ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನದ ಉಪವೇಶನವು ಒಟ್ಟು 10 ದಿನಗಳು ನಡೆದಿರುತ್ತದೆ.

ದಿನಾಂಕ: 25.11.2013 ರಂದು ಬೆಳಿಗ್ಗೆ : 11.15 ಗಂಟೆಗೆ ಬೆಳಗಾವಿಯ ಸುವರ್ಣ ವಿಧಾನ ಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸದನದ ಕಾರ್ಯಕಲಾಪವು ಪ್ರಾರಂಭಗೊಂಡಿತು.

ಕಳೆದ ಅಧಿವೇಶನದಿಂದೀಚೆಗೆ ರಾಜ್ಯಪಾಲರಿಂದ/ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಪಟ್ಟಿಗಳನ್ನು ಮಂಡಿಸಲಾಯಿತು.

ಅರ್ಜಿಗಳ ಸಮಿತಿಯ ಹನ್ನೊಂದು ಅರ್ಜಿಯನ್ನು ಸದನಕ್ಕೆ ಒಪ್ಪಿಸಲಾಯಿತು.

ಹಕ್ಕುಬಾಧ್ಯತಾ ಸಮಿತಿಯ 73ನೇ ಮತ್ತು 74ನೇ ವರದಿಗಳನ್ನು, ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 26ನೇ ವರದಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮಧ್ಯಂತರ ವರದಿ, 2013-14ನೇ ಸಾಲಿನ ಸಾರ್ವಜನಿಕ ಉದ್ಯಮಗಳ ಸಮಿತಿಯ ಮೊದಲನೇ ವರದಿ, 2013-14ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.

ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ 2012-13ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸು ಲೆಕ್ಕಗಳನ್ನು (ಭಾಗ–1 ಮತ್ತು 2) ಹಾಗೂ ಭಾರತ ಸಂವಿಧಾನದ 205(1(ಎ)ನೆಯ ಅನುಚ್ಛೇದದ ಮೇರೆಗೆ 2013-14ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಹಾಗೂ 2013-14ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯಮಾವಧಿ ಪರಿಶೀಲನಾ ವರದಿಯನ್ನು ಮಂಡಿಸಲಾಯಿತು.

ಭಾರತ ರತ್ನ ಪ್ರಶಸ್ತಿಗೆ ಭಾಜನರಾದ ಡಾ: ಸಿ.ಎನ್.ಆರ್. ರಾವ್ ಹಾಗೂ ಡಾ: ಸಚಿನ್ ರಮೇಶ್ ತೆಂಡೂಲ್ಕರ್ ಅವರುಗಳಿಗೆ ಸದನವು ಹೃತ್ಪೂರ್ವಕವಾದ ಅಭಿನಂದನೆಯನ್ನು ಸಲ್ಲಿಸಲಾಗಿರುತ್ತದೆ.

**ಈ ಕೆಳಕಂಡ ವಿಶೇಷ ಜಂಟಿ ಸದನ ಸಮಿತಿಗಳ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪವನ್ನು ಅಂಗೀಕರಿಸಲಾಯಿತು.**

**ಅ)** "ಹೊರ ರಾಜ್ಯದ ಹಾಗೂ ರಾಜ್ಯದ ಗಡಿ ಭಾಗಗಳಲ್ಲಿ ನೆಲೆಸಿರುವ ಕನ್ನಡಿಗರ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳ ಕುರಿತು" ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಜಂಟಿ ಸದನ ಸಮಿತಿಯು ತನ್ನ

ವರದಿಯನ್ನು ಸದನಕ್ಕೆ ಸಲ್ಲಿಸಲು ದಿನಾಂಕ: 30.06.2014ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಯಿತು.

ಆ) “ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ವಿವಿಧ ರೈಲ್ವೆ ಯೋಜನೆಗಳನ್ನು ಕಾಲಬದ್ಧವಾಗಿ ಪೂರ್ಣಗೊಳಿಸುವ ಬಗ್ಗೆ” ಪರಿಶೀಲಿಸಿ ರಚಿಸಲಾದ ವಿಶೇಷ ಜಂಟಿ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು 30.06.2014ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಯಿತು.

2013-15ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳನ್ನು ಚುನಾಯಿಸುವ ಬಗ್ಗೆ ಪ್ರಸ್ತಾವನೆಯನ್ನು ಮಂಡಿಸಿ ದಾಮಾಷಾ ಪ್ರಾತಿನಿಧ್ಯದ ಮೇರೆಗೆ ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಪ್ರಸ್ತಾವನೆಗೆ ಸದನವು ಅನುಮತಿ ನೀಡಿರುತ್ತದೆ.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಿ.ಜೆ. ಪುಟ್ಟಸ್ವಾಮಿಯವರು ದಿನಾಂಕ:27.11.2013ರಂದು ಸದನದಲ್ಲಿ ಮಂಡಿಸಿದ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಪರಿಶೀಲನೆಗಾಗಿ ಹಕ್ಕುಬಾಧ್ಯತೆಗಳ ಸಮಿತಿಗೆ ವಹಿಸಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 1150 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಿದ್ದು, 125 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 18 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು. ಒಟ್ಟು 926 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪೈಕಿ 823 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 156 ಸೂಚನೆಗಳನ್ನು ಸ್ವೀಕರಿಸಿ ಆ ಪೈಕಿ 11 ಸೂಚನೆಗಳನ್ನು, ನಿಯಮ 330 ರಡಿಯಲ್ಲಿ 102 ಸೂಚನೆಗಳನ್ನು ಸ್ವೀಕರಿಸಿ ಆ ಪೈಕಿ 01 ಸೂಚನೆಗಳನ್ನು, ಹಾಗೂ ನಿಯಮ 58ರಡಿಯಲ್ಲಿ (ಅರ್ಧಗಂಟೆ ಕಾಲಾವಧಿ ಚರ್ಚೆ) 05 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಯಾವುದೇ ಸೂಚನೆಗಳು ಚರ್ಚೆಗೆ ಬಂದಿರುವುದಿಲ್ಲ. ಶೂನ್ಯ ವೇಳೆಯ 32 ಸೂಚನೆಗಳನ್ನು

ಸ್ವೀಕರಿಸಿಲಾಗಿದ್ದು, 11 ಸೂಚನೆಗಳಿಗೆ ಉತ್ತರಿಸಲಾಯಿತು. ನಿಯಮ 59ರಡಿಯಲ್ಲಿ 4 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 02 ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ. ನಿಯಮ 68ರಡಿಯಲ್ಲಿ 2 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಯಾವುದೇ ಸೂಚನೆಗಳನ್ನು ಚರ್ಚೆಗೆ ತೆಗೆದುಕೊಂಡಿರುವುದಿಲ್ಲ.

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 13 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ.

ಮಾನ್ಯ ಮುಖ್ಯ ಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರಿ ಮುಖ್ಯ ಸಚೇತರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ ಹಾಗೂ ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮಗಳ ವರದಿಗಾರರಿಗೆ ಮತ್ತು ಸಚಿವಾಲಯದ ಅಧಿಕಾರಿ ನೌಕರ ವರ್ಗದವರಿಗೆ ಹಾಗೂ ಬೆಳಗಾವಿ ಜಿಲ್ಲಾಡಳಿತ ಸಿಬ್ಬಂದಿ ವರ್ಗದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಹತ್ತು ದಿನಗಳ ಕಾಲ ಈ ಅಧಿವೇಶನವನ್ನು ಅತ್ಯುತ್ತಮ ರೀತಿಯಿಂದ ಈ ಸದನದ ಘನತೆ ಮತ್ತು ಗೌರವ ಹೆಚ್ಚುವಂತೆ ಮತ್ತು ಇಲ್ಲಿ ನಡೆದ ಕಾರ್ಯಕಲಾಪಗಳಿಗೆ ಹೆಚ್ಚು ಗಾಂಭೀರ್ಯ ಬರುವಂತೆ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಕಳೆದ ಹತ್ತು ದಿನಗಳ ಕಾಲ ಈ ಅಧಿವೇಶನವನ್ನು ಅತ್ಯುತ್ತಮ ರೀತಿಯಿಂದ ತಾವು ನಡೆಸಿಕೊಟ್ಟಿದ್ದೀರಿ. ಈ ನಿಟ್ಟಿನಲ್ಲಿ ತಮ್ಮ ತಾಳ್ಮೆ ಮತ್ತು ಸಹನೆಯನ್ನು ಮೆಚ್ಚಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ನಮಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನವನ್ನು ಮಾಡಿ, ಅತ್ಯುತ್ತಮ ರೀತಿಯಿಂದ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ

ನಮ್ಮೆಲ್ಲರಿಗೂ ಸಹಾಯ ಮತ್ತು ಸಹಕಾರವನ್ನು ನೀಡಿದ್ದಿರಿ. ತಾವು ಕುಳಿತಿರುವ ಸ್ಥಾನಕ್ಕಿಂತ ಬಹಳ ಎತ್ತರದಲ್ಲಿದ್ದೀರಿ. ಆ ಸ್ಥಾನದಿಂದ ನಿಮಗೆ ಗೌರವ ಬರುವುದಕ್ಕೆ ಬದಲಾಗಿ, ತಮ್ಮ ವ್ಯಕ್ತಿತ್ವದಿಂದ ಆ ಸ್ಥಾನಕ್ಕೆ ಗೌರವ ಬರುವ ರೀತಿಯಲ್ಲಿ ಉತ್ತಮ ರೀತಿಯಲ್ಲಿ ಸದನವನ್ನು ನಡೆಸಿಕೊಂಡು ಹೋಗಿದ್ದೀರಿ. ಈ ರೀತಿಯಾಗಿರುವಂತಹ ವರ್ಚಸ್ಸು ಎಲ್ಲಾ ಜನಪ್ರತಿನಿಧಿಗಳಿಗೂ ಇರಬೇಕೆನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಸದನವನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಆಡಳಿತ ಪಕ್ಷದವರಿಗೆ ಮತ್ತು ವಿರೋಧ ಪಕ್ಷದವರಿಗೆ ಮಾರ್ಗದರ್ಶನವನ್ನು ನೀಡಿದ್ದೀರಿ, ಅದಕ್ಕಾಗಿ ಸರ್ಕಾರದ ಪರವಾಗಿ ಮತ್ತು ಈ ಸದನದ ಪರವಾಗಿ ತಮಗೆ ತುಂಬು ಹೃದಯದ ಅಭಿನಂದನೆಗಳನ್ನು ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಮಾನ್ಯ ಉಪ ಸಭಾಪತಿಗಳಿಗೂ ಸಹ ಧನ್ಯವಾದಗಳನ್ನು ಮತ್ತು ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ವಿ.ಸದಾನಂದಗೌಡರಿಗೂ, ಉಪ ನಾಯಕರಾಗಿರುವಂತಹ ಮಾನ್ಯ ಕೆ.ಬಿ.ಶಾಣಪ್ಪನವರಿಗೂ ಹಾಗೂ ಅವರ ತಂಡದ ಎಲ್ಲ ಸದಸ್ಯರಿಗೂ ನಾನು ತುಂಬು ಹೃದಯದ ಕೃತಜ್ಞತೆಯನ್ನು ಅರ್ಪಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರ ಬಗ್ಗೆ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅವರು ವಿಚಾರಗಳನ್ನು ಹೆಚ್ಚು ಲಂಭಿಸುವುದಕ್ಕೆ ಹೋಗುವುದಿಲ್ಲ. ಮುಖ್ಯವಾದ ಮತ್ತು ಮಹತ್ವವಾಗಿರುವಂತಹ ಅಂಶಗಳ ಬಗ್ಗೆ ಅರ್ಥಪೂರ್ಣವಾಗಿ ಚರ್ಚೆ ಮಾಡುತ್ತಾರೆ. ಯಾರು ಏನೇ ಹೇಳಿದರೂ ಅವರು ತಮ್ಮ ತತ್ವ ಸಿದ್ಧಾಂತಗಳೊಂದಿಗೆ ರಾಜಿ ಮಾಡಿಕೊಳ್ಳದೇ ಪ್ರತಿಪಕ್ಷದ ನಾಯಕರಾಗಿ ಉತ್ತಮ ರೀತಿಯಿಂದ ಕಾರ್ಯನಿರ್ವಹಿಸಿದ್ದಾರೆ. ಅವರ ಸಹ ಸದಸ್ಯರು ಕೂಡ ಅವರಿಗೆ ಸಹಕಾರವನ್ನು ನೀಡಿದ್ದಾರೆ. ಮಾನ್ಯ ಮಧುಸೂದನ್‌ರವರು ಈ ಬಾರಿ ಅಧಿವೇಶನದಲ್ಲಿ ಸಹನೆಯಿಂದ ಭಾಗವಹಿಸಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ನಾಣಯ್ಯನವರು ಜೆ.ಡಿ.(ಎಸ್) ಪಕ್ಷದ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರಿಗೆ, ಉಪ ನಾಯಕರಾದ ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಮತ್ತು ಅವರ ತಂಡದ ಎಲ್ಲ ಸದಸ್ಯರಿಗೂ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ನಾಣಯ್ಯನವರು ಅತ್ಯುತ್ತಮವಾಗಿರುವಂತಹ ಸಂಸದೀಯಪಟುವಾಗಿ ಅತ್ಯುತ್ತಮ ರೀತಿಯಲ್ಲಿ ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಹಕರಿಸಿದ್ದಾರೆ. ಜೆ.ಡಿ.(ಎಸ್) ಪಕ್ಷದ ಎಲ್ಲ ಸದಸ್ಯರು ಅನೇಕ ವಿಚಾರಗಳ ಮೇಲೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಸಾಮಾಜಿಕ ನ್ಯಾಯವನ್ನೇ ತಮ್ಮ ಉಸಿರಾಗಿಸಿಕೊಂಡಿರುವ, ಧ್ವನಿ ಇಲ್ಲದವರಿಗೆ ಧ್ವನಿ ಕೊಡುವಂತಹ ಮತ್ತು ಅವಕಾಶದಿಂದ ವಂಚಿತ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಪಣ ತೊಟ್ಟಿರುವಂತಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿದ್ದರಾಮಯ್ಯನವರಿಗೂ ಹಾಗೂ ಅತ್ಯಂತ ಹಿರಿಯ ಮತ್ತು ಕಿರಿಯ ಸಚಿವರಿಗೆ ಅದರಲ್ಲೂ ವಿಶೇಷವಾಗಿ ನಮ್ಮ ಸಂಸದೀಯ ವ್ಯವಹಾರಗಳ ಸಚಿವರಾಗಿರುವಂತಹ ಮಾನ್ಯ ಟಿ.ಬಿ.ಜಯಚಂದ್ರರವರಿಗೂ ನಾನು ಹೃತ್ಪೂರ್ವಕವಾಗಿರುವಂತಹ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಯಾವ ಸಂದರ್ಭದಲ್ಲಿ ಕರೆದರು ಸಹ ತಕ್ಷಣ ಬಂದು ಈ ಸದನದ ಕಲಾಪದಲ್ಲಿ ತಕ್ಷಣ ಭಾಗವಹಿಸಿ ಬಿಕ್ಕಟ್ಟು ಉಂಟಾದಂತಹ ಸಂದರ್ಭದಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಚರ್ಚೆ ಮಾಡಿ ಈ ಸದನ ಸುಗಮವಾಗಿ ನಡೆಯುವುದಕ್ಕೆ ಸಹಾಯ ಮಾಡಿರುವಂತಹ ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಹಾಗೆಯೇ ಆಡಳಿತ ಪಕ್ಷದ ಎಲ್ಲ ಸದಸ್ಯರು ಅತ್ಯುತ್ತಮ ರೀತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಅನೇಕ ವಿಷಯಗಳ ಮೇಲೆ ಬಹಳಷ್ಟು ಪ್ರಖರವಾಗಿರುವಂತಹ ವಿಚಾರಗಳನ್ನು ವ್ಯಕ್ತಪಡಿಸಿ ಈ ಸದನ ಸುಗಮವಾಗಿ ನಡೆದುಕೊಂಡು ಹೋಗುವುದಕ್ಕೆ ಸಹಕರಿಸಿದಂತಹ ಎಲ್ಲ ಶಾಸಕ ಮಿತ್ರರಿಗೂ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿರುವಂತಹ ಶ್ರೀ ಆರ್.ವಿ.ವೆಂಕಟೇಶ್‌ರವರಿಗೂ ಹಾಗೂ ವಿರೋಧ ಪಕ್ಷದ ಸಚೇತಕರಾಗಿರುವಂತಹ ಡಾ: ಎ.ಹೆಚ್.ಶಿವಯೋಗಿಸ್ವಾಮಿಯವರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಇವರಿಬ್ಬರೂ ಎರಡೂ ಕಡೆಗಳಿಂದ ಸದನ ಸುಗಮವಾಗಿ ನಡೆಯವುದಕ್ಕೆ ಬಹಳಷ್ಟು ಸಹಕರಿಸಿದ್ದಾರೆ. ಸದನದಲ್ಲಿ ಮಂತ್ರಿಗಳ ಉಪಸ್ಥಿತಿ ಇಲ್ಲ ಎನ್ನುವಂತಹ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಸಚೇತಕರು ಮರು ಕ್ಷಣವೇ ಅವರನ್ನು ಕರೆದುಕೊಂಡು ಬಂದು ಸದನದಲ್ಲಿ ಹಾಜರುಪಡಿಸಿರುವಂತಹ ಪ್ರಸಂಗವನ್ನು ನಾವು ನೋಡಿದ್ದೇವೆ. ಈ ಹಿನ್ನೆಲೆಯಲ್ಲಿ ಇಬ್ಬರೂ ಮುಖ್ಯ ಸಚೇತಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಿದಂತಹ ಅಧಿಕಾರಿ ವರ್ಗದವರಿಗೂ ಸಹ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿವಿಧ ಮಾಧ್ಯಮ ಮಿತ್ರರು ಬಹಳಷ್ಟು ಪರಿಣಾಮಕಾರಿಯಾಗಿ ಅಂದರೆ, ಸದನ ರಾತ್ರಿ 10 ಗಂಟೆ ಅಥವಾ 11 ಗಂಟೆಯವರೆಗೆ ನಡೆದರೂ ಸಹ ಉಪಸ್ಥಿತರಿದ್ದು ಅದನ್ನು ಸಾಕ್ಷೀಕರಿಸುವಂತಹ ಕೆಲಸವನ್ನು ಮಾಡುತ್ತಿದ್ದರು. ಆದ್ದರಿಂದ ಈ ಅಧಿವೇಶನದಲ್ಲಿ ಭಾಗವಹಿಸಿದ ಎಲ್ಲ ಮಾಧ್ಯಮ ಮಿತ್ರರಿಗೂ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ಹಾಗೆಯೇ, ವಿಧಾನ ಪರಿಷತ್ತಿನ ಕಾರ್ಯದರ್ಶಿಗಳು ಮತ್ತು ಅಧಿಕಾರಿ ವರ್ಗ ಹಾಗೂ ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಬೆಳಗಾವಿಯಲ್ಲಿ ಹತ್ತು ದಿನಗಳ ಕಾಲ ಅಧಿವೇಶನ ನಡೆಯುವುದಕ್ಕೆ ಬೆಳಗಾವಿ ಜಿಲ್ಲಾ ಆಡಳಿತದ ಕೊಡುಗೆ ಬಹಳಷ್ಟಿದೆ. ಅವರಿಗೂ ಸಹ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿಯಲ್ಲಿ ಈ ಅಧಿವೇಶನ ನಡೆಯುವುದಕ್ಕೆ ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಎಲ್ಲ ರೀತಿಯ ಸಹಕಾರವನ್ನು ನೀಡಿದಂತಹ ಅಧಿಕಾರಿ ಮಿತ್ರರಿಗೂ ಈ ಸದನದ ಸಭಾ ನಾಯಕನಾಗಿ ಅಭಿನಂದನೆಗಳನ್ನು ಅರ್ಪಿಸುತ್ತಿದ್ದೇನೆ. ಗಂಡು ಮೆಟ್ಟಿದ ನಾಡಾದ ಬೆಳಗಾವಿಯಲ್ಲಿ ಹತ್ತು ದಿನಗಳ ಕಾಲ ನಡೆದಂತಹ ಅಧಿವೇಶನದಲ್ಲಿ ಬಹಳಷ್ಟು ಅರ್ಥಪೂರ್ಣವಾಗಿರುವಂತಹ ಚರ್ಚೆಗಳು ನಡೆದು ಫಲಪ್ರದವಾದ

ಅಧೀವೇಶನ ಆಗುವುದರ ಜೊತೆಗೆ ಉತ್ತರ ಕರ್ನಾಟಕದ ಅನೇಕ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಈ ಅಧಿವೇಶನ ಜೀವಂತವಾದ ಉದಾಹರಣೆಯಾಗುವ ದಿಸೆಯಲ್ಲಿ ಅತ್ಯುತ್ತಮವಾಗಿರುವಂತಹ ಕಾರ್ಯಕಲಾಪಗಳು ನಡೆಯುವುದಕ್ಕೆ ಕಾರಣೀಭೂತರಾದ ಎಲ್ಲರಿಗೂ ಹೃದಯಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಡಿ.ವಿ.ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಬೆಳಗಾವಿಯ ಸುವರ್ಣಸೌಧದಲ್ಲಿ ಹತ್ತು ದಿನಗಳ ಕಾಲ ನಡೆದಂತಹ ಅಧಿವೇಶನದಲ್ಲಿ ಅರ್ಥಪೂರ್ಣವಾಗಿರುವಂತಹ ಕಲಾಪ ನಡೆದಿದೆ ಎಂದು ನಾನು ಭಾವಿಸುತ್ತಿದ್ದೇನೆ. ಈ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಭಾಗದ ಹೆಚ್ಚಿನ ಸಮಸ್ಯೆಗಳನ್ನು ಚರ್ಚೆ ಮಾಡುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಸುವರ್ಣಸೌಧದ ಎದುರಿಗೆ ಹೋರಾಟದಲ್ಲಿ ಭಾಗಿಯಾಗಿದ್ದ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿರುವುದು ಒಂದು ದುರ್ದೈವದ ಸಂಗತಿಯಗಿದೆ. ಇದೇ ಸಂದರ್ಭದಲ್ಲಿ ಕೃಷ್ಣಾ ನದಿ ನೀರು ಹಂಚಿಕೆಯ ಬಗ್ಗೆ ಐತೀರ್ಪು ಬಂದು, ಅದರ ಮೇಲೆ ಇಡೀ ಸದನ ಒಂದಾಗಿ ನಿಂತು ಸಮಗ್ರವಾಗಿ ಚರ್ಚೆ ಮಾಡಿರುವುದು ಮರೆಯಲಾರದ ಸಂಗತಿಯಾಗಿದೆ. ಈ ಭಾಗದ ಸಾವಿರಾರು ಎಕರೆ ಪ್ರದೇಶಕ್ಕೆ ಯಾವ ರೀತಿಯಲ್ಲಿ ನೀರುಣಿಸಬಹುದು ಎನ್ನುವುದರ ಬಗ್ಗೆ ವಿಚಾರ ವಿಮರ್ಶೆಯಾಗಿರುವುದು ನಿಜವಾಗಿಯೂ ಒಂದು ಅದ್ಭುತವಾಗಿರುವಂತಹ ವ್ಯವಸ್ಥೆ ಎಂದು ನಾನು ಭಾವಿಸುತ್ತೇನೆ. ನರ ಭಕ್ಷಕ ಹುಲಿಯನ್ನು ಹಿಡಿದಿರುವುದು ಸಹ ಒಂದು ದೊಡ್ಡ ಸಾಧನೆಯಾಗಿದೆ. ಅಲ್ಲಿ ಇಲ್ಲಿ ಸಣ್ಣ ಪುಟ್ಟ ವ್ಯತ್ಯಾಸಗಳು ಆಗಿರಬಹುದು. ಆದರೆ, ಗಂಭೀರವಾಗಿರುವಂತಹ ವಿಚಾರಗಳ ಬಗ್ಗೆ ಒಂದಷ್ಟು ಗಂಭೀರವಾಗಿರುವಂತಹ ಚರ್ಚೆಗಳು ನಡೆದಿವೆ. ಆದ್ದರಿಂದ ವಿಶೇಷವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಹಲವಾರು ಸಂದರ್ಭಗಳಲ್ಲಿ ವಿಷಯದ ಗಂಭೀರತೆಯನ್ನು ಹೆಚ್ಚು ಮಾಡುವಂತಹ ಕೆಲಸವನ್ನು ತಾವು ಮಾಡಿದ್ದೀರಿ. ಯಾವುದಕ್ಕೆ ಆದ್ಯತೆಯನ್ನು ಕೊಡಬೇಕೋ ಅದಕ್ಕೆ ಆದ್ಯತೆಯನ್ನು ಕೊಡಬೇಕು. ವಿಚಾರಗಳು

ಚರ್ಚೆಯಾಗುವಂಥ ಸಂದರ್ಭದಲ್ಲಿ ಯಾವಾಗ ಅದಕ್ಕೆ ಹೆಚ್ಚು ಗೌರವ ಬರುತ್ತದೆಂದರೆ, ಸಭಾಪತಿಯವರ ಅಭಿಪ್ರಾಯದ ಮೇಲೆ ನೋಡಿ, ಇದೊಂದು ಗಂಭೀರವಾದ ವಿಚಾರ, ಮಾತನಾಡಿ ಎಂದು ನೀವು ಎಷ್ಟೋ ಸಂದರ್ಭಗಳಲ್ಲಿ ಹೇಳುತ್ತೀರಿ. ನಾವೆಲ್ಲರೂ ಶಾಸಕರು. ಶಾಸಕರಾಗಿರುವವರು ಇಲ್ಲಿ ಬಂದಾಗ ಶಾಸನಗಳನ್ನು ತಯಾರು ಮಾಡುವುದರಲ್ಲಿ ಭಾಗವಹಿಸಬೇಕು. ಈ ಬಾರಿ ಎಲ್ಲ ಶಾಸಕರು ಶಾಸನ ರಚನೆಯ ಕಲಾಪಗಳಲ್ಲಿ ಭಾಗವಹಿಸಬೇಕೆಂದು ಅಪೇಕ್ಷೆ ಪಟ್ಟಿರಿ, ಕಲಾಪ ನಡೆಯುವಾಗ ಸಮಯದ ಸ್ವಲ್ಪ ವ್ಯತ್ಯಾಸಗಳಾದರೂ ಕೂಡ ಎಲ್ಲರಿಗೂ ಅವಕಾಶವನ್ನು ಮಾಡಿಕೊಟ್ಟು ನಿಜವಾದ ಶಾಸಕಾಂಗ ಹೇಗೆ ನಡೆಯಬೇಕು ಎಂದು ಹೇಳುವುದಕ್ಕೆ ನೀವು ಇವತ್ತು ನಮಗೆ ಬಹಳಷ್ಟು ಮಾರ್ಗದರ್ಶನವನ್ನು ಮಾಡಿದ್ದೀರಿ. ಏಕೋ ಗೊತ್ತಿಲ್ಲ. ನಾವು ನಾಳೆಯಿಂದ ಹತ್ತು ದಿನಗಳ ಕಾಲ ಏನು ಮಾಡಬೇಕೆಂದು, ಯಾರ ಜೊತೆಗೆ ಜಗಳ ಮಾಡುವುದು ಎಂದು ಇದೇ ಗುಂಗಿನಲ್ಲಿರುತ್ತೇವೆ. ಆ ರೀತಿಯ ಭಾವನೆಗಳು ಮೊನ್ನೆಯಿಂದೀಚೆಗೆ ಬಂದುಬಿಟ್ಟಿದೆ. ಸದನದಲ್ಲಿ ಒಂದೊಂದು ಸಾರಿ ಆವೇಶ, ಆಕ್ರೋಶಗಳು ಇರುತ್ತವೆ. ಆದರೆ 5 ನಿಮಿಷಗಳ ನಂತರ ಮಾನ್ಯ ವೀರಣ್ಣ ಮತ್ತಿಕಟ್ಟಿಯವರನ್ನು ನೋಡಿದ ಕೂಡಲೇ ಪ್ರೀತಿ, ಪ್ರೇಮ, ವಿಶ್ವಾಸಗಳು ಮೂಡುತ್ತವೆ. ಈ ರೀತಿ ಎಲ್ಲ ಏರಿಳಿತಗಳು ಆಗುತ್ತವೆ. ಒಂದು ರೀತಿಯಲ್ಲಿ ಇದು ದಕ್ಷಿಣ ಕನ್ನಡ ಜಿಲ್ಲೆ ಇದ್ದ ಹಾಗೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಕಡೆ ಬೋರ್ಗರೆಯುವಂಥ ಸಮುದ್ರ ಇನ್ನೊಂದು ಭಾಗದಲ್ಲಿ ಅಷ್ಟೇ ಶಾಂತವಾದ ಪಶ್ಚಿಮ ಘಟ್ಟಗಳಿವೆ. ಅದರಲ್ಲಿ ಮಧ್ಯದಲ್ಲಿ ಬದುಕುವಂಥ ನಾವು ಪ್ರಾಯಶಃ ಇಲ್ಲಿ ಕಂಡಾಗ ನಮಗೂ ಸಹ ಹಾಗೆಯೇ ಅನ್ನಿಸಿತು. ಒಂದು ಕಡೆಯಿಂದ ಜಯಚಂದ್ರರವರ ಅಟ್ಟಹಾಸ ಎಲ್ಲವೂ ನಡೆಯುತ್ತಿತ್ತು. ಅದಕ್ಕೆ ನಮ್ಮದೂ ಸಹ ಅಷ್ಟೇ ಪ್ರತಿರೋಧ ಆಗುತಿತ್ತು. ಇದರ ಜೊತೆಯಲ್ಲಿ ಶಾಂತ ವಾತಾವರಣವೂ ಸಹ ಇರುತ್ತಿತ್ತು ಸದನ ಮಧ್ಯಾಹ್ನ ಭೋಜನ ವಿರಾಮಕ್ಕಾಗಿ ಮುಂದೂಡಿದಾಗ ನಾವುಗಳು ಕೈ ಕೊಟ್ಟುಕೊಂಡೇ ಹೋಗುತ್ತಿದ್ದೆವು. ಕೈ ಕೊಡುವುದು ಎಂದರೆ ಬೇರೆ ಅರ್ಥದಲ್ಲಿ ಅಲ್ಲ, ಪ್ರೀತಿ-ವಿಶ್ವಾಸದಿಂದ ಕೈ ಕೊಡುತ್ತಿದ್ದೆವು ಅಂದರೆ ಆ ರೀತಿಯಲ್ಲಿ ಒಂದು ವಾತಾವರಣ ನಿರ್ಮಾಣವಾಗಿ

ಸದನದ ಕಲಾಪಗಳು ಅರ್ಥಪೂರ್ಣವಾಗಿ ನಡೆದಿದೆ ಎಂದು ನನಗಂತೂ ವಿಶ್ವಾಸವಿದೆ. ನಾನು ಒಂದು ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಭಾವಿಸುತ್ತೇನೆ. ಈ ಬಾರಿ ನಮ್ಮ ಪಕ್ಷದ ಶಾಸಕರು ಬೆಳಿಗ್ಗೆ ಸದನ ನಡೆಯುವುದಕ್ಕೆ ಅರ್ಧ ಗಂಟೆಗೂ ಮೊದಲು ನಾವೆಲ್ಲರೂ ಒಟ್ಟಿಗೆ ಸೇರುತ್ತಿದ್ದೆವು. ನೀವು ನೋಡಿರಬಹುದು, ಇದರಲ್ಲಿ ಜಗಳಾಗುತ್ತಿರಲಿಲ್ಲ. ಯಾರ್ಯಾರು ಯಾವ ಚರ್ಚೆಯಲ್ಲಿ ಭಾಗವಹಿಸುತ್ತೇವೆ ಎನ್ನುವ ಬಗ್ಗೆ ನಿಮಗೆ ಪಟ್ಟಿಯನ್ನು ಕೊಡುತ್ತಿದ್ದೆವು. ನಮ್ಮ ಕಡೆ ಇರುವಂಥ ಸುಮಾರು 36 ಜನ ಶಾಸಕರು ಪ್ರತಿಯೊಬ್ಬರು, ಪ್ರತಿದಿನ ಕಲಾಪದಲ್ಲಿ ಭಾಗವಹಿಸಿದ್ದಾರೆ. ನಾನು ಇದೆಲ್ಲವನ್ನು ನೋಡಿದ್ದೇನೆ. ಯಾರು ಮಾತನಾಡುವಾಗ ಯಾರು ಮಾತನಾಡಬಾರದು, ಏನು ಎಂಬುದನ್ನು ಹೇಳಿದ್ದೆವು. ಆಡಳಿತ ಪಕ್ಷದವರು ಜಗಳ ಮಾಡುವಾಗ ಮಾತ್ರ ಒಮ್ಮೆ ಎಲ್ಲರೂ ಒಟ್ಟಿಗೆ ಬೀಳಬೇಕೆಂದು ನಿಶ್ಚಯ ಮಾಡಿದೆವು. ಉಳಿದಂತೆ ಒಬ್ಬೊಬ್ಬರೆ ಮಾತನಾಡಬೇಕೆಂದು ನಿಶ್ಚಯ ಮಾಡಿದ್ದೆವು. ಈ ರೀತಿಯಲ್ಲಿ ಒಂದು systematic ಆಗಿ ಶಾಸಕಾಂಗವನ್ನು ನಡೆಸುವಂಥ ಪ್ರಯತ್ನಗಳನ್ನು ನಾವು ಮಾಡಿದ್ದೇವೆ.

ಇನ್ನು ಜೆಡಿ(ಎಸ್) ಪಕ್ಷದ ಬಗ್ಗೆ ಹೇಳುವುದಾದರೆ, ಈಗ ಮಾನ್ಯ ನಾಣಯ್ಯನವರು ಸದನದಲ್ಲಿ ಇಲ್ಲ, ಮಾನ್ಯ ಬಸವರಾಜ ಹೊರಟ್ಟಿಯವರು ಸದನದಲ್ಲಿದ್ದಾರೆ. ಜೆಡಿ(ಎಸ್) ಪಕ್ಷದವರು ಈ ಕಡೆ ಮತ್ತು ಆ ಕಡೆ ಎರಡೂ ಕಡೆ ಇದ್ದು ಸಹಕಾರವನ್ನು ಮಾಡಿದ್ದಾರೆ. ಈ ತರಹದ ವಿಚಾರದಲ್ಲಿ ಅವರು ಯಾವಾಗಲೂ ಅದ್ಭುತವಾಗಿ ಭಾಗವಹಿಸುತ್ತಾರೆ. ಯಾವಾಗ ಎಲ್ಲಿರಬೇಕೆಂದು ಆಲೋಚನೆಯನ್ನು ಮಾಡಿಯೇ ಅವರು ಎಲ್ಲವನ್ನು ಮಾಡುತ್ತಾರೆ. ಇದು ತಪ್ಪು ಎಂದು ನಾನು ಹೇಳುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಅವರು ಹಿಂದೆ ಮಾನ್ಯ ಸಿದ್ದರಾಮಯ್ಯನವರ ಜೊತೆಗಿದ್ದುದನ್ನು ನೆನಪು ಮಾಡಿಕೊಂಡು ಅದಕ್ಕೆ ಸರಿಯಾಗಿ ನಡೆಯುವಂಥಾದ್ದು ಮತ್ತು ಇನ್ನು ಕೆಲವು ಸಂದರ್ಭಗಳಲ್ಲಿ ಈಗ ನಾವು ಪ್ರತಿಪಕ್ಷದಲ್ಲಿದ್ದೇವೆ ಎಂದು ನೆನಪು ಮಾಡಿಕೊಳ್ಳುವಂಥಾದ್ದು ಆಗುತ್ತಿತ್ತು. ಈ ರೀತಿ ವ್ಯವಸ್ಥಿತವಾಗಿ ಕಲಾಪಗಳಲ್ಲಿ ಭಾಗವಹಿಸುವಂತ

ಕೆಲಸವನ್ನು ಅವರು ಮಾಡಿದ್ದಾರೆ. ಅವರಿಗೆ ಅಭಿನಂದನೆಯನ್ನು ಸಲ್ಲಿಸಲಿಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮ ಅಭಿನಂದನೆ ನಮಗೆ ಬಹಳ ಗೊತ್ತಾಗುತ್ತದೆ. ನೀವು ಮಂಗಳೂರಿನವರು ಬಿಡಿ.

ಮಾನ್ಯ ಸಭಾಪತಿಯವರೇ, ನಾವು ಆ ತರಹ ಮಾಡಿದ್ದಕ್ಕೆ ಅವರಿಗೆ ಚರ್ಚೆ ಮಾಡುವುದಕ್ಕೆ ಬಹಳ ಅನುಕೂಲವಾಯಿತು.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ಅದೇ ವಿಚಾರಕ್ಕೆ ಬರುತ್ತಿದ್ದೇನೆ. ಏಕೆಂದರೆ ಹಲವಾರು ಸಂದರ್ಭಗಳಲ್ಲಿ ನಾವು ಚರ್ಚೆಯಲ್ಲಿ ಎಲ್ಲೋ ನಿಂತು ಬಿಡುವವರು ಸಹ. ಇವರ ಈ ರೀತಿಯ ಪ್ರಚೋದನೆಗಳಿಂದ ನಮಗೆ ಹೆಚ್ಚು ಮಾತನಾಡಲಿಕ್ಕೆ ಅವಕಾಶಗಳಾಗಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಈ ರೀತಿ ತಾವು ಅದ್ಭುತವಾಗಿ ಆ ಖುರ್ಚಿಯಿಂದ ಕಾರ್ಯಕಲಾಪಗಳನ್ನು ನಡೆಸಿದ್ದೀರಿ. ನಮ್ಮ ಸಭಾನಾಯಕರು ಹೇಳಿರುವಂಥಾದ್ದು ನೂರಕ್ಕೂ ನೂರು ಸತ್ಯ. ನೀವು ಆ ಕುರ್ಚಿಯ ಘನತೆ ಗೌರವವನ್ನು ಮತ್ತಷ್ಟು ಮೇಲಕ್ಕೆ ಏರಿಸಿದ್ದೀರಿ ಮತ್ತು ನಮಗೆಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಇಲ್ಲದಿದ್ದರೆ ಬಹಳಷ್ಟು ಜನರಿಗೆ ನಮಗೆ ಮಾತನಾಡಲಿಕ್ಕೆ ಅವಕಾಶ ಸಿಗಲಿಲ್ಲವೆಂದು ಕೋಪ ಬರುತ್ತದೆ. ಈ ಸಾರಿ ಯಾರೂ ಸಹ ಆ ರೀತಿ ಹೇಳುವ ಹಾಗಿಲ್ಲ. ಆಡಳಿತ ಪಕ್ಷದಲ್ಲಿಯೂ ಸಹ ಮಾನ್ಯ ಮೋಟಮ್ಮನರೊಬ್ಬರನ್ನು ಬಿಟ್ಟರೆ ಬೇರೆ ಯಾರೂ ಸಹ ಆ ರೀತಿ ಹೇಳುವ ಹಾಗಿಲ್ಲ. ಆದರೆ ಕೊನೆಗೆ ಇವತ್ತು ನೀವು ಅವರಿಗೂ ಸಹ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿರಿ. ಈಗ ಅದು ಕೂಡ ಸರಿಯಾಯಿತು. ಈ ರೀತಿಯಾಗಿ ಇಡೀ ಸದನದ ಕಲಾಪಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ್ದೀರಿ. ನಿಮಗೆ ನಮ್ಮ ಮನಃಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಸಭಾನಾಯಕರ ಬಗ್ಗೆ ನಾನು ಹೇಳಬೇಕಾಗಿಲ್ಲ. ಕಳೆದ ಬಾರಿ ನಾನು ಹೇಳಿದ್ದೆ. ಹೇಗೆ 16ರ ಬಾಲಕನಾಗಿ, 26ರ ಯುವಕನಾಗಿ, 36ರ

ಪ್ರಜ್ಞಾವಂತನಾಗಿ, 46ಕ್ಕೆ ಪ್ರೌಢಿಮೆ, 56, 66 ವಯಸ್ಸು ತಲುಪಿದಾಗ ಹೇಗೆ ಒಬ್ಬೊಬ್ಬ ವ್ಯಕ್ತಿ ಹೇಗೆ ಹೇಗೆ ಇರುತ್ತಾನೆಯೋ ಅದೇ ರೀತಿಯಲ್ಲಿ ಅವರೂ ಸಹ ತಮ್ಮ ಕೆಲಸ-ಕಾರ್ಯಗಳನ್ನು ಮಾಡಿದ್ದಾರೆ. ಅದು ದಾಖಲೆಗೆ ಹೋಗಲೇಬೇಕು. ಕಬ್ಬಿನ ಬಗ್ಗೆ ಚರ್ಚೆಗಳು ಬಂದಾಗ ಅದರಲ್ಲಿ ನಾನು ಏನೋ ಒಂದು ಪಾರ್ಟಿಯಾಗುತ್ತೇನೆಂದು ಮನನೊಂದು, ಅದರ ಯಾವುದೇ ಚರ್ಚೆಯಲ್ಲಿ ಭಾಗವಹಿಸದೇ ನಿಸ್ಪಕ್ಷವಾದಂಥ ತೀರ್ಮಾನ ಈ ಸದನದಲ್ಲಿ ಬರಬೇಕು. ವ್ಯವಸ್ಥೆಗೆ ಒತ್ತು ಕೊಟ್ಟಂಥ ರಾಜಕಾರಣಿ ಎಂದರೆ ಅದು ಸನ್ಮಾನ್ಯ ಸಭಾನಾಯಕರು. ನಿಜವಾಗಿಯೂ ನಾವು ಅವರಿಗೆ ಗೌರವವನ್ನು ಅರ್ಪಿಸಲೇಬೇಕು. ಎಷ್ಟೋ ಸಾರಿ ನಾವು harsh ಆಗಿ ಮಾತನಾಡಿರಬಹುದು. ವಿರೋಧ ಪಕ್ಷದಲ್ಲಿರುವಾಗ ನಾವು ಅನಿವಾರ್ಯವಾಗಿ ಕೆಲವು ಸಂದರ್ಭಗಳಲ್ಲಿ ಆ ರೀತಿಯಾಗಿ ಮಾತನಾಡಲೇಬೇಕಾದ ಸಂದರ್ಭಗಳು ಬರುತ್ತವೆ.

ಮಾನ್ಯ ರಮಾನಾಥ ರೈ ಅವರು ನಮ್ಮೂರಿನವರೇ ಹಾಗೂ ನಾವು ಒಳ್ಳೆಯ ಸ್ನೇಹಿತರು ಸಹ ಹೌದು. ಆದರೆ ನಾವು ಯಾವತ್ತು ಸಹ ಕಬಡ್ಡಿ ಆಟವನ್ನು ಆಡಲಿಲ್ಲ. ನಾವು ಹೀಗೆ ದೋಸ್ತಿಯಲ್ಲಿಯೇ ಇರುತ್ತಿದ್ದೆವು. ಏನೋ ನಿನ್ನೆಯ ದಿವಸ ಸ್ವಲ್ಪ ಹುಲಿ, ಆನೆ, ಎಂದು ಸ್ವಲ್ಪ ವ್ಯತ್ಯಾಸಗಳನ್ನು ಕಂಡಿದ್ದೇವೆ. ಆದರೆ ನಾವು ಅದನ್ನು ಅಲ್ಲಿಯೇ ಬಿಟ್ಟಿದ್ದೇವೆ. ಅಗಲೇ ಅದನ್ನು ಅವರೂ ಸಹ ಬಿಟ್ಟಿದ್ದಾರೆ, ನಾನೂ ಸಹ ಬಿಟ್ಟಿದ್ದೇನೆ. ಆದಕಾರಣ ಎಲ್ಲೋ ಒಂದು ಕಡೆ ಈ ರೀತಿಯ ಘಟನೆಗಳಾಗಿವೆ. ಆ ಘಟನೆಗಳ ಬಗ್ಗೆ ನಾವೇನು ಭಾರಿ ದೊಡ್ಡ ಚಿಂತನೆಗಳನ್ನು ಮಾಡುವುದಿಲ್ಲ. ಮಾನ್ಯ ಪ್ರತಾಪಚಂದ್ರ ಶೆಟ್ಟರು ಒಮ್ಮೊಮ್ಮೆ ಹಿಂದಿನಿಂದ ಅವರಿಗೆ ಗಾಳಿ ಹಾಕಿ provoke ಮಾಡುವಂಥಾದ್ದನ್ನು ಮಾಡುತ್ತಿದ್ದರು. ಆದರೂ ಕೂಡ ಅವರು ಸಹ ಆಗಾಗ ಸಮಾಧಾನಕ್ಕೆ ಬರುವಂಥಾದ್ದು ಇತ್ತು. ಒಟ್ಟು ಸದನದ ಕಲಾಪದಲ್ಲಿ ನಾವೆಲ್ಲರೂ ಸಹ ಚೆನ್ನಾಗಿ ಭಾಗವಹಿಸಿದ್ದೇವೆ. ನಾನು ಸಭಾನಾಯಕರಿಗೆ ಮತ್ತು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯ ದಿವಸ ಸದನದ ಕಲಾಪದಲ್ಲಿ ವಿಧೇಯಕದ ಬಗ್ಗೆ ಚರ್ಚೆ ಬಂದಾಗ ಅದರ ಬಗ್ಗೆ ಏನು ಮಾಡಬೇಕೆಂದು ಅವರೇ ಸ್ವತಃ ಅವರ

ಕಛೇರಿಗೆ ಬಂದು ನಮ್ಮನ್ನೆಲ್ಲಾ ಅಲ್ಲಿಗೆ ಕರೆಸಿ ಮುಂದಿನ ದಿನಗಳಲ್ಲಿ ಅದನ್ನು ಹೇಗೆ ಮಾಡಬೇಕೆಂದು ನಿಮ್ಮ ಸಲಹೆಗಳನ್ನು ತೆಗೆದುಕೊಂಡು ಹೇಗೆ ಮಾಡಬೇಕೆಂಬ ಮಾತನ್ನು ಹೇಳಿದರು. ಈ ರೀತಿಯಲ್ಲಿ ಅವರು ಎಲ್ಲದಕ್ಕೂ ಸಹಕಾರವನ್ನು ಮಾಡಿದ್ದಾರೆ. ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಮತ್ತು ಅವರ ಮಂತ್ರಿಮಂಡಲದ ಎಲ್ಲಾ ಸಹೋದ್ಯೋಗಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಎಚ್.ಕೆ.ಪಾಟೀಲರ ಬಗ್ಗೆ ಹೇಳುವುದಾದರೆ, ಅವರಂತೂ ನಮಗೆ ವಿಶೇಷವಾದಂಥ ಪ್ರೇರಣೆಗಳನ್ನು ಕೊಡುವಂಥ ಕೆಲಸ-ಕಾರ್ಯಗಳನ್ನು ಮಾಡಿದ್ದಾರೆ. ನಿನ್ನೆಯ ದಿವಸ ಆರೋಗ್ಯ ವಿಶ್ವವಿದ್ಯಾಲಯದ ವಿಧೇಯಕದ ಬಗ್ಗೆ ಚರ್ಚೆ ಇರಬಹುದು, ಅದರ ಬಗ್ಗೆ ಅವರು ಅದ್ಭುತವಾದಂಥ ರೀತಿಯಲ್ಲಿ committed minister ಆಗಿ ನಾನು ಇರಬೇಕು ಎಂದು ಪ್ರಯತ್ನಗಳನ್ನು ಮಾಡುವಂಥ ಒಬ್ಬ ಯುವ ಮಂತ್ರಿ ಇಂಥವರು ಎಲ್ಲರೂ ಇದ್ದಾರೆ. ನಾನು ಎಲ್ಲರ ಹೆಸರನ್ನು ಪ್ರತ್ಯೇಕವಾಗಿ ಉಲ್ಲೇಖ ಮಾಡುವುದಿಲ್ಲ. ಎಲ್ಲಾ ಮಂತ್ರಿಮಂಡಲದ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ನಮ್ಮ ಮುಖ್ಯ ಸಚೇತರರಿಗೆ ಸದನದಲ್ಲಿ ಕೋರಂ ಇದೆಯೇ, ಸದನದಲ್ಲಿ ಸದಸ್ಯರ ಸಂಖ್ಯೆ ಕಡಿಮೆಯಾಗಬಾರದು ಎಂದು ಆಗಾಗ ನೋಡಿಕೊಂಡಿದ್ದಾರೆ. ಇದು ಬಹಳ ಕಷ್ಟದ ಕೆಲಸ ಮತ್ತು ಆ ಕುರ್ಚಿಯ ಕೆಲಸವೂ ಸಹ ಕಷ್ಟ. ಎಲ್ಲರನ್ನು ಸದನದಲ್ಲಿ ಸೇರಿಸುವುದೇ ಒಂದು ಕಷ್ಟದ ಕೆಲಸ. ನಮ್ಮ ಮುಖ್ಯಸಚೇತಕರು ಸಹ ದಿನನಿತ್ಯ ದೂರವಾಣಿ ಮಾಡಿ ಸದನಕ್ಕೆ ಅರ್ಧ ಗಂಟೆ ಮೊದಲು ಬನ್ನಿ ಎಂದು ಹೇಳುತ್ತಿದ್ದರು. ಅವರಂತೂ ಅದ್ಭುತವಾಗಿ ಕೆಲಸವನ್ನು ಮಾಡಿದ್ದಾರೆ. ಇಬ್ಬರೂ ಸಚೇತಕರಿಗೂ ಸಹ ನಾವು ವಿಶೇಷವಾದಂಥ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

ನಮ್ಮ ಪ್ರಮುಖ ಪಕ್ಷವಾದ ಜೆಡಿ(ಎಸ್)ನ ನಾಯಕರುಗಳು ಸಹ ಬಹಳಷ್ಟು ಒಳ್ಳೆಯ ರೀತಿಯಲ್ಲಿ ಸದನದ ಕಲಾಪಗಳಲ್ಲಿ ಭಾಗವಹಿಸಿದ್ದಾರೆ. ಅವರಿಗೂ ಸಹ ವಿಶೇಷವಾದಂಥ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ಅಭಿನಂದನೆಗಳನ್ನು ಮಾನ್ಯ ನಾಣಯ್ಯನವರಿಗೆ ಮುಟ್ಟಿಸಬೇಕೆಂದು ನಾನು

ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಕೇಳಿಕೊಂಡು ಅವರಿಗೂ ಸಹ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಇನ್ನು ನಮ್ಮ ಉಪ ಸಭಾಪತಿಯವರು ನನ್ನ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಅವರು ಯಾವಾಗ ಬರುತ್ತಾರೆ, ಯಾವಾಗ ಹೋಗುತ್ತಾರೆ ಎನ್ನುವುದು ಗೊತ್ತಾಗದೇ ಇದ್ದರೂ ಕೂಡ ಅವರು ಆಗಾಗ ನಮಗೆ ಚುಚ್ಚಿ ಮಾತನಾಡುವಂತ ಕೆಲಸ–ಕಾರ್ಯಗಳನ್ನು ಮಾಡುತ್ತಿದ್ದರು. ಒಳ್ಳೆಯ ರೀತಿಯಲ್ಲಿ ಅವರೂ ಸಹ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದಾರೆ. ಅವರಿಗೂ ಕೂಡ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಅಧಿಕಾರಿ ಮಿತ್ರರು ಸಹ ಸರ್ಕಾರಕ್ಕೆ ಹೆಚ್ಚಿನ ಮಾಹಿತಿಯನ್ನು ಕೊಡುವಂಥ ಕೆಲಸವನ್ನು ಮಾಡುತ್ತಿದ್ದರು. ಸರ್ಕಾರದವರ ರಕ್ಷಣೆಗೆ ಹೆಚ್ಚಾಗಿ ಬಂದವರು ಅವರೆ. ಆದಕಾರಣ ನಮಗಿಂತ ವಿಶೇಷವಾದ ಅಭಿನಂದನೆಗಳನ್ನು ಸರ್ಕಾರದವರು ಅವರಿಗೆ ಸಲ್ಲಿಸಬೇಕು. ಆಗಾಗ ಚೀಟಿಗಳನ್ನು ಕಳುಹಿಸಿ ಮಾಹಿತಿಯನ್ನು ಕೊಡುವುದು ಮುಂತಾದ ಕೆಲಸಗಳನ್ನು ಅವರು ಮಾಡಿದ್ದಾರೆ. ಅಧಿಕಾರಿ ವರ್ಗದವರಿಗೆ ಮತ್ತು ವಿಶೇಷವಾಗಿ ಈ ತಂಡಕ್ಕೆ ಅಂದರೆ ವಿಧಾನ ಪರಿಷತ್ತಿನ ಸಚಿವಾಲಯದ ಕಾರ್ಯದರ್ಶಿಯವರಾದ ಶ್ರೀ ಶ್ರೀಶ್ ಮತ್ತು ಅವರ ಸಿಬ್ಬಂದಿ ವರ್ಗದವರು ಕೋಪಿಸಿಕೊಳ್ಳದೇ ಕೆಲಸವನ್ನು ಮಾಡಿದವರು ಎಂದರೆ ಅವರು ಮಾತ್ರ. ಅವರು ಯಾವತ್ತು ಕೋಪಿಸಿಕೊಂಡದ್ದೇ ಇಲ್ಲ. ಅವರು ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ. ಅವರಿಗೆ ವಿಶೇಷವಾದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಇನ್ನು ಮಾಧ್ಯಮದವರ ಬಗ್ಗೆ ಹೇಳುವುದಾದರೆ ನಾನು ಸುಮಾರು 20 ವರ್ಷಗಳಿಂದ ಶಾಸಕನಾಗಿ, ಲೋಕಸಭಾ ಸದಸ್ಯನಾಗಿ, ಮುಖ್ಯಮಂತ್ರಿಯಾಗಿ, ವಿಪಕ್ಷ ನಾಯಕನಾಗಿ ಕೆಲಸವನ್ನು ಮಾಡಿದ್ದೇನೆ. ಆದರೆ ಪ್ರಥಮ ಬಾರಿಗೆ ಹಲವಾರು ಪತ್ರಿಕೆಗಳು ವಿಧಾನ ಸಭಾ ಕಾರ್ಯಕಲಾಪಗಳ ಬಗ್ಗೆ ಒಂದು ಪೇಜ್‌ನಲ್ಲಿ ಸುದ್ದಿಯನ್ನು ಪ್ರಕಟ ಮಾಡಿಸದರೆ ಪ್ರಥಮ ಬಾರಿಗೆ

ವಿಧಾನ ಪರಿಷತ್ತಿನ ಕಾರ್ಯಕಲಾಪಗಳಿಗೆ ಒಂದು ಪೇಜ್‌ನಲ್ಲಿ ಇಲ್ಲಿನ ವಿಚಾರಗಳನ್ನು ಪ್ರಕಟ ಮಾಡಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆಂದರೆ, ಈ ಬಾರಿಯ ಕಲಾಪಗಳಲ್ಲಿ ಎಲ್ಲೋ ಉತ್ಕೃಷ್ಠತೆ ಮೇಲೆ, ಮೇಲೆ ಹೋಗಿದೆ ಮತ್ತು ಒಳ್ಳೆಯ ಚರ್ಚೆಗಳಾಗಿವೆ. ಮಾಧ್ಯಮದವರು ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸುದ್ದಿಯನ್ನು ಪ್ರಕಟಿಸಲು ಅವರ ಪತ್ರಿಕೆಯಲ್ಲಿ ಇನ್ನು ಒಂದೂವರೆ ಪೇಜ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರು ತಮ್ಮ ಪತ್ರಿಕೆಯಲ್ಲಿ ಅಷ್ಟು ಸ್ಥಳವನ್ನು ಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಆ ರೀತಿಯ ಉತ್ಕೃಷ್ಠವಾದ ಚರ್ಚೆಗಳನ್ನು ಈ ಸದನದಲ್ಲಿ ಮಾಡುವಂಥ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ಯಾವುದೂ track ತಪ್ಪಿ ಹೋಗುವಂಥಾದ್ದನ್ನು ನಾವು ಮಾಡಲಿಲ್ಲ. Media ದಲ್ಲಿ, ಎಲ್ಲದರಲ್ಲಿಯೂ ಪ್ರಥಮ ಬಾರಿಗೆ, ನಾನು ಹೊರಗಡೆಗೆ ಹೋದರೆ ನನಗೆ ಆಶ್ಚರ್ಯವಾಗುತ್ತದೆ, 'ಸರ್, ನಿಮ್ಮ ಸದನದಲ್ಲಿಯೇ ಚೆನ್ನಾಗಿ ಕಲಾಪ ನಡೆದಿದೆ' ಎನ್ನುವ ಮಾತನ್ನು ಎಲ್ಲರೂ ಹೇಳುತ್ತಿದ್ದರು. ನಾನು ಅವರನ್ನು ಹೊಗಳುವಂಥಾದ್ದಲ್ಲ ಯಾವತ್ತೂ ಅವರನ್ನು ಟೀಕೆ ಮಾಡುವವರಲ್ಲಿ ನಾನು ಸಹ ಒಬ್ಬ. ಆದರೆ ಈ ಬಾರಿ ಏಕೋ, ಏನೋ ನಾವು ಮಾಡಿದ ಒಳ್ಳೆಯ ಕೆಲಸಕ್ಕೋ ಅಥವಾ ಅವರಿಗೆ ನಾವು ಟೀಕೆ ಮಾಡಿದ್ದು ಹೆಚ್ಚಾಯಿತು ಎಂದು ತಿಳಿದುಕೊಂಡೋ ಏನೋ ಅಂತೂ ಒಳ್ಳೆಯ ಪ್ರಚಾರಗಳನ್ನು ಕೊಟ್ಟಿದ್ದಾರೆ. ಮಾಧ್ಯಮ ವರ್ಗದವರಲ್ಲಿ ಒಂದಿಬ್ಬರು ವಯಸ್ಸಾದವರು ಬಿಟ್ಟರೆ ಬಹಳಷ್ಟು ಜನ ಯುವಕರಿದ್ದಾರೆ. ನಿಮಗೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಬೆಳಗಾವಿ ಜಿಲ್ಲಾಡಳಿತದ ಬಗ್ಗೆ ಹೇಳುವುದಾದರೆ, ಅವರು ನಮಗೆ ಒಳ್ಳೆಯ ಊಟ ಮತ್ತು ಒಳ್ಳೆಯ ವ್ಯವಸ್ಥೆ ಎಲ್ಲವನ್ನು ಮಾಡಿದ್ದಾರೆ. ಯಾವುದೇ ರೀತಿಯಲ್ಲಿ ನಮಗೆ ಎಲ್ಲಿಯೂ ಸಹ ತೊಂದರೆಯಾಗಲಿಲ್ಲ. ಹಾಗಾಗಿ ಜಿಲ್ಲಾಡಳಿತಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಅದೇ ರೀತಿ ನಮ್ಮ ಗೃಹ ಸಚಿವರು ಸುಮಾರು 3,000 ಜನ ಪೋಲಿಸರನ್ನು ಅಧಿವೇಶನ ಕಾರ್ಯಕ್ಕಾಗಿ depute ಮಾಡಲಾಗಿದೆ ಎಂದು

ಹೇಳಿದರು. ಎಲ್ಲಾ ಪೋಲಿಸರು ಸಹ ಉತ್ಕೃಷವಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಅವರಿಗೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ ನನ್ನ ಒಂದು ಅಭಿಪ್ರಾಯವಿದೆ. ವಿಶೇಷವಾಗಿ ಇವತ್ತು ಕರ್ನಾಟಕದ ಉತ್ತರ ಭಾಗದಲ್ಲಿರುವ ಸುವರ್ಣ ಸೌಧದಲ್ಲಿ ನಮ್ಮ ಸದನ ನಡೆದಿದೆ. ಎಲ್ಲೋ ಅಲ್ಲಿ ಇಲ್ಲಿ ಒಂದಷ್ಟು ಚರ್ಚೆಗಳು, ಒಂದಷ್ಟು ಅಪಸ್ವರಗಳು ಬಂತು. ಸಮಗ್ರ ಕರ್ನಾಟಕದ ಬಗ್ಗೆ ಮಾತನಾಡಬೇಕಾದಂಥ ಹಲವಾರು ಕಡೆಗಳಲ್ಲಿ ಸಮಗ್ರ ಕರ್ನಾಟಕದ ಚಿಂತನೆಯಿಂದ ಹೊರತುಪಡಿಸಿ ಒಂದಷ್ಟು ಮಾತುಗಳಾಗುತ್ತಿರುವುದನ್ನು ನಾವು ಕೇಳುತ್ತಿದ್ದೇವೆ.

ಸುವರ್ಣ ವಿಧಾನಸೌಧದಿಂದಲೇ ಸಮಗ್ರ ಕರ್ನಾಟಕದ ಕೂಗು ಹೋಗಬೇಕು ಎಂದು ನನಗನ್ನಿಸುತ್ತಿದೆ. ಹೈದರಾಬಾದ್–ಕರ್ನಾಟಕ, ಮುಂಬೈ–ಕರ್ನಾಟಕ, ಕರಾವಳಿ–ಕರ್ನಾಟಕ, ಉತ್ತರ ಕರ್ನಾಟಕ, ಮೈಸೂರು–ಕರ್ನಾಟಕ, ಹೀಗೆ ಆಗದೇ ಇರುವಂತಹ ವ್ಯವಸ್ಥೆಗಳು ಆಗಬೇಕು. ಮಾನ್ಯ ಸಿದ್ದರಾಮಣ್ಣನವರಿಗೆ ನಾನು ವಿಶೇಷ ಅಭಿನಂದನೆ ಸಲ್ಲಿಸುತ್ತೇನೆ. ಮಾನ್ಯ ಸಿದ್ದರಾಮಣ್ಣನವರು ಮಂಡನೆ ಮಾಡಿದಂತಹ, ಹೈಕೋರ್ಟ್‌ನಲ್ಲಿ ಕನ್ನಡ ಭಾಷೆಯ ಬಳಕೆ, ಈ ವಿಚಾರ ಬಹುಶಃ ಒಂದು ಹೊಸ ದಿಕ್ಕನ್ನು ಕೊಡಬಹುದು. ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಸಮಗ್ರ ಕರ್ನಾಟಕದ ಕಲ್ಪನೆ ಈ ಸುವರ್ಣಸೌಧದಿಂದ ಮೂಡಿಬರಲಿ ಎಂದು ನಾನು ಬಯಸುತ್ತೇನೆ. ಸಭಾಪತಿಯವರ ಸ್ಥಾನದಿಂದ ನಡೆದ ಎಲ್ಲ ವಿದ್ಯಮಾನಗಳು ಒಂದು ಪೂರಕ ದಿಕ್ಕಿನಲ್ಲಿ ಮುಂದುವರೆಯಲಿ. ಎಲ್ಲರಿಗೂ ನನ್ನ ಮನತುಂಬಿದ ಮತ್ತು ಕೃತಜ್ಞತೆ ತುಂಬಿದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:–** ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(2 ಗಂಟೆ 32 ನಿಮಿಷದಲ್ಲಿ ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)**